ಭಾನುವಾರ, ಸೆಪ್ಟೆಂಬರ್ 22, 2024 |₹ 7.00

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ರಾಜ್ಯಕ್ಕೇ ಮಾದರಿ ಬಿಳಿಗಿರಿರಂಗನಬೆಟ್ಟದ ಗಿರಿಜನರ ಪ್ರಯತ್ನ

‘ಅಡವಿ’ಗೆ ಸೋಲಿಗರೇ ಮಾಲೀಕರು

ಒಳನೋಟ

• ಸೂರ್ಯನಾರಾಯಣ ವಿ.



ಬಿಳಿಗಿರಿ ರಂಗಸ್ವಾಮಿ ಸೋಲಿಗರ ಸಂಸ್ಕರಣಾ ಸಂಘದ ಜೇನು ಸಂಸ್ಕರಣಾ ಘಟಕದ ನೋಟ

ಬೆಂಗಳೂರು: ‘ರಾಸಾಯನಿಕ ಹಾಕದೆ ನಾವು ಕಾಫಿ, ಕರಿಮೆಣಸು ಬೆಳೆಯುತ್ತೇವೆ. ಮೊದಲೆಲ್ಲ ಮಧ್ಯವರ್ತಿ ಗಳು ಕಡಿಮೆ ಬೆಲೆಗೆ ಖರೀದಿ ಮಾಡುತ್ತಿದ್ದರು. ಇದರಿಂದ ನಮಗೆ ಹೆಚ್ಚು ಆದಾಯ ಬರುತ್ತಿರಲಿಲ್ಲ. ಈಗ ನಮ್ಮದೇ ಉತ್ಪಾದಕ ಕಂಪನಿಗಳು ಇರುವುದರಿಂದ ಕಾಫಿ, ಕರಿಮೆಣಸು ಸೇರಿದಂತೆ ಅರಣ್ಯ ಉಪ ಉತ್ಪನ್ನಗಳಿಗೆ ಉತ್ತಮ ಬೆಲೆ ಸಿಗುತ್ತಿದೆ. ಸಂಸ್ಥೆಗೆ ಬರುವ ಲಾಭಾಂಶದ ಪಾಲು ಸದಸ್ಯರಿಗೂ ನೀಡಲಾಗುತ್ತಿದೆ. ಇದರಿಂದ ಸಮುದಾಯದ ಜನರು ಒಂದಷ್ಟು ಕಾಸು ನೋಡುವಂತಾಗಿದೆ’.


–ಇದು ಚಾಮರಾಜನಗರ ಜಿಲ್ಲೆ ಬಿಳಿಗಿರಿರಂಗನಬೆಟ್ಟದ ಸೋಲಿಗ ಸಮುದಾಯದ ಮುಖಂಡ, ಕಾಫಿ ಬೆಳೆಗಾರ ಸಿ.ಮಾದೇಗೌಡರ ಮಾತು.

ಮಾದೇಗೌಡರು ಒಬ್ಬರೇ ಅಲ್ಲ, ಬಿಳಿಗಿರಿರಂಗನಬೆಟ್ಟದಲ್ಲಿ ಕಾಫಿ, ಕರಿ ಮೆಣಸು ಬೆಳೆಯುವ ಬಹುತೇಕ ಸೋಲಿಗರು ಕೂಡ ಇದೇ ಮಾತನ್ನು ಹೇಳುತ್ತಾರೆ.

ಕೇಂದ್ರ ಸರ್ಕಾರ, ರಾಜ್ಯ ಸರ್ಕಾರಗಳ ನೆರವಿನಿಂದ ಬಿಳಿಗಿರಿರಂಗನಬೆಟ್ಟದಲ್ಲಿ ಸ್ಥಾಪಿಸಲಾಗಿರುವ ಎರಡು ರೈತ ಉತ್ಪಾದಕ ಕಂಪನಿಗಳು (ಬಿಳಿಗಿರಿ ರಂಗಸ್ವಾಮಿ ಸೋಲಿಗರ ಸಂಸ್ಕರಣಾ ಸಂಘ ಮತ್ತು ಬಿಳಿಗಿರಿ ಸೋಲಿಗರ ಉತ್ಪಾದಕ ಕಂಪನಿ) ಗಿರಿಜನರಿಗೆ ವರವಾಗಿ ಪರಿಣಮಿಸಿವೆ. ಎರಡೂ ಸಂಸ್ಥೆಗಳು ಯಶಸ್ಸಿನ ಪಥದಲ್ಲಿ ಮುನ್ನಡೆ ಯುತ್ತಿದ್ದು, ಇಲ್ಲಿನ ಪ್ರಯೋಗ ರಾಜ್ಯದ ಇತರ ಕಡೆಗಳಿಗೂ ಮಾದರಿ ಆಗುವಂತಿದೆ. ಗಿರಿಜನರೇ ಮುಂದಾಳತ್ವ ವಹಿಸಿ ರೈತ ಉತ್ಪಾದಕ ಕಂಪನಿಗಳನ್ನು ಸ್ಥಾಪನೆ ಮಾಡಿರುವುದು ರಾಜ್ಯದಲ್ಲಿ ಮಾತ್ರವಲ್ಲ, ದಕ್ಷಿಣ ಭಾರತದಲ್ಲೇ ಮೊದಲ ಪ್ರಯತ್ನ ಎಂದೂ ಹೇಳಲಾಗುತ್ತಿದೆ.

ದಕ್ಷಿಣ ಭಾರತದಲ್ಲೇ ಮೊದಲ ಪ್ರಯತ್ನ





ಬಿಳಿಗಿರಿರಂಗನಬೆಟ್ಟದ ಗಿರಿಜನರು ಅರಣ್ಯದ ಮೇಲೆ ಅವಲಂಬಿಸಿದ್ದಾರೆ. ಜೀವನಾಧಾರಕ್ಕಾಗಿ ಅರಣ್ಯ ಉತ್ಪನ್ನಗಳನ್ನು ಸಂಗ್ರಹಿಸಿ ಮಾರಾಟ ಮಾಡುತ್ತಿದ್ದಾರೆ. ಸುಸ್ಥಿರ ರೀತಿಯಲ್ಲಿ ಅರಣ್ಯ ಉತ್ಪನ್ನಗಳನ್ನು ಸಂಗ್ರಹ ಮಾಡುವುದು, ಉತ್ಪನ್ನಗಳು ನಿರಂತರವಾಗಿ ಲಭ್ಯವಿರಬೇಕು ಎಂಬ ಉದ್ದೇಶದಿಂದ ಕೇಂದ್ರ ಸರ್ಕಾರದ ಸಹಕಾರದೊಂದಿಗೆ ಸಂಸ್ಕರಣಾ ಘಟಕವನ್ನು ಆರಂಭಿಸಲಾಗಿದೆ. ಅರಣ್ಯ ಉತ್ಪನ್ನಗಳನ್ನು ಸಂಘವು ಬೆಂಬಲ ಬೆಲೆಗೆ ಖರೀದಿಸಿ, ಅವುಗಳ ಮೌಲ್ಯವರ್ಧನೆ ಮಾಡಿ, ಬಂದ ಲಾಭದಿಂದ ಸೋಲಿಗ ಸಮುದಾಯಕ್ಕೆ ಅನುಕೂಲ ಕಲ್ಪಿಸುವುದರ ಜೊತೆಗೆ, ಆ ಹಣವನ್ನು ಅರಣ್ಯ ಮತ್ತು ವನ್ಯಜೀವಿ ಸಂರಕ್ಷಣೆಗೂ ಬಳಸುವ ಉದ್ದೇಶ ಈ ಕಾರ್ಯಕ್ರಮದ್ದು. ನಮ್ಮ ರಾಜ್ಯ ಮಾತ್ರವಲ್ಲ, ದಕ್ಷಿಣ ಭಾರತದಲ್ಲೇ ಇದು ಮೊದಲ ಪ್ರಯತ್ನ

ಪ್ರೊ.ಸಿದ್ದಪ್ಪ ಶೆಟ್ಟಿ, ಏಟ್ರೀ ಸಂಶೋಧಕ

ಬಿಳಿಗಿರಿ ಸೋಲಿಗರ ಉತ್ಪಾದಕ ಕಂಪನಿಯು ಕಾಫಿ ಬೆಳೆಗೆ ಹೆಚ್ಚು ಒತ್ತು ನೀಡಿದರೆ ಬಿಳಿಗಿರಿರಂಗಸ್ವಾಮಿ ಸೋಲಿಗರ ಸಂಘವು ಕಾಫಿ, ಕರಿಮೆಣಸು ಹಾಗೂ ಅರಣ್ಯ ಉತ್ಪನ್ನಗಳ ಸಂಗ್ರಹ ಮತ್ತು ಮೌಲ್ಯವರ್ಧನೆಗೆ ಆದ್ಯತೆ ನೀಡುತ್ತಿದೆ.

ಕಾಫಿ ಬೆಳೆಗೆ ರಾಜ್ಯದಲ್ಲಿ ಕೊಡಗು, ಚಿಕ್ಕಮಗಳೂರು ಜಿಲ್ಲೆಗಳು ಹೆಸರುವಾಸಿ ಯಾಗಿವೆ. ಆದರೆ ಬಿಳಿಗಿರಿರಂಗನಾಥ ಸ್ವಾಮಿ ಬೆಟ್ಟದಲ್ಲಿ ಕಾಫಿ ಬೆಳೆಯೇ! ಪಶ್ಚಿಮ ಮತ್ತು ಪೂರ್ವ ಘಟ್ಟಗಳನ್ನು ಬೆಸೆಯುವ ಬಿಳಿಗಿರಿರಂಗನಾಥಸ್ವಾಮಿ ದೇವಾಲಯ ಹುಲಿ ಸಂರಕ್ಷಿತ ಪ್ರದೇಶದ ಪರಿಸರ ಕಾಫಿ ಬೆಳೆಯುವುದಕ್ಕೆ ಸೂಕ್ತವಾಗಿದೆ. ಅರಣ್ಯ ವ್ಯಾಪ್ತಿಯ ಪುಣಜನೂರು–ಬೇಡಗುಳಿ ಪ್ರದೇಶದಲ್ಲಿ 1886ರಿಂದಲೇ ಕಾಫಿ ತೋಟಗಳಿವೆ. ಬ್ರಿಟಿಷ್ ಆಡಳಿತದ ಸಂದರ್ಭದಲ್ಲಿ ಬಂದಿದ್ದ ಸ್ಕಾಟ್ಲೆಂಡ್‌ನ ರಾಂಡಾಫ್ ಹೇಟನ್ ಮೋರಿಸ್ ಎಂಬಾತ ಈ ಪ್ರದೇಶದಲ್ಲಿ 2,000 ಎಕರೆ ಅರಣ್ಯ ಪ್ರದೇಶವನ್ನು ಗುತ್ತಿಗೆ ಪಡೆದು ಕಾಫಿ ತೋಟ ಮಾಡಿದ್ದ. ಈಗಲೂ ಅಲ್ಲಿ ಖಾಸಗಿ ಕಂಪನಿಗಳ ಮಾಲೀಕತ್ವದ ಕಾಫಿ ತೋಟಗಳಿವೆ. ಭೂ ಮಾಲೀಕತ್ವದ ವಿಚಾರದಲ್ಲಿ ಅರಣ್ಯ ಇಲಾಖೆ ಮತ್ತು ಕಂಪನಿಗಳ ನಡುವೆ ವ್ಯಾಜ್ಯವೂ ನಡೆಯುತ್ತಿದೆ.

ಇದೇ ಅರಣ್ಯ ಪ್ರದೇಶದ ಮೂಲ ನಿವಾಸಿಗಳಾದ ಸೋಲಿಗರು ಕೂಡ ಬಿಳಿಗಿರಿರಂಗನಬೆಟ್ಟ, ಬೇಡಗುಳಿ, ಪುಣಜನೂರು ವ್ಯಾಪ್ತಿಯಲ್ಲಿ ಮೂರ್ನಾಲ್ಕು ದಶಕಗಳಿಂದ ಕಾಫಿ ಬೆಳೆಯುತ್ತಿದ್ದಾರೆ. ಚಾಮರಾಜನಗರ ಜಿಲ್ಲೆಯಲ್ಲಿ ಅಂದಾಜು 750ರಿಂದ 800 ಎಕರೆ ಪ್ರದೇಶದಲ್ಲಿ 700ರಿಂದ 800ರಷ್ಟು ಬುಡಕಟ್ಟು ಕುಟುಂಬಗಳು ಕಾಫಿ ಬೆಳೆಯುತ್ತಿವೆ. ಬಿಳಿಗಿರಿರಂಗನಬೆಟ್ಟದಲ್ಲಿರುವ 16 ಪೋಡುಗಳ 550ಕ್ಕೂ ಹೆಚ್ಚು ಕುಟುಂಬಗಳು 600 ಎಕರೆ ಪ್ರದೇಶದಲ್ಲಿ ಕಾಫಿಯನ್ನು ಬೆಳೆಯುತ್ತಿವೆ. ಅರ್ಧ ಎಕರೆಯಿಂದ ಹಿಡಿದು ಮೂರು ಎಕರೆಯಷ್ಟು ವಿಸ್ತೀರ್ಣದ ಕಾಫಿ ತೋಟಗಳನ್ನು ಸೋಲಿಗರು ಹೊಂದಿದ್ದಾರೆ. ಸೋಲಿಗರು ಬೆಳೆಯುವ ಕಾಫಿಯ ವೈಶಿಷ್ಟ್ಯ ಎಂದರೆ ಇದು ಇದು ರಾಸಾಯನಿಕ ಮುಕ್ತ.

6ನೇ ಪುಟ ನೋಡಿ




ಅಮೆರಿಕದ ವಿಲ್ಮಿಂಗ್ಟನ್‌ನಲ್ಲಿರುವ ಭಾರತೀಯ ಸಮುದಾಯದ ಸದಸ್ಯರು ಪ್ರಧಾನಿ ನರೇಂದ್ರ ಮೋದಿ ಅವರನ್ನು ಸ್ವಾಗತಿಸಿದರು(ಎಡಚಿತ್ರ) ದ್ವಿಪಕ್ಷೀಯ ಮಾತುಕತೆಗೆ ತಮ್ಮ ನಿವಾಸಕ್ಕೆ ಬಂದ ಮೋದಿ ಅವರನ್ನು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಬರಮಾಡಿಕೊಂಡರು — ಪಿಟಿಐ ಚಿತ್ರಗಳು

ಭಾರತ–ಅಮೆರಿಕ ಬಾಂಧವ್ಯ ಇನ್ನಷ್ಟು ಗಟ್ಟಿಗೊಳಿಸಲು ಒತ್ತು

ಮೋದಿ– ಬೈಡನ್ ಮಾತುಕತೆ

ವಿಲ್ಮಿಂಗ್ಟನ್, ಅಮೆರಿಕ (ಪಿಟಿಐ): ‘ಕ್ವಾಡ್’ ಶೃಂಗದಲ್ಲಿ ಭಾಗಿಯಾಗಲು ಶನಿವಾರ ಅಮೆರಿಕಕ್ಕೆ ಬಂದಿರುವ ಪ್ರಧಾನಿ ನರೇಂದ್ರ ಮೋದಿ ಅವರು ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರನ್ನು ಭೇಟಿಯಾಗಿ ಮಾತುಕತೆ ನಡೆಸಿದರು.

ಡೆಲವೇರ್‌ನ ವಿಲ್ಮಿಂಗ್ಟನ್‌ನಲ್ಲಿರುವ ಬೈಡನ್ ಅವರ ನಿವಾಸದಲ್ಲಿ ಉಭಯ ನಾಯಕರು ಭಾರತ–ಅಮೆರಿಕ ಬಾಂಧವ್ಯವನ್ನು ಇನ್ನಷ್ಟು ಗಟ್ಟಿಗೊಳಿಸುವ ಸಂಬಂಧ ಚರ್ಚಿಸಿದರು.

ಉಭಯ ದೇಶಗಳ ನಡುವಣ ಸಮಗ್ರ ಜಾಗತಿಕ ಕಾರ್ಯತಂತ್ರದ ಪಾಲುದಾರಿಕೆಯನ್ನು ವಿಸ್ತರಿಸಲು ಹೊಸ ಮಾರ್ಗಗಳನ್ನು ಅನ್ವೇಷಿಸುವ ಬಗ್ಗೆಯೂ ಮಾತುಕತೆ ನಡೆಯಿತು.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್.ಜೈಶಂಕರ್ ಮತ್ತು ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಆ್ಯಂಟನಿ ಬ್ಲಿಂಕೆನ್ ಅವರು ಮಾತುಕತೆ ವೇಳೆ ಹಾಜರಿದ್ದರು.

ದ್ವಿಪಕ್ಷೀಯ ಮಾತುಕತೆಗೆ ತಮ್ಮ ನಿವಾಸಕ್ಕೆ ಬಂದ ಮೋದಿ ಅವರನ್ನು ಬೈಡನ್ ಆತ್ಮೀಯವಾಗಿ ಬರಮಾಡಿಕೊಂಡರು. ಇಬ್ಬರೂ ನಾಯಕರು ಪರಸ್ಪರ ಆಲಿಂಗಿಸಿಕೊಂಡರು. ಬೈಡನ್, ಮೋದಿ ಅವರ ಕೈಹಿಡಿದು ತಮ್ಮ ಮನೆಯೊಳಗೆ ಕರೆದೊಯ್ದರು.

‘ಮೋದಿ ಅವರನ್ನು ಅಮೆರಿಕದ ಅಧ್ಯಕ್ಷ ಜೋ ಬೈಡನ್ ತಮ್ಮ ನಿವಾಸದಲ್ಲಿ ಆತ್ಮೀಯವಾಗಿ ಬರಮಾಡಿಕೊಂಡರು’ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ‘ಎಕ್ಸ್’ನಲ್ಲಿ ಹೇಳಿದ್ದಾರೆ.

‘ಕ್ವಾಡ್’ ಶೃಂಗವು ಬೈಡನ್ ಅವರ ಊರಾಗಿರುವ ವಿಲ್ಮಿಂಗ್ಟನ್‌ನಲ್ಲಿ ನಡೆಯಲಿದೆ. ಇಂಡೊ–ಪೆಸಿಫಿಕ್ ಪ್ರದೇಶದಲ್ಲಿ ಸಹಕಾರವನ್ನು ಹೆಚ್ಚಿಸಲು ಹೊಸ ಉಪಕ್ರಮಗಳನ್ನು ಘೋಷಿಸುವ, ಉಕ್ರೇನ್ ಮತ್ತು ಗಾಜಾ ಸಂಘರ್ಷಕ್ಕೆ ಶಾಂತಿಯುತ ಪರಿಹಾರ ಕಂಡುಕೊಳ್ಳಲು ಮಾರ್ಗೋಪಾಯ ಅರಸುವ ಕೆಲಸ ‘ಕ್ವಾಡ್’ ಶೃಂಗ ಸಭೆ ಮೂಲಕ ನಡೆಯುವ ನಿರೀಕ್ಷೆ ಇದೆ.

‘ದಿನವಿಡೀ ನಡೆಯುವ ಚರ್ಚೆಗಳು ನಮ್ಮ ಜಗತ್ತಿನ ಒಳಿತಿಗೆ ಮತ್ತು ಪ್ರಮುಖ ಜಾಗತಿಕ ಸವಾಲುಗಳನ್ನು ಎದುರಿಸಲು ನೆರವಾಗುತ್ತದೆ ಎಂಬುದು ನನಗೆ ಖಾತ್ರಿಯಿದೆ’ ಎಂದು ಮೋದಿ ಹೇಳಿದ್ದಾರೆ.

ಮೋದಿ ಅವರು ವಿಲ್ಮಿಂಗ್ಟನ್‌ನಿಂದ ನ್ಯೂಯಾರ್ಕ್‌ಗೆ ಪ್ರಯಾಣ ಬೆಳೆಸಲಿದ್ದಾರೆ. ಅಲ್ಲಿ ಲಾಂಗ್ ಐಲ್ಯಾಂಡ್‌ನಲ್ಲಿ ಭಾರತೀಯ ಸಮುದಾಯದವರನ್ನು ಉದ್ದೇಶಿಸಿ ಭಾನುವಾರ ಮಾತನಾಡಲಿದ್ದಾರೆ. ಅಲ್ಲದೆ, ಅತ್ಯಾಧುನಿಕ ತಂತ್ರಜ್ಞಾನ ಕ್ಷೇತ್ರದ ಅಮೆರಿಕದ ಕಂಪನಿಗಳ ಸಿಇಒಗಳ ಜೊತೆ ದುಂಡುಮೇಜಿನ ಸಭೆಯಲ್ಲಿ ಭಾಗಿಯಾಗಲಿದ್ದಾರೆ.

ವಿಶ್ವಸಂಸ್ಥೆಯ ಮಹಾ ಅಧಿವೇಶನದಲ್ಲಿ ಸೋಮವಾರ ನಡೆಯುವ ‘ಭವಿಷ್ಯದ ಶೃಂಗ’ ಹೆಸರಿನ ಕಾರ್ಯಕ್ರಮ ಉದ್ದೇಶಿಸಿ ಭಾಷಣ ಮಾಡಲಿದ್ದಾರೆ.

ತಮ್ಮ ಮೂರು ದಿನಗಳ ಭೇಟಿಯ ವೇಳೆ ಮೋದಿ ಅವರು ಆಸ್ಟ್ರೇಲಿಯಾ ಪ್ರಧಾನಿ ಆಂಥೋನಿ ಅಲ್ಬನೀಸ್ ಮತ್ತು ಜಪಾನ್ ಪ್ರಧಾನಿ ಫುಮಿಯೊ ಕಿಶಿಡಾ ಅವರೊಂದಿಗೂ ದ್ವಿಪಕ್ಷೀಯ ಮಾತುಕತೆ ನಡೆಸಲಿದ್ದಾರೆ.

ಮುಖ್ಯಾಂಶಗಳು

- ‘ಕ್ವಾಡ್’ ಶೃಂಗದಲ್ಲಿ ಮೋದಿ ಭಾಗಿ
- ಭಾರತೀಯ ಸಮುದಾಯದವರನ್ನು ಉದ್ದೇಶಿಸಿ ಮಾತನಾಡಲಿರುವ ಪ್ರಧಾನಿ
- ವಿಶ್ವಸಂಸ್ಥೆಯಲ್ಲಿ ಸೋಮವಾರ ನರೇಂದ್ರ ಮೋದಿ ಭಾಷಣ

ಭಾರತದೊಂದಿಗೆ ಅಮೆರಿಕದ ಪಾಲುದಾರಿಕೆಯು ಹಿಂದೆಂದಿಗಿಂತಲೂ ಹೆಚ್ಚು ಪ್ರಬಲ, ನಿಕಟ ಮತ್ತು ಕ್ರಿಯಾಶೀಲವಾಗಿದೆ

ಜೋ ಬೈಡನ್, ಅಮೆರಿಕದ ಅಧ್ಯಕ್ಷ

ಪ್ರಧಾನಿಗೆ ಅದ್ದೂರಿ ಸ್ವಾಗತ

ಮೂರು ದಿನಗಳ ಅಮೆರಿಕ ಭೇಟಿಗಾಗಿ ಶನಿವಾರ ಫಿಲಡೆಲ್ಫಿಯಾಗೆ ಬಂದಿಳಿದ ಮೋದಿ ಅವರಿಗೆ ಅದ್ದೂರಿ ಸ್ವಾಗತ ಲಭಿಸಿತು. ಫಿಲಡೆಲ್ಫಿಯಾ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಹೊರಗೆ ಹೆಚ್ಚಿನ ಸಂಖ್ಯೆಯಲ್ಲಿ ನೆರೆದಿದ್ದ ಭಾರತೀಯ ಸಮುದಾಯದ ಸದಸ್ಯರು ಪ್ರಧಾನಿ ಅವರನ್ನು ಬರಮಾಡಿಕೊಂಡರು.

ಸಾಂಪ್ರದಾಯಿಕ ಉಡುಪು ಧರಿಸಿದ್ದ ಹಲವರು ತ್ರಿವರ್ಣ ಧ್ವಜವನ್ನು ಕೈಯಲ್ಲಿ ಹಿಡಿದಿದ್ದರು. ಕೆಲವರು ನೀಡಿದ ಆಟೋಗ್ರಾಫ್‌ಗೆ ಸಹಿ ಹಾಕಿದ ಪ್ರಧಾನಿ, ಅವರಿಗೆ ಹಸ್ತಲಾಘವ ನೀಡಿದರು.

‘ಉತ್ಸಾಹ ಇಮ್ಮಡಿಗೊಳಿಸುವಂತಹ ಸ್ವಾಗತ ಫಿಲಡೆಲ್ಫಿಯಾದಲ್ಲಿ ದೊರೆತಿದೆ. ಅಮೆರಿಕದಲ್ಲಿರುವ ಭಾರತೀಯ ಸಮುದಾಯವು ತನ್ನನ್ನು ತಾನು ವಿಶಿಷ್ಟವಾಗಿ ಗುರುತಿಸಿಕೊಂಡಿದೆ. ವಿವಿಧ ಕ್ಷೇತ್ರಗಳಲ್ಲಿ ಸಕಾರಾತ್ಮಕ ಪ್ರಭಾವ ಬೀರುತ್ತಾ ಬಂದಿದೆ. ಅವರೊಂದಿಗೆ ಮಾತುಕತೆ ನಡೆಸುವುದು ಸಂತಸದ ಸಂಗತಿ’ ಎಂದು ಪ್ರಧಾನಿ ಅವರು ‘ಎಕ್ಸ್’ನಲ್ಲಿ ಹೇಳಿದ್ದಾರೆ.

ಸಿಖ್ ಸಂಘಟನೆಗಳ ಜತೆ ಚರ್ಚೆ

ಮೋದಿ ಭೇಟಿಯ ಸಂದರ್ಭದಲ್ಲೇ ಅಮೆರಿಕದ ರಾಷ್ಟ್ರೀಯ ಭದ್ರತಾ ಮಂಡಳಿಯ ಅಧಿಕಾರಿಗಳು, ಪ್ರತ್ಯೇಕ ಖಾಲಿಸ್ತಾನಿ ರಾಷ್ಟ್ರದ ಪರ ಇರುವ ಅಮೆರಿಕದ ಸಿಖ್ ಸಂಘಟನೆಗಳ ಪ್ರತಿನಿಧಿಗಳನ್ನು ಭೇಟಿ ಮಾಡಿ ಚರ್ಚಿಸಿದರು.

ಔಷಧ ನೀತಿ: ಒಪ್ಪಂದಕ್ಕೆ ಸಹಿ



ಮೋದಿ ಮತ್ತು ಬೈಡನ್ ಅವರು ದ್ವಿಪಕ್ಷೀಯ ಔಷಧ ನೀತಿಗೆ ಸಂಬಂಧಿಸಿದ ಒಪ್ಪಂದವೊಂದಕ್ಕೆ ಸಹಿ ಹಾಕಿದರು. ಕೆಲವೊಂದು ಔಷಧಗಳ ಅಕ್ರಮ ಉತ್ಪಾದನೆ ಮತ್ತು ಕಳ್ಳ-ಸಾಗಣೆಯನ್ನು ತಡೆಗಟ್ಟಲು ಭಾರತ ಮತ್ತು ಅಮೆರಿಕ ಪರಸ್ಪರ ಕೈಜೋಡಿಸಲು ಈ ಒಪ್ಪಂದವು ವೇದಿಕೆ ಕಲ್ಪಿಸಲಿದೆ.

ಟಿಯೆಸ್ಸಾರ್, ಮೊಹರೆ ಪ್ರಶಸ್ತಿ ಪ್ರಕಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪತ್ರಕರ್ತರಿಗೆ ನೀಡುವ ‘ಟಿ.ಎಸ್. ರಾಮಚಂದ್ರರಾವ್’ (ಟಿಯೆಸ್ಸಾರ್) ಪ್ರಶಸ್ತಿ ಹಾಗೂ ‘ಮೊಹರೆ ಹಣಮಂತರಾಯ’ ಪ್ರಶಸ್ತಿಗಳನ್ನು ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಪ್ರಕಟಿಸಿದೆ.

2019ರಿಂದ 2023ನೇ ಸಾಲಿನ ಐದು ವರ್ಷಗಳ ಪ್ರಶಸ್ತಿಗಳನ್ನು ಒಟ್ಟಿಗೆ ಪ್ರಕಟಿಸಲಾಗಿದೆ. ಟಿಯೆಸ್ಸಾರ್ ಪ್ರಶಸ್ತಿಗೆ ಕ್ರಮವಾಗಿ ಶಿವಾಜಿ ಗಣೇಶನ್ (ಪ್ರಜಾವಾಣಿ), ಎಸ್.ಆರ್. ಮಣೂರ (ಸಂಯುಕ್ತ ಕರ್ನಾಟಕ), ಆರ್. ಪೂರ್ಣಿಮಾ (ಪ್ರಜಾವಾಣಿ–ಉದಯವಾಣಿ), ಪದ್ಮರಾಜ ದಂಡಾವತಿ (ಪ್ರಜಾವಾಣಿ) ಹಾಗೂ ಸರಜೂ ಕಾಟ್ಕರ್ (ಕನ್ನಡಪ್ರಭ–ಇಂಡಿಯನ್ ಎಕ್ಸ್‌ಪ್ರೆಸ್) ಅವರನ್ನು ಆಯ್ಕೆ ಮಾಡಲಾಗಿದೆ.


ಮೊಹರೆ ಹಣಮಂತರಾಯ ಪ್ರಶಸ್ತಿ: ಗದಗ-ಬೆಟಗೇರಿಯ ‘ನವೋದಯ’ ಪತ್ರಿಕೆಯ ಸಂಪಾದಕ ರಾಜೀವ್ ಕಿದಿಯೂರ, ಬೆಂಗಳೂರಿನ ‘ಸಂವಾದ’ ಮಾಸಪತ್ರಿಕೆಯ ಸಂಪಾದಕ ಇಂದೂಧರ ಹೊನ್ನಾಪುರ, ಶಿವಮೊಗ್ಗದ ‘ಕ್ರಾಂತಿದೀಪ’ ಪತ್ರಿಕೆಯ ಸಂಪಾದಕ ಎನ್. ಮಂಜುನಾಥ್, ಮುಂಬೈನ ‘ಕರ್ನಾಟಕ ಮಲ್ಲ’ ಪತ್ರಿಕೆ ಸಂಪಾದಕ ಚಂದ್ರಶೇಖರ ಪಾಲೆತ್ತಾಡಿ, ಕಲಬುರಗಿ ಜಿಲ್ಲೆಯ ‘ಕರ್ನಾಟಕ ಸಂಧ್ಯಾಕಾಲ’ ಪತ್ರಿಕೆ ಸಂಪಾದಕ ಶಿವಲಿಂಗಪ್ಪ ದೊಡ್ಡಮನಿ ಅವರನ್ನು ಆಯ್ಕೆ ಮಾಡಲಾಗಿದೆ.

ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಪಿ.ಎನ್. ದೇಸಾಯಿ ಅಧ್ಯಕ್ಷತೆಯಲ್ಲಿ ಆಯ್ಕೆ ಸಮಿತಿ ರಚಿಸಲಾಗಿತ್ತು. ಎರಡೂ ಪ್ರಶಸ್ತಿಗಳು ತಲಾ ₹2 ಲಕ್ಷ ನಗದು ಪುರಸ್ಕಾರ ಒಳಗೊಂಡಿವೆ.


ಶಿವಾಜಿ ಗಣೇಶನ್


ಎಸ್.ಆರ್. ಮಣೂರ


ಆರ್. ಪೂರ್ಣಿಮಾ



ಪದ್ಮರಾಜ ದಂಡಾವತಿ



ಸರಜೂ ಕಾಟ್ಕರ್


ರಾಜೀವ್ ಕಿದಿಯೂರ


ಇಂದೂಧರ ಹೊನ್ನಾಪುರ


ಎನ್. ಮಂಜುನಾಥ್


ಚಂದ್ರಶೇಖರ ಪಾಲೆತ್ತಾಡಿ


ಶಿವಲಿಂಗಪ್ಪ ದೊಡ್ಡಮನಿ



ಕಲಬುರಗಿಯಲ್ಲಿ ಶನಿವಾರ ಸುರಿಯುತ್ತಿದ್ದ ಮಳೆಯಲ್ಲೇ ವಾಹನಗಳು ಸಾಗಿದವು ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

‘ಕಲ್ಯಾಣ’ದ ವಿವಿಧೆಡೆ ಮಳೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಹಲವು ದಿನಗಳ ಬಿಡುವಿನ ಬಳಿಕ ಕಲ್ಯಾಣ ಕರ್ನಾಟಕದ ಹಲವೆಡೆ ಶನಿವಾರ ಮಳೆಯಾಗಿದೆ.

ಕಲಬುರಗಿ, ಬೀದರ್ ನಗರ ಹಾಗೂ ಸುತ್ತಮುತ್ತಲಿನ ಭಾಗಗಳಲ್ಲಿ ಶನಿವಾರ ಬೆಳಿಗ್ಗೆ ಹಾಗೂ ಸಂಜೆ ಉತ್ತಮ ಮಳೆಯಾಗಿದೆ. ಗುಡುಗು ಸಹಿತ ಜೋರು ಮಳೆಗೆ ವಾತಾವರಣ ಸಂಪೂರ್ಣ ತಂಪಾಗಿದೆ. ಬೀದರ್ ಜಿಲ್ಲೆಯ ಭಾಲ್ಕಿಯಲ್ಲೂ ಜೋರು ಮಳೆ ಸುರಿದಿದೆ.

ಕಲಬುರಗಿ ಜಿಲ್ಲೆಯ ಶಹಾಬಾದ್‌ನಲ್ಲಿ ಬೆಳಿಗ್ಗೆ ವರುಣ ಅಬ್ಬರಿಸಿದ್ದಾನೆ. ಕಲಬುರಗಿ ನಗರದಲ್ಲಿ ಮಧ್ಯಾಹ್ನದ ವೇಳೆಗೆ ಧಾರಾಕಾರ ಮಳೆ ಸುರಿಯಿತು.

ಕಲಬುರಗಿಯಲ್ಲಿ ಬೆಳಿಗ್ಗೆ ತೀಕ್ಷ್ಣ ಬಿಸಿಲು ಹಾಗೂ ಸೆಕೆಯ ವಾತಾವರಣವಿತ್ತು. ಮಧ್ಯಾಹ್ನದ ವೇಳೆ ಆಗಸದಲ್ಲಿ ಮೋಡಗಳು ದಟ್ಟೈಸಿದವು. ಮೊದಲು ಕೆಲ ನಿಮಿಷ ತುಂತುರು ಸುರಿದ ಮಳೆ ಒಂದು ಗಂಟೆಯ ಬಿಡುವಿನ ಬಳಿಕ ಧಾರಕಾರವಾಗಿ ಅಬ್ಬರಿಸಿತು. 45 ನಿಮಿಷಗಳ ಕಾಲ ಸುರಿದ ಮಳೆಗೆ ಇಳೆ ತಂಪಾಗಿ, ತಂಪಿನ ಕಂಪು ನೀಡಿತು.

ಕೊಪ್ಪಳ, ಯಾದಗಿರಿ, ರಾಯಚೂರು ಜಿಲ್ಲೆಯ ಲಿಂಗಸುಗೂರು, ಹಟ್ಟಿ ಚಿನ್ನದಗಣಿ ಭಾಗದಲ್ಲಿ ತುಂತುರು ಮಳೆ ಸುರಿದಿದೆ.

ಉತ್ತರ ಕರ್ನಾಟಕದಲ್ಲಿ ಮಳೆ: ಧಾರವಾಡ, ವಿಜಯಪುರ, ಬಳ್ಳಾರಿ, ಬಾಗಲಕೋಟೆ ಜಿಲ್ಲೆಗಳ ಕೆಲವೆಡೆ ಸುರಿದಿದೆ.

ಭಾನುವಾರ, ಸೆಪ್ಟೆಂಬರ್ 22, 2024 | ಬೆಂಗಳೂರು | ₹ 7.00 | ಸಂಪುಟ 77 | ಸಂಚಿಕೆ 264 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಭಾನುವಾರದ ಪುರವಣಿ
ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಎಮ್ಮೆಗಳಿಗೂ ಒಂದು ಬ್ಯೂಟಿ ಪಾರ್ಲರ್ ಇದೆ ಕಣ್ರಿ!

ಬಿಎಸ್‌ಎನ್‌ಎಲ್ ಬಳಕೆದಾರರ ಏರಿಕೆ 8
ಸಪ್ನಾ ಅಧ್ಯಕ್ಷತೆಯ ಸಮಿತಿ ಶಿಫಾರಸು, ಪರಿಶೀಲಿಸಿ ಕ್ರಮ: ಸಚಿವ ಲಾಡ್
‘ಪಾರ್ಕ್‌ನಲ್ಲಿ ಬಿರಿಯಾನಿ ಸವಿದವರು ಯಾರು?’ 9
ವರ್ಷಕ್ಕೆ 6 ದಿನ ವೇತನ ಸಹಿತ ಮುಟ್ಟಿನ ರಜೆ 4

ರಾಜ್ಯ ಸರ್ಕಾರದ ವಿರುದ್ಧ ಮತ್ತೊಂದು ‘ಅಸ್ತ್ರ’ ಪ್ರಯೋಗಿಸಿದ ರಾಜ್ಯಪಾಲರು

‘ಅರ್ಕಾವತಿ ರೀಡೂ ವರದಿ ಕೊಡಿ’

ಪ್ರಜಾವಾಣಿ ವಾರ್ತೆ



ಥಾವರಚಂದ್ ಗೆಹಲೋತ್

ಬೆಂಗಳೂರು: ಸಿದ್ದರಾಮಯ್ಯ ಅವರು ಹಿಂದೆ ಮುಖ್ಯಮಂತ್ರಿಯಾಗಿದ್ದಾಗ ‘ರೀಡೂ’ ಹೆಸರಿನಲ್ಲಿ ಅರ್ಕಾವತಿ ಬಡಾವಣೆಯ ಭೂಮಿ ಡಿನೋಟಿಫಿಕೇಶನ್ ಮಾಡಿದ್ದಾರೆಂಬ ಆರೋಪಕ್ಕೆ ಸಂಬಂಧಿಸಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿ ಎಚ್.ಎಸ್. ಕೆಂಪಣ್ಣ ಆಯೋಗದ ವರದಿ ಮತ್ತು ಸಂಬಂಧಪಟ್ಟ ದಾಖಲೆಗಳನ್ನು ಸಲ್ಲಿಸುವಂತೆ ರಾಜ್ಯ ಸರ್ಕಾರಕ್ಕೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಪತ್ರ ಬರೆದಿದ್ದಾರೆ.

ರಾಜ್ಯ ಸರ್ಕಾರ ಮತ್ತು ರಾಜಭವನದ ಮಧ್ಯೆ ಬಿಗಡಾಯಿಸುತ್ತಲೇ ಇರುವ ಸಂಘರ್ಷದ ಬೆನ್ನಿಗೇ, 2013–18ರ ಅವಧಿಯ ವಿವರಣೆಯನ್ನು ರಾಜ್ಯಪಾಲರು ಕೇಳಿದ್ದಾರೆ.

ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರಿಗೆ ರಾಜ್ಯಪಾಲರು ಬರೆದಿರುವ ಪತ್ರವನ್ನು ಉಲ್ಲೇಖಿಸಿ, ಆಯೋಗದ ವರದಿಗೆ ಸಂಬಂಧಿಸಿದ ಕಡತವನ್ನು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ನಗರಾಭಿವೃದ್ಧಿ ಇಲಾಖೆ ಇದೇ 11ರಂದು ಸಲ್ಲಿಸಿದೆ.

ಏನಿದು ಡಿನೋಟಿಫೈ ಪ್ರಕರಣ: ಅರ್ಕಾವತಿ ಬಡಾವಣೆ ನಿರ್ಮಾಣಕ್ಕೆ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಸ್ವಾಧೀನಪಡಿಸಿಕೊಂಡಿದ್ದ ಜಮೀನಿನಲ್ಲಿ 540 ಎಕರೆಯನ್ನು ಹಿಂದೆ ಮುಖ್ಯಮಂತ್ರಿ ಆಗಿದ್ದ ಅವಧಿಯಲ್ಲಿ ಸಿದ್ದರಾಮಯ್ಯ ಅವರು ‘ರೀಡೂ’ ಹೆಸರಿನಲ್ಲಿ ಅಕ್ರಮವಾಗಿ ಡಿನೋಟಿಫೈ ಮಾಡಿದ್ದಾರೆ ಎಂದು, ಅಂದು ವಿರೋಧ ಪಕ್ಷದ ನಾಯಕರಾಗಿದ್ದ ಜಗದೀಶ ಶೆಟ್ಟರ್ ಅವರು ವಿಧಾನಸಭೆ ಅಧಿವೇಶನದಲ್ಲಿಯೇ ಆರೋಪ ಮಾಡಿದ್ದರು.

ಆಡಳಿತ ಮತ್ತು ವಿರೋಧ ಪಕ್ಷಗಳ ನಡುವೆ ಭಾರಿ ಜಟಾಪಟಿಗೆ ಕಾರಣವಾಗಿದ್ದ ಈ ಪ್ರಕರಣದ ವಿಚಾರಣೆಗೆ 2014ರ ಆಗಸ್ಟ್‌ನಲ್ಲಿ ನ್ಯಾ. ಕೆಂಪಣ್ಣ ನೇತೃತ್ವದಲ್ಲಿ ಆಯೋಗವನ್ನು ಅಂದಿನ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ ನೇಮಿಸಿತ್ತು. ಅರ್ಕಾವತಿ ಬಡಾವಣೆಗೆ ಸ್ವಾಧೀನ ಪಡಿಸಿಕೊಂಡಿದ್ದ ಜಮೀನಿನಲ್ಲಿ 2004ರಿಂದ 2014ರವರೆಗೆ 983 ಎಕರೆ ವಿಸ್ತೀರ್ಣವನ್ನು ಭೂಸ್ವಾಧೀನ ಪ್ರಕ್ರಿಯೆಯಿಂದ ಹೊರಗಿಟ್ಟಿರುವ ಕುರಿತು ವಿಚಾರಣೆ ನಡೆಸಿ ವರದಿ ನೀಡುವಂತೆ ಆಯೋಗಕ್ಕೆ ಸೂಚಿಸಿತ್ತು. 2017ರ ಆಗಸ್ಟ್‌ನಲ್ಲಿ ಆಯೋಗವು 1,861 ಪುಟಗಳ ವರದಿಯನ್ನು ರಾಜ್ಯ ಸರ್ಕಾರದ ಅಂದಿನ ಮುಖ್ಯ ಕಾರ್ಯದರ್ಶಿ ಸುಭಾಶ್‌ಚಂದ್ರ ಕುಂಠಿಯಾ ಅವರಿಗೆ ಸಲ್ಲಿಸಿತ್ತು.

ಈ ವರದಿಯನ್ನು ಸಚಿವ ಸಂಪುಟ ಸಭೆಯಲ್ಲಿ ಅಂದಿನ ಸರ್ಕಾರ ಮಂಡಿಸಿತ್ತು. ಅದನ್ನು ಒಪ್ಪಿದೆಯೋ ಅಥವಾ ತಿರಸ್ಕರಿಸಿದೆಯೋ ಎಂಬುದನ್ನು ಬಹಿರಂಗ ಪಡಿಸಿರಲಿಲ್ಲ. ನಿಯಮಾನುಸಾರ, ವಿಧಾನ ಮಂಡಲದ ಉಭಯ ಸದನಗಳಲ್ಲಿಯೂ ಮಂಡಿಸಿರಲಿಲ್ಲ. ಆ ಬಳಿಕ, ಅಧಿಕಾರಕ್ಕೆ ಬಂದ ಎಚ್.ಡಿ. ಕುಮಾರಸ್ವಾಮಿ, ಬಿ.ಎಸ್. ಯಡಿಯೂರಪ್ಪ ಹಾಗೂ ಬಸವರಾಜ ಬೊಮ್ಮಾಯಿ ನೇತೃತ್ವದ ಸರ್ಕಾರಗಳು ಇದರ ಬಗ್ಗೆ ಮೌನ ವಹಿಸಿದ್ದವು.

7ನೇ ಪುಟ ನೋಡಿ

ಗಂಗೇನಹಳ್ಳಿ ಡಿನೋಟಿಫೈ: ಬಿಎಸ್‌ವೈ ವಿಚಾರಣೆ



ಯಡಿಯೂರಪ್ಪ

ಬೆಂಗಳೂರು: ಬೆಂಗಳೂರಿನ ಗಂಗೇನಹಳ್ಳಿಯ (ಈಗಿನ ಗಂಗಾನಗರ) 1 ಎಕರೆ 11 ಗುಂಟೆ ಜಮೀನು ಡಿನೋಟಿಫಿಕೇಷನ್ ಪ್ರಕರಣಕ್ಕೆ ಸಂಬಂಧಿಸಿದಂತೆ ಲೋಕಾಯುಕ್ತ ಪೊಲೀಸರು ಮಾಜಿ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅವರನ್ನು ಶನಿವಾರ ವಿಚಾರಣೆಗೆ ಒಳಪಡಿಸಿದರು.

2015ರಲ್ಲಿ ದಾಖಲಾಗಿದ್ದ ಈ ಪ್ರಕರಣದಲ್ಲಿ ತನಿಖೆ ಮುಂದುವರಿಸಬಹುದು ಎಂದು 2021ರಲ್ಲೇ ಹೈಕೋರ್ಟ್ ತೀರ್ಪು ನೀಡಿತ್ತು. ಆದರೆ, ಈಗಷ್ಟೇ ತನಿಖೆ ಚುರುಕುಗೊಂಡಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ, 2007ರಿಂದ 2010ರ ನಡುವೆ ಕುಮಾರಸ್ವಾಮಿ ಮತ್ತು ಯಡಿಯೂರಪ್ಪ ಅವರು ಮುಖ್ಯಮಂತ್ರಿ ಆಗಿದ್ದಾಗ ಅವರ ಆಪ್ತ ಕಾರ್ಯದರ್ಶಿ, ನಗಾರಾಭಿವೃದ್ಧಿ ಇಲಾಖೆಯ ಪ್ರಧಾನ ಕಾರ್ಯದರ್ಶಿಗಳಾಗಿದ್ದ ಐವರು ಅಧಿಕಾರಿಗಳ ಹೇಳಿಕೆಗಳನ್ನು ವಿಶೇಷ ನ್ಯಾಯಾಲಯವು ಗುರುವಾರ ಮತ್ತು ಶುಕ್ರವಾರ ದಾಖಲಿಸಿಕೊಂಡಿತ್ತು. ಅದರ ಬೆನ್ನಲ್ಲೇ ಯಡಿಯೂರಪ್ಪ ಅವರನ್ನು ಲೋಕಾಯುಕ್ತ ಪೊಲೀಸರು ಕರೆಸಿ, ವಿಚಾರಣೆ ನಡೆಸಿದರು.

‘ಯಡಿಯೂರಪ್ಪ ಅವರಿಗೆ ಸಮನ್ಸ್ ಜಾರಿ ಮಾಡಲಾಗಿತ್ತು. ತನಿಖಾಧಿಕಾರಿಗಳ ಮುಂದೆ ಹಾಜರಾಗಲು ಬೇರೆ ದಿನಾಂಕ ನಿಗದಿಪಡಿಸಲಾಗಿತ್ತು. ಆದರೆ, ಅವರು ಶನಿವಾರವೇ ಬರುವುದಾಗಿ ತಿಳಿಸಿ, ಲೋಕಾಯುಕ್ತ ಕಚೇರಿಗೆ ಹಾಜರಾದರು’ ಎಂದು ಮೂಲಗಳು ಹೇಳಿವೆ.

ಪ್ರಕರಣದ ತನಿಖಾಧಿಕಾರಿ ಬಸವರಾಜ ಮಗ್ದುಂ ಅವರ ಮುಂದೆ ಹಾಜರಾದ ಯಡಿಯೂರಪ್ಪ, ಸುಮಾರು ಎರಡೂವರೆ ಗಂಟೆ ವಿಚಾರಣೆ ಎದುರಿಸಿದರು ಎಂದು ಗೊತ್ತಾಗಿದೆ. ಒಂಬತ್ತು ವರ್ಷಗಳಷ್ಟು ಹಳೆಯ ಪ್ರಕರಣದ ವಿಚಾರಣೆ ಈಗ ಮುನ್ನೆಲೆಗೆ ಬಂದಿದ್ದು, ರಾಜಕೀಯ ಜಟಾಪಟಿಗೂ ಕಾರಣವಾಗಿದೆ.

7ನೇ ಪುಟ ನೋಡಿ

ಮುನಿರತ್ನಗೆ ಎಸ್‌ಐಟಿ ತನಿಖೆ ಬಿಸಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಜೆಪಿ ಶಾಸಕ ಮುನಿರತ್ನ ವಿರುದ್ಧ ವಿವಿಧ ಪೊಲೀಸ್ ಠಾಣೆಗಳಲ್ಲಿ ಈಗಾಗಲೇ ದಾಖಲಾಗಿರುವ ಮತ್ತು ಮುಂದೆ ದಾಖಲಾಗಬಹುದಾದ ಎಲ್ಲ ಪ್ರಕರಣಗಳ ಸಮಗ್ರ ತನಿಖೆಗೆ ರಾಜ್ಯ ಸರ್ಕಾರ ವಿಶೇಷ ತನಿಖಾ ತಂಡ(ಎಸ್‌ಐಟಿ) ರಚಿಸಿದೆ.

ಸಿಐಡಿ (ಆರ್ಥಿಕ ಅಪರಾಧಗಳು) ಎಡಿಜಿಪಿ ಬಿ.ಕೆ. ಸಿಂಗ್ ನೇತೃತ್ವದಲ್ಲಿ ಈ ಎಸ್‌ಐಟಿ ಕಾರ್ಯ ನಿರ್ವಹಿಸಲಿದೆ. ಕೇಂದ್ರ ವಲಯದ ಐಜಿಪಿ ಲಾಬೂರಾಮ್, ರೈಲ್ವೆ ಎಸ್‌ಪಿ ಸೌಮ್ಯಲತಾ, ಎಸ್‌ಪಿ ಸಿ.ಎ. ಸೈಮನ್ ಅವರು ತಂಡದ ಸದಸ್ಯರಾಗಿರುತ್ತಾರೆ.

ಮುನಿರತ್ನ ವಿರುದ್ಧ ವೈಯಾಲಿಕಾವಲ್ ಠಾಣೆಯಲ್ಲಿ ದಾಖಲಾದ ಎರಡು ಅಪರಾಧ ಪ್ರಕರಣಗಳು ಮತ್ತು ರಾಮನಗರ ಜಿಲ್ಲೆಯ ಕಗ್ಗಲೀಪುರ ಠಾಣೆಯಲ್ಲಿ ದಾಖಲಾದ ಅತ್ಯಾಚಾರ ಮೊಕದ್ದಮೆ ಸೇರಿದಂತೆ ರಾಜ್ಯದ ಇತರ ಎಲ್ಲ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಪ್ರಕರಣಗಳ ತನಿಖೆ ನಡೆಸಬೇಕು. ಪೊಲೀಸ್ ಮಹಾ ನಿರ್ದೇಶಕರ ಮೂಲಕ ತನಿಖಾ ವರದಿಯನ್ನು ಶೀಘ್ರದಲ್ಲಿ ಸರ್ಕಾರಕ್ಕೆ ಸಲ್ಲಿಸಬೇಕು ಎಂದೂ ಎಸ್‌ಐಟಿಗೆ ಸರ್ಕಾರ ಸೂಚಿಸಿದೆ.

6ನೇ ಪುಟ ನೋಡಿ

ಅಕ್ಟೋಬರ್ 5ರವರೆಗೆ ನ್ಯಾಯಾಂಗ ಬಂಧನ

ಅತ್ಯಾಚಾರ ಆರೋಪ ಪ್ರಕರಣದಲ್ಲಿ ಮುನಿರತ್ನ ಅವರನ್ನು ಅ.5ರ ವರೆಗೆ ‘ಶಾಸಕರು–ಸಂಸದರ ವಿರುದ್ಧದ ಕ್ರಿಮಿನಲ್ ಪ್ರಕರಣಗಳ ವಿಚಾರಣೆ’ಯ ವಿಶೇಷ ನ್ಯಾಯಾಲಯವು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿದೆ.

ಶನಿವಾರ ಬೆಳಿಗ್ಗೆ ನ್ಯಾಯಾಧೀಶ ಕೆ.ಎಂ.ಶಿವಕುಮಾರ್ ಅವರ ಮುಂದೆ ಆರೋಪಿಯನ್ನು ಹಾಜರು ಪಡಿಸಲಾಗಿತ್ತು. ಮುನಿರತ್ನ ಪರ ವಕೀಲರ ವಾದ ಆಲಿಸಿದ ನ್ಯಾಯಾಧೀಶರು ಆರೋಪಿಯನ್ನು ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.

ಬಳಿಕ ಬಿಗಿ ಭದ್ರತೆ ಮಧ್ಯೆ ಮುನಿರತ್ನ ಅವರನ್ನು ಕರೆದೊಯ್ದ ಪೊಲೀಸರು, ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದ ಜೈಲಾಧಿಕಾರಿಗಳಿಗೆ ಒಪ್ಪಿಸಿದರು. ಅವರಿಗೆ ಹಿಂದೆ ನೀಡಿದ್ದ ವಿಚಾರಣಾಧೀನ ಕೈದಿ ಸಂಖ್ಯೆ 9141 ಅನ್ನೇ ಮುಂದುವರಿಸಲಾಗಿದೆ ಎಂದು ಗೊತ್ತಾಗಿದೆ.

‘ಮುನಿರತ್ನ ನನ್ನ ಮೇಲೆ ಅತ್ಯಾಚಾರ ಎಸಗಿದ್ದಾರೆ’ ಎಂದು 40 ವರ್ಷದ ಸಮಾಜ ಸೇವಕಿಯೊಬ್ಬರು ರಾಮನಗರ ಜಿಲ್ಲೆಯ ಕಗ್ಗಲೀಪುರ ಠಾಣೆಗೆ ದೂರು ನೀಡಿದ್ದರು.

‘ರಾಜೀನಾಮೆಗೆ ಸಿದ್ಧ’

ವಿಚಾರಣೆ ವೇಳೆ ನ್ಯಾಯಾಧೀಶರ ಎದುರು ಮುನಿರತ್ನ ತಮ್ಮ ಅಳಲು ತೋಡಿಕೊಂಡರು. ‘ಎರಡು ನಿಮಿಷ ಮಾತಾಡಬಹುದಾ ಸಾರ್’ ಎಂದು ಕೇಳಿಕೊಂಡರು.

‘ನನ್ನ ಜೊತೆ ಇದ್ದವರಿಂದಲೇ ಈಗ ದೂರು ಕೊಡಿಸಲಾಗುತ್ತಿದೆ. ಒಂದು ಕೇಸಿನಲ್ಲಿ ಜಾಮೀನು ಸಿಗುತ್ತಿದ್ದಂತೆಯೇ ಮತ್ತೊಂದು ದೂರು ದಾಖಲಿಸಿಕೊಂಡು ಬಂಧನ ಮಾಡಿಸಿದ್ದಾರೆ. ರಾಜಕೀಯ ದುರುದ್ದೇಶದಿಂದಲೇ ಈ ರೀತಿ ಬೇಕೆಂದೇ ಕೇಸುಗಳ ಮೇಲೆ ಕೇಸು ಮಾಡಿಸುತ್ತಿದ್ದಾರೆ. ಲೋಕಸಭಾ ಚುನಾವಣೆ ನಂತರ ಈ ರೀತಿಯ ದೂರುಗಳನ್ನು ಕೊಡಿಸಲಾಗುತ್ತಿದೆ. ನನಗೆ ನೀಡಲಾಗುತ್ತಿರುವ ಈ ರೀತಿಯ ಕಿರುಕುಳದಿಂದ ಬೇಸತ್ತಿದ್ದೇನೆ. ಬೇಕಾದರೆ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಲೂ ಸಿದ್ಧವಿದ್ದೇನೆ’ ಎಂದರು. ‘ಅದನ್ನು ಎಲ್ಲಿ ಕೊಡಬೇಕೊ ಅಲ್ಲಿ ಕೊಡಿ’ ಎಂದು ಪ್ರತಿಕ್ರಿಯಿಸಿದ ನ್ಯಾಯಾಧೀಶರು, ಮುನಿರತ್ನ ಅವರ ವೈದ್ಯಕೀಯ ಪರೀಕ್ಷೆ ವರದಿಯನ್ನು ಪರಿಶೀಲಿಸಿ ನ್ಯಾಯಾಂಗ ಬಂಧನಕ್ಕೆ ಒಪ್ಪಿಸಿ ಆದೇಶಿಸಿದರು.

ಚಿನಕುರುಳಿ

ಪ್ರಕಾಶ್ ಶೆಟ್ಟಿ



ನ್ಯಾ. ಶ್ರೀಶಾನಂದ ವಿಷಾದ

ಪ್ರಜಾವಾಣಿ ವಾರ್ತೆ



ನ್ಯಾ. ವಿ. ಶ್ರೀಶಾನಂದ

ಬೆಂಗಳೂರು: ‘ನನ್ನ ಆಕ್ಷೇಪಾರ್ಹ ಹೇಳಿಕೆಗಳು ಯಾರಿಗಾದರೂ ನೋವುಂಟು ಮಾಡಿದ್ದರೆ ಅದಕ್ಕಾಗಿ ಪ್ರಾಮಾಣಿಕವಾಗಿ ವಿಷಾದ ವ್ಯಕ್ತಪಡಿಸುತ್ತೇನೆ’ ಎಂದು ಹೈಕೋರ್ಟ್ ನ್ಯಾಯಮೂರ್ತಿ ವಿ.ಶ್ರೀಶಾನಂದ ಹೇಳಿದರು.

ಹೈಕೋರ್ಟ್‌ನ 23ನೇ ಕೋರ್ಟ್ ಹಾಲ್‌ನಲ್ಲಿ ಶನಿವಾರ ಮಧ್ಯಾಹ್ನ 2.30ಕ್ಕೆ ಬೆಂಗಳೂರು ವಕೀಲರ ಸಂಘದ ಪದಾಧಿಕಾರಿಗಳು ಮತ್ತು ವಕೀಲರ ಎದುರು ಮುಕ್ತ ನ್ಯಾಯಾಲಯದಲ್ಲಿ ಈ ಕುರಿತಂತೆ ವಿವರಿಸಿದ ಅವರು ವಿಷಾದ ವ್ಯಕ್ತಪಡಿಸಿದರು.

ಈ ವೇಳೆ ಹೈಕೋರ್ಟ್ ರಿಜಿಸ್ಟ್ರಾರ್ ಜನರಲ್, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ಸುಬ್ಬಾರೆಡ್ಡಿ, ಪ್ರಧಾನ ಕಾರ್ಯದರ್ಶಿ ಟಿ.ಜಿ. ರವಿ, ಖಜಾಂಚಿ ಎಂ.ಟಿ.ಹರೀಶ್ ಮತ್ತು ಹೈಕೋರ್ಟ್ ಕಾರ್ಯಕಾರಿ ಸಮಿತಿ ಸದಸ್ಯರು, ಹಿರಿಯ ವಕೀಲ ಅಶೋಕ ಹಾರನಹಳ್ಳಿ ಹಾಗೂ ವಕೀಲರು ಕೋರ್ಟ್ ಹಾಲ್‌ನಲ್ಲಿ ಹಾಜರಿದ್ದರು.

ಏನಿದು ಪ್ರಕರಣ?: ನ್ಯಾಯಮೂರ್ತಿ ಶ್ರೀಶಾನಂದ ಅವರು ಪ್ರಕರಣಗಳ ವಿಚಾರಣೆ ಸಂದರ್ಭದಲ್ಲಿ, ‘ಬೆಂಗಳೂರಿನ ಗೋರಿಪಾಳ್ಯ ಪಾಕಿಸ್ತಾನದಂತಿದೆ’ ಎಂದು ಬಣ್ಣಿಸಿದ್ದರು. ವಕೀಲೆಯೊಬ್ಬರಿಗೆ, ‘ನಿಮ್ಮ ಪ್ರತಿವಾದಿ ಯಾವ ಬಣ್ಣದ ಒಳ ಉಡುಪು ಧರಿಸಿದ್ದಾರೆ ಎಂಬುದನ್ನೂ ನೀವು ಹೇಳಬಲ್ಲಷ್ಟು ಅವರನ್ನು ಅರಿತಿದ್ದೀರಿ’ ಎಂದು ವ್ಯಂಗ್ಯವಾಡಿದ್ದರು.

ಈ ಮೌಖಿಕ ಹೇಳಿಕೆಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ್ದವು. ಇದರ ವಿಡಿಯೊ ತುಣುಕನ್ನು ತಮ್ಮ ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿದ್ದ ಸುಪ್ರೀಂ ಕೋರ್ಟ್‌ನ ಹಿರಿಯ ವಕೀಲೆ ಇಂದಿರಾ ಜೈಸಿಂಗ್, ‘ಈ ನ್ಯಾಯಮೂರ್ತಿಗೆ ಲಿಂಗ ಸಂವೇದನಾ ತರಬೇತಿ ನೀಡುವ ಅಗತ್ಯವಿದೆ’ ಎಂದಿದ್ದರು.

ಫ್ರಿಡ್ಜ್‌ನಲ್ಲಿ ಮೃತದೇಹ ಬಚ್ಚಿಟ್ಟು ಆರೋಪಿ ಪರಾರಿ

30 ತುಂಡಾಗಿ ಕತ್ತರಿಸಿ ಮಹಿಳೆ ಹತ್ಯೆ

ಪ್ರಜಾವಾಣಿ ವಾರ್ತೆ



ಮಹಾಲಕ್ಷ್ಮಿ

ಬೆಂಗಳೂರು: ನಗರದ ಮಲ್ಲೇಶ್ವರದ ಪೈಪ್‌ಲೈನ್‌ನ ಕೆ.ವಿ.ರಸ್ತೆಯ ಬಾಡಿಗೆ ಮನೆಯಲ್ಲಿ ನೆಲಸಿದ್ದ ಮಹಿಳೆಯೊಬ್ಬರನ್ನು 30ಕ್ಕೂ ಹೆಚ್ಚು ತುಂಡುಗಳನ್ನಾಗಿ ಕತ್ತರಿಸಿ, ಅವರ ಮೃತದೇಹವನ್ನು ಫ್ರಿಡ್ಜ್‌ನಲ್ಲಿ ಬಚ್ಚಿಟ್ಟಿದ್ದ ಪ್ರಕರಣ ತಡವಾಗಿ ಪತ್ತೆಯಾಗಿದೆ.

ಮಹಾಲಕ್ಷ್ಮಿ(29) ಕೊಲೆಯಾದವರು. ಪ್ರಕರಣ ದಾಖಲಿಸಿಕೊಂಡಿರುವ ವೈಯಾಲಿಕಾವಲ್ ಠಾಣೆ ಪೊಲೀಸರು, ಪರಾರಿಯಾಗಿರುವ ಆರೋಪಿ ಪತ್ತೆಗೆ ಶೋಧ ಆರಂಭಿಸಿದ್ದಾರೆ.

ಕೃತ್ಯದ ನಡೆದ ಸ್ಥಳಕ್ಕೆ ಬೆರಳಚ್ಚು, ವಿಧಿ ವಿಜ್ಞಾನ ಪ್ರಯೋಗಾಲಯದ (ಎಫ್‌ಎಸ್‌ಎಲ್) ತಜ್ಞರು, ಶ್ವಾನದಳ ಹಾಗೂ ವೈದ್ಯಾಧಿಕಾರಿಗಳು ಭೇಟಿ ನೀಡಿ ಪರಿಶೀಲಿಸಿದರು. ದೆಹಲಿಯಲ್ಲಿ ನಡೆದಿದ್ದ ಶ್ರದ್ಧಾ ವಾಕರ್ ಕೊಲೆ ಪ್ರಕರಣದ ಮಾದರಿಯಲ್ಲೇ ಈ ಕೊಲೆ ನಡೆದಿದೆ ಎಂದು ಮೂಲಗಳು ತಿಳಿಸಿವೆ. ಕೊಲೆಯಿಂದ ಅಕ್ಕಪಕ್ಕದ ನಿವಾಸಿಗಳು ಆತಂಕಗೊಂಡಿದ್ದಾರೆ.


‘ಕೃತ್ಯ ನಡೆದ ಅಕ್ಕ ಪಕ್ಕದ ರಸ್ತೆಯಲ್ಲಿ ಅಳವಡಿಸಿದ್ದ ಸಿ.ಸಿ.ಟಿ.ವಿ ಕ್ಯಾಮೆರಾ ದೃಶ್ಯಾವಳಿ ಪರಿಶೀಲಿಸಲಾಗಿದೆ. ಕೊಲೆಯಾದ ಮಹಿಳೆಯ ಮೊಬೈಲ್ ಫೋನ್ ಜಪ್ತಿ ಮಾಡಲಾಗಿದೆ. ಆಕೆ ಯಾರಿಗೆಲ್ಲ ಕರೆ ಮಾಡಿದ್ದರು ಎಂಬುದನ್ನೂ ಪರಿಶೀಲಿಸಲಾಗುತ್ತಿದೆ. ಸುಳಿವು ಸಿಕ್ಕಿದ್ದು ಆರೋಪಿಯನ್ನು ಶೀಘ್ರದಲ್ಲೇ ಬಂಧಿಸಲಾಗುವುದು’ ಎಂದು ಪೊಲೀಸರು ಹೇಳಿದರು.

8ನೇ ಪುಟ ನೋಡಿ

ಬೈಕ್‌ನಲ್ಲಿ ಬರುತ್ತಿದ್ದ ಯುವಕ

‘ಮಹಾಲಕ್ಷ್ಮಿ ಅವರು ಗಾರ್ಮೆಂಟ್ಸ್‌ನಲ್ಲಿ ಕೆಲಸ ಮಾಡುತ್ತಿದ್ದರು. ಅವರ ಮನೆ ಬಳಿಗೆ ಪ್ರತಿನಿತ್ಯ ಯುವಕನೊಬ್ಬ ಬಂದು ಬೈಕ್‌ನಲ್ಲಿ ಕರೆದೊಯ್ಯುತ್ತಿದ್ದ. ಸಂಜೆ ಬಂದು ಬಿಟ್ಟು ಹೋಗುತ್ತಿದ್ದ. ಆತನೇ ಕೊಲೆ ನಡೆಸಿರುವ ಶಂಕೆ ವ್ಯಕ್ತವಾಗಿದ್ದು, ಪೊಲೀಸರು ತನಿಖೆ ಚುರುಕುಗೊಳಿಸಿದ್ದಾರೆ. ಯುವಕನ ಮೊಬೈಲ್ ಸಂಖ್ಯೆ ಪತ್ತೆಯಾಗಿದ್ದು, ತಲೆಮರೆಸಿಕೊಂಡಿದ್ದಾನೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಆರೋಪಿ ಪತ್ತೆಗೆ ವೈಯಾಲಿಕಾವಲ್, ಶೇಷಾದ್ರಿಪುರ ಹಾಗೂ ಹೈಗ್ರೌಂಡ್ಸ್ ಪೊಲೀಸರು ತನಿಖೆ ಆರಂಭಿಸಿದ್ದು, ಒಟ್ಟು ಎಂಟು ತಂಡ ರಚಿಸಿದ್ದಾರೆ. ಅನುಮಾನಿತ ವ್ಯಕ್ತಿಗಳ ಬಗ್ಗೆ ಮಾಹಿತಿ ಸಂಗ್ರಹಿಸುತ್ತಿರುವ ಪೊಲೀಸರು, ಕುಟುಂಬಸ್ಥರ ಬಳಿಯೂ ಮಾಹಿತಿ ಕಲೆ ಹಾಕಿದ್ದಾರೆ. ಮಹಾಲಕ್ಷ್ಮಿ ಜತೆಗೆ ಸಂಪರ್ಕದಲ್ಲಿದ್ದ ಎಲ್ಲ ವ್ಯಕ್ತಿಗಳನ್ನು ವಿಚಾರಣೆ ನಡೆಸಿದ್ದಾರೆ’ ಎಂದು ಮೂಲಗಳು ಹೇಳಿವೆ.



ಬಾಪೂಜಿ ವಿದ್ಯಾ ಸಂಸ್ಥೆ (ರಿ.)
ಡಾ. ಶಾಮನೂರು ಶಿವಶಂಕರಪ್ಪ
ಶಾಸಕರು, ದಾವಣಗೆರೆ ದಕ್ಷಿಣ ಕ್ಷೇತ್ರ
ಗೌರವ ಕಾರ್ಯದರ್ಶಿಗಳು, ಬಾಪೂಜಿ ವಿದ್ಯಾ ಸಂಸ್ಥೆ
ಡಾ|| ಪ್ರಭಾ ಮಲ್ಲಿಕಾರ್ಜುನ್
ಸಂಸದರು, ದಾವಣಗೆರೆ ಲೋಕಸಭಾ ಕ್ಷೇತ್ರ
ಸದಸ್ಯರು, ಬಾಪೂಜಿ ವಿದ್ಯಾ ಸಂಸ್ಥೆ
57ನೇ
ಜನ್ಮದಿನದ ಶುಭಾಶಯಗಳು
ಐವತ್ತೇಳು ಅರ್ಥಪೂರ್ಣ ವಸಂತಗಳನ್ನು ಪೂರೈಸಿರುವ, ಧೀಮಂತ ಜನನಾಯಕ, ಆಧುನಿಕ ಭಗೀರಥ,
ದಾವಣಗೆರೆ ಅಭಿವೃದ್ಧಿಯ ಹರಿಕಾರ, ಕರ್ನಾಟಕ ಸರ್ಕಾರದ ಗಣಿ ಮತ್ತು ಭೂವಿಜ್ಞಾನ, ತೋಟಗಾರಿಕೆ ಸಚಿವರು
ದಾವಣಗೆರೆ ಜಿಲ್ಲಾ ಉಸ್ತುವಾರಿ ಸಚಿವರು, ಹಾಗೂ ಬಾಪೂಜಿ ವಿದ್ಯಾಸಂಸ್ಥೆಯ ಗೌರವ ಜಂಟಿ ಕಾರ್ಯದರ್ಶಿಗಳೂ ಆದ
ಶ್ರೀ ಎಸ್.ಎಸ್. ಮಲ್ಲಿಕಾರ್ಜುನ್
ಅವರಿಗೆ ಜನ್ಮದಿನದ ಶುಭಾಶಯಗಳು.
ಶ್ರೀಯುತರು ನೂರ್ಕಾಲ ಬಾಳಲಿ ಎಂದು ಹಾರೈಸುತ್ತೇವೆ.
ಶ್ರೀ ಆರ್. ರಮಾನಂದ್
ಅಧ್ಯಕ್ಷರು
ಶ್ರೀಮತಿ ಕೆ.ಎ. ಗಿರಿಜಮ್ಮ
ಉಪಾಧ್ಯಕ್ಷರು
ಶ್ರೀ ಎ.ಎಸ್. ನಿರಂಜನ್
ಖಜಾಂಚಿ
ಡಾ|| ಎ.ಎಸ್. ವೀರಣ್ಣ
ಸದಸ್ಯರು
ಶ್ರೀ ಸಂಪನ್ನ ಮುತಾಲಿಕ್
ಸದಸ್ಯರು
BIET
JJMMC
ಬಾಪೂಜಿ ವಿದ್ಯಾಸಂಸ್ಥೆ (ರಿ.), ದಾವಣಗೆರೆ.

ಭಾನುವಾರ, ಸೆಪ್ಟೆಂಬರ್ 22, 2024 | ₹ 7.00
www.prajavani.net
prajavani.net prajavani prajavani prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ವಿಶೇಷ ಪೇಟ
ಗರ್ಬಾ ಕಲಾವಿದರೊಬ್ಬರು ಕೋಲ್ಕತ್ತ ಅತ್ಯಾಚಾರ ಸಂತ್ರಸ್ತೆಗೆ ನಮನ ಸಲ್ಲಿಸುವ ವಿನೂತನ ಪೇಟ ತೊಟ್ಟು ಮತ್ತು ವಿಶೇಷ ವಸ್ತ್ರ ಧರಿಸಿ ಅಹಮದಾಬಾದ್‌ನಲ್ಲಿ ಶನಿವಾರ ಪೋಸ್ ನೀಡಿದರು

ಜಾಮೀನು ಕೋರಿ ನಟ ದರ್ಶನ್ ಅರ್ಜಿ 4
ಬುಡಕಟ್ಟು ಮಾನವ ಅಭಿವೃದ್ಧಿ ವರದಿ ಬಿಡುಗಡೆ
ಸೂರತ್‌ನಲ್ಲಿ ರೈಲು ಹಳಿಗೆ ಹಾನಿ 8
ಬುಡಕಟ್ಟು ಜನರ ಸರಾಸರಿ ಆಯುಸ್ಸು 58 ವರ್ಷ 4

ಅಮರ್ ಪ್ರೀತ್ ಸಿಂಗ್ ವಾಯುಪಡೆ ಮುಖ್ಯಸ್ಥ



ನವದೆಹಲಿ (ಪಿಟಿಐ): ಭಾರತೀಯ ವಾಯುಪಡೆಯ (ಐಎಎಫ್) ಮುಖ್ಯಸ್ಥ ಸ್ಥಾನಕ್ಕೆ ಏರ್ ಮಾರ್ಷಲ್ ಅಮರ್ ಪ್ರೀತ್ ಸಿಂಗ್ ಅವರನ್ನು ನೇಮಕ ಮಾಡಲಾಗಿದೆ.

ಪ್ರಸ್ತುತ ವಾಯುಪಡೆಯ ಮುಖ್ಯಸ್ಥ ಸ್ಥಾನದಲ್ಲಿರುವ ಏರ್ ಚೀಫ್ ಮಾರ್ಷಲ್ ವಿ.ಆರ್ ಚೌಧರಿ ಸೆ. 30ರಂದು ನಿವೃತ್ತರಾಗಲಿದ್ದಾರೆ. ಅಂದು ಮಧ್ಯಾಹ್ನ ಅಮರ್ ಪ್ರೀತ್ ಸಿಂಗ್ ಅವರು ಏರ್ ಚೀಫ್ ಮಾರ್ಷಲ್ ರ‍್ಯಾಂಕ್‌ಗೆ ಏರುವ ಮೂಲಕ ವಾಯುಪಡೆಯ ಮುಖ್ಯಸ್ಥರಾಗಿ ಅಧಿಕಾರ ಸ್ವೀಕರಿಸಲಿದ್ದಾರೆ.

ಹೊಸ ಫೈಟರ್ ತಂಡಗಳ ರಚನೆಗೆ, ವಾಯುದಳದ ಆಧುನೀಕರಣಕ್ಕೆ ಸಿಂಗ್ ಆದ್ಯತೆ ನೀಡುವ ನಿರೀಕ್ಷೆಯಿದೆ.

‘ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್’ಗೆ ಮಾನವ ಸರಪಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಶ್ವ ಪ್ರಜಾಪ್ರಭುತ್ವ ದಿನಾಚರಣೆ ಅಂಗವಾಗಿ ರಾಜ್ಯ ಸರ್ಕಾರ ಸೆ.15ರಂದು ಹಮ್ಮಿಕೊಂಡಿದ್ದ 2,500 ಕಿ.ಮೀ ಉದ್ದದ ಮಾನವ ಸರಪಳಿ, ಲಂಡನ್‌ನ ‘ವರ್ಲ್ಡ್ ಬುಕ್ ಆಫ್ ರೆಕಾರ್ಡ್ಸ್’ಗೆ ಸೇರಿದೆ.

‘ಪ್ರಮಾಣಪತ್ರ’ದಲ್ಲಿ, ಕರ್ನಾಟಕದ ಬೀದರ್‌ನಿಂದ ಚಾಮರಾಜನಗರದವರೆಗೆ ನಿರ್ಮಿಸಲಾಗಿದ್ದ ಮಾನವ ಸರಪಳಿಯಲ್ಲಿ 25 ಲಕ್ಷಕ್ಕೂ ಹೆಚ್ಚು ಜನರು ಭಾಗವಹಿಸಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಸಮಾಜ ಕಲ್ಯಾಣ ಇಲಾಖೆ ಸಚಿವ ಡಾ. ಎಚ್‌.ಸಿ. ಮಹದೇವಪ್ಪ, ಗ್ರಾಮೀಣಾಭಿವೃದ್ಧಿ ಸಚಿವ ಪ್ರಿಯಾಂಕ್ ಖರ್ಗೆ, ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಅವರಿಗೆ ‘ಪ್ರಮಾಣಪತ್ರ’ ಲಭಿಸಿದೆ ಎಂದು ಸಮಾಜ ಕಲ್ಯಾಣ ಇಲಾಖೆ ತಿಳಿಸಿದೆ.

ದೆಹಲಿಯ ಅತಿ ಕಿರಿಯ ಮಹಿಳಾ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ

ಸಿ.ಎಂ ಆಗಿ ಆತಿಶಿ ಪ್ರಮಾಣ

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ದೆಹಲಿ ಮುಖ್ಯಮಂತ್ರಿಯಾಗಿ ಆಮ್ ಆದ್ಮಿ ಪಕ್ಷದ (ಎಎಪಿ) ನಾಯಕಿ ಆತಿಶಿ ಶನಿವಾರ ಪ್ರಮಾಣವಚನ ಸ್ವೀಕರಿಸಿದರು. ಇವರೊಂದಿಗೆ ಐವರು ನಾಯಕರು ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದರು. ಇಲ್ಲಿನ ರಾಜ ನಿವಾಸದಲ್ಲಿ ನಡೆದ ಸರಳ ಸಮಾರಂಭದಲ್ಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಪ್ರಮಾಣ ವಚನ ಬೋಧಿಸಿದರು.

ಶಾಸಕಿಯಾಗಿ ಆಯ್ಕೆಯಾದ ತಮ್ಮ ಮೊದಲ ಅವಧಿಯಲ್ಲೇ ಆತಿಶಿ ಅವರು ದೆಹಲಿಯ ಮುಖ್ಯಮಂತ್ರಿ ಸ್ಥಾನಕ್ಕೆ ಏರಿದ್ದಾರೆ. ದೆಹಲಿಯ ಮೂರನೇ ಮಹಿಳಾ ಮುಖ್ಯಮಂತ್ರಿ ಎಂಬ ಹೆಗ್ಗಳಿಕೆ ಅವರದಾಗಿದೆ. ಸ್ವತಂತ್ರ ಭಾರತದ 17ನೇ ಮಹಿಳಾ ಮುಖ್ಯಮಂತ್ರಿ ಹಾಗೂ ದೆಹಲಿಯ ಎಂಟನೇ ಮುಖ್ಯಮಂತ್ರಿ ಆಗಿದ್ದಾರೆ. ದೇಶದಲ್ಲಿ, ಪ್ರಸ್ತುತ ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಅವರು ಮಾತ್ರವೇ ಮಹಿಳಾ ಮುಖ್ಯಮಂತ್ರಿ. ಈಗ ಅವರೊಂದಿಗೆ ಆತಿಶಿ ಸೇರ್ಪಡೆಯಾಗಿದ್ದಾರೆ.

ಆತಿಶಿ ಅವರು ದೆಹಲಿಯ ಅತಿ ಕಿರಿಯ ಮಹಿಳಾ ಮುಖ್ಯಮಂತ್ರಿಯೂ ಹೌದು. ಕಾಂಗ್ರೆಸ್‌ನ ಶೀಲಾ ದೀಕ್ಷಿತ್ ಅವರು ತಮ್ಮ 60ನೇ ವಯಸ್ಸಿಗೆ ಹಾಗೂ ಬಿಜೆಪಿಯ ಸುಷ್ಮಾ ಸ್ವರಾಜ್ ಅವರು ತಮ್ಮ 46ನೇ ವಯಸ್ಸಿಗೆ ಮುಖ್ಯಮಂತ್ರಿಯಾಗಿದ್ದರು. ಆತಿಶಿ ಅವರು ತಮ್ಮ 43ನೇ ವಯಸ್ಸಿಗೆ ಈಗ ದೆಹಲಿಯ ಗದ್ದುಗೆ ಏರಿದ್ದಾರೆ.

7ನೇ ಪುಟ ನೋಡಿ



> ಕೇಜ್ರಿವಾಲ್ ಅವರು ಈಗ ಮುಖ್ಯಮಂತ್ರಿ ಆಗಿಲ್ಲದಿರುವುದು ನನಗೆ ಭಾವನಾತ್ಮಕ ಗಳಿಗೆ. ಕೇಜ್ರಿವಾಲ್ ಆಡಳಿತದಲ್ಲಿ ಜನರು ಅನುಭವಿಸುತ್ತಿದ್ದ ಸೌಲಭ್ಯಗಳನ್ನು ರದ್ದು ಮಾಡಲು ಬಿಜೆಪಿ ಯತ್ನಿಸಿತು. ಈಗ ಕೇಜ್ರಿವಾಲ್ ಅವರು ಜೈಲಿನಿಂದ ಹೊರಬಂದಿದ್ದಾರೆ. ಬಿಜೆಪಿಯ ಯಾವ ಕುತಂತ್ರವೂ ಫಲಿಸುವುದಕ್ಕೆ ನಾವು ಬಿಡುವುದಿಲ್ಲ
>
> **ಆತಿಶಿ,** ದೆಹಲಿ ಮುಖ್ಯಮಂತ್ರಿ

ಐವರು ಸಚಿವರ ಸಂಪುಟ

ಸೌರಬ್ ಭಾರದ್ವಾಜ್, ಗೋಪಾಲ್ ರಾಯ್, ಕೈಲಾಶ್ ಗೆಹಲೋತ್, ಇಮ್ರಾನ್ ಹುಸೇನ್ ಹಾಗೂ ಮುಕೇಶ್ ಅಹ್ಲಾವತ್ ಅವರು ಶನಿವಾರ ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದರು. ಮುಕೇಶ್ ಅವರು ಮೊದಲ ಬಾರಿಗೆ ಶಾಸಕರಾದವರು. ತಮ್ಮ ಮೊದಲ ಅವಧಿಯಲ್ಲೇ ಈಗ ಸಚಿವರೂ ಆಗಿದ್ದಾರೆ.

ಆತಿಶಿ ಅವರು ಹಣಕಾಸು, ವಿದ್ಯುತ್, ಜಲ ಹಾಗೂ ಶಿಕ್ಷಣ ಖಾತೆಗಳಂತಹ ಪ್ರಮುಖ 13 ಖಾತೆಗಳನ್ನು ನಿರ್ವಹಿಸಲಿದ್ದಾರೆ. ಭಾರದ್ವಾಜ್ ಅವರ ಬಳಿ ನಗರಾಭಿವೃದ್ಧಿ, ಆರೋಗ್ಯ ಹಾಗೂ ನೀರಾವರಿ ಸೇರಿದಂತೆ ಎಂಟು ಖಾತೆಗಳಿರಲಿವೆ. ರಾಯ್, ಗೆಹಲೋತ್ ಹಾಗೂ ಹುಸೇನ್ ಅವರು ತಮ್ಮ ಹಿಂದಿನ ಖಾತೆಗಳನ್ನೇ ನಿರ್ವಹಿಸಲಿದ್ದಾರೆ. ಮುಕೇಶ್ ಅವರಿಗೆ ಎಸ್‌ಸಿ, ಎಸ್‌ಟಿ, ಕಾರ್ಮಿಕ, ಉದ್ಯೋಗ ಸೇರಿದಂತೆ ಕೆಲವು ಖಾತೆಗಳನ್ನು ನೀಡಲಾಗಿದೆ.

ಸರ್ಕಾರವು ಒಟ್ಟು ಏಳು ಸಚಿವರನ್ನು ನೇಮಿಸಿಕೊಳ್ಳಬಹುದು. ಎಎಪಿಯು ಮುಂದಿನ ದಿನಗಳಲ್ಲಿ ಮತ್ತೊಬ್ಬ ಸಚಿವರನ್ನು ನೇಮಿಸಿಕೊಳ್ಳಲಿದೆ ಎನ್ನಲಾಗಿದೆ.

‘ತಿರುಪತಿಯಲ್ಲಿ ಸಂಪ್ರೋಕ್ಷಣ ಕಾರ್ಯ’

ಪ್ರಜಾವಾಣಿ ವಾರ್ತೆ/ಪಿಟಿಐ



ಚಂದ್ರಬಾಬು ನಾಯ್ಡು

ಹೈದರಾಬಾದ್/ಅಮರಾವತಿ: ತಿರುಪತಿ ದೇವಸ್ಥಾನದ ಲಾಡು ಸಿದ್ಧಪಡಿಸಲು ಬಳಸುವ ತುಪ್ಪದಲ್ಲಿ ಪ್ರಾಣಿಯ ಕೊಬ್ಬು ಪತ್ತೆಯಾದ ನಂತರ ಹಿಂದೂಗಳಿಂದ ವಿಶ್ವದ ಎಲ್ಲೆಡೆ ಕಳವಳ ವ್ಯಕ್ತವಾಗಿರುವ ಹಿನ್ನೆಲೆಯಲ್ಲಿ, ದೇವಸ್ಥಾನದ ಶುದ್ಧೀಕರಣದ ಬಗ್ಗೆ ಚಿಂತನೆ ಶುರುವಾಗಿದೆ.

‘ಟಿಟಿಡಿ ವಿಚಾರವಾಗಿ ಏನು ಮಾಡಬೇಕು ಹಾಗೂ ಅದನ್ನು ಹೇಗೆ ಮಾಡಬೇಕು ಎಂಬ ಬಗ್ಗೆ ನಾವು ಚರ್ಚಿಸುತ್ತಿದ್ದೇವೆ. ಸಂಪ್ರೋಕ್ಷಣ (ವಿಧಿಬದ್ಧವಾದ ಶುದ್ಧೀಕರಣ ಕಾರ್ಯ) ಹೇಗೆ ನಡೆಯಬೇಕು ಎಂಬುದನ್ನು ನಾವು ಜೀಯರ್‌ಗಳು, ಕಂಚಿ ಪೀಠಾಧಿಪತಿಗಳು, ಸನಾತನ ಧರ್ಮದ ವಿದ್ವಾಂಸರ ಜೊತೆ ಚರ್ಚಿಸಿ ತೀರ್ಮಾನಿಸುತ್ತೇವೆ. ನಾವು ಈ ನಿಟ್ಟಿನಲ್ಲಿ ಈಗಾಗಲೇ ಆಲೋಚನೆ ನಡೆಸಿದ್ದೇವೆ’ ಎಂದು ಆಂಧ್ರ ಪ್ರದೇಶ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರು ಸುದ್ದಿಗಾರರಿಗೆ ತಿಳಿಸಿದರು.

ಸಂಪ್ರೋಕ್ಷಣ ಕಾರ್ಯ ನಡೆಸುವುದರಿಂದ ದೇವರ ಆಶೀರ್ವಾದ ಪ್ರಾಪ್ತಿಯಾಗುತ್ತದೆ, ಸಮೃದ್ಧಿ ನೆಲಸುತ್ತದೆ ಮತ್ತು ಆಧ್ಯಾತ್ಮಿಕ ಶಾಂತಿ ಸಿಗುತ್ತಿದೆ ಎಂಬ ನಂಬಿಕೆ ಇದೆ.

ಸಂಪ್ರೋಕ್ಷಣ ಕಾರ್ಯದ ಭಾಗವಾಗಿ ಮೂರು ದಿನಗಳ ಶಾಂತಿ ಹೋಮ ನಡೆಸುವ ಆಲೋಚನೆಯನ್ನು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ಹೊಂದಿದೆ. ವೈದಿಕ ವಿದ್ವಾಂಸರು ಮತ್ತು ತಿರುಮಲ ದೇವಸ್ಥಾನದ ಅರ್ಚಕರು ಶಾಂತಿ ಹೋಮದ ಬಗ್ಗೆ ಟಿಟಿಡಿ ಕಾರ್ಯನಿರ್ವಾಹಕ ಅಧಿಕಾರಿ ಜೆ. ಶ್ಯಾಮಲ ರಾವ್ ಜೊತೆ ಚರ್ಚಿಸಿದರು. ಶಾಂತಿ ಹೋಮ ಮತ್ತು ಸಂಪ್ರೋಕ್ಷಣ ಕಾರ್ಯದ ದಿನಾಂಕವು ಭಾನುವಾರ ಅಂತಿಮಗೊಳ್ಳುವ ನಿರೀಕ್ಷೆ ಇದೆ.

ದೇವಸ್ಥಾನಗಳ ಪಾವಿತ್ರ್ಯ ಹಾಗೂ ಭಕ್ತರ ಭಾವನೆಗಳಿಗೆ ತಮ್ಮ ಸರ್ಕಾರವು ಅತ್ಯಂತ ಹೆಚ್ಚಿನ ಆದ್ಯತೆ ನೀಡುತ್ತದೆ ಎಂದು ನಾಯ್ಡು ಸ್ಪಷ್ಟಪಡಿಸಿದರು.

ಪ್ರತಿ ಧರ್ಮಕ್ಕೂ ಅದರದ್ದೇ ಆದ ಸಂಪ್ರದಾಯ, ಬದ್ಧತೆಗಳು ಇರುತ್ತವೆ. ಸರ್ಕಾರವು ಅವುಗಳನ್ನು ಗೌರವಿಸಬೇಕು ಎಂದು ನಾಯ್ಡು ಹೇಳಿದರು.

ಹಿಂದಿನ ಮುಖ್ಯಮಂತ್ರಿ ವೈ.ಎಸ್. ಜಗನ್ ಮೋಹನ ರೆಡ್ಡಿ, ವೈಎಸ್‌ಆರ್‌ಸಿಪಿ ಆಡಳಿತದ ಅವಧಿಯಲ್ಲಿ ಟಿಟಿಡಿ ಅಧ್ಯಕ್ಷರಾಗಿದ್ದ ವೈ.ವಿ. ಸುಬ್ಬಾರೆಡ್ಡಿ ಮತ್ತು ಭುಮನ ಕರುಣಾಕರ ರೆಡ್ಡಿ, ಟಿಟಿಡಿ ಮಾಜಿ ಕಾರ್ಯನಿರ್ವಹಣಾ ಅಧಿಕಾರಿ ಎ. ಧರ್ಮ ರೆಡ್ಡಿ ಅವರನ್ನು ಬಂಧಿಸಬೇಕು ಎಂದು ವಿಶ್ವ ಹಿಂದೂ ಪರಿಷತ್ ಒತ್ತಾಯಿಸಿದೆ.



ಉತ್ತರ ಭಾರತ ಯಾತ್ರೆಗೆ ಹೊರಡಲು ಇಂಡಿ ರೈಲು ನಿಲ್ದಾಣದಲ್ಲಿ ಕುಳಿತಿದ್ದ ಯಾತ್ರಾರ್ಥಿಗಳು

ಸೇವಾರ್ಥವಾಗಿ ಜನರಿಗೆ ಯಾತ್ರೆ

2400ಕ್ಕೂ ಅಧಿಕ ಯಾತ್ರಿಗಳಿಗೆ ವಿಶೇಷ ರೈಲಿನ ವ್ಯವಸ್ಥೆ; ₹2 ಕೋಟಿ ವ್ಯಯ

• ಬಸವರಾಜ್ ಸಂಪಳ್ಳಿ

ವಿಜಯಪುರ: ಜವಳಿ ಉದ್ಯಮದ ಮೂಲಕ ಕರ್ನಾಟಕ ಮತ್ತು ಮಹಾರಾಷ್ಟ್ರ ರಾಜ್ಯಗಳಲ್ಲಿ ಮನೆ ಮಾತಾಗಿರುವ ವಿಜಯಪುರ ಜಿಲ್ಲೆಯ ಚಡಚಣ ಪಟ್ಟಣದ ಬಾಹುಬಲಿ ಮುತ್ತಿನ ಮತ್ತು ಅಜಿತ್ ಮುತ್ತಿನ ಸಹೋದರರು 2,400ಕ್ಕೂ ಅಧಿಕ ಜನರನ್ನು ಉಚಿತವಾಗಿ ಎಂಟು ದಿನಗಳ ಉತ್ತರ ಭಾರತ ಯಾತ್ರೆಗೆ ಕರೆದೊಯ್ದಿದ್ದಾರೆ. ಇದಕ್ಕಾಗಿ ಅವರು ತಮ್ಮ ಸ್ವಂತ ₹2 ಕೋಟಿಗೂ ಅಧಿಕ ಹಣವನ್ನು ವ್ಯಯಿಸಿದ್ದಾರೆ.

'ವಿಶೇಷ ರೈಲಿನಲ್ಲಿ ವಿಜಯಪುರ, ಬಾಗಲಕೋಟೆ, ಕಲಬುರ್ಗಿ, ಬೆಳಗಾವಿ, ಗದಗ, ಧಾರವಾಡ, ಹಾವೇರಿ, ಯಾದಗಿರಿ, ಸೊಲ್ಲಾಪುರ, ಸಾಂಗ್ಲಿ, ಸಾತಾರ, ಕೊಲ್ಹಾಪುರ ಜಿಲ್ಲೆಗಳು ಸೇರಿದಂತೆ ಉಭಯ ರಾಜ್ಯಗಳ ಯಾತ್ರಾರ್ಥಿಗಳಿಗೆ ಉತ್ತರ ಭಾರತದ ಪ್ರಮುಖ ಯಾತ್ರಾ ಸ್ಥಳಗಳಾದ ಕಾಶಿ, ಅಯೋಧ್ಯಾ, ವಾರಾಣಾಸಿ, ಜೈನರ ಪವಿತ್ರ ಕ್ಷೇತ್ರ ಶಿಖರ್ಜಿ ದರ್ಶನಕ್ಕೆ ಕರೆದೊಯ್ದಿದ್ದಾರೆ.

'ಪ್ರಜಾವಾಣಿ'ಯೊಂದಿಗೆ ಮಾತನಾಡಿದ ಯಾತ್ರೆಯ ಆಯೋಜಕ, ಜವಳಿ ಉದ್ಯಮಿ ಅಜಿತ್ ಎನ್. ಮುತ್ತಿನ, 'ಸೇವಾರ್ಥವಾಗಿ ಉತ್ತರ ಭಾರತ ಯಾತ್ರೆಯನ್ನು ಆಯೋಜಿಸುತ್ತ ಬರುತ್ತಿದ್ದೇವೆ. ಸಾವಿರಾರು ರೂಪಾಯಿ ಖರ್ಚು ಮಾಡಿ ಉತ್ತರ ಭಾರತದ ಪ್ರಮುಖ ಧಾರ್ಮಿಕ ಕ್ಷೇತ್ರಗಳನ್ನು ನೋಡಲು ಆಗದವರಿಗಾಗಿ ಈ ಯಾತ್ರೆಯನ್ನು ನಾವು ಸಂಘಟಿಸಿದ್ದೇವೆ' ಎಂದರು.

'ಎಂಟು ದಿನಗಳ ಪ್ರವಾಸದಲ್ಲಿ ಯಾತ್ರಾರ್ಥಿಗಳಿಗೆ ಊಟ, ವಸತಿ, ಆರೋಗ್ಯ ಸೇವೆ ಉಚಿತವಾಗಿ ಒದಗಿಸುತ್ತೇವೆ. ಅವರಿಗೆ ನಯಾ ಪೈಸೆ ಖರ್ಚಾಗದಂತೆ ವ್ಯವಸ್ಥೆ ಮಾಡಿರುತ್ತೇವೆ. ಯಾತ್ರೆಯ ಸಂದರ್ಭದಲ್ಲಿ ಸುರಕ್ಷತೆಗಾಗಿ ಹಲವು ಸ್ವಯಂ ಸೇವಕರನ್ನು ನಿಯೋಜಿಸುತ್ತೇವೆ. ಯಾತ್ರಾರ್ಥಿಗಳಿಗೆ ಧಾರ್ಮಿಕ ಸ್ಥಳಗಳ ದರ್ಶನ ಮಾಡಿಸಿ, ಸುರಕ್ಷಿತವಾಗಿ ಕರೆದುಕೊಂಡು ಬರುತ್ತೇವೆ' ಎಂದು ಹೇಳಿದರು.

'ರೈಲು ನಿಲ್ದಾಣಗಳಿಂದ ಯಾತ್ರಾ ಸ್ಥಳಗಳಿಗೆ ತೆರಳಲು ಅನುಕೂಲವಾಗುವಂತೆ ಆಯಾ ಸ್ಥಳಗಳಲ್ಲಿ ಉಚಿತ ಬಸ್ ವ್ಯವಸ್ಥೆ, ಜೊತೆಗೆ ಕೆಲವರಿಗೆ ವಿಮಾನದ ಮೂಲಕವೂ ಯಾತ್ರೆಗೆ ಅವಕಾಶ ಮಾಡಿದ್ದೇವೆ. 60 ವರ್ಷ ಮೇಲ್ಪಟ್ಟವರಿಗೆ ಆದ್ಯತೆ ನೀಡುತ್ತೇವೆ' ಎಂದರು.

'ಕೋವಿಡ್ ಕಾರಣಕ್ಕೆ ಕಳೆದ ನಾಲ್ಕು ವರ್ಷ ಯಾತ್ರೆ ಏರ್ಪಡಿಸಿರಲಿಲ್ಲ. ಇದೀಗ ಐದನೇ ಬಾರಿಗೆ ಉತ್ತರ ಭಾರತ ಯಾತ್ರೆಗೆ ಜನರನ್ನು ಕರೆದುಕೊಂಡು ಹೋಗುತ್ತಿದ್ದೇವೆ. ಆರಂಭದ ವರ್ಷಗಳಲ್ಲಿ 500 ಜನರನ್ನು ಕರೆದುಕೊಂಡು ಉತ್ತರ ಭಾರತ ಯಾತ್ರೆ ಮಾಡಲಾಗಿತ್ತು. ಬಳಿಕ ಒಂದು ಸಾವಿರ, ಆ ನಂತರ 3,000 ಜನರನ್ನು ಕರೆದುಕೊಂಡು ಹೋಗಲಾಗಿತ್ತು. ಈ ವರ್ಷ 2,400ಕ್ಕೂ ಅಧಿಕ ಜನರೊಟ್ಟಿಗೆ ಯಾತ್ರೆ ಕೈಗೊಂಡಿದ್ದೇವೆ' ಎಂದರು.

ಕಾಮಗಾರಿ ಪರಿಶೀಲನೆಗೆ ರಾತ್ರಿ ಸಂಚಾರ: ಡಿ.ಕೆ ಶಿವಕುಮಾರ್

ಪ್ರಜಾವಾಣಿ ವಾರ್ತೆ



ಡಿ.ಕೆ. ಶಿವಕುಮಾರ್

ಬೆಂಗಳೂರು: 'ರಸ್ತೆ ಗುಂಡಿ ಮುಚ್ಚುವ ಕಾಮಗಾರಿಯ ಗುಣಮಟ್ಟ ವೀಕ್ಷಿಸಲು ರಾತ್ರಿ ಸಂಚಾರ ನಡೆಸುತ್ತೇನೆ. 2–3 ದಿನಗಳಲ್ಲಿ ದಿನಾಂಕ ತಿಳಿಸುತ್ತೇನೆ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರೂ ಆಗಿರುವ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

ಸುದ್ದಿಗಾರರ ಜೊತೆ ಶನಿವಾರ ಮಾತನಾಡಿದ ಅವರು, 'ಎಷ್ಟು ರಸ್ತೆ ಗುಂಡಿಗಳಿವೆ ಎಂಬುದರ ಬಗ್ಗೆ ನನ್ನ ಬಳಿ ಲೆಕ್ಕವಿದೆ. ಅಭಿಯಾನದ ರೀತಿ ಕೆಲಸ ಮಾಡಿದ್ದೇವೆ. ಇದು ಜವಾಬ್ದಾರಿ. ನನ್ನ 40 ವರ್ಷಗಳ ರಾಜಕೀಯ ಇತಿಹಾಸದಲ್ಲಿ ಆದೇಶ ಕೊಟ್ಟ ಮೇಲೆ ಅಧಿಕಾರಿಗಳು ಇಷ್ಟು ತ್ವರಿತವಾಗಿ ಕೆಲಸ ಮಾಡಿದ್ದನ್ನು ನಾನು ನೋಡಿಲ್ಲ' ಎಂದರು.

'ರಸ್ತೆಗುಂಡಿಗಳನ್ನು ಮುಚ್ಚಿಸುವ ವಿಚಾರದಲ್ಲಿ ಬಿಬಿಎಂಪಿ ಅಧಿಕಾರಿಗಳು ಹಗಲು- ರಾತ್ರಿ ಕೆಲಸ ಮಾಡುತ್ತಿದ್ದಾರೆ. ಎಲ್ಲವನ್ನೂ ಗಮನದಲ್ಲಿ ಇಟ್ಟುಕೊಂಡು ಕೆಲಸ ಮಾಡಬೇಕು. ಮಧ್ಯೆ ಮಳೆ ಬಂದಿದೆ. ನಾಗರಿಕರಿಗೆ ಅನುಕೂಲ ಮಾಡಿಕೊಡಬೇಕೆಂಬ ಕಾರಣಕ್ಕೆ ನಾವು ಬದ್ಧತೆಯಿಂದ ಕೆಲಸ ಮಾಡಿದ್ದೇವೆ' ಎಂದರು.

ಅವಮಾನ ಮಾಡಲು ಇಷ್ಟವಿಲ್ಲ: 'ನಾನು ಹಲವು ರಾಜ್ಯಗಳಿಗೆ ಭೇಟಿ ನೀಡಿದ್ದೇನೆ. ಅಲ್ಲಿನ ರಸ್ತೆಗಳ ವಿಡಿಯೊಗಳನ್ನು ಹಂಚಿಕೊಂಡರೆ, ಆ ರಾಜ್ಯಗಳಿಗೆ ಅವಮಾನವಾಗುತ್ತದೆ. ಅದಕ್ಕಿಂತ ಉತ್ತಮವಾಗಿ ನಮ್ಮವರು ಇಲ್ಲಿನ ರಸ್ತೆಗಳ ದುರಸ್ತಿ ಕೆಲಸ ಮಾಡಿದ್ದಾರೆ' ಎಂದರು.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

REAL ESTATE SELLING

House

Electronic City

CHANDAPURA BMRDA Approved 3 & 4 Bedroom Villa Ready To Occupy Only Genuine Buyers: 9916763727

Jayanagar

SALE 40X54 Jayanagar 7th Block With old House on 40feet Road Excellent Location ct: 9844134068 9066399102

J P Nagar

SALE 60X90 JPNagar 3rd Phase With old House East Facing on 40feet Road Excellent Location ct: 9844134068 9066399102

SALE J.P.NAGAR Second Phase, BDA, old House 30x40, Site Price only, Excellent Location Sunil: 9845173427

Vijayanagar

***VIJAYANAGAR OLD** House north facing 1600 sqft Rs.23000/- per sqft negotiable. ABHILASHA CONSULTANT. 9480565758

BUILDING SALE Vijayanagar 55x65.5 A Katha 3 Floor Rental Income 1.30 Lack Sale 2.75Cr: 6361579235

Srirampura

HOUSE FOR SALE, in Sriramapuram, Land measuring 1500sqft. Building 4000+. Ground +2. Covered parking for 2 Cars. Contact: 9171918295, 9442514001.

HRBR Layout

KAMMANAHALLI NEAR EMPIRE HOTEL, NEW BUILDING SALE 20X30 GROUND, FIRST, SECOND, THIRD EACH 2BHK. RENTAL INCOME 1LAKH. MOBILE: 7349322223.

Flat

Rajajinagar

PURVA BLUBELLE Adjacent to Magadi road Metro station Rajajinagar Centre of the City 3 Bedroom & Exclusive 5Bedroom Flats +servant room with all luxurious Amenities, Only few units for Sale. Contact: 9844027560

Sadashiva Nagar

FLAT FOR Sale 4 BHK Servant Room 3370sft, Bagamane Triumph,13 Sadashiva Nagar Sankey Road covered parking for Two cars. Contact: 6281741101

Airport Road

SALE SENIOR Citizen 2 Bedroom New Flat 100% Furnished Immediate Occupation at Manasum Godrej Flat New Airport Road: 9845026300

Agricultural Land


Tumkur

GUBBI TALKU Tumkur 10 Acres Farm Land 500 Coconut, 4000 Areca nut tree Yield, 4 Borewell ct:9844134068 9066 399102

Commercial Building

Chamarajpet

SALE: CHAMARAJPET



Commercial Building
18,000 Sft
Rental Income 8.5 Lacs
Sale Price 14.50 Crores
Contact:
96322-37557 / 96069-07557

Electronic City

BUILDING SALE at KIADB Layout, Electronic City, Getting 2.5L, Price.3.40cr, A katha, Brand New. 9980577227.

Commercial Land

Out-Station

MULTIPURPOSE LAND 3.5 Acre Corner River MADDUR Railway Station, 60km Bangalore Mysore. SALE/ JD. 8884865156

Commerical

Malleshwaram

VAYALIKAVAL Main Road Commercial South East Corner Property Measuring 4050 Sft For Sale Call: 9738111222

SRIRAMPURAM MN RD VACANT LAND 'A' KHATA COMMERCIAL/RESIDENCIAL SITE 27 X 30 FT 1 KM FROM MANTRI MALL 9620140619

Seshadripuram

SRIRAMPURAM MN RD - VACANT LAND 'A' KHATA COMMERICAL/RESIDENCIAL SITE 27 X 30 FT 1 KM FROM MANTRI MALL 9620140619

Villas/Bunglows

Hennur

SALE ROW house in ARGE HELIOS. Kothanur. Hennur Road. Site 2550sft. Building 12800sft. 4BHK Fully furnished. 3 carparking. Arun 9845077299.

Industrial & Factory

Tumkur Road

SALE, 45000 sqft, near Taj Hotel, Goraguntepalya Ring Road. Suitable for High Range Apartment, Hotel, Mall. Brokers Excuse. 9141326819

REAL ESTATE BUYING

Sites

Anjanapura

WANTED BDA & BBMP SITES. Anjanapura, JP.Nagar,Banashankari 6th Stage, Vishweshwaraiah Layout. Any Measurements Immediate Settlement Genuine Sellers Contact: 9972223222, 9606632777

WANTED BDA Site Anjanapura, Banashankari 6th Stage, Vishweshwaraiah layout & any BDA Katha & Mysore MUDA Sites, immediate settlement. genuine Sellers Contact:9902038118, 9449060605

Banashankari

BDA SITES WANTED ARKAVATHY ANJANAPURA BANASHANKRI 6TH STAGE VISHWESHWARAIA KEMPEGOWDA ANY BDA LAYOUT. CONTACT: 9845062822, 8660751654

Kanakapura Road

WANTED SITE 30x40, 40x60, Anjanapura BDA, Banashankri 6th Stage, BCCHS Layout, Investment Purpose. Agent Excuse. Call: 9663454878.

Mysore

REQUIREMENT MUDA Sites Mysore 30x40, 40x60 DTS Rao Naga, Rajeev Nagara Contact: 9845767065

Multiple Locations

WANTED BDA SITES Anjanapura- Arkavathi Banashankari 6th.Stage, Vishweswaraiah, Kempegowda, Dr.Shivaramkaranth Layout.Contact: SAPTHAGIRI. 9900268073 9448068073.

Nagarabhavi

"WANTED NAGARBHAVI RHSCS, Visweshwaraiah all Block, MPM, Genuine Sellers/ Owners promptly Feel free Contact: 7259675150"

Vishweshwariah Layout

BUYING/ SELLING 20x30,30x40,40x60 50x80 BDA sites at VISHVESHWARAIAH LAYOUT, BSK 6th-stage. Contact: 9844533371/ 9341733480

Farm House/ Land/ Resorts

Devanahalli

WANTED LAND: In and around Nandi Hills- Chikaballpura, Devanahalli we are looking for 2 to 15 acres of top-notch property for school with at least 40 feet wide attractive access road and frontage of at least 400 feet. Clear Titles & Real Owners. Contact SUMANTH NARAYAN. Email: info@eduweft.com/ 9606353036

BUILDERS ESSENTIAL

Water Proofing

LEAKAGE... LEAKAGE... Old/New Building, Sump, Bathroom, Wallcrack, Skylight, Terrace Waterproofing done by New Technology- 9880916988

RENTAL PROPERTIES

Accommodation Available

Industrial And Factory

RENT, 6100 sqft with Power at Peenya 4th Phase. Call: 9535477360, 080-28360561 purchase@vetrilindia.in

AT TUMKUR Industrial Shed for Rent 12000 sqft with/ without large open area, with Power, Water, ready to occupy at Antharasanahalli Industrial Area. Contact: 9535477360, 080-28360561 purchase@vetrilindia.in

Commercial

AVAILABLE ON RENT



MAGADI ROAD

LOWER GROUND - 6000 Sqft
1st FLOOR -6500 Sqft Suitable For Office/ Gym / Beauty Parlor/ Warehouse / Cloud Kitchen.
Call : 9845049000

HEBBAL FURNISHED Office Space 4450 Sqft With 65 Workstations 5 Cabins 1 Conference room Ample Parking in Prime Building for Rent 85/- Per sqft call us at 9341000005

NAGARBHAVI BDA Complex opp Annapoorneshwarinagar Commercial Space newly Built 1st-floor and 2nd-floor Each-floor 1760sqft for rent.Contact.7676403884

MATRIMONIAL

Grooms Wanted

Bengali

BENGALI Kayastha 31, Nov1992, 5'7', B.Tech Fair b'ful girl wkg Bangalore MNC, 25LPA, non-veg. seek edu. suitable boy wkg in Bangalore. 9477507531

Muslim

GROOM WANTED
Sunni Muslim Girl, B.Tech, IT Engineer working in a Reputed Company at Bengaluru. 29 yrs, 5'6", seeking alliance from Muslim Boy as IT Engineer working in Bengaluru
* Brokers excuse
Contact:
9425526959
9685322587

SM PARENTS looking for an educated, working, bangalore based groom for their divorced daughter, 40 (no issues) 5.1, fair Psychological Counselor. Contact 8792840531

PUBLIC NOTICE

THE IDEAL HOMES CO-OPERATIVE BUILDING SOCIETY LIMITED
Ideal Homes Township, Mysore Road, Bangalore - 560 098.
Ph: 2860 0892. (Reg. No. DYR 352 of 1964)

MEETING NOTICE

Notice is hereby given that the 54th Annual General Meeting of the Society will be held on **22-9-2024 (Sunday) at 11.00 a.m.** in the premises of the Society's Office. We have posted the Meeting Notice to all the Members well in advance i.e., on 5-9-2024 itself. All the Members are requested to attend the Meeting.

By Order of the Board of Management
Sd/-
SECRETARY

JOB OPPORTUNITIES

Engg/ Production Technical

WANTED CONSTRUCTION Site Engineer Exp:5to10years Salary 40000 Plus Age Below 50yrs 2 Wheeler is Mandate Call:7338084555 9030609238 9845053636:Mail glprojects7889@gmail.com Interview Time: 10AM to 3PM

WANTED-GRADUATE OFFICE-EXECUTIVES for Office and Marketing (Dental Equipments Pvt.Ltd Company) with or without experience,only Female's- with MBA,Computer Knowledge & Good English, Hindi Communications skills.Contact: 9341223410/ 9844016274

Walk-in

VEE ENGINEERS
HIRING PROFESSIONALS

POSITION	QUALIFICATION	EXP	POST
Project Manager	Diploma/BE Civil	10-15 Y	2
Asst. Manager	Diploma/BE Civil	5-10 Y	3
Site Engineer	Diploma/BE Civil	2-5 Y	4
Fabrication Eng	Diploma/BE Mech	2-5 Y	1
Electrician	ITI/Diploma Elect	2-3 Y	2
Stores	Any Degree	1-2 Y	2

Job Location : KARNATAKA / TAMILNADU
Interested Candidates can send the CV to : veeengineers@gmail.com/jaivee80@gmail.com or Walk-in Interview on **28-09-2024** (Saturday)
Contact : 9845291325

Drivers

HAEID REQUIRED Experienced Educated 4WH Automatic CAR DRIVER at Rajajinagar Bangalore. Attractive package & immediate placement. CONTACT: +916366443134

Teachers/ Professors

WANTED TEACHERS FOR PRIMARY KANNADA, SOCIAL SCIENCE ABDUL BARI'S HIGH SCHOOL Near Coles Park 9353111888

General

REQUIRED Female Telecaller, Marketing Executives for all districts / Admission Counselor, Computer Operator, B.Com Graduates, Male Hostel Warden, Drivers,- K T G & Anuradha P U College, Hegganahalli Cross, Sunkadakatte Road Bengaluru-560091 Contact : 9845051023, 7411596007, 9880453539.

EARN MORE than Rs:50,000/- per month, Part/ Full time, Age above 30 Years, Call: 9343616020

Accounts & Finance

ACCOUNTANT REQUIRED Qualification: Graduate Male/Female with 2-3 years of Accounts experience in any Pvt.Ltd Company Skills: Preparing financial documents such as invoices, bills, accounts payable, receivable and Statutory. Software: Tally, M.S.Office, Word. Location- Yeshwanthpur, Bangalore. Competitive Salary and benefits will be offered. Email- am24kanika@gmail.com Contact- 9035012058

REQUIRED URGENTLY Senior Accountant with experience about GST/ TDS/ PF/ESI/ EXPORT, and Accountant Assistant for an established trust in Bengaluru. E-Mail: drrtrust@yahoo.com Mob: 9686566803/ 8050531430

WANTED ACCOUNTS ASST (Male) Tally & GST work, Location: Bommanahalli Mail: starsilks@gmail.com

URGENT REQUIRED
ACCOUNT -
Male -1,
Female -1
Sri Vinayak Timbers
Bychaguppe, Tavarekere, Magadi Main Road, Bengaluru
Contact:
99729 88397

Marketing & Sales

NEW INDIA ELECTRICALS LTD. (A 55 Year Old Company) JC Road, Bangalore-02. WANTED CUSTOMER SUPPORT EXECUTIVES/ SALES EXECUTIVES/ BUSINESS DEVELOPMENT EXECUTIVES, For Immediate Appointment. (MALE/ FEMALE). Qualification: Commerce/ BSc/ ITI Graduate, Skills: Basic Computer/ Good Communication, Experience: 2-4 Years Preferred, Salary: 20,000-30,000/- Ph: 9343833300 Mail: jatinshah@newindiaelectricals.com

M/S.UNIWORLD HYDRAULICS Reqd. Male DIPLOMA MECHANICAL for MARKETING EXECUTIVE with 2 years exp. in Hydraulic Field. Contact: 9731110163/ 9740393670.

WEEKEND CORNER

MACHINERY & TOOLS FOR SALE

SURFACE GRINDING	- 3 Nos.
CYLINDRICAL GRINDING	- 1 Nos.
LB 17 LATHE	- 1 Nos.
TOOL GRINDING	- 1 Nos.
COLUMN DRILLING	- 1 Nos.

CONTACT : 9845046771

TRAVEL CORNER



BUSINESS

Business to Business

Consultants

WE NEED retired bank Officers, Recovery Agents andAdvocates as consultants with experience in DRT cases, Bank Seized Properties and onetime settlements. Arun 9945699789.

Business Offers

General

MONTHLY REVENUE is assured by buying Data Particle. WA: 7019246661

Machinery & Tools

FOR SALE Jio Company Plastic Horizontal Injunction Moulding Machines 50tons Capacity @Reasonable Price, Anathi Plastronics, Bangalore. Call:9341233455

PERSONAL

Change of Name

CHANGE OF NAME
I, **VISHAL NARAYAN,** R/at # 34, 1st Main, 3rd Stage, 4th Block, Basaveshwaranagar, Bengaluru- 79, have changed my minor daughter's name from **PARIDHI** to **PARIDHI NARAYAN SRIVASTAVA** vide affidavit dated 23-07-2016, before notary G B Turamani, Bengaluru. Henceforth she shall be called as **PARIDHI NARAYAN SRIVASTAVA** only

CHANGE OF NAME
I, **SOLOMAN ANDREN MOSES** S/o Ruben Moses, residing at # 108, Vineyard Jasmine, 10th Cross, Bank Avenue Near Ganesh Mandir, Babusapalya, Benglauru - 560043, have changed my name to **SOLOMON ANDREW MOSES** vide affidavit dated 28-12-2023. before notary M. Rajendra, Bengaluru.

I, SANDHYA P.R. W/o Pawan D.A. residing at 891, 4th Main, 4th Cross, Vijayanagar, Bangalore-40 have changed my nameto SANDHYA PAWAN AMBEKAR vide affidavit dated 14-03-2014 sworn before Notary Raghunath, Bengaluru.

I, SYEDA SHARA B S, resident of No. 7/157, Shri Nanjundeshwara Nilaya, 1st Cross, Vokkaligara Beedi, Yelahanka, Bangalore 560064, have changed my name to SOWJANYA vide affidavit dated: 19.09.2024 before C.N. Chandrashekar, Advocate and notary, Bengaluru.

I, VENKATESH T.B. Alias T.B. VENKATESH REDDY S/o.Late Bachappa, R/a#200-6 Bagaluru Main Road Yalahanka Post Behind Reliance Fresh Kattigenahalli Yelahanka, Bengaluru 560064 have changed my Son's Name from CHAITANYA. V. to CHUNMAI REDDY. V. (DOB:14.4.2010) vide affidavit dated:27.08.2024 before Notary S. Chandrashekar Bangalore

I, PRASANNA Aged about 48 years, S/o. Dr. Praful Kothari R/o.Flat#305 Pushapanjali Apartments, 1st Cross 1st Main, Chamarajpet Bangalore- 560018 have changed my Name to PRASANNA KOTHARI vide affidavit dated:21.9.2024 sworn before Notary Mamatha.N.K Bangalore

I, ANAY RAMESH GHOTIKAR, Residing at M345, Brigade Woods, ITPL Main Road, Whitefield, Bengaluru- 560066, have changed my Minor son's name REYANSH to New name REYANSH GHOTIKAR vide affidavit dated 21/09/2024 before Veena J., Notary Public.

MORE Classifieds Ads on Subsequent Pages

ವಿದ್ಯುತ್ ವ್ಯತ್ಯಯ ಇಂದು

ಪ್ರಜಾವಾಣಿ ವಾರ್ತೆ



ಬೆಂಗಳೂರು: ಆಲೂರು ವಿದ್ಯುತ್ ನಿರ್ವಹಣಾ ಕೇಂದ್ರಲ್ಲಿ ತುರ್ತು ನಿರ್ವಹಣಾ ಕಾಮಗಾರಿ ಕೈಗೊಳ್ಳುವುದರಿಂದ ಭಾನುವಾರ (22ರಂದು) ಬೆಳಿಗ್ಗೆ 10 ರಿಂದ ಮಧ್ಯಾಹ್ನ 3ರವರೆಗೆ ವಿದ್ಯುತ್ ಪೂರೈಕೆಯಲ್ಲಿ ವ್ಯತ್ಯಯವಾಗಲಿದೆ ಎಂದು ಬೆಸ್ಕಾಂ ಪ್ರಕಟಣೆಯಲ್ಲಿ ತಿಳಿಸಿದೆ.

ವಿದ್ಯುತ್ ವ್ಯತ್ಯಯವಾಗುವ ಸ್ಥಳಗಳು: ನೆಲಮಂಗಲ ತಾಲ್ಲೂಕಿನ ಅಡಕಮಾರನಹಳ್ಳಿ, ದಾಸನಪುರ, ದೇವಣ್ಣಪಾಳ್ಯ, ಹಾರೋಕ್ಯಾತನಹಳ್ಳಿ, ಗೌಡಹಳ್ಳಿ, ಮಾಕಳಿ, ಹೆಗ್ಗಡೆದೇವನಪುರ, ಹುಸ್ಕೂರು, ಟಾಟಾ ಹೌಸಿಂಗ್, ರಾಯಲ್ ಟೌನ್‌ಶಿಪ್, ಕೋಡಿಪಾಳ್ಯ ವಡೇರಹಳ್ಳಿ, ನರಸೀಪುರ, ಗೋವಿಂದಪುರ, ಆಲೂರು ಪಾಳ್ಯ, ನಗರೂರು ಕೈಗಾರಿಕಾ ಪ್ರದೇಶ ಮತ್ತು ಸುತ್ತು-ಮುತ್ತಲಿನ ಪ್ರದೇಶಗಳಲ್ಲಿ ವಿದ್ಯುತ್ ವ್ಯತ್ಯಯವಾಗಲಿದೆ.

ಪೆಟ್ರೋಲ್, ಡೀಸೆಲ್ ದರ ಇಳಿಸಲು ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲ ಬೆಲೆ ಕಡಿಮೆಯಾದರೂ ದೇಶದಲ್ಲಿ ಅವುಗಳ ಬೆಲೆ ಇಳಿಕೆಯಾಗುತ್ತಿಲ್ಲ ಎಂದು ಬೃಹತ್ ಬೆಂಗಳೂರು ಹೋಟೆಲ್‌ಗಳ ಸಂಘ ದೂರಿದೆ.

‘ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಒಂದು ಬ್ಯಾರೆಲ್ ಕಚ್ಚಾ ತೈಲದ ಬೆಲೆ 72 ಡಾಲರ್ ಇದೆ. ಹೀಗಿದ್ದರೂ ದೇಶದಲ್ಲಿ ಡಿಸೇಲ್ ಮತ್ತು ಪೆಟ್ರೋಲ್ ಬೆಲೆ ಕಡಿಮೆಯಾಗಿಲ್ಲ. ಸದ್ಯ ಪ್ರತಿ ಲೀಟರ್‌ಗೆ ₹102.86 ಹಾಗೂ ಡೀಸೆಲ್ ₹88.94ರಂತೆ ಮಾರಾಟವಾಗುತ್ತಿದೆ. ಇದರ ಮೇಲೆ ಕೇಂದ್ರ ಸರ್ಕಾರ ಶೇಕಡ 20ರಷ್ಟು ಹಾಗೂ ರಾಜ್ಯ ಸರ್ಕಾರ ಶೇ 29.84ರಷ್ಟು ತೆರಿಗೆ ವಿಧಿಸುತ್ತಿವೆ. ಇದರಿಂದ ಜನಸಾಮಾನ್ಯರಿಗೆ ಹಾಗೂ ಉದ್ಯಮಿಗಳಿಗೆ ಹೊರೆ ಆಗುತ್ತಿದೆ’ ಎಂದು ಸಂಘದ ಗೌರವ ಅಧ್ಯಕ್ಷ ಪಿ.ಸಿ. ರಾವ್ ತಿಳಿಸಿದ್ದಾರೆ.

‘ತೈಲ ದರ ಏರಿಕೆಯಿಂದ ಹಾಲು, ದವಸ-ಧಾನ್ಯ ಮುಂತಾದವುಗಳ ಸಾಗಣೆ ವೆಚ್ಚವು ಹೆಚ್ಚಾಗುವ ಜೊತೆಗೆ ಪ್ರವಾಸೋದ್ಯಮಕ್ಕೂ ಹೊಡೆತ ಬೀಳುತ್ತಿದೆ. ಅವೈಜ್ಞಾನಿಕ ದರ ಏರಿಕೆ ಮಾಡಿ ಜನಸಾಮಾನ್ಯರು ಹಾಗೂ ಉದ್ಯಮಿಗಳ ಮೇಲೆ ಹೊರೆ ಹಾಕುವುದು ಸರಿಯಲ್ಲ. ಕೂಡಲೇ ಪೆಟ್ರೋಲ್ ಮತ್ತು ಡೀಸೆಲ್ ದರ ಇಳಿಕೆ ಮಾಡುವುದರ ಜೊತೆಗೆ ಇದನ್ನು ಜಿಎಸ್‌ಟಿ ಅಡಿಯಲ್ಲಿ ತರಬೇಕು’ ಎಂದು ಸಂಘದ ಅಧ್ಯಕ್ಷ ಸುಬ್ರಮಣ್ಯ ಹೊಳ್ಳ ಎಸ್., ಗೌರವ ಕಾರ್ಯದರ್ಶಿ ವೀರೇಂದ್ರ ಎನ್. ಕಾಮತ್ ಆಗ್ರಹಿಸಿದ್ದಾರೆ.

₹6.21 ಲಕ್ಷ ದಂಡ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್‌ಗಳಲ್ಲಿ ಆಗಸ್ಟ್‌ನಲ್ಲಿ ಟಿಕೆಟ್ ಪಡೆಯದೇ ಪ್ರಯಾಣಿಸುತ್ತಿದ್ದ 3,851 ಪ್ರಯಾಣಿಕರಿಂದ ₹6.21 ಲಕ್ಷ ದಂಡ ವಸೂಲಿ ಮಾಡಲಾಗಿದೆ.

‘ಒಟ್ಟು 43,781 ಬಸ್‌ಗಳಲ್ಲಿ ತಪಾಸಣೆ ನಡೆಸಲಾಗಿತ್ತು. ಆದಾಯದಲ್ಲಿ ₹80,059 ಸೋರಿಕೆಯಾಗಿತ್ತು. ಅದನ್ನು ದಂಡ ಸಹಿತ ವಸೂಲಿ ಮಾಡಲಾಗಿದೆ’ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

PROPERTY CORNER ಕ್ಲಾಸಿಫೈಡ್ಸ್

ಪ್ರಜಾವಾಣಿ ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

REAL ESTATE SELLING

Sites

Banashankari

BANASHANKARI 6TH-STAGE WANTED/ AVAILABLE BDA RESIDENTIAL AND COMMERCIAL SITES IMMEDIATE SETTLEMENT CONTACT: 8050908920/ 9986866661

BANASHANKARI 6TH STAGE- BDA- AVAILABLE/ WANTED 20x30, 30x40 40x60, 50x80 SITES. BRINDAVAN ASSOCIATES- 9980863245/ 9945333993

Bannerghatta Road

BANNERAGATTA ROAD Akshayanagar 2338sqft SW Corner 9000/ Pridevatika Layout 40X60 EF 5500/- Brokers Excuse 9449655947

SALE 22'X61' North West corner, Vijay bank lyt, BDA approved site, 21,000/ sft- (Full white) 9448225072.

Banaswadi

BDA SITE 1200SFT BANASWADI 5DM NEAR RAJKUMAR PARK ABSOLUTE SALE DEED EAST FACING CONTACT 7760032242

Isro Layout

2400 SQFT and 3500 Sqft Sites For Sale in Isro Layout No Brokers Contact: 9620245557

Hosur Road

SALE EXCELLENT DC Conversion Villa Site 30x40 Total 36 Sites at Chandapura Marsur Rs.3000/- Sft 7892531744 9448369117

Hebbal

BDA 60X40 Site 511 East Face, Rajivgandhi nagar, NTI PH2, Kodigehalli Call 6364712736

HSR Layout

HSR 30X40 40X60 50X80 SALE RESIDENTIAL COMMERCIAL RENTAL INCOME BUILDINGSAVAILABLE ACES 30X40 40X60: 9900966336

Magadi Road

SALE, BMRDA Site, 30X40, East, 40 feet widw road near Tavarekere. 'Raynal Garden Enclave' 9972636255

J P Nagar

JP-NAGAR 2ND PHASE 40X60 SOUTH FACING Rs. 28000/- NEGOTIABLE BROCKERS EXCUSE. CONTACT: 9449655947

J.P.NAGAR 7TH Phase Prime Property 49000Sq.ft For Sale Suitable for Residential/ Schools/Hospitals Clear Title. Contact 9845036826 (No Brokers)

SALE: PRIME RESIDENTIAL J.P.Nagar 2nd Phase 41x61- Corner with House/ 65x135 with Bungalow/3rd Phase 60x90-East- 9845036826 (No Brokers)

JPNAGAR 2ND Phase 31x42, Rs 30000/- Kanakapura Road Judicial Layout, 50x80,Rs 14500/- Contact : 9845704509

30X40 SITE for Sale JP Nagar 9th Phase, 5th A-Block, No Brokers, Direct person:9945034268

Kengeri

KENGERI UPANAGAR BDA Site 25x42, E/F, BANASHANKARI 6th Stage, 7th Block 20x30,W/F :9632822225/ 9110467577

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd.
Bengaluru

Koramangala

KORAMANGALA 40*60 SITE IN A QUIET GREENARY LOCATION OF 1ST BLOCK, GENUINE BUYERS CALL 9900001973

Kanakapura Road

"SALE SITES 30x40 East Rs.1.15 Crore, 30x40 West Rs.1.56 Crore close to Doddakallasandra Metro Station. 9845286505"

Kempegowda Layout

KEMPEGOWDA LAYOUT, COMMERCIAL BDA SITE FOR SALE 20X30, 30X40, 40X60, 50X80 CONTACT KUMAR: 9945119449

MORE Classifieds Ads on Subsequent Pages

NADAPRABHU KEMPEGOWDA LAYOUT 7th block 'F' Sector50x80 W/F behind 100-feet-road on50 feet-road,near Nayara Petrol-bunk. *VISHVESHWARAIH LAYOUT*2nd block 40x60 W/F.Contact: 9686469799

Mysore

FOR SALE - In the Heart of Mysore City - ABOUT 86000 Sqft Prime Commercial Property on Nanjangud Road Close to Ganapathi Sachidananda Ashram, Mysore. Contact 9740907835, NO BROKERS

South

READY TO CHECK IN East Facing Independent 7 BHK 2 Floor Building At South Bangalore near Lalbagh Visvewarapuram for Sale at Land Rate. Contact: 9886049329.

Mysore Road

SALE

Property No.1: Site No.20, measuring 120ft x 60ft, in all measuring 7200 Sq.ft, situated at 1st Cross, 'A' street, New Guddadahalli, Mysore Road, Bengaluru-560026 and **Property No.2:** Site No.6/1, measuring 71.3ft x 30ft, in all measuring 2140 Sq.ft, situated at 1st Cross, 'B' street, New Guddadahalli, Mysore Road, Bengaluru-560026. Just 500 Mts from Satellite Bus Stand.

CONTACT: Mr. ASHOK KUMAR Mob. 93412 45669

Nagarabhavi

SALE: SITE 30x60 Nagarabhavi 2nd Stage 'A' Khata. Bank loan Available. Immediate Registration. Genuine Buyers. 6361819741.

"NAGARABHAVI NEAR BDA Complex Opp. Annapoorneshwarinagar 30x45 North-facing BDA Site Sale, Immediate Registration. 9448432633"

Poorna Pragna Layout

POORNA PRAGNA Layout Near Uttarahalli 30x50 Site North Facing For Sale. Contact- 9341952021/ 9108879240

Nelamangala

'30X50 SOUTH Facing Site Sale @ Nelamangala Rashi Developers close to 'D'Mart, Tumkur Highway. 9845268611'

Tumkur Road

SALE, 30X40, HMT Layout, Tumkur Road, BBMP 'A' Khata, Site #1201, west facing. Contact: 9986313708

Vishweshwariah Layout

"VISHVESHWARAIAH 1ST-BLOCK 50x80 North 40ft Road, parallel to 80ft Road near Shirckey circle. 9886908408"

VISHWESHWARAIAH LAYOUT 3rd Block Attached Site For Sale, Shivakrupa Layout Very CloseTo 100 Ft Road 30X40 North Face Rate 9000/- Negotiable Builder Location: 9945584713

SALE BDA 50x80 South Facing Site Vishweshwaraiah Lyt 2nd Block 8500/- Per sft Negotiable Further Details Call:9845545977 6366661239

VISHWESHWARAIAH LAYOUT 6th Block BDA 40x60 EF 40ft Road, KLE Law College Owner Meeting: 9980860138

"VISHVESHWARAIAH LAYOUT Wanted/ Available 20x30,30x40, 40x60, 50x80 sites for immediate settlement. "Anugraha Construction"- 9886294610"

SMV LAYOUT 7th Block, 30x40 West Face, Near Muddinapalya Circle, BDA Allottee Site Sale. 1.56cr. 9164089633, 9663226688

BDA SITE SALE VISHWESHWARIAH LAYOUT 50X80 WEST FACE 80FT ROAD PARALLEL 7000 NEGOTIABLE 30X40 OWNER MEETING 1ST BLOCK CONTACT: 8892901567

SALE 30X40 west face Vishweshwaraiah 2nd Blk, BDA Kanakasri layout, Price 12000/ sft Neg (Full white)- 9448225072

1) BDA Site SMVL 3rd Block 30x40 East 14000/- 2) BMRDA 50x80 west 3500/- Attibele TVS Road Gated: 9845397752

Mysore

SITE FOR SALE in MYSORE 70x40. Contact: Owner. 8317469985.

ಐಪಿಎಸ್ ಅಧಿಕಾರಿ ಪುತ್ರನ ಮೇಲೆ ಹಲ್ಲೆ

ಬೆಂಗಳೂರು: ರಸ್ತೆಯ ಸಿಗ್ನಲ್ ಬಳಿ ಆಕ್ಸಲೇಟರ್ ಅನ್ನು ಜೋರಾಗಿ ಒತ್ತಿ ಕಿರಿಕಿರಿ ಉಂಟು ಮಾಡಿದ್ದನ್ನು ಪ್ರಶ್ನಿಸಿದ್ದಕ್ಕೆ ಐಪಿಎಸ್ ಅಧಿಕಾರಿ ಪುತ್ರನನ್ನು ಕಾರಿನಲ್ಲಿದ್ದ ಇಬ್ಬರು ಅವಾಚ್ಯ ಶಬ್ದಗಳಿಂದ ನಿಂದಿಸಿ ಹಲ್ಲೆ ನಡೆಸಿದ್ದು, ಈ ಸಂಬಂಧ ಅಮೃತಹಳ್ಳಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಐಪಿಎಸ್ ಅಧಿಕಾರಿ ರಮೇಶ್ ಬಾನೋತ್ ಅವರ ಪುತ್ರ ಶ್ರೀಸಾಯಿ ಪ್ರೀತಂ ಬಾನೋತ್ ಅವರು ದೂರು ನೀಡಿದ್ದು, ಇಬ್ಬರನ್ನು ಪೊಲೀಸರು ವಶಕ್ಕೆ ಪಡೆದುಕೊಂಡಿದ್ದಾರೆ.

'ಸೆ.16ರಂದು ಸಂಜೆ 5.30ರ ಸುಮಾರಿಗೆ ಕೆಲಸ ಮುಗಿಸಿಕೊಂಡು ಶ್ರೀಸಾಯಿ ಪ್ರೀತಂ ಬಾನೋತ್ ಅವರು ಎಂ.ಜಿ.ರಸ್ತೆಯಿಂದ ಹೆಬ್ಬಾಳ ಮಾರ್ಗವಾಗಿ ತಮ್ಮ ಕಾರಿನಲ್ಲಿ ಹೊರಟಿದ್ದರು. ಈ ವೇಳೆ ಬ್ಯಾಟರಾಯನಪುರ ಸಿಗ್ನಲ್ ಬಳಿ ಕಾರಿನ ಚಾಲಕನೊಬ್ಬ ಆಕ್ಸಲೇಟರ್ ಜೋರಾಗಿ ಒತ್ತಿ ಕಿರಿಕಿರಿ ಉಂಟು ಮಾಡುತ್ತಿದ್ದ. ಅದನ್ನು ದೂರುದಾರ ಪ್ರಶ್ನಿಸಿದ್ದರು. ಇದಕ್ಕೆ ಆಕ್ರೋಶಗೊಂಡಿದ್ದ ಕಾರು ಚಾಲಕ, ಶ್ರೀಸಾಯಿ ಪ್ರೀತಂ ಬಾನೋತ್ ಅವರನ್ನು ಹಿಂಬಾಲಿಸಿಕೊಂಡು ಹೋಗಿದ್ದರು. ಸ್ವಲ್ಪ ದೂರದಲ್ಲೇ ಶ್ರೀಸಾಯಿ ಅವರ ಕಾರು ಅಡ್ಡಗಟ್ಟಿದ್ದ. ಬಳಿಕ, ಆರೋಪಿ ಕಾರು ಚಾಲಕ ಹಾಗೂ ಆತನ ಸ್ನೇಹಿತ ಅವಾಚ್ಯವಾಗಿ ನಿಂದಿಸಿ, ಶ್ರೀಸಾಯಿ ಪ್ರೀತಂ ಅವರ ಮುಖದ ಮೇಲೆ ಹಲ್ಲೆ ನಡೆಸಿದ್ದರು. ಬಳಿಕ, ಕಾರಿನ ಗಾಜು ಒಡೆದು ಪರಾರಿ ಆಗಿದ್ದರು. ಸಿಸಿಟಿವಿ ದೃಶ್ಯಾವಳಿ ಆಧರಿಸಿ ಇಬ್ಬರನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

ಅಪಘಾತ ತಡೆಗೆ ಉನ್ನತ ಶಿಕ್ಷಣ ಇಲಾಖೆ–ನಗರಾಭಿವೃದ್ಧಿ ಇಲಾಖೆ ಚಿಂತನೆ

'ಜ್ಞಾನಭಾರತಿ'ಯಲ್ಲಿ ಸುರಂಗ ರಸ್ತೆ

● ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ವಾಹನಗಳ ದಟ್ಟಣೆ, ಅಪಘಾತ ಪ್ರಕರಣಗಳನ್ನು ತಪ್ಪಿಸಲು ಸುರಂಗ ರಸ್ತೆ (ಅಂಡರ್ ಪಾಸ್) ನಿರ್ಮಿಸುವ ಕುರಿತು ಉನ್ನತ ಶಿಕ್ಷಣ ಇಲಾಖೆ ಹಾಗೂ ನಗರಾಭಿವೃದ್ಧಿ ಇಲಾಖೆಗಳು ಚಿಂತನೆ ನಡೆಸಿವೆ.

1,111 ಎಕರೆ ವಿಸ್ತೀರ್ಣ ಹೊಂದಿರುವ ಜ್ಞಾನಭಾರತಿ ಆವರಣದಲ್ಲೇ ಹಲವು ರಸ್ತೆಗಳು ಹಾದು ಹೋಗುತ್ತವೆ. ಮೈಸೂರು ರಸ್ತೆ (ಜ್ಞಾನಭಾರತಿ ಮೆಟ್ರೊ ರೈಲು ನಿಲ್ದಾಣದ ಬಳಿ)–ಉಲ್ಲಾಳು ವೃತ್ತ ಸಂಪರ್ಕಿಸುವ ಮುಖ್ಯ ರಸ್ತೆ, ನಾಗರಬಾವಿ ಮುಖ್ಯ ವೃತ್ತದಿಂದ ಕಾನೂನು ಕಾಲೇಜು ಮೂಲಕ ಸಾಗುವ ರಸ್ತೆ, ಮಲ್ಲತ್ತಹಳ್ಳಿ ಸಂಪರ್ಕ ರಸ್ತೆ ಸೇರಿ ಹಲವು ರಸ್ತೆಗಳಿವೆ.

ಈ ರಸ್ತೆಗಳಲ್ಲಿ ಬಸ್, ಲಾರಿ, ಕಾರು, ಬೈಕ್ ಸೇರಿದಂತೆ ಎಲ್ಲ ಬಗೆಯ ಭಾರಿ ಹಾಗೂ ಲಘು ವಾಹನಗಳು ಸಂಚರಿಸುತ್ತವೆ. ವಾಹನಗಳ ದಟ್ಟಣೆ ಸದಾ ಇರುತ್ತದೆ. ಜ್ಞಾನಭಾರತಿ ಆವರಣದಲ್ಲಿ ವಿಶ್ವವಿದ್ಯಾಲಯದ 47 ವಿಭಾಗಗಳಿವೆ. ಸ್ನಾತಕೋತ್ತರ, ಸ್ನಾತಕ, ಸಂಶೋಧನೆ ಸೇರಿ 6,000ಕ್ಕೂ ಹೆಚ್ಚು ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ. ಅತಿಥಿ ಉಪನ್ಯಾಸಕರು, ಕಾಯಂ ಅಧ್ಯಾಪಕರು ಸೇರಿ ಒಂದು ಸಾವಿರದಷ್ಟು ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಮಹಿಳಾ ಹಾಸ್ಟೆಲ್‌ಗಳೂ ಸೇರಿ ಒಟ್ಟು ಏಳು ಹಾಸ್ಟೆಲ್‌ಗಳು ಇವೆ.

ಕಾಲೇಜು ಆರಂಭವಾಗುವ ಸಮಯ, ಮುಕ್ತಾಯ ಸಮಯದಲ್ಲಿ ವಿದ್ಯಾರ್ಥಿಗಳ ದಟ್ಟಣೆಯೂ ಅಧಿಕವಾಗಿರುತ್ತದೆ. ಈ ಸಮಯದಲ್ಲಿ ತರಗತಿಗಳಿಗೆ ಹೋಗುವ ಆತುರ, ಕೆಲಸಕ್ಕೆ ಹಾಜರಾಗುವ ಧಾವಂತದಲ್ಲೇ ಬೋಧಕ–ಬೋಧಕೇತರ ಸಿಬ್ಬಂದಿಯೂ ರಸ್ತೆ ದಾಟುತ್ತಾರೆ. ಇದರಿಂದ ವಾರಕ್ಕೆ ಕನಿಷ್ಠ ಎರಡು, ಮೂರು ಅಪಘಾತಗಳು ಸಂಭವಿಸುತ್ತಲೇ ಇವೆ. ಆವರಣದ ಹಾಸ್ಟೆಲ್‌ನಲ್ಲಿದ್ದ ಗಣಿತ ವಿಭಾಗದ ವಿದ್ಯಾರ್ಥಿನಿ ಶಿಲ್ಪಾಶ್ರೀ ತರಗತಿಗೆ ಹಾಜರಾಗಲು ಹೊರಟಿದ್ದಾಗ ಬಿಎಂಟಿಸಿ ಬಸ್ ಡಿಕ್ಕಿ ಹೊಡೆದು ಗಾಯಗೊಂಡು, ನಂತರ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದರು. ಐದು ವರ್ಷಗಳ ಅವಧಿಯಲ್ಲಿ 100ಕ್ಕೂ ಹೆಚ್ಚು ವಿದ್ಯಾರ್ಥಿಗಳು ಅಪಘಾತದಲ್ಲಿ ಗಾಯಗೊಂಡಿದ್ದಾರೆ.

ಈ ಎಲ್ಲ ಬೆಳವಣಿಗೆಗಳ ನಂತರ ಜ್ಞಾನಭಾರತಿ ಆವರಣದ ಒಳಗೆ ಹಾದುಹೋಗುವ ಪ್ರಮುಖ ರಸ್ತೆಗಳನ್ನು ಸಂಪೂರ್ಣ ಬಂದ್ ಮಾಡಿ, ಆವರಣದ ಒಳಗೆ ಸುರಂಗ ರಸ್ತೆಗಳನ್ನು ನಿರ್ಮಿಸುವುದಕ್ಕಾಗಿ ವಿಶ್ವವಿದ್ಯಾಲಯ, ಸರ್ಕಾರದ ಮೊರೆ ಹೋಗಿದೆ.

'ವಿಶ್ವವಿದ್ಯಾಲಯದ ಒಳಗಿನ ರಸ್ತೆಗಳು ಅಪಾಯಕಾರಿಯಾಗಿವೆ. ಹೊರಗಿನ ಕಾಲೇಜು ಸೇರಿದ ವಿದ್ಯಾರ್ಥಿಗಳಿಗೆ ಅರಿವು ಮೂಡಿಸುವ ಕೆಲಸ ನಿತ್ಯ ಮಾಡುತ್ತಿದ್ದೇವೆ. ಸ್ವಲ್ಪ ಯಾಮಾರಿದರೂ ಜೀವಕ್ಕೆ ಅಪಾಯ. ಸುರಂಗ ರಸ್ತೆ ನಿರ್ಮಿಸಿದರೆ ಅನುಕೂಲವಾಗುತ್ತದೆ' ಎನ್ನುತ್ತಾರೆ ಅಂತಿಮ ವರ್ಷದ ಸ್ನಾತಕೋತ್ತರ ವಿದ್ಯಾರ್ಥಿ ಹರೀಶ್.



ಬೆಂಗಳೂರು ವಿಶ್ವವಿದ್ಯಾಲಯದ ಆವರಣದಲ್ಲಿ ರಸ್ತೆ ದಾಟಲು ವಿದ್ಯಾರ್ಥಿಗಳ ಹರಸಾಹಸ – ಪ್ರಜಾವಾಣಿ ಚಿತ್ರ

ಮುಖ್ಯಾಂಶಗಳು

- ಆವರಣದೊಳಗೆ ನಿತ್ಯವೂ ವಾಹನಗಳ ದಟ್ಟಣೆ
- ವಾರಕ್ಕೆ ಕನಿಷ್ಠ ಎರಡು, ಮೂರು ಅಪಘಾತ
- 6 ಸಾವಿರ ವಿದ್ಯಾರ್ಥಿಗಳ ತಾಣ ಜ್ಞಾನಭಾರತಿ

ಜ್ಞಾನಭಾರತಿ ಆವರಣದಲ್ಲಿ ಸುರಂಗ ಮಾರ್ಗ ನಿರ್ಮಿಸಿದರೆ ಅಪಘಾತ ಮುಕ್ತ ವಲಯವಾಗಲಿದೆ. ವಿದ್ಯಾರ್ಥಿಗಳಲ್ಲಿನ ಭಯವೂ ನಿವಾರಣೆಯಾಗಲಿದೆ
ಎಸ್‌.ಎಂ. ಜಯಕರ, ಕುಲಪತಿ

ಆವರಣದಲ್ಲಿ ವಿದ್ಯಾರ್ಥಿಗಳು ವೇಗವಾಗಿ ದ್ವಿಚಕ್ರವಾಹನ ಓಡಿಸುತ್ತಾರೆ. ಹಲವರು ಹೆಲ್ಮೆಟ್ ಧರಿಸುವುದಿಲ್ಲ. ಸುರಕ್ಷತೆ ಬಗ್ಗೆ ಅವರೂ ಗಮನ ನೀಡಬೇಕು.
ಪರಮೇಶ್ ಪಿ.ಎಂ, ನಾಗರಿಕ, ಮಲ್ಲತ್ತಹಳ್ಳಿ

ರಾತ್ರಿ 9ರ ನಂತರ ಮೂರು ರಸ್ತೆ ಬಂದ್

ಅಪಘಾತ ತಪ್ಪಿಸಲು ವಿಶ್ವವಿದ್ಯಾಲಯ ಆಡಳಿತ ಹಲವು ಕ್ರಮಗಳನ್ನು ಕೈಗೊಂಡರೂ, ಅಪಘಾತ ಪ್ರಕರಣಗಳು ಸಂಭವಿಸುತ್ತಲೇ ಇವೆ. ಅಪಘಾತಗಳ ಹೆಚ್ಚಳದ ನಂತರ ರಾತ್ರಿ 9ರಿಂದ ಬೆಳಿಗ್ಗೆ 5ರವರೆಗೆ ಆವರಣದ ರಸ್ತೆಗಳನ್ನು ಬಂದ್ ಮಾಡಲಾಗುತ್ತಿದೆ.

ಮೈಸೂರು ರಸ್ತೆ–ಉಲ್ಲಾಳು ವೃತ್ತ ಸಂಪರ್ಕಿಸುವ ಮುಖ್ಯ ರಸ್ತೆ ಮಾತ್ರ ತೆರೆದಿರುತ್ತದೆ. ಆದರೆ, ಇಂತಹ ಕ್ರಮಗಳಿಂದ ಕಾಲೇಜು ಅವಧಿಯಲ್ಲಿ ನಡೆಯುತ್ತಿರುವ ಅಪಘಾತ ತಪ್ಪಿಸಲು ಸಾಧ್ಯವಾಗಿಲ್ಲ. ರಸ್ತೆಗಳನ್ನು ಬಂದ್ ಮಾಡುವುದರ ರಾಜಕೀಯ ಒತ್ತಡವೂ ಇದೆ ಎನ್ನುತ್ತಾರೆ ವಿಶ್ವವಿದ್ಯಾಲಯದ ಅಧಿಕಾರಿಗಳು.

ವಿಶ್ವವಿದ್ಯಾಲಯದ ಆವರಣ ಹೊರತಾಗಿ ಪರ್ಯಾಯ ಮಾರ್ಗದಲ್ಲಿ ವಾಹನಗಳು ಸಂಚರಿಸುವ ಕ್ರಮ ಕೈಗೊಳ್ಳುವಂತೆ ವಿದ್ಯಾರ್ಥಿಗಳು ಹಲವು ಬಾರಿ ನಡೆಸಿದ ಪ್ರತಿಭಟನೆಗಳಿಗೂ ಫಲ ಸಿಕ್ಕಿರಲಿಲ್ಲ.

ಜಾತಿನಿಂದನೆ: ಕ್ರಮಕ್ಕೆ ಆಗ್ರಹ

ಬೆಂಗಳೂರು: ಮಹಿಳಾ ಪೌರಕಾರ್ಮಿಕರ ಮೇಲೆ ದೈಹಿಕ ಹಲ್ಲೆ ಹಾಗೂ ಜಾತಿ ನಿಂದನೆ ಮಾಡಿರುವವರ ಮೇಲೆ ಶೀಘ್ರ ಕ್ರಮ ಕೈಗೊಳ್ಳಬೇಕು ಎಂದು ನಗರ ಪೊಲೀಸ್ ಕಮಿಷನರ್ ಅವರಿಗೆ ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಪತ್ರ ಬರೆದಿದ್ದಾರೆ.

ಬಿಬಿಎಂಪಿ ವಾರ್ಡ್ 72ರ ವ್ಯಾಪ್ತಿಯ ಭಾರತನಗರದ 14ನೇ ಅಡ್ಡರಸ್ತೆಯಲ್ಲಿ ಸೆ.11ರಂದು ಸ್ವಚ್ಛತಾ ಕಾರ್ಯ ನಿರ್ವಹಿಸುತ್ತಿದ್ದ ಶಾಂತಾ, ಲಕ್ಷ್ಮೀ, ಅಣ್ಣಿಯಮ್ಮ, ಮುನಿರತ್ನ, ರಾಮಕ್ಕ ಎಂಬ ಐವರು ಪೌರಕಾರ್ಮಿಕರ ಮೇಲೆ ಸ್ಥಳೀಯ ನಿವಾಸಿ ಚಂದ್ರ ಮತ್ತು ಆತನ ತಾಯಿ ದೈಹಿಕ ಹಲ್ಲೆ ಮಾಡಿದ್ದಾರೆ. ಜಾತಿ ನಿಂದನೆಯ ದೌರ್ಜನ್ಯ ಎಸಗಿದ್ದಾರೆ. ಈ ಪ್ರಕರಣ ಬ್ಯಾಡರಹಳ್ಳಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಈ ಪ್ರಕರಣದ ಬಗ್ಗೆ ಕ್ರಮ ಕೈಗೊಳ್ಳಬೇಕೆಂದು, ನಾಗರಿಕ ಹಕ್ಕುಗಳ ಜಾರಿ ನಿರ್ದೇಶನಾಲಯದ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕರಿಗೆ ಪಾಲಿಕೆಯ ಆರೋಗ್ಯ ಮತ್ತು ನೈರ್ಮಲ್ಯ ವಿಭಾಗದ ವಿಶೇಷ ಆಯುಕ್ತರು ಪತ್ರ ಬರೆದಿದ್ದಾರೆ.

'ಆರೋಗ್ಯಕರ ಸಮಾಜದ ನಿರ್ಮಾಣದಲ್ಲಿ ಪೌರಕಾರ್ಮಿಕರ ಪಾತ್ರ ಅತ್ಯಮೂಲ್ಯವಾದದ್ದು. ಇಂತಹವರ ಮೇಲೆ ಹಲ್ಲೆ, ಜಾತಿ ನಿಂದನೆಯ ದೌರ್ಜನ್ಯ ಎಸಗಿರುವುದು ವಿಷಾದನೀಯ. ಸಂಬಂಧಪಟ್ಟ ಪೊಲೀಸ್ ಅಧಿಕಾರಿಗಳಿಗೆ ನಿರ್ದೇಶನ ನೀಡಿ, ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು' ಎಂದು ಪತ್ರದಲ್ಲಿ ಮನವಿ ಮಾಡಿಕೊಂಡಿದ್ದಾರೆ.

ರೇಷ್ಮೆ ಕೃಷಿ ಪಾಲುದಾರರಿಗೆ ಪ್ರೋತ್ಸಾಹಧನ ಹೆಚ್ಚಿಸಲು ಆಗ್ರಹ

ರೇಷ್ಮೆ ಕೃಷಿ ಪಾಲುದಾರರ ಸಭೆ, ಕೇಂದ್ರ ರೇಷ್ಮೆ ಮಂಡಳಿ ಅಮೃತ ಮಹೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರೇಷ್ಮೆ ಕೃಷಿ ಪಾಲುದಾರರಿಗೆ ಸರ್ಕಾರ ನೀಡುತ್ತಿರುವ ಸಹಾಯಧನ ಬಹಳ ಕಡಿಮೆ ಇದೆ. ಇದನ್ನು ಹೆಚ್ಚಿಸಲು ಕ್ರಮ ಕೈಗೊಳ್ಳಬೇಕು ಎಂದು ರೇಷ್ಮೆ ಮಂಡಳಿ ಸದಸ್ಯ, ಸಂಸದ ಎ.ಜಿ. ಲಕ್ಷ್ಮಿನಾರಾಯಣ ಆಗ್ರಹಿಸಿದರು.

ನಗರದಲ್ಲಿ ಶನಿವಾರ ನಡೆದ ರೇಷ್ಮೆ ಕೃಷಿ ಪಾಲುದಾರರ ಸಭೆ ಮತ್ತು ಕೇಂದ್ರ ರೇಷ್ಮೆ ಮಂಡಳಿ ಅಮೃತ ಮಹೋತ್ಸವ ಆಚರಣೆಯಲ್ಲಿ ಅವರು ಮಾತನಾಡಿದರು.

ಕೃಷಿ ಪಾಲುದಾರರಿಗೆ ನೀಡುತ್ತಿರುವ ಸಾಲ ಸೌಲಭ್ಯವನ್ನು ₹4 ಲಕ್ಷದಿಂದ ₹10 ಲಕ್ಷಕ್ಕೆ ಏರಿಸಬೇಕು. ರೀಲರ್‌ಗಳಿಗೂ ಸಹಾಯಧನವನ್ನು ಏರಿಸಬೇಕು. ರೇಷ್ಮೆಯನ್ನು ಜಿಎಸ್‌ಟಿಯಿಂದ ಹೊರಗಿಡಬೇಕು ಎಂದು ತಿಳಿಸಿದರು.

ಕೇಂದ್ರ ಜವಳಿ ಸಚಿವಾಲಯದ ಜಂಟಿ ಕಾರ್ಯದರ್ಶಿ ಪ್ರಜಕ್ತಾ ಎಲ್. ವರ್ಮಾ ಮಾತನಾಡಿ, 'ಭಾರತದಲ್ಲಿ ವರ್ಷಕ್ಕೆ 39 ಟನ್ ರೇಷ್ಮೆ ಉತ್ಪಾದನೆಯಾಗುತ್ತಿದ್ದು, ವಿಶ್ವದಲ್ಲೇ ಎರಡನೇ ಸ್ಥಾನದಲ್ಲಿದೆ. ರೇಷ್ಮೆ ಕೃಷಿ ಮತ್ತು ಉತ್ಪನ್ನಗಳಲ್ಲಿ ಆಧುನಿಕ ತಂತ್ರಜ್ಞಾನ ಬಳಸಿಕೊಂಡರೆ ಚೀನಾವನ್ನು ಹಿಂದಿಕ್ಕಿ ಮೊದಲ ಸ್ಥಾನಕ್ಕೆ ಭಾರತ ಏರಲಿದೆ' ಎಂದು ತಿಳಿಸಿದರು.

ಕೇಂದ್ರ ಜವಳಿ ಸಚಿವಾಲಯದ ಕಾರ್ಯದರ್ಶಿ ರಚನಾ ಶಾ ಮಾತನಾಡಿ, '32 ದೇಶಗಳಿಗೆ ಭಾರತದಿಂದ ರೇಷ್ಮೆ ರಫ್ತು ಆಗುತ್ತಿದೆ. ₹ 2087 ಕೋಟಿ ರಫ್ತು ವಹಿವಾಟು ನಡೆಯುತ್ತಿದೆ. ರೇಷ್ಮೆಯಿಂದ ಬಟ್ಟೆಯ ಹೊರತಾಗಿ ಅನೇಕ ಉಪ ಉತ್ಪನ್ನಗಳನ್ನು ತಯಾರಿಸಲು ಸಾಧ್ಯ. ಅದಕ್ಕೆ ಸ್ಟಾರ್ಟ್‌ಅಪ್ ಸಹಿತ ಕೇಂದ್ರದ ಅನೇಕ ಯೋಜನೆ ಮೂಲಕ ಪ್ರೋತ್ಸಾಹ ನೀಡಲಾಗುವುದು' ಎಂದರು.

ಮಂಡಳಿಯ ನಿವೃತ್ತ ಸದಸ್ಯ ಕಾರ್ಯದರ್ಶಿ ವಿ. ಬಾಲಸುಬ್ರಹ್ಮಣ್ಯನ್ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ರೇಷ್ಮೆ ಉಪ ಉತ್ಪನ್ನಗಳಾದ 'ಸೆರಿವಿನ್', 'ನಿಮೂರ್ಲ್', 'ಮಿ.ಪ್ರೊ' ಗಳನ್ನು ಬಿಡುಗಡೆ ಮಾಡಲಾಯಿತು. ರೇಷ್ಮೆ ಮಂಡಳಿ ಸದಸ್ಯ ಕಾರ್ಯದರ್ಶಿ ಪಿ. ಶಿವಕುಮಾರ್, ನಿರ್ದೇಶಕಿ ಸಿ. ಮೀನಾಕ್ಷಿ ಕಾರ್ಯಕ್ರಮದ ವಿವರ ನೀಡಿದರು.

ಉದ್ಯಮಿಗಳಿಗೂ ಪ್ರೋತ್ಸಾಹ

'ಭಾರತವು ರೇಷ್ಮೆ ಉಡುಪುಗಳಷ್ಟೇ ಅಲ್ಲದೆ, ಉಪ ಉತ್ಪನ್ನಗಳ ತಯಾರಿಕೆಯಲ್ಲಿಯೂ ಹೆಸರುವಾಸಿಯಾಗಿದೆ. ರೇಷ್ಮೆ ಉದ್ಯಮ, ರೈತರಿಗೆ ಮಾತ್ರವಲ್ಲ ಉದ್ಯಮಿಗಳಿಗೂ ಪ್ರೋತ್ಸಾಹ ದೊರೆಯುತ್ತಿದೆ' ಎಂದು ಸಂಸದ ಈರಣ್ಣ ಬಿ. ಕಡಾಡಿ ಮೆಚ್ಚುಗೆ ವ್ಯಕ್ತಪಡಿಸಿದರು.



ನಗರದ ಜಿಕೆವಿಕೆ ಆವರಣದ ಬಾಬು ರಾಜೇಂದ್ರ ಪ್ರಸಾದ್ ಅಂತರರಾಷ್ಟ್ರೀಯ ಸಮಾವೇಶ ಭವನದಲ್ಲಿ ಕೇಂದ್ರ ರೇಷ್ಮೆ ಮಂಡಳಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಕೇಂದ್ರ ರೇಷ್ಮೆ ಮಂಡಳಿ ನಿವೃತ್ತ ಸದಸ್ಯ ಕಾರ್ಯದರ್ಶಿ ಪಿ. ಬಾಲಸುಬ್ರಹ್ಮಣ್ಯಂ ಅವರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಗೌರವಿಸಲಾಯಿತು. ಕೇಂದ್ರ ರೇಷ್ಮೆ ಮಂಡಳಿಯ ನಿರ್ದೇಶಕಿ ಸಿ. ಮೀನಾಕ್ಷಿ, ಮಂಡಳಿಯ ಸದಸ್ಯ ಮತ್ತು ಸಂಸದ ಎ.ಜಿ. ಲಕ್ಷ್ಮೀನಾರಾಯಣ, ಕೇಂದ್ರ ಜವಳಿ ಸಚಿವಾಲಯದ ಸದಸ್ಯ ಕಾರ್ಯದರ್ಶಿ ಪಿ.ಶಿವಕುಮಾರ್, ಕಾರ್ಯದರ್ಶಿ ರಚನಾ ಶಾ ಮತ್ತು ಜಂಟಿ ಕಾರ್ಯದರ್ಶಿ ಪ್ರಜಕ್ತ ಎಲ್. ವರ್ಮಾ ಪಾಲ್ಗೊಂಡಿದ್ದರು – ಪ್ರಜಾವಾಣಿ ಚಿತ್ರ

ಬೀದಿ ನಾಯಿಗಳಿಗೆ ಮೈಕ್ರೊ ಚಿಪ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮತ್ತಿಕೆರೆ ಮತ್ತು ಮಲ್ಲೇಶ್ವರ ವ್ಯಾಪ್ತಿಯಲ್ಲಿ ಬೀದಿ ನಾಯಿಗಳಿಗೆ ಪ್ರಾಯೋಗಿಕವಾಗಿ ಮೈಕ್ರೊ ಚಿಪ್ ಅಳವಡಿಸಲಾಯಿತು.

ಮೈಕ್ರೊ ಚಿಪ್ ತಂತ್ರಜ್ಞಾನದಿಂದ ನಾಯಿಯ ವಾಸಸ್ಥಳ, ಲಸಿಕೆ ನೀಡಿದ ದಿನಾಂಕ, ಸಂತಾನ ಶಕ್ತಿಹರಣ ಶಸ್ತ್ರಚಿಕಿತ್ಸೆ ಮಾಡಿದ ದಿನಾಂಕ ಹಾಗೂ ಇನ್ನಿತರ ಅಂಶಗಳನ್ನು ಶಾಶ್ವತವಾಗಿ ಸಂಗ್ರಹಿಸಬಹುದು ಎಂದು ಆರೋಗ್ಯ ಹಾಗೂ ಪಶುಪಾಲನಾ ವಿಭಾಗದ ವಿಶೇಷ ಆಯುಕ್ತ ಸುರಳ್ಕರ್ ವಿಕಾಸ್ ಕಿಶೋರ್ ತಿಳಿಸಿದರು.

ಮೈಕ್ರೊ ಚಿಪ್ ತಂತ್ರಜ್ಞಾನವನ್ನು ಈಗಾಗಲೇ ಹಲವಾರು ಸ್ಥಳೀಯ ಸಂಸ್ಥೆಗಳು ಬೀದಿ ನಾಯಿಗಳಿಗೆ ಅಳವಡಿಸಿ ಕೊಂಡಿದ್ದು, ಬಿಬಿಎಂಪಿ ವ್ಯಾಪ್ತಿಯಲ್ಲಿ ಬಿಜ್ ಆರ್ಬಿಟ್ ಸಂಸ್ಥೆಯ ಸಹಯೋಗದೊಂದಿಗೆ ಪ್ರಾಯೋಗಿಕವಾಗಿ ಬೀದಿ ನಾಯಿಗಳಿಗೆ ಶನಿವಾರದಿಂದ ಅಳವಡಿಸಲಾಗುತ್ತಿದೆ ಎಂದರು.

'ಮೈಕ್ರೊ ಚಿಪ್ ಒಂದು ಅಕ್ಕಿಕಾಳು ಗಾತ್ರದ ಸಾಧನವಾಗಿದ್ದು, ಪ್ರಾಣಿಗಳಲ್ಲಿ ಶಾಶ್ವತ ಗುರುತಿನ ವಿಧಾನವಾಗಿರುತ್ತದೆ. ಇದನ್ನು ಪ್ರಾಣಿಗಳ ಚರ್ಮದ ಕೆಳಗೆ ಇಂಜೆಕ್ಷನ್ ಮೂಲಕ ಇರಿಸಲಾಗುವುದು. ಇದರಿಂದ ಯಾವುದೇ ರೀತಿಯ ಅಡ್ಡ ಪರಿಣಾಮ ಬೀರುವುದಿಲ್ಲ. ಪ್ರಾಣಿಗಳ ಜೀವನ ಪರ್ಯಂತ ಶಾಶ್ವತ ಗುರುತಾಗಿ ಬಳಸಬಹುದಾಗಿರುತ್ತದೆ. ಇದು ಪ್ರಪಂಚದಾದ್ಯಂತ ಬಳಸಲಾಗುವ ಯೂನಿಕ್ ಸಂಖ್ಯೆಯಾಗಿರುತ್ತದೆ' ಎಂದು ತಿಳಿಸಿದರು.

ಪ್ರಾಯೋಗಿಕವಾಗಿ ಪ್ರಾರಂಭಿಸಲಾಗಿರುವ ಮೈಕ್ರೊ ಚಿಪ್ ಅಳವಡಿಸುವ ಕಾರ್ಯ ಯಶಸ್ವಿಯಾದರೆ, ಅದನ್ನು ಪಾಲಿಕೆಯ ಎಲ್ಲಾ ವಲಯಗಳಲ್ಲಿರುವ ಬೀದಿ ನಾಯಿಗಳಿಗೆ ಅಳವಡಿಸಲಾಗುತ್ತದೆ. ಪಾಲಿಕೆ ವತಿಯಿಂದ ಬೀದಿ ನಾಯಿಗಳಿಗೆ ಸಂಯೋಜಿತ ಲಸಿಕಾ ಕಾರ್ಯಕ್ರಮ ಹಮ್ಮಿಕೊಳ್ಳಲು ಉದ್ದೇಶಿಸಲಾಗಿದೆ ಎಂದರು.

ಪ್ರಸ್ತುತ ಲಸಿಕೆ ಹಾಕಿದ ಬೀದಿನಾಯಿಗಳಿಗೆ ಬಣ್ಣವನ್ನು ಬಳಸಿ ಗುರುತಿಸಲಾಗುತ್ತಿದ್ದು, ಒಂದು ವಾರ ಮಾತ್ರ ಬಣ್ಣದ ಗುರುತು ಪತ್ತೆಹಚ್ಚಬಹುದಾಗಿರುತ್ತದೆ. ಆದ್ದರಿಂದ ಬೀದಿನಾಯಿಗಳಿಗೆ ಪದೇ ಪದೇ ಲಸಿಕೆ ಹಾಕುವ ಸಾಧ್ಯತೆಯಿರುತ್ತದೆ. ಮೈಕ್ರೊ ಚಿಪ್ ತಂತ್ರಜ್ಞಾನದಿಂದ ಈ ನ್ಯೂನತೆಯನ್ನು ಸರಿಪಡಿಸಬಹುದಾಗಿರುತ್ತದೆ. ನಾಯಿಗಳಿಗೆ ಲಸಿಕೆ ಹಾಕಿರುವ ಮಾಹಿತಿಯನ್ನು ನಿಖರವಾಗಿ ತಿಳಿಯಬಹುದಾಗಿರುತ್ತದೆ ಎಂದು ಹೇಳಿದರು.

ನಿಂತಿದ್ದ ಕ್ಯಾಂಟರ್‌ಗೆ ಡಿಕ್ಕಿ: ವ್ಯಕ್ತಿ ಸಾವು

ಪ್ರಜಾವಾಣಿ ವಾರ್ತೆ

ನೆಲಮಂಗಲ: ರಾಷ್ಟ್ರೀಯ ಹೆದ್ದಾರಿ ಟಿಸಿಐ ಬಳಿ ಪಂಚರ್ ಆಗಿ ರಸ್ತೆ ಬದಿ ನಿಂತಿದ್ದ ಕ್ಯಾಂಟರ್‌ಗೆ ತುಮಕೂರು ಕಡೆಯಿಂದ ಬಂದ ಕ್ಯಾಂಟರ್ ಡಿಕ್ಕಿ ಹೊಡೆದ ಪರಿಣಾಮ ಚಿತ್ರದುರ್ಗದ ಬಿ.ಎನ್.ಗಂಗಾಧರ್ (50) ಮೃತಪಟ್ಟಿದ್ದಾರೆ.

ಗಂಗಾಧರ್ ಅವರ ಕ್ಯಾಂಟರ್ ಬೆಳಗಿನ ಜಾವ 5.30ರ ಸುಮಾರಿನಲ್ಲಿ ಪಂಚರ್ ಆಗಿ ರಸ್ತೆ ಬದಿ ನಿಲ್ಲಿಸಿಕೊಂಡಿದ್ದರು. ಕೆಳಗೆ ಇಳಿದು ವೀಕ್ಷಿಸುತ್ತಿದ್ದ ಗಂಗಾಧರ್ ಮೇಲೆ ಮಸ್ತಾನ್ ಅಲಿ ಚಾಲನೆ ಮಾಡುತ್ತಿದ್ದ ಕ್ಯಾಂಟರ್ ಹರಿದು ಸ್ಥಳದಲ್ಲೇ ಮೃತರಾಗಿದ್ದಾರೆ. ಜೊತೆಯಲ್ಲಿದ್ದ ಓಬಣ್ಣ, ಕ್ಯಾಂಟರ್ ಚಾಲಕ ಮಸ್ತಾನ್ ಅಲಿ, ಮುಜೀಬ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿವೆ. ಚಾಲಕನ ಅತಿ ವೇಗ ಹಾಗೂ ಅಜಾರೂಕತೆಯ ಚಾಲನೆಯೇ ಈ ಅಪಘಾತಕ್ಕೆ ಕಾರಣ ಎಂದು ಪೊಲೀಸರು ತಿಳಿಸಿದ್ದಾರೆ.

ಗೃಹಿಣಿ ಕೊಲೆ: ಪತಿ ಬಂಧನ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕೌಟುಂಬಿಕ ವಿಚಾರಕ್ಕೆ ಗೃಹಿಣಿಯೊಬ್ಬರ ಕೊಲೆ ಮಾಡಲಾಗಿದ್ದು, ಕೊಲೆ ಆರೋಪದ ಅಡಿ ಅವರ ಪತಿಯನ್ನು ಮೈಕೊ ಲೇಔಟ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಿಟಿಎಸ್ ಲೇಔಟ್ ನಿವಾಸಿ ಸಮೀರಾ(40) ಕೊಲೆಯಾದ ಗೃಹಿಣಿ. ಅವರ ಪತಿ ಸೈಯದ್ ಜಮೀರ್ ಎಂಬುವರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

'ಪೇಟಿಂಗ್ ಕೆಲಸ ಮಾಡುತ್ತಿದ್ದ ಸೈಯದ್ ಜಮೀರ್ ಅವರು, 15 ವರ್ಷದ ಹಿಂದೆ ಸಮೀರಾ ಅವರನ್ನು ಮದುವೆ ಆಗಿದ್ದರು. ದಂಪತಿಗೆ ಇಬ್ಬರು ಮಕ್ಕಳಿದ್ದಾರೆ. ಕೆಲವು ದಿನಗಳಿಂದ ದಂಪತಿ ನಡುವೆ ಕೌಟುಂಬಿಕ ವಿಚಾರವಾಗಿ ಜಗಳ ನಡೆಯುತ್ತಿತ್ತು. ಶುಕ್ರವಾರ ರಾತ್ರಿ 11 ಗಂಟೆ ಸುಮಾರಿಗೆ ಮದ್ಯ ಅಮಲಿನಲ್ಲಿದ್ದ ಆರೋಪಿ, ಪತ್ನಿ ಜತೆಗೆ ಜಗಳ ಮಾಡಿದ್ದಾರೆ. ಅದು ವಿಕೋಪಕ್ಕೆ ಹೋದಾಗ, ಪತ್ನಿಯ ಕುತ್ತಿಗೆ ಬಿಗಿದು ಕೊಲೆ ಮಾಡಿ ಪರಾರಿಯಾಗಿದ್ದರು' ಎಂದು ಪೊಲೀಸರು ಹೇಳಿದರು.

ವಿಷಯ ತಿಳಿದು ಸ್ಥಳಕ್ಕೆ ಬಂದ ಸಮೀರಾ ಸಹೋದರ ಮೈಕೊ ಲೇಔಟ್ ಠಾಣೆಗೆ ದೂರು ನೀಡಿದ್ದರು. ನಡೆಸಿ, ಪ್ರಕರಣ ದಾಖಲಿಸಿಕೊಂಡ ಪೊಲೀಸರು ಆರೋಪಿಯನ್ನು ಶನಿವಾರ ಬೆಳಿಗ್ಗೆ ಬಂಧಿಸಿದ್ದಾರೆ.

ಪ್ರೀತಿ ವಿಚಾರಕ್ಕೆ ಗಲಾಟೆ: ಕೊಲೆ

ಪ್ರಜಾವಾಣಿ ವಾರ್ತೆ



ವರುಣ್

ಬೆಂಗಳೂರು: ಗೆದ್ದಲಹಳ್ಳಿಯಲ್ಲಿ ಒಂದೇ ಕೊಠಡಿಯಲ್ಲಿ ವಾಸವಿದ್ದ ಸ್ನೇಹಿತರ ಮಧ್ಯೆ ಗಲಾಟೆ ನಡೆದು ಯುವಕನನ್ನು ಕೊಲೆ ಮಾಡಲಾಗಿದ್ದು, ಸಂಜಯನಗರ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ವರುಣ್ ಕೋಟ್ಯಾನ್ (24) ಕೊಲೆಯಾದ ಯುವಕ. ಕೊಲೆ ಪ್ರಕರಣದ ಸಂಬಂಧ ದಿವೇಶ್‌ನನ್ನು ಪೊಲೀಸರು ಬಂಧಿಸಿದ್ದಾರೆ. ವರುಣ್ ತಲೆಯ ಮೇಲೆ ಕಲ್ಲು ಎತ್ತಿಹಾಕಿ ಕೊಲೆ ಮಾಡಲಾಗಿತ್ತು ಎಂದು ಪೊಲೀಸರು ಹೇಳಿದರು.

ಬಾಗಲೂರಿನ ಕಂಪನಿಯೊಂದರ ಕೆಲಸ ಮಾಡುತ್ತಿದ್ದ ವರುಣ್ ಹಾಗೂ ಆರೋಪಿ ದಿವೇಶ್ ಒಂದು ವರ್ಷದಿಂದ ಗೆದ್ದಲಹಳ್ಳಿಯ ಬಾಡಿಗೆ ಮನೆಯಲ್ಲಿ ವಾಸ ವಿದ್ದರು. ಯುವತಿಯೊಬ್ಬಳ ವಿಚಾರವಾಗಿ ವರುಣ್ ಕೊಲೆ ನಡೆದಿದೆ ಎಂಬುದು ತನಿಖೆಯಿಂದ ಗೊತ್ತಾಗಿದೆ ಎಂದರು.

'ಯುವತಿಯೊಬ್ಬಳನ್ನು ದಿವೇಶ್ ಪ್ರೀತಿಸುತ್ತಿದ್ದ. ಇತ್ತೀಚೆಗೆ ಆಕೆ ದಿವೇಶ್‌ನಿಂದ ದೂರವಾಗಿದ್ದಳು. ಬಳಿಕ, ವರುಣ್‌ನನ್ನು ಪ್ರೀತಿಸುತ್ತಿದ್ದಳು ಎನ್ನಲಾಗಿದೆ. ಇದೇ ವಿಚಾರಕ್ಕೆ ಶುಕ್ರವಾರ ರಾತ್ರಿ ಸ್ನೇಹಿತರಿಬ್ಬರ ನಡುವೆ ಜಗಳವಾಗಿದೆ. ಶನಿವಾರ ಬೆಳಿಗ್ಗೆಯೂ ಜಗಳ ಮಾಡಿಕೊಂಡಿದ್ದರು. ಮನೆಯಿಂದ ಹೊರಬಂದಾಗ ಸಿಟ್ಟಿಗೆದ್ದ ಆರೋಪಿ ದಿವೇಶ್, ವರುಣ್‌ನ ತಲೆ ಮೇಲೆ ಕಲ್ಲು ಎತ್ತಿ ಹಾಕಿ ಕೊಲೆ ಮಾಡಿದ್ದಾನೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ..

ಸುಪ್ರೀಂ ಕೋರ್ಟ್‌ನ ಸಿಜೆ ಡಿ.ವೈ. ಚಂದ್ರಚೂಡ್ ಬೇಸರ

'ವಿರಳ ಕಾಯಿಲೆ ಬಗ್ಗೆ ಅರಿವಿನ ಕೊರತೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ವಂಶವಾಹಿ ಸಂಬಂಧಿ ಸಮಸ್ಯೆಯಿಂದ ದೇಶದಲ್ಲಿ ಲಕ್ಷಾಂತರ ಮಂದಿ ವಿರಳ ಕಾಯಿಲೆ ಎದುರಿಸುತ್ತಿದ್ದಾರೆ. ಈ ಕಾಯಿಲೆ ಬಗ್ಗೆ ಜಾಗೃತಿ ಮೂಡಿಸಿ, ಕೈಗೆಟಕುವ ದರದಲ್ಲಿ ಜೀನ್ ಥೆರಪಿ ಚಿಕಿತ್ಸೆ ಒದಗಿಸಬೇಕಿದೆ' ಎಂದು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ (ಸಿಜೆಐ) ಡಿ.ವೈ. ಚಂದ್ರಚೂಡ್ ತಿಳಿಸಿದರು.

ನಾರಾಯಣ ನೇತ್ರಾಲಯ ಫೌಂಡೇಷನ್ ವಿವಿಧ ಸಂಸ್ಥೆಗಳ ಸಹಯೋಗದಲ್ಲಿ ನಗರದಲ್ಲಿ ಶನಿವಾರ ಹಮ್ಮಿಕೊಂಡಿದ್ದ 'ಜೀನ್ ಥೆರಪಿ ಮತ್ತು ಪ್ರೆಸಿಷನ್ ಮೆಡಿಸಿನ್' ಸಮ್ಮೇಳನ ಉದ್ಘಾಟಿಸಿ, ಮಾತನಾಡಿದರು.

'ವಿರಳ ಕಾಯಿಲೆಗೆ ಜೀನ್ ಥೆರಪಿ ಪರಿಹಾರ ಒದಗಿಸಲಾಗಿದೆ. ವಿದೇಶದಲ್ಲಿ ಈ ಥೆರಪಿಗೆ ₹7 ಕೋಟಿಗೂ ಅಧಿಕ ವೆಚ್ಚವಾಗಿದೆ. ವಿರಳ ಕಾಯಿಲೆ ಗುರುತಿಸಿ, ಚಿಕಿತ್ಸೆ ಒದಗಿಸುವುದು ಸವಾಲಾಗಿದೆ. ಕಾಯಿಲೆ ಬಗ್ಗೆ ಜಾಗೃತಿ ಮೂಡದಿರುವುದು ಹಾಗೂ ಆದ್ಯತೆ ಸಿಗದಿರುವುದೇ ಇದಕ್ಕೆ ಕಾರಣ. ಈ ಕಾಯಿಲೆಯ ಬಗ್ಗೆ ನಿರ್ದಿಷ್ಟ ವ್ಯಾಖ್ಯಾನವೂ ಇಲ್ಲ. ಜೀನ್ ಥೆರಪಿಯು ರೋಗದ ಬೆಳವಣಿಗೆಗೆ ಕಾರಣವಾಗಿರುವ ದೋಷಯುಕ್ತ ಜೀನ್‌ಗಳನ್ನು ರೋಗ-ಶಾಸ್ತ್ರೀಯವಾಗಿ ಸರಿಪಡಿಸುವ ಚಿಕಿತ್ಸಾ ವಿಧಾನವಾಗಿದೆ. ವಿದೇಶಗಳಲ್ಲಿ ದುಬಾರಿಯಾಗಿರುವ ಈ ಥೆರಪಿಗೆ ಇಲ್ಲಿನ ತಂತ್ರಜ್ಞಾನವನ್ನು ಸ್ಥಳೀಯವಾಗಿ ಬಳಸಿಕೊಂಡು, ಚಿಕಿತ್ಸಾ ವೆಚ್ಚವನ್ನು ಕಡಿತ ಮಾಡಬೇಕು' ಎಂದರು.

'ದೇಶದಲ್ಲಿ ಪ್ರತಿ 10 ಸಾವಿರ ಮಕ್ಕಳಲ್ಲಿ ಒಬ್ಬರು ವಿರಳ ಕಾಯಿಲೆಗೆ ಒಳಗಾಗುತ್ತಿದ್ದಾರೆ. ಜೀನ್ ಥೆರಪಿ ಹಾಗೂ ವಿರಳ ಕಾಯಿಲೆಗೆ ಸಂಬಂಧಿಸಿದಂತೆ ಸಮಾಜದಲ್ಲಿ ಮೊದಲು ಜಾಗೃತಿ ಮೂಡಬೇಕಿದೆ. ಹಲವರಿಗೆ ವಂಶವಾಹಿ ಸಂಬಂಧಿ ಸಮಸ್ಯೆ ಇರುವುದು ತಡವಾಗಿ ತಿಳಿಯಲಿದೆ. ಇದರಿಂದ ಅವರು ಭವಿಷ್ಯದಲ್ಲಿ ಬೇರೆಯವರನ್ನು ಅವಲಂಬಿಸಬೇಕಾಗುತ್ತದೆ. ಆದ್ದರಿಂದ ರೋಗ ಮತ್ತು ಚಿಕಿತ್ಸೆಯ ನಡುವಿನ ಅಂತರವನ್ನು ಹೋಗಲಾಡಿಸಬೇಕು. ಸಂಶೋಧನಾ ಸಂಸ್ಥೆಗಳು, ಔಷಧ ಕಂಪನಿಗಳು ಹಾಗೂ ಸರ್ಕಾರ ಒಟ್ಟಾಗಿ ಸಂಶೋಧನೆ ನಡೆಸಿ, ಥೆರಪಿಯನ್ನು ಆವಿಷ್ಕಾರ ಮಾಡಬೇಕು' ಎಂದು ಹೇಳಿದರು.

ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಅವರು ಮಾತನಾಡಿ, 'ಸಿಕಲ್–ಸೆಲ್, ಅನೀಮಿಯಾ ಸೇರಿ ವಿವಿಧ ವಿರಳ ಕಾಯಿಲೆಗಳಿದ್ದು, ಈ ಕಾಯಿಲೆಗೆ ಚಿಕಿತ್ಸಾ ವೆಚ್ಚ ದುಬಾರಿ. ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಪ್ರಗತಿಯಿಂದ ಜೀನ್ ಥೆರಪಿಯಂತಹ ಚಿಕಿತ್ಸಾ ವಿಧಾನ ಚೇತರಿಕೆಗೆ ನೆರವಾಗುತ್ತಿದೆ. ಕೋಟ್ಯಾಂತರ ರೂಪಾಯಿ ವೆಚ್ಚಮಾಡಿ, ಈ ಥೆರಪಿಯನ್ನು ಪಡೆಯಲು ಎಲ್ಲರಿಗೂ ಸಾಧ್ಯವಾಗುವುದಿಲ್ಲ. ಇದರ ವೆಚ್ಚವನ್ನು ತಗ್ಗಿಸುವ ಸವಾಲು ನಮ್ಮ ಮುಂದಿದೆ. ಈ ವಿರಳ ಕಾಯಿಲೆಗೆ ಒಳಗಾದವರಿಗೆ ಚಿಕಿತ್ಸೆಗೆ ಸಂಬಂಧಿಸಿದಂತೆ ಸರ್ಕಾರ ಅಗತ್ಯ ನೆರವು ನೀಡಲಿದೆ' ಎಂದು ಹೇಳಿದರು.



ಸಮ್ಮೇಳನದಲ್ಲಿ ನ್ಯಾ.ಡಿ.ವೈ. ಚಂದ್ರಚೂಡ್ ಅವರನ್ನು ಕರ್ನಾಟಕ ಆಪ್ತಾಲ್ಮಿಕ್ ಸೊಸೈಟಿ ಅಧ್ಯಕ್ಷ ಡಾ. ಕೃಷ್ಣ ಪ್ರಸಾದ್ ಕೂಡ್ಲು ಸನ್ಮಾನಿಸಿದರು. ದಿನೇಶ್ ಗುಂಡೂರಾವ್, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್, ಕಲ್ಪನಾ ದಾಸ್, ಶಾಸಕ ಶ್ರೀನಿವಾಸ್ ಎನ್‌.ಟಿ. ಹಾಗೂ ಡಾ. ರೋಹಿತ್ ಶೆಟ್ಟಿ ಉಪಸ್ಥಿತರಿದ್ದರು – ಪ್ರಜಾವಾಣಿ ಚಿತ್ರ

'ಸಂಶೋಧನೆಗೆ ಪ್ರಯೋಗಾಲಯ'

'ದೋಷಪೂರಿತ ವಂಶವಾಹಿ ಸರಿಪಡಿಸುವುದೇ ಜೀನ್ ಥೆರಪಿ. ಔಷಧದಿಂದ ನಿವಾರಿಸಲಾಗದ ರೋಗವನ್ನು ಈ ಥೆರಪಿ ವಾಸಿ ಮಾಡಲಿದೆ. ಈ ಥೆರಪಿಗೆ ಸಂಬಂಧಿಸಿದಂತೆ ಸಂಶೋಧನೆಗೆ ನಮ್ಮಲ್ಲಿ ಅತ್ಯಾಧುನಿಕ ಪ್ರಯೋಗಾಲಯ ನಿರ್ಮಿಸಲಾಗಿದ್ದು, ಭವಿಷ್ಯದಲ್ಲಿ ಲಕ್ಷಾಂತರ ರೋಗಿಗಳಿಗೆ ನೆರವಾಗಲಿದೆ' ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ. ರೋಹಿತ್ ಶೆಟ್ಟಿ ಹೇಳಿದರು.

ಬುಡಕಟ್ಟು ಜನರ ಸರಾಸರಿ ಆಯಸ್ಸು 58 ವರ್ಷ

ಬುಡಕಟ್ಟು ಮಾನವ ಅಭಿವೃದ್ಧಿ ವರದಿ ಬಿಡುಗಡೆ • ಆರೋಗ್ಯದ ವಿಚಾರ– ಅಡಿಯನ್ ಸಮುದಾಯಕ್ಕೆ ಮೊದಲ ಸ್ಥಾನ

• ಎಂ.ಮಹೇಶ



ಮೈಸೂರು: ಬುಡಕಟ್ಟು ಜನರ ಸರಾಸರಿ ಆಯಸ್ಸು 58 ವರ್ಷ.

–ಕೇಂದ್ರ ಬುಡಕಟ್ಟು ಮಂತ್ರಾಲಯದ ಧನ ಸಹಾಯದೊಂದಿಗೆ ಮೈಸೂರು ವಿಶ್ವವಿದ್ಯಾಲಯದ ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ಅಧ್ಯಯನ ಕೇಂದ್ರ ನಡೆಸಿದ ರಾಜ್ಯದ ಮೊದಲ ಬುಡಕಟ್ಟು ಮಾನವ ಅಭಿವೃದ್ಧಿ ವರದಿಯಲ್ಲಿ ಕಂಡುಬಂದಿರುವ ಅಂಶವಿದು.

'ಇದು ಕಳವಳಕಾರಿ' ಎಂದು ವರದಿ ಹೇಳಿದ್ದು, ಬಡತನ, ಕಳಪೆ ಆರೋಗ್ಯ ಸೇವೆ, ಸಾಂಪ್ರದಾಯಿಕ ಆರೋಗ್ಯ ವರ್ತನೆಗಳು, ಅಪೌಷ್ಟಿಕತೆ ಮತ್ತು ಅನೈರ್ಮಲ್ಯವು ಜೀವಿತಾವಧಿ ಮೇಲೆ ಪರಿಣಾಮ ಬೀರುತ್ತಿರುವುದನ್ನು ಗಮನಿಸಲಾಗಿದೆ.

ಮೂರು ವರ್ಷ ರಾಜ್ಯದ 50 ಬುಡಕಟ್ಟು ಸಮುದಾಯಗಳ 6 ಸಾವಿರ ಮಂದಿಯ ಪ್ರಾಥಮಿಕ ಸಮೀಕ್ಷೆಯನ್ನು ನಡೆಸಲಾಗಿದೆ. ಬುಡಕಟ್ಟು ಸಮುದಾಯಗಳು ಆರೋಗ್ಯ, ಶಿಕ್ಷಣ, ಲಿಂಗ, ಉದ್ಯೋಗ ಮತ್ತು ಭಾಗವಹಿಸುವಿಕೆ ಮುಂತಾದ ವಿಚಾರದಲ್ಲಿ ಬಹಳ ಹಿಂದುಳಿದಿರುವುದನ್ನು ಸಹಪ್ರಾಧ್ಯಾಪಕ ಡಿ.ಸಿ ನಂಜುಂಡ ಮತ್ತು ಮಂಡ್ಯ ಸ್ನಾತಕೋತ್ತರ ಕೇಂದ್ರದ ಪ್ರೊ.ಜಿ.ಎಸ್. ಪ್ರೇಮ್‌ಕುಮಾರ್ ತಂಡದ 682 ಪುಟಗಳ ವರದಿ ತಿಳಿಸಿದೆ. ಅದರ ಮುಖ್ಯಾಂಶ 'ಪ್ರಜಾವಾಣಿ'ಗೆ ಲಭ್ಯವಾಗಿದೆ.

ಸ್ಥಿತಿ ಹೇಗಿದೆ?: ಮಾನವ ಅಭಿವೃದ್ಧಿ ರ‍್ಯಾಂಕಿಂಗ್ ಪಟ್ಟಿ ಪ್ರಕಾರ ಆರೋಗ್ಯದ ವಿಚಾರದಲ್ಲಿ ಅಡಿಯನ್ ಸಮುದಾಯ ಮೊದಲ ಸ್ಥಾನದಲ್ಲಿದ್ದರೆ, ಜೇನು ಕುರುಬರು ಕೊನೆಯಲ್ಲಿದ್ದಾರೆ. ಬೆಂಗಳೂರು ಗ್ರಾಮಾಂತರ ಜಿಲ್ಲೆ ಪ್ರಥಮ ಹಾಗೂ ಗದಗ ಜಿಲ್ಲೆ ಕೊನೆ ಸ್ಥಾನದಲ್ಲಿದೆ.

'ಶೈಕ್ಷಣಿಕ ವಿಷಯದಲ್ಲಿ ಕೊಡಗಿನ ಜೇನುಕುರುಬ ಸಮುದಾಯ ಮೊದಲ ಸ್ಥಾನದಲ್ಲಿದ್ದು, ಕಥೋಡಿ ಕಥಕರಿ ಸಮುದಾಯ ಕೊನೆಯಲ್ಲಿದೆ. ಜಿಲ್ಲಾವಾರು ಬೆಂಗಳೂರು ಗ್ರಾಮಾಂತರ ಮೊದಲ ಸ್ಥಾನದಲ್ಲಿದ್ದರೆ, ಬೆಳಗಾವಿ ಕೊನೆಯ ಸ್ಥಾನದಲ್ಲಿದೆ. ಜೀವನದ ಗುಣಮಟ್ಟದ ವಿಷಯದಲ್ಲಿ ಜೇನುಕುರುಬ (ಕೊಡಗು) ಪ್ರಥಮ ಸ್ಥಾನದಲ್ಲಿದ್ದರೆ, ಕಥೋಡಿ ಕತ್ಕರಿ ಸಮುದಾಯ ಕಡೆಯ ಸ್ಥಾನದಲ್ಲಿದೆ. ಈ ವಿಚಾರದಲ್ಲಿ ಬೆಂಗಳೂರು ಗ್ರಾಮಾಂತರ ಮೊದಲ ಸ್ಥಾನದಲ್ಲಿದ್ದರೆ, ಹಾಸನ ಕೊನೆಯಲ್ಲಿದೆ' ಎಂದು ವರದಿ ಹೇಳಿದೆ.

'ದೇಶದ 2ನೇ ಹಾಗೂ ರಾಜ್ಯದ ಮೊದಲನೇ ವರದಿ ನಮ್ಮದು. ಸಮೀಕ್ಷೆಗೆಂದು ಮಂತ್ರಾಲಯವು ₹30 ಲಕ್ಷ ನೀಡಿದ್ದು, ವರದಿಯನ್ನು ಸಲ್ಲಿಸಲಾಗಿದೆ. ಮಾನವ ಅಭಿವೃದ್ಧಿ ಸೂಚ್ಯಂಕಗಳಲ್ಲಿ ಬುಡಕಟ್ಟು ಸಮುದಾಯದಲ್ಲಿ ಅಸಮಾನತೆ ಕಳವಳಕಾರಿ ಆಗಿರುವುದನ್ನು ಗಮನಿಸಲಾಗಿದೆ. ಕೇರಳ ರಾಜ್ಯ 2010ರಲ್ಲಿ ಇಂತಹ ವರದಿ ಹೊರತಂದಿತ್ತು' ಎಂದು ಡಿ.ಸಿ. ನಂಜುಂಡ ತಿಳಿಸಿದರು.

'ಸಾಮಾನ್ಯವಾಗಿ ಮಾನವ ಅಭಿವೃದ್ಧಿ ವರದಿಯನ್ನು ಸಂಪೂರ್ಣವಾಗಿ ದ್ವಿತೀಯ ದಾಖಲೆಗಳ ಮೂಲಕ ನಡೆಸಲಾಗುತ್ತದೆ. ಆದರೆ, ನಮ್ಮ ವರದಿ ಪ್ರಾಥಮಿಕ ದತ್ತಾಂಶಗಳನ್ನು ಆಧರಿಸಿದೆ. ಅತ್ಯಾಧುನಿಕ ತಂತ್ರಾಂಶ ಬಳಸಿ ದತ್ತಾಂಶಗಳನ್ನು ವಿಶ್ಲೇಷಿಸಲಾಗಿದೆ' ಎಂದು ಪ್ರೇಮ್‌ಕುಮಾರ್ ಹೇಳಿದರು.

ಮುಖ್ಯಾಂಶಗಳು

- ಕೇಂದ್ರದಿಂದ ₹ 30 ಲಕ್ಷ ಬಿಡುಗಡೆ
- ಮೂರು ವರ್ಷಗಳವರೆಗೆ ಅಧ್ಯಯನ
- 682 ಪುಟಗಳ ವರದಿ ಸರ್ಕಾರಕ್ಕೆ ಸಲ್ಲಿಕೆ



2011ರ ಜನಗಣತಿ ವರದಿ ಆಧರಿಸಿದರೆ, ರಾಜ್ಯದ ಕೆಲವು ಸೂಕ್ಷ್ಮ ಬುಡಕಟ್ಟು ಸಮುದಾಯಗಳು ಕಣ್ಮರೆಯಾಗಿರುವುದು ಅಥವಾ ಪತ್ತೆಯಾಗದಿರುವುದು ಕಂಡುಬಂದಿದೆ

ಡಿ.ಸಿ. ನಂಜುಂಡ, ಸಹ ಪ್ರಾಧ್ಯಾಪಕ, ಸಾಮಾಜಿಕ ಹೊರಗುಳಿಯುವಿಕೆ ಮತ್ತು ಒಳಗೊಳ್ಳುವಿಕೆ ಅಧ್ಯಯನ ಕೇಂದ್ರ, ಮೈಸೂರು ವಿಶ್ವವಿದ್ಯಾಲಯ

ವರದಿಯ ಮುಖ್ಯಾಂಶಗಳು

- ಶೇ 31.55ರಷ್ಟು ಬುಡಕಟ್ಟು ಮಂದಿ ಮೀಸಲಾತಿ ಸೌಲಭ್ಯಗಳನ್ನು ಈವರೆಗೂ ಪಡೆದಿಲ್ಲ.
- ಶೇ 17.29ರಷ್ಟು ಮಂದಿಗೆ ಮೀಸಲಾತಿ ಸೌಲಭ್ಯಗಳ ಬಗ್ಗೆ ಮಾಹಿತಿಯೇ ಇಲ್ಲ.
- ಪರಡಿ, ಡೋಂಗ್ರಿ ಗೆರಾಸಿಯಾ, ಮೇದ, ಇರುಳಿಗ, ಕಣಿಯಾನ್ ಮತ್ತು ಸಿದ್ದಿ ಬುಡಕಟ್ಟುಗಳ ಹೆಚ್ಚಿನ ಮಂದಿಗೆ ಮೀಸಲಾತಿಯ ಅರಿವಿಲ್ಲ. ಹೀಗಾಗಿ, ಅರ್ಹ ಬುಡಕಟ್ಟುಗಳಿಗೆ ಒಳಮೀಸಲಾತಿ ನೀಡುವ ಬಗ್ಗೆ ಚಿಂತಿಸಬೇಕು ಎಂಬ ಸಲಹೆಯನ್ನು ವರದಿಯಲ್ಲಿ ನೀಡಲಾಗಿದೆ.

ಸಲಹೆಗಳೇನು?

- ಬುಡಕಟ್ಟು ಸಹಕಾರ ಮಾರಾಟ ಅಭಿವೃದ್ಧಿ ಒಕ್ಕೂಟ (ಟ್ರೈಫೆಡ್) ಮತ್ತು ಬುಡಕಟ್ಟು ವಿವಿಧೋದ್ದೇಶ ಸಹಕಾರ ಸಂಘಗಳು (ಲ್ಯಾಂಪ್ಸ್) ಬಲವರ್ಧನೆಯಾಗಬೇಕು.
- ಈ ಎರಡೂ ಸಂಸ್ಥೆಗಳಿಗೆ ಸರ್ಕಾರದಿಂದ ನಿರಂತರ ಅನುದಾನ ಮತ್ತು ಪ್ರೋತ್ಸಾಹ ಸಿಗಬೇಕು.
- 'ವನ್ ಧನ್ ವಿಕಾಸ ಕೇಂದ್ರ'ಗಳ ಸ್ಥಾಪನೆ ಯೋಜನೆಯ ಅನುಷ್ಠಾನ ಅಗತ್ಯ.
- ಪಿಎಂ–ಜನ್‌ಮನ್ ಯೋಜನೆ ಸಮರ್ಪಕ ಜಾರಿಯಾಗಬೇಕು.
- ಬುಡಕಟ್ಟು ಸಂಶೋಧನೆ ವಿಚಾರದಲ್ಲಿ 2011ರಲ್ಲಿ ಸ್ಥಾಪನೆಗೊಂಡ ಮೈಸೂರಿನ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಮತ್ತಷ್ಟು ಸಕ್ರಿಯವಾಗಬೇಕು. ಹೆಚ್ಚಿನ ಮಾನವ ಸಂಪನ್ಮೂಲ ಒದಗಿಸಬೇಕು.
- ಸರ್ಕಾರದ ಕಾರ್ಯಕ್ರಮಗಳು ಕುರಿತು ಬುಡಕಟ್ಟು ಜನರಲ್ಲಿ ಜಾಗೃತಿ ಮೂಡಿಸಬೇಕು.

ಹಲವು ಕಾಯಿಲೆಗಳು

ಹಲವರು ಮಲೇರಿಯಾ, ಕಾಲರಾ, ಕಾಮಾಲೆ ಮತ್ತು ಟೈಫಾಯಿಡ್‌ನಿಂದ ಬಳಲುತ್ತಿದ್ದಾರೆ. ಶೇ 54ಕ್ಕಿಂತ ಹೆಚ್ಚು ಆದಿವಾಸಿಗಳಿಗೆ ಅಪೌಷ್ಟಿಕತೆ ಇದೆ. ಶೇ 47ರಷ್ಟು ಗರ್ಭಿಣಿಯರು ಲಸಿಕೆಯನ್ನೇ ಪಡೆದಿಲ್ಲ.

ಶೇ 62ರಷ್ಟು ಮಂದಿ ಗುಟ್ಕಾ ವ್ಯಸನಿಗಳು. ಶೇ 3ರಷ್ಟು ಗರ್ಭಿಣಿಯರ ಹೆರಿಗೆ ಮನೆಯಲ್ಲೇ ಆಗಿದೆ. ಶಾಲೆ ಬಿಡುವವರ ಪ್ರಮಾಣ ಆಶ್ರಮ ಶಾಲೆಗಳಲ್ಲಿ ಶೇ 39.3ರಷ್ಟಿದ್ದರೆ, ಏಕಲವ್ಯ ಶಾಲೆಗಳಲ್ಲಿ ಶೇ 21ರಷ್ಟಿದೆ. ಶೇ 73.5ರಷ್ಟು ಮಂದಿಗೆ ಸ್ವಂತ ಮನೆಯೇ ಇಲ್ಲ. ಶೇ 38ರಷ್ಟು ಜನ ಅರಣ್ಯ ಹಕ್ಕುಗಳ ಕಾಯ್ದೆಯಿಂದ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿದ್ದಾರೆ ಎಂದು ಕಂಡುಬಂದಿದೆ.

ನರೇಗಾ ಯೋಜನೆಯು ಶೇ 40ರಷ್ಟು ಮಂದಿಯನ್ನು ಮಾತ್ರವೇ ತಲುಪಿದೆ. ಶೇ 79ರಷ್ಟು ಮಂದಿಗೆ ಶೌಚಾಲಯವಿಲ್ಲ. ಶೇ 18ರಷ್ಟು ಜನರಿಗೆ ಕುಡಿಯುವ ನೀರಿನ ಮೂಲಗಳಿಲ್ಲ. ಶೇ 33ರಷ್ಟು ಮಹಿಳೆಯರು ಕೌಟುಂಬಿಕ ದೌರ್ಜನ್ಯಕ್ಕೆ ಒಳಗಾಗಿದ್ದಾರೆ. ಹಲವರಿಗೆ ಆಧಾರ್ ಮತ್ತು ಮತದಾರರ ಗುರುತಿನ ಚೀಟಿ ಸಿಕ್ಕಿಲ್ಲ.

ಸುದ್ದಿ 2 ನಿಮಿಷ

ವರ್ಷಕ್ಕೆ ಆರು ದಿನ ವೇತನ ಸಹಿತ ಮುಟ್ಟಿನ ರಜೆ: ಶಿಫಾರಸು

ಬೆಂಗಳೂರು: ಸರ್ಕಾರಿ ಹಾಗೂ ಖಾಸಗಿ ಸಂಸ್ಥೆಗಳಲ್ಲಿನ ಉದ್ಯೋಗಸ್ಥ ಮಹಿಳೆಯರಿಗೆ ವರ್ಷಕ್ಕೆ ಆರು ದಿನ ವೇತನ ಸಹಿತ ಮುಟ್ಟಿನ ರಜೆ (ಪಿಎಂಎಲ್) ನೀಡಲು ಕ್ರೈಸ್ಟ್ ವಿಶ್ವವಿದ್ಯಾಲಯದ ಕಾನೂನು ವಿಭಾಗದ ಮುಖ್ಯಸ್ಥೆ ಸಪ್ನಾ ಎಸ್ ಅವರ ಅಧ್ಯಕ್ಷತೆಯ 18 ಸದಸ್ಯರ ಸಮಿತಿ ಶಿಫಾರಸು ಮಾಡಿದೆ.

ಈ ಕುರಿತು ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಕಾರ್ಮಿಕ ಸಚಿವ ಸಂತೋಷ್ ಲಾಡ್, 'ಮುಟ್ಟಿನ ಅವಧಿಯಲ್ಲಿ ಮಹಿಳೆಯರು ಹೇಗೆ ವಿವಿಧ ಶಾರೀರಿಕ ಬದಲಾವಣೆಗಳಿಗೆ ಒಳಗಾಗುತ್ತಾರೆ. ಉದ್ಯೋಗಸ್ಥ ಮಹಿಳೆಯರು ಅನುಭವಿಸುವ ಸಂಕಷ್ಟ, ಸವಾಲುಗಳು, ಕೆಲಸ ಮಾಡುವ ಸ್ಥಳಗಳಲ್ಲಿ ಕೈಗೊಳ್ಳಬೇಕಾದ ಕ್ರಮಗಳು, ಅನುಸರಿಸಬೇಕಾದ ನಿಯಮಗಳು, ವಿಶ್ರಾಂತಿಯ ಅಗತ್ಯತೆ ಕುರಿತು ಸಮಿತಿಯ ವರದಿಯಲ್ಲಿ ಪ್ರಸ್ತಾಪಿಸಲಾಗಿದೆ' ಎಂದರು.

'ಮುಟ್ಟಿನ ರಜೆ ನೀತಿ ಈಗಾಗಲೇ ಬಿಹಾರ, ಕೇರಳ ಮತ್ತು ಒಡಿಶಾದಲ್ಲಿದೆ. ಆ ರಾಜ್ಯಗಳು ಅನುಸರಿಸುತ್ತಿರುವ ನೀತಿಗಳೂ ಸೇರಿದಂತೆ ಮಹಿಳಾಸ್ನೇಹಿ ನಿಯಮ ರೂಪಿಸಲು ಅಗತ್ಯವಾದ ಇನ್ನಷ್ಟು ಮಾಹಿತಿ ಸಂಗ್ರಹಿಸಲಾಗುವುದು. ಸಮಿತಿಯು ವರ್ಷಕ್ಕೆ ಆರು ವೇತನಸಹಿತ ಹಾಗೂ ಆರು ವೇತನರಹಿತ ರಜೆ ನೀಡಲು ಶಿಫಾರಸು ಮಾಡಿದೆ. ತಿಂಗಳಿಗೆ ಒಂದು ಅಥವಾ ವರ್ಷಕ್ಕೆ ಆರು ರಜೆ ನೀಡುವ ಕುರಿತು ನಿರ್ಧಾರ ತೆಗೆದುಕೊಳ್ಳಬೇಕಿದೆ. ಅದಕ್ಕಾಗಿ ಸಾರ್ವಜನಿಕರಿಂದ ಅಭಿಪ್ರಾಯ ಸಂಗ್ರಹಿಸಲಾಗುವುದು' ಎಂದು ಹೇಳಿದರು.

'ವಿವಿಧ ಸಂಘಟನೆಗಳು, ವಲಯಗಳ ಅಭಿಪ್ರಾಯ ಸಂಗ್ರಹಿಸುವ ಜತೆಗೆ, ಸರ್ಕಾರದ ಎಲ್ಲ ಇಲಾಖೆಗಳು ಹಾಗೂ ಖಾಸಗಿ ಕಂಪನಿ, ಕೈಗಾರಿಕೆಗಳ ಜತೆಗೂ ಮಾತುಕತೆ ನಡೆಸಲಾಗುವುದು. ಎಲ್ಲರ ಅಭಿಪ್ರಾಯ ಕಲೆಹಾಕಿ, ಸಿದ್ಧತೆ ಪೂರ್ಣಗೊಂಡ ನಂತರ ಆರ್ಥಿಕ ಇಲಾಖೆಯ ಒಪ್ಪಿಗೆಗೆ ಕಳುಹಿಸಲಾಗುವುದು' ಎಂದರು.



ತುಂಗಭದ್ರಾ: ಬಾಗಿನ ಇಂದು

ಕೊಪ್ಪಳ: ರಾಜ್ಯದ ನಾಲ್ಕು ಜಿಲ್ಲೆಗಳು, ಆಂಧ್ರಪ್ರದೇಶ ಮತ್ತು ತೆಲಂಗಾಣ ರಾಜ್ಯಗಳ ಜೀವನಾಡಿಯಾಗಿರುವ ತುಂಗಭದ್ರಾ ಆಣೆಕಟ್ಟು ಮತ್ತೆ ಭರ್ತಿಯಾಗಿರುವುದರಿಂದ ಮುಖ್ಯಮಂತ್ರಿ ಸಿದ್ದರಾಮಯ್ಯ, ಜಲಸಂಪನ್ಮೂಲ ಸಚಿವರೂ ಆದ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ಭಾನುವಾರ ಬೆಳಿಗ್ಗೆ 11.15ಕ್ಕೆ ಬಾಗಿನ ಅರ್ಪಿಸಲಿದ್ದಾರೆ.

ಇದಕ್ಕಾಗಿ ಕೊಪ್ಪಳ ಹಾಗೂ ವಿಜಯನಗರ ಜಿಲ್ಲಾಡಳಿತ ಸಿದ್ಧತೆ ಮಾಡಿಕೊಂಡಿದೆ. ಜೊತೆಗೆ ಹಲವು ದಿನಗಳ ಹಿಂದೆ 19ನೇ ಕ್ರಸ್ಟ್‌ಗೇಟ್ ಕೊಚ್ಚಿ ಹೋಗಿದ್ದರಿಂದ ದೊಡ್ಡ ಪ್ರಮಾಣದಲ್ಲಿ ನೀರು ಪೋಲಾಗುವುದನ್ನು ಕನ್ನಯ್ಯ ನಾಯ್ಡು ಹಾಗೂ ಅವರ ತಂಡ ತಡೆದಿತ್ತು. ಅವರಿಗೂ ಕೊಪ್ಪಳ ತಾಲ್ಲೂಕಿನ ಮುನಿರಾಬಾದ್‌ನ ಸರ್ಕಾರಿ ಪ್ರೌಢಶಾಲಾ ಮೈದಾನದಲ್ಲಿ ಹಮ್ಮಿಕೊಂಡಿರುವ ಕಾರ್ಯಕ್ರಮದಲ್ಲಿ ಸನ್ಮಾನ ಮಾಡಲಾಗುತ್ತದೆ.

'ಕಳೆದ ತಿಂಗಳು ಬಾಗಿನ ಅರ್ಪಿಸುವ ಕಾರ್ಯಕ್ರಮ ನಡೆಯಬೇಕಿತ್ತು. ಆಗ ಕ್ರಸ್ಟ್‌ಗೇಟ್ ಕೊಚ್ಚಿಹೋಗಿದ್ದರಿಂದ ಆಗಿರಲಿಲ್ಲ. ಉತ್ತಮ ಮಳೆಯಾಗಿ ಮತ್ತೆ ಜಲಾಶಯ ತುಂಬಿದ್ದರಿಂದ ಭಾನುವಾರ ಬಾಗಿನ ಅರ್ಪಿಸಲಾಗುತ್ತದೆ' ಎಂದು ಕೊಪ್ಪಳ ಜಿಲ್ಲಾ ಉಸ್ತುವಾರಿ ಸಚಿವ ಶಿವರಾಜ ತಂಗಡಗಿ ತಿಳಿಸಿದರು.

ಸಂಕ್ಷಿಪ್ತ ಸುದ್ದಿ

ದರೋಡೆ: ಹೆಡ್ ಕಾನ್‌ಸ್ಟೆಬಲ್ ಸೇರಿ 7 ಜನರ ಬಂಧನ

ಬಳ್ಳಾರಿ: ನಗರದಲ್ಲಿ ಸೆ.12ರಂದು ನಡೆದಿದ್ದ ₹38.89 ಲಕ್ಷ ಹಣ, ಆಭರಣ ದರೋಡೆ ಪ್ರಕರಣದಲ್ಲಿ ಬ್ರೂಸ್‌ಪೇಟೆ ಹೆಡ್ ಕಾನ್‌ಸ್ಟೆಬಲ್ ಮಹಬೂಬ್, ಗೃಹರಕ್ಷಕ ದಳದ ಮಾಜಿ ಸಿಬ್ಬಂದಿ ಆರೀಫ್ ಸೇರಿದಂತೆ ಏಳು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ.

'ತೌಸೀಫ್, ಜಾವೀದ್, ಪೀರ, ದಾದಾ ಕಲಂದರ್, ಮುಸ್ತಾಕ್ ಅಲಿ ರೆಹಮಾನ್ ಇನ್ನುಳಿದ ಆರೋಪಿಗಳು. ಇವರಿಂದ ಒಟ್ಟು ₹22.41 ಲಕ್ಷ ಮೌಲ್ಯದ ಹಣ, ಆಭರಣ ವಶಕ್ಕೆ ಪಡೆಯಲಾಗಿದೆ. ಕೃತ್ಯದಲ್ಲಿ ಭಾಗಿಯಾಗಿದ್ದ ಕಾನ್‌ಸ್ಟೆಬಲ್ ಮಹಬೂಬ್ ಅವರನ್ನು ಅಮಾನತು ಮಾಡಲಾಗಿದ್ದು, ಇಲಾಖಾ ತನಿಖೆ ಆರಂಭಿಸಲಾಗಿದೆ. ತಪ್ಪು ಸಾಬೀತಾದರೆ ಅವರನ್ನು ಕರ್ತವ್ಯದಿಂದ ವಜಾಗೊಳಿಸಲಾಗುವುದು ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಡಾ. ಶೋಭಾರಾಣಿ ವಿ.ಜೆ ಅವರು ತಿಳಿಸಿದರು.

ಅರೇಬಿಕ್ ಅಕ್ಷರವುಳ್ಳ ರಾಷ್ಟ್ರಧ್ವಜ; ಎಫ್‌ಐಆರ್ ದಾಖಲು



ಯಲಬುರ್ಗಾ (ಕೊಪ್ಪಳ ಜಿಲ್ಲೆ): ಪಟ್ಟಣದ ಬೀಬಿ ಫಾತಿಮಾ ದರ್ಗಾ ಮೇಲೆ ಅರೇಬಿಕ್ ಅಕ್ಷರಗಳುಳ್ಳ ತ್ರಿವರ್ಣ ಧ್ವಜ ಹಾರಿಸಲಾಗಿದ್ದು, ಈ ಕುರಿತು ಪೊಲೀಸರು ಶನಿವಾರ ಇಬ್ಬರ ವಿರುದ್ಧ ಸ್ವಯಂಪ್ರೇರಿತ ದೂರು ದಾಖಲಿಸಿಕೊಂಡಿದ್ದಾರೆ.

ಯಲಬುರ್ಗಾ ಪಟ್ಟಣದ ಮಹ್ಮದ್ ದಾನೀಶ್ ಖಾಜಿ ಹಾಗೂ ಅವರ ಸಹೋದರ ಮಹ್ಮದ್ ಆದಿನಾನ್ ಖಾಜಿ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

'ಈದ್ ಮಿಲಾದ್ ಆಚರಣೆ ವೇಳೆ ತ್ರಿವರ್ಣ ಧ್ವಜದಲ್ಲಿ ಅಶೋಕ ಚಕ್ರದ ಬದಲಿಗೆ ಅರೇಬಿಕ್ ಅಕ್ಷರದಲ್ಲಿ 'ಲಾ ಇಲ್ಲಾಹ್ ಇಲ್ಲಲಾಹ್, ಮುಹಮ್ಮದುರ್ ರಸೂಲುಲ್ಲಾಹ' ಎಂದು ಬರೆಯಲಾಗಿತ್ತು. ಮದೀನಾ ಮಸೀದಿಯ ಚಿತ್ರವನ್ನು ಸಹ ಧ್ವಜದ ಮೇಲೆ ಚಿತ್ರಿಸಿರುವುದನ್ನು ಆರೋಪಿಗಳು ಒಪ್ಪಿಕೊಂಡಿದ್ದಾರೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸ್ಥಳೀಯ ಪೊಲೀಸ್ ಠಾಣೆಯ ಸಿಬ್ಬಂದಿ ಬಾಳನಗೌಡ ಪೊಲೀಸ್‌ಪಾಟೀಲ ನೀಡಿದ ದೂರಿನ ಮೇಲೆ ಈ ಪ್ರಕರಣ ದಾಖಲಾಗಿದೆ.

ನಾಗಮಂಗಲ: ಬಂಧನ ಭೀತಿಯಿಂದ ಗ್ರಾಮ ತೊರೆದಿದ್ದ ಯುವಕ ಸಾವು

ಗಣೇಶ ಮೂರ್ತಿ ಮೆರವಣಿಗೆ: ಚಾಕು ಇರಿತ

ಪ್ರಜಾವಾಣಿ ವಾರ್ತೆ

ಮಂಡ್ಯ: ತಾಲ್ಲೂಕಿನ ಮಾಚಹಳ್ಳಿಯಲ್ಲಿ ಶುಕ್ರವಾರ ರಾತ್ರಿ ಗಣೇಶ ಮೂರ್ತಿ ಮೆರವಣಿಗೆ ವೇಳೆ ಗ್ರಾಮದ ಸಚಿನ್ ಎಂ.ಸಿ ಮತ್ತು ನಂಜುಂಡಸ್ವಾಮಿ ಅವರಿಗೆ ಚಾಕುವಿನಿಂದ ಇರಿದಿದ್ದು, ಮಂಡ್ಯದ ಮಿಮ್ಸ್ ಆಸ್ಪತ್ರೆಗೆ ದಾಖಲಿಸಲಾಗಿದೆ. ಚಾಕು ಇರಿತದೊಂದಿಗೆ ಕಲ್ಲಿನಿಂದಲೂ ಹಲ್ಲೆ ನಡೆಸಿರುವುದರಿಂದ ಕೈ, ತಲೆ, ಹೊಟ್ಟೆ ಮತ್ತು ಕಣ್ಣಿನ ಭಾಗಕ್ಕೆ ಗಾಯಗಳಾಗಿವೆ.

ಮೆರವಣಿಗೆಯಲ್ಲಿ ನೃತ್ಯ ಮಾಡುತ್ತಿದ್ದ ಇಬ್ಬರ ಮೇಲೆ ಏಕಾಏಕಿ ಯುವಕರ ಗುಂಪೊಂದು ದಾಳಿ ನಡೆಸಿ ಹಲ್ಲೆ ಮಾಡಿದೆ. ಹಳೆಯ ದ್ವೇಷ ಕಾರಣ ಎಂದು ದೂರಲಾಗಿದೆ. ಗ್ರಾಮದ ಮಧು, ಚಿಕ್ಕ ಅಲಿಯಾಸ್ ಪ್ರಜ್ಜು, ರಾಜು, ದರ್ಶನ್, ಲೋಕೇಶ, ಯೋಗೇಶ, ಮಹದೇವಸ್ವಾಮಿ ಎಂಬುವರ ವಿರುದ್ಧ ಶಿವಳ್ಳಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಊರು ತೊರೆದಿದ್ದ ಯುವಕ ಸಾವು: ನಾಗಮಂಗಲದ ಗಲಭೆಯ ಹಿನ್ನೆಲೆಯಲ್ಲಿ ಬಂಧನ ಭೀತಿಯಿಂದ ಗ್ರಾಮ ತೊರೆದಿದ್ದ ಕಿರಣ್ (28) ಪಾರ್ಶ್ವವಾಯುವಿನಿಂದ



ಕಿರಣ್


ಮೃತಪಟ್ಟಿದ್ದು, ಪ್ರಕರಣದಲ್ಲಿ ತಂದೆ ಕುಮಾರ್ ಬಂಧನದಿಂದ ಉಂಟಾದ ಆತಂಕ, ಒತ್ತಡವೇ ಕಾರಣ' ಎಂದು ಕುಟುಂಬಸ್ಥರು ದೂರಿದ್ದಾರೆ. ಕಿರಣ್ ಅವರಿಗೆ ಬೆಂಗಳೂರಿನ ನಿಮ್ಹಾನ್ಸ್ ಆಸ್ಪತ್ರೆಯಲ್ಲಿ ಶುಕ್ರವಾರ ಶಸ್ತ್ರಚಿಕಿತ್ಸೆ ನಡೆದಿತ್ತು.

'ತಂದೆ ಜೈಲಲ್ಲಿದ್ದು, ಮಗ ಮೃತಪಟ್ಟಿರುವುದರಿಂದ ಕುಟುಂಬ ಬೀದಿಗೆ ಬಿದ್ದಿದೆ' ಎಂದು ಕುಟುಂಬಸ್ಥರು ರೋದಿಸಿದರು.

ಆರೋಪಿಯಲ್ಲ: 'ಗಲಭೆ ಪ್ರಕರಣದಲ್ಲಿ ಎ–1 ಆಗಿದ್ದ ಕಿರಣ್ ಮಿದುಳಿಗೆ ಸ್ಟ್ರೋಕ್ ಆಗಿ ಮೃತಪಟ್ಟಿದ್ದಾರೆ' ಎಂದು ಸಾಮಾಜಿಕ ಜಾಲತಾಣದಲ್ಲಿ ಸುಳ್ಳು ಸುದ್ದಿ ಹರಡಲಾಗುತ್ತಿದೆ. ಆದರೆ ಅವರು ಆರೋಪಿಯಲ್ಲ' ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಸ್ಪಷ್ಟಪಡಿಸಿದ್ದಾರೆ.

'ಎ–1 ಆರೋಪಿ ಕಿರಣ್‌ಕುಮಾರ್ ಎಸ್. ಬಿನ್ ಶ್ರೀನಿವಾಸ ಈಗಾಗಲೇ ದಸ್ತಗಿರಿಯಾಗಿ, ಮಂಡ್ಯ ಕಾರಾಗೃಹದಲ್ಲಿ ನ್ಯಾಯಾಂಗ ಬಂಧನಲ್ಲಿದ್ದಾನೆ' ಎಂದಿದ್ದಾರೆ.

'ದ್ವೇಷ ರಾಜಕಾರಣಕ್ಕೆ ಬೆದರಲ್ಲ'



ಆರ್‌.ಅಶೋಕ

ಹಾಸನ: 'ರಾಜ್ಯ ಸರ್ಕಾರದ ವೈಫಲ್ಯವನ್ನು ಮರೆಮಾಚಲು ಬಿಜೆಪಿ ನಾಯಕರ ಮೇಲೆ ಪ್ರಕರಣ ದಾಖಲಿಸಲಾಗುತ್ತಿದೆ. ಇದಕ್ಕೆಲ್ಲ ಬೆದರುವ ಪ್ರಶ್ನೆಯೇ ಇಲ್ಲ. ಯಾರೂ ಅಧಿಕಾರಕ್ಕೆ ಗೂಟ ಹೊಡೆದುಕೊಂಡು ಕೂರಲು ಸಾಧ್ಯವಿಲ್ಲ' ಎಂದು ವಿಧಾನಸಭೆ ಪ್ರತಿಪಕ್ಷದ ನಾಯಕ ಆರ್.ಅಶೋಕ ಪ್ರತಿಪಾದಿಸಿದರು.

ನಗರದಲ್ಲಿ ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿ, 'ರಾಜ್ಯದ ಪೊಲೀಸ್ ಠಾಣೆಗಳು ಕಾಂಗ್ರೆಸ್ ಕಚೇರಿಗಳಂತೆ ಕೆಲಸ ಮಾಡುತ್ತಿವೆ. ಸಚಿವೆ ಶೋಭಾ ಕರಂದ್ಲಾಜೆ, ಶಾಸಕ ಬಸನಗೌಡ ಪಾಟೀಲ ಯತ್ನಾಳ ಹಾಗೂ ನನ್ನ ವಿರುದ್ಧ ಪ್ರಕರಣ ದಾಖಲಿಸಲಾಗಿದೆ. ಕಾನ್‌ಸ್ಟೆಬಲ್ ದೂರು ಕೊಟ್ಟರೆ, ಇನ್‌ಸ್ಪೆಕ್ಟರ್ ಪ್ರಕರಣ ದಾಖಲಿಸುತ್ತಾರೆ. ಪೊಲೀಸರು ಎಚ್ಚರಿಕೆಯಿಂದ ಕೆಲಸ ಮಾಡಬೇಕು' ಎಂದರು.

'ಶಾಸಕ ಮುನಿರತ್ನ ಪ್ರಕರಣದಲ್ಲಿ ಸಿ.ಟಿ.ರವಿ ಹಾಗೂ ನನ್ನ ಹೆಸರನ್ನು ಉಲ್ಲೇಖಿಸಿ ಮಾತನಾಡುತ್ತಿರುವುದು ಎಷ್ಟು ಸರಿ? ಅವರು ಬಿಜೆಪಿ ಸೇರಿ ಐದು ವರ್ಷವಾಗಿದೆ. ಅದಕ್ಕೂ ಮುನ್ನ 20 ವರ್ಷ ಕಾಂಗ್ರೆಸ್‌ನಲ್ಲೇ ಇದ್ದರು. ಉಪ್ಪು ತಿಂದವರು ನೀರು ಕುಡಿಯಲೇಬೇಕು. ರಾಜ್ಯದ ಕಾಂಗ್ರೆಸ್ ಸರ್ಕಾರ ಬಹಳ ದಿನ ಉಳಿಯುವುದಿಲ್ಲ. ಖಜಾನೆ ಲೂಟಿ ಮಾಡುತ್ತಿದ್ದಾರೆ. ಕಾಂಗ್ರೆಸ್ ಶಾಸಕರೇ ಸರ್ಕಾರದ ಆಡಳಿತದ ವಿರುದ್ಧ ಅಸಮಾಧಾನ ವ್ಯಕ್ತಪಡಿಸುತ್ತಿದ್ದು, ಸರ್ಕಾರ ದಿನ ಎಣಿಸುತ್ತಿದೆ' ಎಂದರು.

ಮುತಾಲಿಕ್‌ಗೆ ನಿರ್ಬಂಧ

ಮಂಡ್ಯ: ಜಿಲ್ಲೆಯ ನಾಗಮಂಗಲ ಗಲಭೆಯಲ್ಲಿ ಬಂಧಿತರಾಗಿರುವ ಬದ್ರಿಕೊಪ್ಪಲು ಗ್ರಾಮದ ಹಿಂದೂ ಯುವಕರನ್ನು ಜಿಲ್ಲಾ ಕಾರಾಗೃಹದಲ್ಲಿ ಭೇಟಿ ಮಾಡಲು ಬರುತ್ತಿದ್ದ ಶ್ರೀರಾಮ ಸೇನೆ ಮುಖ್ಯಸ್ಥ ಪ್ರಮೋದ್ ಮುತಾಲಿಕ್ ಅವರನ್ನು ಜಿಲ್ಲೆಯ ಗಡಿಭಾಗ, ಮದ್ದೂರು ತಾಲ್ಲೂಕಿನ ನಿಡಘಟ್ಟ ಬಳಿ ಪೊಲೀಸರು ಶನಿವಾರ ತಡೆದರು.

ಪೊಲೀಸರು ಮುತಾಲಿಕ್ ವಾಹನವನ್ನು ತಡೆದು, ಆದೇಶ ಪತ್ರ ತೋರಿಸಿ ವಾಪಸ್ ಹೋಗುವಂತೆ ತಿಳಿಸಿದರು. ಅವರು ಎಸ್ಪಿ ಮಲ್ಲಿಕಾರ್ಜುನ ಬಾಲದಂಡಿ ಅವರಿಗೆ ಕರೆ ಮಾಡಿ, 'ಮೈಸೂರು ನಗರಕ್ಕೆ ಹೆದ್ದಾರಿ ಮೂಲಕ ತೆರಳಲು ಅನುಮತಿ ನೀಡಬೇಕು' ಎಂದು ಕೋರಿದರು. ನಂತರ ಪೊಲೀಸ್ ಬಂದೋಬಸ್ತ್‌ನಲ್ಲಿ ಜಿಲ್ಲೆಯ ಗಡಿಯನ್ನು ದಾಟಿಸಿ, ಮೈಸೂರಿಗೆ ಕಳಿಸಲಾಯಿತು.

ಅ.5ರವರೆಗೆ ನಿರ್ಬಂಧ: ಗಲಭೆ ಹಿನ್ನೆಲೆಯಲ್ಲಿ ಪ್ರಮೋದ್ ಮುತಾಲಿಕ್ ಅವರು ಅಕ್ಟೋಬರ್ 5ರವರೆಗೆ ಜಿಲ್ಲೆಯನ್ನು ಪ್ರವೇಶಿಸದಂತೆ ನಿರ್ಬಂಧ ವಿಧಿಸಿ ಮಂಡ್ಯ, ಪಾಂಡವಪುರ ಉಪವಿಭಾಗಾಧಿಕಾರಿಗಳು ಪ್ರತ್ಯೇಕ ಆದೇಶ ಹೊರಡಿಸಿದ್ದಾರೆ.

ಪುನೀತ್ ಕೆರೆಹಳ್ಳಿ, ರಘು ವಶಕ್ಕೆ

ತುಮಕೂರು: ಹಿಂದೂ ಮಹಾಗಣಪತಿ ವಿಸರ್ಜನಾ ಮೆರವಣಿಗೆಯಲ್ಲಿ ಭಾಗವಹಿಸಲು ಶನಿವಾರ ನಗರಕ್ಕೆ ಬಂದಿದ್ದ ರಾಷ್ಟ್ರ ರಕ್ಷಣಾ ಪಡೆಯ ಪುನೀತ್ ಕೆರೆಹಳ್ಳಿ ಮತ್ತು ಬಜರಂಗದಳದ ರಘು ಸಕಲೇಶಪುರ ಅವರನ್ನು ಪೊಲೀಸರು ವಶಕ್ಕೆ ಪಡೆದರು.

ಅಹಿತಕರ ಘಟನೆ ನಡೆಯದಂತೆ ಮುಂಜಾಗ್ರತಾ ಕ್ರಮವಾಗಿ ಮೆರವಣಿಗೆಯಲ್ಲಿ ಜಿಲ್ಲೆಯ ಹೊರಗಿನವರ ಪಾಲ್ಗೊಳ್ಳುವಿಕೆಗೆ ನಿರ್ಬಂಧ ವಿಧಿಸಲಾಗಿತ್ತು. ನಿರ್ಬಂಧದ ಮಧ್ಯೆ ಮೆರವಣಿಗೆಯಲ್ಲಿ ಭಾಗವಹಿಸಲು ಬಂದಿದ್ದ ಇಬ್ಬರನ್ನು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೆರವಣಿಗೆ ಸಾಗಿದ ರಸ್ತೆಯುದ್ದಕ್ಕೂ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು. ಮೂರು ಕೆಎಸ್‌ಆರ್‌ಪಿ, ಐದು ಡಿಎಆರ್ ತುಕಡಿಗಳನ್ನು ಭದ್ರತೆಗೆ ನಿಯೋಜಿಸಲಾಗಿತ್ತು.

ಅಪಘಾತ ಪರಿಹಾರ ವಿಳಂಬ ಸಾರಿಗೆ ಸಂಸ್ಥೆ 2 ಬಸ್‌ಗಳು ಜಪ್ತಿ

ಪ್ರಜಾವಾಣಿ ವಾರ್ತೆ

ಸಂಡೂರು (ಬಳ್ಳಾರಿ): ಅಪಘಾತದಲ್ಲಿ ಮೃತಪಟ್ಟ ಕುಟುಂಬಗಳಿಗೆ ಪರಿಹಾರ ಒದಗಿಸಲು ನೀಡಿದ್ದ ಆದೇಶ ಪಾಲನೆ ಮಾಡುವಲ್ಲಿ ವಿಳಂಬ ಮಾಡಿದ ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ಸಂಸ್ಥೆಗೆ (ಕೆಕೆಎಸ್‌ಆರ್‌ಟಿಸಿ) ಸಂಡೂರು ನ್ಯಾಯಾಲಯ ಬಿಸಿ ಮುಟ್ಟಿಸಿದೆ.

ಹೊಸಪೇಟೆ ವಿಭಾಗದ ಎರಡು ಬಸ್‌ಗಳನ್ನು ಜಪ್ತಿ ಮಾಡುವಂತೆ ನ್ಯಾಯಾಲಯ ಇದೇ ಆಗಸ್ಟ್ 16ರಂದು ಆದೇಶ ನೀಡಿತ್ತು. ಅದರಂತೆ ಶನಿವಾರ ಎರಡು ಬಸ್‌ಗಳನ್ನು ಜಪ್ತಿ ಮಾಡಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿದೆ.

2019ರ ಏಪ್ರಿಲ್ 25 ರಂದು ಇಲ್ಲಿನ ಎಚ್.ಆರ್.ಜಿ ಕ್ರಾಸ್ ಬಳಿ ಬೈಕ್



ಜಪ್ತಿ ಮಾಡಲಾದ ಕೆಕೆಎಸ್‌ಆರ್‌ಟಿಸಿ ಹೊಸಪೇಟೆ ವಿಭಾಗದ ಬಸ್ ಬಳಿ ಸಂತ್ರಸ್ತ ಕುಟುಂಬ

ಮತ್ತು ಬಸ್ ಮಧ್ಯೆ ಅಪಘಾತ ಸಂಭವಿಸಿ ಹಗರಿಬೊಮ್ಮನಹಳ್ಳಿ ತಾಲ್ಲೂಕಿನ ನಾಣ್ಯಾಪುರದ ಪಾಂಡುರಂಗ ಮತ್ತು ನಾಗರಾಜ್ ಎಂಬುವರು ಮೃತಪಟ್ಟಿದ್ದರು. ಪಾಂಡುರಂಗ ಕುಟುಂಬಕ್ಕೆ ಹೊಸಪೇಟೆ ವಿಭಾಗವು ₹28.31 ಲಕ್ಷ, ನಾಗರಾಜ ಕುಟುಂಬಕ್ಕೆ ₹30.77 ಲಕ್ಷ ಪರಿಹಾರ ನೀಡಬೇಕೆಂದು 2022ರ ನವೆಂಬರ್ 5 ರಂದು ಆದೇಶ ನೀಡಿತ್ತು.

ಆದರೆ, ಕೆಕೆಎಸ್‌ಆರ್‌ಟಿಸಿ ಆದೇಶ ಪಾಲನೆ ಮಾಡಿರಲಿಲ್ಲ. ಹೀಗಾಗಿ ಶೇ 6ರ ಬಡ್ಡಿ ಸೇರಿ ₹75 ಲಕ್ಷ ಬಾಕಿ ಲೆಕ್ಕ ಹಾಕಿ, ಎರಡು ಬಸ್‌ಗಳನ್ನು ಜಪ್ತಿ ಮಾಡುವಂತೆ ಸಂಡೂರಿನ ಹಿರಿಯ ಶ್ರೇಣಿ ನ್ಯಾಯಾಧೀಶ ಯೋಗೇಶ್ ಆದೇಶಿಸಿದ್ದರು. ವಕೀಲರಾದ ಅರಳಿ ಮಲ್ಲಪ್ಪ ಹಾಗೂ ಹೇಮರೆಡ್ಡಿ ಪ್ರಕರಣದಲ್ಲಿ ಮೃತರ ಕುಟುಂಬಗಳ ಪರ ವಾದ ಮಂಡಿಸಿದ್ದರು.

ಕಲ್ಲು ತೂರಾಟ: ಮತ್ತೆ 18 ಜನರ ಬಂಧನ

ಪ್ರಜಾವಾಣಿ ವಾರ್ತೆ

ದಾವಣಗೆರೆ: 'ನಗರದಲ್ಲಿ ಗುರುವಾರ ರಾತ್ರಿ ಗಣೇಶ ಮೂರ್ತಿ ವಿಸರ್ಜನಾ ಮೆರವಣಿಗೆ ವೇಳೆ ನಡೆದ ಕಲ್ಲು ತೂರಾಟ ಪ್ರಕರಣಕ್ಕೆ ಸಂಬಂಧಿಸಿದಂತೆ ವಿವಿಧ ಪೊಲೀಸ್ ಠಾಣೆಗಳಲ್ಲಿ 6 ಎಫ್‌ಐಆರ್ ದಾಖಲಾಗಿದ್ದು, ಶನಿವಾರ ಮತ್ತೆ 18 ಜನರನ್ನು ಬಂಧಿಸಲಾಗಿದೆ. ಇದರೊಂದಿಗೆ ಬಂಧಿತರ ಸಂಖ್ಯೆ 48ಕ್ಕೆ ಏರಿದೆ.

'ಮೊಬೈಲ್ ವಿಡಿಯೊ, ಸಿ.ಸಿ. ಟಿ.ವಿ ಕ್ಯಾಮೆರಾ ದೃಶ್ಯಾವಳಿ, ಫೋಟೋಗಳ ಪರಿಶೀಲನೆ ನಡೆಸಿದ್ದು, ಇನ್ನುಳಿದ ಆರೋಪಿಗಳನ್ನೂ ಶೀಘ್ರ ಬಂಧಿಸಲಾಗುವುದು' ಎಂದು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಉಮಾ ಪ್ರಶಾಂತ್ ಶನಿವಾರ ಮಾಹಿತಿ ನೀಡಿದರು.



ದಸರಾ ಗೊಂಬೆ ನವರಾತ್ರಿ ಅಂಗವಾಗಿ ಬೆಂಗಳೂರಿನ ಬಸವನಗುಡಿಯ ಮಳಿಗೆಯೊಂದರಲ್ಲಿ ಶನಿವಾರ ದಸರಾ ಗೊಂಬೆಗಳ ಖರೀದಿಯಲ್ಲಿ ತೊಡಗಿದ್ದ ಮಹಿಳೆಯರು -ಪ್ರಜಾವಾಣಿ ಚಿತ್ರ:ರಂಜು ಪಿ

'ಲೋಕಾಯುಕ್ತ: ಹಣ ಕೇಳಿದರೆ ದೂರು ನೀಡಿ'

ಬೆಂಗಳೂರು: 'ಲೋಕಾಯುಕ್ತದ ಹೆಸರಿನಲ್ಲಿ ಕೆಲವು ಖಾಸಗಿ ವ್ಯಕ್ತಿಗಳು ಸರ್ಕಾರಿ ನೌಕರರಿಗೆ ಕರೆ ಮಾಡಿ, ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ. ಅಂತಹ ಕರೆ ಬಂದರೆ ತಕ್ಷಣವೇ ಗಮನಕ್ಕೆ ತನ್ನಿ' ಎಂದು ಲೋಕಾಯುಕ್ತವು ಹೇಳಿದೆ.

'ಸರ್ಕಾರಿ ನೌಕರರಿಗೆ ಕರೆ ಮಾಡಿ, ನಿಮ್ಮ ವಿರುದ್ಧ ಪ್ರಕರಣ ದಾಖಲಿಸದೇ ಇರಲು ಅಥವಾ ಪ್ರಕರಣ ರದ್ದುಪಡಿಸಲು ಹಣ ನೀಡುವಂತೆ ಕೆಲವರು ಒತ್ತಾಯಿಸುತ್ತಿರುವ ಬಗ್ಗೆ ದೂರು ಬಂದಿದೆ. ಲೋಕಾಯುಕ್ತದಿಂದ ಯಾವುದೇ ವ್ಯಕ್ತಿಗಳು ಹಾಗೆ ಕರೆ ಮಾಡುವುದಿಲ್ಲ. ಅಂತಹ ಕರೆ ಬಂದರೆ, ಅದು ವಂಚಕರದ್ದಾಗಿರುತ್ತದೆ' ಎಂದು ಲೋಕಾಯುಕ್ತವು ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಇಂಥದ್ದೇ ಕರೆ ಬಂದ ಬಗ್ಗೆ ಈಚೆಗೆ ಲೋಕಾಯುಕ್ತಕ್ಕೆ ದೂರು ಬಂದಿದ್ದು, ವಿಧಾನಸೌಧ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿರುತ್ತದೆ. ತನಿಖೆ ಆರಂಭಿಸಲಾಗಿದೆ.

ರೋಡ್ ರೋಲರ್ ಹರಿದು ಇಬ್ಬರು ಸಾವು

ಬ್ಯಾಡಗಿ: ತಾಲ್ಲೂಕಿನ ಮೋಟೆಬೆನ್ನೂರು ಬಳಿಯ ರಾಷ್ಟ್ರೀಯ ಹೆದ್ದಾರಿ–48ರಲ್ಲಿ ರಸ್ತೆ ದುರಸ್ತಿ ಕೆಲಸ ನಡೆಯುತ್ತಿದ್ದ ಸ್ಥಳದಲ್ಲಿ ರೋಡ್ ರೋಲರ್ ಮೈ ಮೇಲೆ ಹರಿದು ಇಬ್ಬರು ಕಾರ್ಮಿಕರು ಶನಿವಾರ ಮೃತಪಟ್ಟಿದ್ದಾರೆ.

'ತಾಲ್ಲೂಕಿನ ಅಳಲಗೇರಿ ಗ್ರಾಮದ ಸಿದ್ದು ಕಿಳ್ಳಿಕ್ಯಾತರ (24) ಮತ್ತು ಪ್ರೀತಮ ಕಿಳ್ಳಿಕ್ಯಾತರ (24) ಮೃತರು. ಅವಘಡ ಸಂಬಂಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಬ್ಯಾಡಗಿ ಪೊಲೀಸರು ಹೇಳಿದರು.

'ಒಂದೇ ಗ್ರಾಮದ ನಿವಾಸಿಗಳಾಗಿದ್ದ ಸಿದ್ದು ಹಾಗೂ ಪ್ರೀತಮ, ಸೋದರ ಸಂಬಂಧಿಕರು. ರಾಷ್ಟ್ರೀಯ ಹೆದ್ದಾರಿ ಹಾಗೂ ಇತರೆಡೆ ಕೂಲಿ ಕೆಲಸ ಮಾಡಿಕೊಂಡು ಜೀವನ ಸಾಗಿಸುತ್ತಿದ್ದರು. ಇವರಿಬ್ಬರು ಸಮೇತ ಹಲವು ಕಾರ್ಮಿಕರನ್ನು ರಾಷ್ಟ್ರೀಯ ಹೆದ್ದಾರಿ ದುರಸ್ತೆ ಕೆಲಸಕ್ಕೆ ಕರೆತರಲಾಗಿತ್ತು.'

'ಕಾರ್ಮಿಕರು ರಾಷ್ಟ್ರೀಯ ಹೆದ್ದಾರಿಯಲ್ಲಿ ಕೆಲಸದಲ್ಲಿ ನಿರತರಾಗಿದ್ದರು. ಕೆಲಸ ಮುಗಿಸಿ ಮಧ್ಯಾಹ್ನ ಊಟ ಮಾಡಿ, ವಿಶ್ರಾಂತಿ ಪಡೆಯಲು ರಸ್ತೆ ಬದಿ ಮಲಗಿದ್ದರು. ಇದೇ ಸಂದರ್ಭದಲ್ಲಿ ಚಾಲಕ, ರೋಡ್ ರೋಲರ್ ಅಡ್ಡಾದಿಡ್ಡಿಯಾಗಿ ನಿರ್ಲಕ್ಷ್ಯದಿಂದ ಚಲಾಯಿಸಿದ್ದ. ಇದರಿಂದಾಗಿ ಸಿದ್ದು ಹಾಗೂ ಪ್ರೀತಮ್ ಅವರಿಗೆ ಡಿಕ್ಕಿ ಹೊಡೆದಿದ್ದ ರೋಡ್ ರೋಲರ್‌ನ ಚಕ್ರ, ಅವರಿಬ್ಬರ ಮೈ ಮೇಲೆ ಹರಿದು ಸ್ಥಳದಲ್ಲೇ ಮೃತಪಟ್ಟಿದ್ದಾರೆ' ಎಂದು ತಿಳಿಸಿದರು.

ಕುಸಿದು ಮೂರು ವರ್ಷ ಕಳೆದರೂ ನಿರ್ಮಾಣಗೊಳ್ಳದ ಗುಳ್ಳಾಪುರ ಸೇತುವೆ

ಕಾರ್ಮಿಕರಿಗೆ ಕೃಷಿಕರಿಂದ ತೆಪ್ಪದ ವ್ಯವಸ್ಥೆ

• ವಿಶ್ವೇಶ್ವರ ಗಾಂವ್ಕರ

ಯಲ್ಲಾಪುರ (ಉತ್ತರ ಕನ್ನಡ ಜಿಲ್ಲೆ): ಗಂಗಾವಳಿ ನದಿಗೆ ತಾಲ್ಲೂಕಿನ ಗುಳ್ಳಾಪುರದಲ್ಲಿ ನಿರ್ಮಿಸಿದ್ದ ಸೇತುವೆ ಕುಸಿದು ಬಿದ್ದು ಮೂರು ವರ್ಷ ಕಳೆದರೂ ಸೇತುವೆ ಮರುನಿರ್ಮಾಣಗೊಳ್ಳದ ಹಿನ್ನೆಲೆಯಲ್ಲಿ ನದಿ ದಾಟಲು ಸ್ಥಳೀಯರು ಸ್ವಂತ ವೆಚ್ಚ ಭರಿಸಿ ತೆಪ್ಪ ನಿರ್ಮಿಸಿಕೊಂಡಿದ್ದಾರೆ.

ನದಿತಟದ ಹೆಗ್ಗಾರ, ಶೇವ್ಕಾರ, ಕೈಗಡಿ ಗ್ರಾಮದ ಕೃಷಿಕರು ತಮ್ಮ ಕೃಷಿ ಕೆಲಸಗಳಿಗೆ ಗುಳ್ಳಾಪುರ ಭಾಗದ ಕೂಲಿ ಕಾರ್ಮಿಕರನ್ನು ಅವಲಂಬಿಸಿದ್ದಾರೆ. ಸೇತುವೆ ಇಲ್ಲದ ಕಾರಣ ನದಿ ದಾಟಿ ಗ್ರಾಮಕ್ಕೆ ಬರಲು 15 ಕಿ.ಮೀಗಿಂತಲೂ ಹೆಚ್ಚು ಸುತ್ತಬಳಸಿ ಬರುವ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಸಲುವಾಗಿ ತೆಪ್ಪ ನಿರ್ಮಿಸಿಕೊಳ್ಳಲಾಗಿದೆ ಎಂಬುದಾಗಿ ಗ್ರಾಮಸ್ಥರು ತಿಳಿಸಿದ್ದಾರೆ.

ಗುಳ್ಳಾಪುರದ ಮೂಲಕ ಅಂಕೋಲಾ ಹಾಗೂ ಶಿರಸಿ ತಾಲ್ಲೂಕಿನ ಕೆಲವು ಗ್ರಾಮಗಳಿಗೆ ಸಂಪರ್ಕ ಕಲ್ಪಿಸುವಂತೆ ಗಂಗಾವಳಿ ನದಿಗೆ ಅಡ್ಡಲಾಗಿ ನಿರ್ಮಿಸಲಾಗಿದ್ದ ಸೇತುವೆ 2021ರಲ್ಲಿ ಕುಸಿದಿತ್ತು. ಜನರಿಗೆ ಗುಳ್ಳಾಪುರದಿಂದ ಹೆಗ್ಗಾರಿಗೆ ಮತ್ತು ಹೆಗ್ಗಾರಿನಿಂದ ಗುಳ್ಳಾಪುರಕ್ಕೆ ಹೋಗಲು ರಾಮನಗುಳಿ ಸೇತುವೆ ಏಕಮಾತ್ರ ಸಂಪರ್ಕ ಸಾಧನವಾಗಿದೆ.

'ಗುಳ್ಳಾಪುರದಿಂದ ಹೆಗ್ಗಾರಿಗೆ ಬಂದು ಕೂಲಿ ಕೆಲಸ ಮಾಡುವುದು ದ್ವಿಚಕ್ರವಾಹನ ಹೊಂದಿದ ಕಾರ್ಮಿಕರಿಗೆ ಮಾತ್ರ ಸಾಧ್ಯ. ಅಲ್ಲದೆ ಅದರಿಂದ ಹಣ, ಸಮಯ ವ್ಯರ್ಥವಾಗುತ್ತದೆ. ಇದಕ್ಕಿಂತಲೂ ಮುಖ್ಯವಾಗಿ ಸಣ್ಣ ಪುಟ್ಟ ಕೆಲಸಗಳಿಗೆ ಒಬ್ಬೊಬ್ಬರೇ ಸಾಗುವ ಮಹಿಳಾ ಕಾರ್ಮಿಕರಿಗೆ ಇದರಿಂದ ಹೆಚ್ಚಿನ ಸಮಸ್ಯೆ ಉಂಟಾಗುತ್ತಿದೆ. ಈ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ನಿಟ್ಟಿನಲ್ಲಿ ತೆಪ್ಪದ ವ್ಯವಸ್ಥೆ ಕಲ್ಪಿಸಿಕೊಳ್ಳಲಾಗಿದೆ' ಎಂದು ಹೆಗ್ಗಾರ ಗ್ರಾಮದ ಕೃಷಿಕ ಶಿವರಾಮ ಭಟ್ಟ ಗುಡ್ಡೆ ಹೇಳಿದರು.

'ಕೃಷಿಕರು, ಕೂಲಿ ಕಾರ್ಮಿಕರು ಜತೆಗೂಡಿ ನದಿಗೆ ಅಡ್ಡಲಾಗಿ ಹಗ್ಗ ಕಟ್ಟಿ ತೆಪ್ಪದ ಮೂಲಕ ಸಾಗುವ ಅನುಕೂಲ ಕಲ್ಪಿಸಿಕೊಂಡಿದ್ದೇವೆ. ತೆಪ್ಪದಲ್ಲಿ ಏಕಕಾಲಕ್ಕೆ ಎಂಟು ಜನ ಪ್ರಯಾಣಿಸಬಹುದಾಗಿದೆ. ಕಬ್ಬಿಣದ ಚೌಕಟ್ಟು ನಿರ್ಮಿಸಿ, ಅದಕ್ಕೆ 8 ಪ್ಲಾಸ್ಟಿಕ್ ಡ್ರಮ್‌ಗಳನ್ನು ಎರಡು ಸಾಲಿನಲ್ಲಿ ಅಳವಡಿಸಲಾಗಿದೆ. ಮೇಲ್ಭಾಗವನ್ನು ಪ್ಲೈವುಡ್‌ನಿಂದ ಮುಚ್ಚಲಾಗಿದೆ. ತೆಪ್ಪ ಏರಲು ಅನುಕೂಲವಾಗುವಂತೆ ಅಡಿಕೆ ಮರದ ತುಂಡುಗಳನ್ನು ಕೂರಿಸಲಾಗಿದೆ. ಅಂದಾಜು ₹35 ಸಾವಿರ ವೆಚ್ಚ ತಗುಲಿದೆ' ಎಂದು ವಿವರಿಸಿದರು.



ತೆಪ್ಪವನ್ನು ನದಿಗೆ ಇಳಿಸುತ್ತಿರುವ ಗ್ರಾಮಸ್ಥರು

ಸೇತುವೆ ಮರುನಿರ್ಮಾಣಕ್ಕೆ ಅಗತ್ಯ ಅನುದಾನ ಮಂಜೂರಿಗೆ ಸರ್ಕಾರದ ಮಟ್ಟದಲ್ಲಿ ನಿರಂತರವಾಗಿ ಪ್ರಯತ್ನಿಸಲಾಗುತ್ತಿದೆ

ಶಿವರಾಮ ಹೆಬ್ಬಾರ, ಶಾಸಕ

ಜಾಮೀನು ಕೋರಿ ನಟ ದರ್ಶನ್ ಅರ್ಜಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ ಆರೋಪಿ ದರ್ಶನ್ ಅವರ ಪರ ವಕೀಲರು, ಶನಿವಾರ ಜಾಮೀನು ಕೋರಿ ನಗರದ 57ನೇ ಸಿಸಿಎಚ್ ನ್ಯಾಯಾಲಯಕ್ಕೆ ಅರ್ಜಿ ಸಲ್ಲಿಸಿದರು.

ಹೈಕೋರ್ಟ್ ವಕೀಲ ಎಸ್.ಸುನಿಲ್ ಕುಮಾರ್ ಅವರು ನ್ಯಾಯಾಧೀಶ ಜಯಶಂಕರ ಅವರಿಗೆ ಜಾಮೀನು ಅರ್ಜಿ ಸಲ್ಲಿಸಿದರು. ನ್ಯಾಯಾಧೀಶರು ಪ್ರಾಸಿಕ್ಯೂಷನ್‌ಗೆ ನೋಟಿಸ್ ಜಾರಿಗೊಳಿಸಿ, ಸೆ.23ಕ್ಕೆ ವಿಚಾರಣೆ ಮುಂದೂಡಿದರು.

ಜೂನ್ 8ರಂದು ಪಟ್ಟಣಗೆರೆಯ ಶೆಡ್‌ನಲ್ಲಿ ರೇಣುಕಸ್ವಾಮಿ ಕೊಲೆ ನಡೆದಿತ್ತು. ಕೊಲೆ ಆರೋಪದ ಅಡಿ ಜೂನ್ 11ರಂದು ಮೈಸೂರಿನಲ್ಲಿ ದರ್ಶನ್ ಅವರನ್ನು ಬಂಧಿಸಲಾಗಿತ್ತು.

ತನಿಖಾಧಿಕಾರಿ ಎಸಿಪಿ ಚಂದನ್ ಅವರ ನೇತೃತ್ವದ ತಂಡವು ತನಿಖೆ ನಡೆಸಿ 3,991 ಪುಟಗಳ ದೋಷಾರೋಪ ಪಟ್ಟಿಯನ್ನು ಸೆ.4ರಂದು 24ನೇ ಎಸಿಎಂಎಂ ನ್ಯಾಯಾಲಯಕ್ಕೆ ಸಲ್ಲಿಸಿತ್ತು. ದೋಷಾರೋಪ ಪಟ್ಟಿ ಸಲ್ಲಿಕೆಯಾಗಿ, 18 ದಿನಗಳ ಬಳಿಕ ದರ್ಶನ್ ಅವರು ಜಾಮೀನು ಕೋರಿ ಅರ್ಜಿ ಸಲ್ಲಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ವಿವಿಧೆಡೆ ಮೂರು ದಿನ ಭಾರಿ ಮಳೆ ಸಾಧ್ಯತೆ

ಬೆಂಗಳೂರು: ರಾಜ್ಯದ ವಿವಿಧೆಡೆ ಭಾನುವಾರದಿಂದ ಮೂರು ದಿನಗಳು ಭಾರಿ ಮಳೆಯಾಗುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಕಲಬುರಗಿ, ಯಾದಗಿರಿ, ರಾಯಚೂರು, ಕೊಪ್ಪಳ, ಗದಗ, ಚಿತ್ರದುರ್ಗ, ತುಮಕೂರು, ಚಿಕ್ಕಬಳ್ಳಾಪುರ ಹಾಗೂ ಕೋಲಾರ ಜಿಲ್ಲೆಗೆ ಭಾನುವಾರ 'ಯೆಲ್ಲೊ ಅಲರ್ಟ್' ನೀಡಲಾಗಿದೆ. ಉತ್ತರ ಕನ್ನಡ, ಉಡುಪಿ ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಬಹುತೇಕ ಸ್ಥಳಗಳಲ್ಲಿ ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ ಎಂದು ಇಲಾಖೆ ತಿಳಿಸಿದೆ.

ಸೋಮವಾರವೂ ಕಲಬುರಗಿ ಸೇರಿ ಏಳು ಜಿಲ್ಲೆಗಳಿಗೆ, ಮಂಗಳವಾರ ಉತ್ತರ ಒಳನಾಡಿನ ನಾಲ್ಕು ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ನೀಡಲಾಗಿದೆ.

ಬೆಂಗಳೂರಿನಲ್ಲಿ ಭಾನುವಾರ ಹಾಗೂ ಸೋಮವಾರ ಮೋಡ ಕವಿದ ವಾತಾವರಣ ಇರುವ ಸಾಧ್ಯತೆಯಿದ್ದು, ಸಾಧಾರಣ ಮಳೆಯಾಗುವ ಸಂಭವವಿದೆ ಎಂದು ಇಲಾಖೆ ಹೇಳಿದೆ.

ಕಾಂಗ್ರೆಸ್ ನೋಂದಣಿಗೆ ಬೆಳ್ಳಿ ಗಣಪ: ಬಿಜೆಪಿ

ಬೆಂಗಳೂರು: ಯುವ ಕಾಂಗ್ರೆಸ್ ಸದಸ್ಯತ್ವ ನೋಂದಣಿ ಮಾಡಿಕೊಳ್ಳುವ ಯುವಕ-ಯುವತಿಯರಿಗೆ ಗಣೇಶನ ಚಿತ್ರ ಒಳಗೊಂಡ ಬೆಳ್ಳಿ ಸಾಮಗ್ರಿ ನೀಡಲಾಗುತ್ತಿದೆ ಎಂದು ಬಿಜೆಪಿ ಬೆಂಗಳೂರು ಉತ್ತರ ಜಿಲ್ಲಾ ಘಟಕದ ಅಧ್ಯಕ್ಷ ಎಸ್. ಹರೀಶ್ ಆರೋಪಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿ, 'ಭವಿಷ್ಯ ರೂಪಿಸುವ ಪ್ರಜೆಗಳಿಗೆ ಆಮಿಷ ಒಡ್ಡುವ ಮೂಲಕ ಸದಸ್ಯತ್ವ ನೋಂದಣಿ ಮಾಡಲಾಗುತ್ತಿದೆ. ಗಣಪತಿ ಮೂರ್ತಿ ಮೆರವಣಿಗೆ ವೇಳೆ ಕಲ್ಲು ತೂರಿದವರಿಗೆ ಬೆಂಬಲ ನೀಡುವ ಕಾಂಗ್ರೆಸ್, ಇನ್ನೊಂದೆಡೆ ಬೆಳ್ಳಿ ಗಣೇಶನನ್ನು ನೀಡಿ ಸದಸ್ಯತ್ವ ಮಾಡಿಸುವುದು ವಿಪರ್ಯಾಸ. ಈ ಬಗ್ಗೆ ಕ್ರಮ ಕೈಗೊಳ್ಳಬೇಕು' ಎಂದರು.

ಕೋರ್ಟ್ ಸುದ್ದಿ

ರೇಣುಕಸ್ವಾಮಿ ಕೊಲೆ ಜಾಮೀನು ಅರ್ಜಿ–ಕಾಯ್ದಿರಿಸಿದ ಆದೇಶ

ಬೆಂಗಳೂರು: ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದ 15 ಹಾಗೂ 17ನೇ ಆರೋಪಿಗಳಾದ ಕ್ರಮವಾಗಿ ಕಾರ್ತಿಕ್ ಹಾಗೂ ನಿಖಿಲ್ ಸಲ್ಲಿಸಿದ್ದ ಜಾಮೀನು ಅರ್ಜಿಗಳ ಮೇಲಿನ ಆದೇಶವನ್ನು ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಲಯ ಕಾಯ್ದಿರಿಸಿದೆ.

ಈ ಕುರಿತಂತೆ ಕಾರ್ತಿಕ್ ಮತ್ತು ನಿಖಿಲ್ ಸಲ್ಲಿಸಿದ್ದ ಜಾಮೀನು ಅರ್ಜಿಗಳನ್ನು ಸಿಸಿಎಚ್–57ನೇ ಕೋರ್ಟ್‌ನ ನ್ಯಾಯಾಧೀಶ ಜಯಶಂಕರ್ ಅವರು ಶನಿವಾರ ವಿಚಾರಣೆ ನಡೆಸಿದರು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲ ರಂಗನಾಥ ರೆಡ್ಡಿ, 'ಪ್ರಕರಣದಲ್ಲಿ ಈಗಾಗಲೇ ದೋಷಾರೋಪ ಪಟ್ಟಿ ಸಲ್ಲಿಸಲಾಗಿದೆ. ಅಷ್ಟಕ್ಕೂ, ಅರ್ಜಿದಾರರ ವಿರುದ್ಧ ಹೊರಿಸಲಾಗಿರುವ ಆರೋಪಗಳು ಕಡಿಮೆ ಶಿಕ್ಷೆಯ ಪ್ರಮಾಣದವು ಮತ್ತು ಇವರಿಬ್ಬರೂ ಕೃತ್ಯದಲ್ಲಿ ಭಾಗಿಯಾಗಿಲ್ಲ. ಶವವನ್ನು ಸಾಗಿಸಿದ ನಂತರದ ಸನ್ನಿವೇಶಗಳಲ್ಲಿ ಹಣದ ಆಮಿಷಕ್ಕಾಗಿ ಪ್ರಕರಣದಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿದ್ದಾರೆ. ಆದ್ದರಿಂದ, ಜಾಮೀನು ಮಂಜೂರು ಮಾಡಬೇಕು' ಎಂದರು.

ವಾದ–ಪ್ರತಿವಾದ ಆಲಿಸಿದ ನ್ಯಾಯಾಧೀಶರು, 'ತನಿಖಾಧಿಕಾರಿಗಳು ಪ್ರಕರಣದ ತನಿಖೆಯನ್ನು ತುಂಬಾ ಚೆನ್ನಾಗಿ ನಡೆಸಿ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ' ಎಂದು ಶ್ಲಾಘಿಸಿ ಆದೇಶವನ್ನು ಸೋಮವಾರ (ಸೆ.23) ಪ್ರಕಟಿಸುವುದಾಗಿ ತಿಳಿಸಿದರು.

ಗ್ಯಾರಂಟಿ ಯೋಜನೆ ರಾಜ್ಯದ ಸುರಕ್ಷತೆಗೆ ಅಪಾಯ: ನೇಸರ್ಗಿ

ಬೆಂಗಳೂರು: 'ಕಾಂಗ್ರೆಸ್ ಜಾರಿಗೆ ತಂದಿರುವ ಗ್ಯಾರಂಟಿ ಯೋಜನೆಗಳನ್ನು ಕೊನೆಗೊಳಿಸದೇ ಹೋದರೆ ನಮ್ಮ ರಾಜ್ಯದ ಜನರು ಸುರಕ್ಷಿತವಾಗಿ ಇರುವುದಿಲ್ಲ' ಎಂದು ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಹೈಕೋರ್ಟ್‌ನಲ್ಲಿ ವಾದ ಮಂಡನೆ ವೇಳೆ ಆತಂಕ ವ್ಯಕ್ತಪಡಿಸಿದರು.

'ಸಿದ್ದರಾಮಯ್ಯ ಅವರ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ವರುಣಾ ಹೋಬಳಿ ಕೂಡನಹಳ್ಳಿಯ ಕೆ.ಎಂ.ಶಂಕರ್ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಯನ್ನು ನ್ಯಾಯಮೂರ್ತಿ ಎಸ್. ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಶನಿವಾರ ದಿನವಿಡೀ ವಿಚಾರಣೆ ನಡೆಸಿತು.

'ಸಿದ್ದರಾಮಯ್ಯನವರೇ ಪ್ರಣಾಳಿಕೆ ರೂಪಿಸಿ, ಪ್ರಚಾರ ಮಾಡಿದ್ದಾರೆ. ಗ್ಯಾರಂಟಿ ಯೋಜನೆಗಳ ಕಾರ್ಡ್‌ಗೆ ಸಹಿ ಮಾಡಿರುವುದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ. ಹೀಗಾಗಿ, ಕರ್ನಾಟಕದ ವಿಧಾನಸಭಾ ಚುನಾವಣೆಯನ್ನು ಅನೂರ್ಜಿತಗೊಳಿಸಬೇಕು' ಎಂದು ಕೋರಿದರು.

ಇಡೀ ದಿನದ ಕಲಾಪ ಪೂರ್ತಿ ಪ್ರಮೀಳಾ ನೇಸರ್ಗಿ ಅವರ ವಾದ ಆಲಿಸಿದ ನ್ಯಾಯಪೀಠ, 'ದಸರಾ ರಜೆಯ ಬಳಿಕ ವಿಚಾರಣೆ ಮುಂದುವರಿಸಲಾಗುವುದು' ಎಂದಿತು.

370 ಮೆಗಾವಾಟ್ ವಿದ್ಯುತ್ ಉತ್ಪಾದನಾ ಸಾಮರ್ಥ್ಯ • ₹2,500 ಕೋಟಿ ವೆಚ್ಚದಲ್ಲಿ ನಿರ್ಮಾಣ

24ಕ್ಕೆ ಯಲಹಂಕ ಸ್ಥಾವರ ಲೋಕಾರ್ಪಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯಲಹಂಕದಲ್ಲಿ ಸ್ಥಾಪಿಸಿರುವ 370 ಮೆಗಾವಾಟ್ ಸಾಮರ್ಥ್ಯದ ಯಲಹಂಕ ಸಂಯುಕ್ತ ಆವರ್ತ ವಿದ್ಯುತ್ ಸ್ಥಾವರವನ್ನು (ವೈಸಿಸಿಪಿ) ಸೆ.24ರಂದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಲೋಕಾರ್ಪಣೆ ಮಾಡಲಿದ್ದಾರೆ' ಎಂದು ಇಂಧನ ಸಚಿವ ಕೆ.ಜೆ.ಜಾರ್ಜ್ ಹೇಳಿದ್ದಾರೆ.

ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಕೆಪಿಸಿಎಲ್ ಅಂಗಸಂಸ್ಥೆ ಕೆಪಿಸಿ ಗ್ಯಾಸ್ ಪವರ್ ಕಾರ್ಪೊರೇಷನ್ ಲಿಮಿಟೆಡ್ ಮೂಲಕ ಯಲಹಂಕದ ಕೆಪಿಸಿಎಲ್ ಯೋಜನಾ ಪ್ರದೇಶದಲ್ಲಿ ಈ ವಿದ್ಯುತ್ ಸ್ಥಾವರ ಸ್ಥಾಪಿಸಲಾಗಿದೆ. ಒಟ್ಟು 370 ಮೆ.ವಾ. ಸಾಮರ್ಥ್ಯದ ಈ ಸ್ಥಾವರವನ್ನು ಸುಮಾರು ₹2,500 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗಿದೆ. ಅನಿಲ್ (ಗ್ಯಾಸ್) ಮತ್ತು ಹಬೆ(ಸ್ಟೀಮ್) ಮೂಲಕ ವಿದ್ಯುತ್ ಉತ್ಪಾದಿಸಲಾಗುತ್ತಿದೆ' ಎಂದರು.

'ಗ್ಯಾಸ್ ಟರ್ಬೈನ್ ಮೂಲಕ 237 ಮೆ.ವಾ. ಮತ್ತು ಸ್ಟೀಮ್ ಟರ್ಬೈನ್ ಮೂಲಕ 133 ಮೆ.ವಾ. ವಿದ್ಯುತ್ ಉತ್ಪಾದನೆ ಮಾಡಲಾಗುತ್ತದೆ' ಎಂದು ಮಾಹಿತಿ ನೀಡಿದರು.

'ಹಿಂದೆ ಸಿದ್ದರಾಮಯ್ಯ ನೇತೃತ್ವದ ಸರ್ಕಾರ ಅಧಿಕಾರದಲ್ಲಿದ್ದಾಗ, 2014ರ ಜು.28ರಂದು ಈ ವಿದ್ಯುತ್ ಸ್ಥಾವರ ಅನುಷ್ಠಾನಕ್ಕೆ ಅನುಮೋದನೆ ಸಿಕ್ಕಿತ್ತು. 2016ರಲ್ಲಿ ಸ್ಥಾವರಕ್ಕೆ ಶಂಕುಸ್ಥಾಪನೆ ಮಾಡಲಾಗಿತ್ತು. ಕಳೆದ ಆಗಸ್ಟ್ 8ರಿಂದ ಪೂರ್ಣ ಪ್ರಮಾಣದಲ್ಲಿ (20 ಗಂಟೆಗಳು) ನಿರಂತರ ಕಾರ್ಯಾಚರಣೆ ನಡೆಸುತ್ತಿದ್ದು, ಯಶಸ್ವಿಯಾಗಿದೆ. ಘಟಕದ ಕಾರ್ಯಾಚರಣೆಗೆ ಇದ್ದ ಅಡೆತಡೆಗಳನ್ನು ನಿವಾರಿಸಲಾಗಿದ್ದು, ಈಗ ಅಧಿಕೃತವಾಗಿ ಲೋಕಾರ್ಪಣೆ ಮಾಡಲಾಗುತ್ತಿದೆ' ಎಂದರು.

'ಬಿಡದಿಯಲ್ಲಿ ಸ್ಥಾಪಿಸಲಾಗಿರುವ ತ್ಯಾಜ್ಯದಿಂದ ವಿದ್ಯುತ್ ತಯಾರಿಸುವ (ಡಬ್ಲ್ಯುಟಿಇ– ವೇಸ್ಟ್ ಟು ಎನರ್ಜಿ) ಸ್ಥಾವರ ಉದ್ಘಾಟನೆಗೆ ಸಿದ್ಧವಾಗಿದೆ. ಪ್ರಾಯೋಗಿಕವಾಗಿ ವಿದ್ಯುತ್ ಉತ್ಪಾದನೆಯಾಗುತ್ತಿದೆ. ಶೀಘ್ರದಲ್ಲೇ ಉದ್ಘಾಟಿಸಲಾಗುತ್ತದೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಇಂಧನ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ್ ಗುಪ್ತ ಮಾತನಾಡಿ, 'ಬಿಡದಿ ಡಬ್ಲ್ಯುಟಿಇ ಘಟಕದಲ್ಲಿ 6 ಸಾವಿರ ಟನ್‌ನಷ್ಟು ಒಣ ತ್ಯಾಜ್ಯ ಬಳಕೆ ಮಾಡಿ ಪ್ರಾಯೋಗಿಕವಾಗಿ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ. ಶೀಘ್ರದಲ್ಲೇ ಸ್ಥಾವರವನ್ನು ಲೋಕಾರ್ಪಣೆ ಮಾಡಲಾಗುತ್ತದೆ' ಎಂದರು.

ಬೆಸ್ಕಾಂ ವ್ಯವಸ್ಥಾಪಕ ನಿರ್ದೇಶಕ ಮಹಾಂತೇಶ್ ಬೀಳಗಿ, ಕೆಪಿಸಿಎಲ್ ಮಾನವ ಸಂಪನ್ಮೂಲ ನಿರ್ದೇಶಕ ಸಿ. ನಾಗರಾಜು, ಹಣಕಾಸು ನಿರ್ದೇಶಕ ಆರ್.ನಾಗರಾಜ, ತಾಂತ್ರಿಕ ನಿರ್ದೇಶಕ ಎಸ್.ಕೃಷ್ಣಮೂರ್ತಿ ಉಪಸ್ಥಿತರಿದ್ದರು.

'ಉಚಿತ ವಿದ್ಯುತ್ ನಿಲ್ಲುವುದಿಲ್ಲ'


ಕೆ.ಜೆ.ಜಾರ್ಜ್

'ಸರ್ಕಾರದ ಸಬ್ಸಿಡಿ, ಸೌಲಭ್ಯಗಳು ಸರಿಯಾಗಿ ತಲುಪುತ್ತಿವೆಯೇ ಎಂಬುದನ್ನು ತಿಳಿಯಲು ಕೃಷಿ ಪಂಪ್‌ಸೆಟ್‌ಗಳ ಆರ್‌ಆರ್ ಸಂಖ್ಯೆಗೆ ರೈತರ ಆಧಾರ್ ಸಂಖ್ಯೆ ಜೋಡಿಸಲಾಗುತ್ತಿದೆ' ಎಂದು ಇಂಧನ ಸಚಿವ ಜಾರ್ಜ್ ಸ್ಪಷ್ಟಪಡಿಸಿದರು.

'10 ಎಚ್.ಪಿವರೆಗೆ ಉಚಿತ ವಿದ್ಯುತ್ ನೀಡುವ ಸೌಲಭ್ಯ ಮುಂದುವರಿಯುತ್ತದೆ. ಊಹಾಪೋಹಗಳಿಗೆ ಕಿವಿಗೊಡಬೇಡಿ. ರಾಜ್ಯದಲ್ಲಿ ಶೇ 95ರಷ್ಟು ಕೃಷಿ ಪಂಪ್‌ಸೆಟ್‌ಗಳ ಆರ್. ಆರ್.ಸಂಖ್ಯೆಗೆ ಆಧಾರ್ ನಂಬರ್ ಜೋಡಣೆಯಾಗಿದೆ. ಉಳಿದವುಗಳನ್ನು ಲಿಂಕ್ ಮಾಡುವ ಪ್ರಕ್ರಿಯೆ ನಡೆಯುತ್ತಿದೆ' ಎಂದರು.

ದಲಿತರ ಮೇಲಿನ ದೌರ್ಜನ್ಯ ಹೆಚ್ಚಳ: ಸಾಹಿತಿ ಬರಗೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಮಕಾಲೀನ ಸಂದರ್ಭದಲ್ಲಿಯೂ ದುಃಖ ಆರದ ನೆಲದಲ್ಲಿಯೇ ನಾವು ಬದುಕುತ್ತಿದ್ದೇವೆ. ದಲಿತರ ಮೇಲಿನ ದೌರ್ಜನ್ಯಗಳು ಕಡಿಮೆಯಾಗುವ ಬದಲು ಹೆಚ್ಚಾಗುತ್ತಿರುವುದನ್ನು ನಾವು ಕಾಣುತ್ತಿದ್ದೇವೆ' ಎಂದು ಸಾಹಿತಿ ಬರಗೂರು ರಾಮಚಂದ್ರಪ್ಪ ಅವರು ಕಳವಳ ವ್ಯಕ್ತಪಡಿಸಿದರು.

ಕೌದಿ ಪ್ರಕಾಶನ ಹಾಗೂ ತಮಟೆ ಮೀಡಿಯಾ ಜಂಟಿಯಾಗಿ ನಗರದಲ್ಲಿ ಶನಿವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಸುಬ್ಬು ಹೊಲೆಯಾರ್ ಅವರ 'ದುಃಖ ಆರದ ನೆಲದಲ್ಲಿ' ಪುಸ್ತಕ ಬಿಡುಗಡೆಮಾಡಿ, ಮಾತನಾಡಿದರು.

'ಕೇಂದ್ರ ಸರ್ಕಾರದ ಅಧೀನದಲ್ಲಿರುವ ಎನ್‌ಸಿಆರ್‌ಬಿ ಮಾಹಿತಿ ಪ್ರಕಾರ 2021ರ ನಂತರ ಪರಿಶಿಷ್ಟ ಜಾತಿಗಳ ಮೇಲೆ ನಡೆಯುತ್ತಿರುವ ದೌರ್ಜನ್ಯಗಳು ಶೇ 13.1ರಷ್ಟು ಹೆಚ್ಚಾಗಿದೆ. ದೇಶದಲ್ಲಿ ಪ್ರತಿನಿತ್ಯ ಹತ್ತು ದಲಿತ ಹೆಣ್ಣು ಮಕ್ಕಳ ಮೇಲೆ ಅತ್ಯಾಚಾರಗಳು ನಡೆಯುತ್ತಿದೆ ಎಂದು ಎನ್‌ಸಿಆರ್‌ಬಿ ಹೇಳುತ್ತಿದೆ. ಅದೆಷ್ಟೋ ಪ್ರಕರಣಗಳ ಬಗ್ಗೆ ದೂರು ದಾಖಲಾಗುವುದಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಹಿಂಸಾತ್ಮಕ ಭಾಷೆಗಳ ವಿಜೃಂಭಣೆಯಲ್ಲಿ ನಾವು ಬದುಕುತ್ತಿದ್ದೇವೆ. ಭಾಷಿಕ ಭ್ರಷ್ಟಾಚಾರವನ್ನೂ ಇತ್ತೀಚೆಗೆ ನೋಡುತ್ತಿದ್ದೇವೆ. ಭಾಷೆಯನ್ನು ಕೆಡಿಸುವ ಕೆಲಸ ಹೆಚ್ಚುತ್ತಿದೆ. ಇಂತಹ ಸಂದರ್ಭದಲ್ಲಿ ಜನರನ್ನು ಕೂಡಿಸುವ ಕವಿ ಮನಸ್ಸು ಅಗತ್ಯ. ಸುಬ್ಬು ಹೊಲೆಯಾರ್ ಅವರು ಸ್ವಂತ ಅನುಭವದ ಮೂಲಕ ದಲಿತ ಕಥನವನ್ನು ಕಟ್ಟಿಕೊಟ್ಟಿದ್ದಾರೆ' ಎಂದರು.

ಕೃತಿಯ ಬಗ್ಗೆ ಮೆಚ್ಚುಗೆಯ ಮಾತುಗಳನ್ನಾಡಿದ ಮುಖ್ಯಮಂತ್ರಿ ಆಪ್ತ ಕಾರ್ಯದರ್ಶಿ ನೆಲ್ಲುಕುಂಟೆ ವೆಂಕಟೇಶ್, 'ದೇಶದಲ್ಲಿ ಪ್ರತಿಯೊಬ್ಬರು ತಮ್ಮ ಕಾಲು ಇನ್ನೊಬ್ಬರ ತಲೆಯ ಮೇಲಿದೆಯೆಂಬ ಅಹಂಕಾರ ಹೊಂದಿದ್ದಾರೆ. ಇದರಿಂದಾಗಿ ಕಟ್ಟ ಕಡೆಯ ವ್ಯಕ್ತಿಯ ದುಃಖ ಅರ್ಥವಾಗುತ್ತಿಲ್ಲ. ಕೃತಿ ಆತ್ಮಕಥೆಯ ಮಾದರಿಯಲ್ಲಿದೆ' ಎಂದು ಹೇಳಿದರು.

ಲೇಖಕ ಸುಬ್ಬು ಹೊಲೆಯಾರ್, ಎನ್. ವೆಂಕಟೇಶ್ ಹಾಗೂ ಕೆ.ಪಿ. ಅಶ್ವಿನಿ ಉಪಸ್ಥಿತರಿದ್ದರು.

ಬಂಡವಾಳ ಆಕರ್ಷಣೆಯಲ್ಲಿ ಮುಂಚೂಣಿ

ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿ ಪ್ರದಾನದಲ್ಲಿ ಗೃಹ ಸಚಿವ ಪರಮೇಶ್ವರ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕ ಬಂಡವಾಳ ಹೂಡಿಕೆದಾರರನ್ನು ಆಕರ್ಷಿಸುವ ಕೇಂದ್ರವಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಹೇಳಿದರು.

ಕರ್ನಾಟಕ ವಾಣಿಜ್ಯ ಕೈಗಾರಿಕಾ ಮಹಾಸಂಸ್ಥೆ (ಎಫ್‌ಕೆಸಿಸಿಐ) ಶನಿವಾರ ಆಯೋಜಿಸಿದ್ದ 'ಸಂಸ್ಥಾಪಕರ ದಿನಾಚರಣೆ ಹಾಗೂ ಭಾರತ ರತ್ನ ಸರ್. ಎಂ. ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿ ಪ್ರದಾನ' ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಕೈಗಾರಿಕಾ ಕ್ಷೇತ್ರದಲ್ಲಿ ನೆರೆಯ ರಾಜ್ಯಗಳು ಒಡ್ಡುತ್ತಿರುವ ಸವಾಲಿನ ನಡುವೆಯೂ ನಮ್ಮ ರಾಜ್ಯ ಬಂಡವಾಳ ಹೂಡಿಕೆಯಲ್ಲಿ ಮುಂಚೂಣಿಯಲ್ಲಿದೆ. ನೂತನ ಉದ್ದಿಮೆಗಳ ಸ್ಥಾಪನೆಗೆ ನಮ್ಮ ಸರ್ಕಾರ ಎಲ್ಲ ರೀತಿಯ ಸಹಕಾರ ನೀಡಲಿದೆ.ಯುವಜನರು ಉದ್ದಿಮೆಗಳನ್ನು ಪ್ರಾರಂಭಿಸಬೇಕು. ಇದರಿಂದ ಉದ್ಯೋಗ ಅವಕಾಶಗಳು ಹೆಚ್ಚುತ್ತವೆ' ಎಂದರು.

'ದೇಶದ ಆರ್ಥಿಕತೆಯಲ್ಲಿ ಕರ್ನಾಟಕ ಉತ್ತಮ ಕೊಡುಗೆ ನೀಡುತ್ತಿದೆ. ಸರ್.ಎಂ.ವಿಶ್ವೇಶ್ವರಯ್ಯ ಅವರು ಎಫ್‌ಕೆಸಿಸಿಐ ನಂತಹ ಸಂಸ್ಥೆಯನ್ನು ಸ್ಥಾಪಿಸುವ ಮೂಲಕ ಇದಕ್ಕೆ ಉತ್ತಮ ಬುನಾದಿಯನ್ನು ಹಾಕಿದ್ದಾರೆ. ದೇಶದ ಶೇಕಡ 60ರಷ್ಟು ಸಾಫ್ಟ್‌ವೇರ್ ಉತ್ಪನ್ನಗಳು ಬೆಂಗಳೂರಿನಲ್ಲಿ ತಯಾರಿಸಲಾಗುತ್ತಿದೆ. ಇದು ಸರ್.ಎಂ. ವಿಶ್ವೇಶ್ವರಯ್ಯ ಅವರ ದೂರದೃಷ್ಟಿಯ ಫಲ' ಎಂದು ಹೇಳಿದರು.

'ತುಮಕೂರಿನಲ್ಲಿ ಏಷ್ಯಾದ ಅತಿದೊಡ್ಡ ಕೈಗಾರಿಕಾ ಹಬ್ ನಿರ್ಮಾಣವಾಗುತ್ತಿದೆ. ಇದಕ್ಕಾಗಿಯೇ 20 ಸಾವಿರ ಎಕರೆ ಭೂಮಿ ಸಿದ್ಧಪಡಿಸಲಾಗುತ್ತಿದೆ. ಎಚ್‌ಎಎಲ್ ಸೇರಿದಂತೆ ಪ್ರಮುಖ ಕಂಪನಿಗಳು ಇಲ್ಲಿ ಸ್ಥಾಪನೆಯಾಗಲಿವೆ. ಬೆಂಗಳೂರು ಹೊರತುಪಡಿಸಿ ಬೇರೆ ಪಟ್ಟಣಗಳತ್ತ ಉದ್ಯಮಿಗಳ ಗಮನ ಹರಿಸಬೇಕು' ಎಂದು ಕರೆ ನೀಡಿದರು.

ಇದೇ ಸಂದರ್ಭದಲ್ಲಿ ಶ್ರೀ ಭಾಗ್ಯಲಕ್ಷ್ಮಿ ಕಮರ್ಷಿಯಲ್ ಕಾರ್ಪೊರೇಷನ್‌ನ ಮಾಲೀಕ ಬಿ.ಎ. ಶ್ರೀನಿವಾಸ ಗುಪ್ತ ಮತ್ತು ಶ್ರೀಲಕ್ಷ್ಮಿ ಶ್ರೀನಿವಾಸ ಗುಪ್ತ ದಂಪತಿಗೆ 'ಭಾರತ ರತ್ನ ಸರ್.ಎಂ. ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿ' ಪ್ರದಾನ ಮಾಡಲಾಯಿತು.


ಎಫ್‌ಕೆಸಿಸಿಐ ನೀಡುವ 'ಭಾರತ ರತ್ನ ಸರ್‌ಎಂ. ವಿಶ್ವೇಶ್ವರಯ್ಯ ಸ್ಮಾರಕ ಪ್ರಶಸ್ತಿಯನ್ನು ಭಾಗ್ಯಲಕ್ಷ್ಮಿ ಕಮರ್ಷಿಯಲ್ ಕಾರ್ಪೊರೇಷನ್‌ನ ಮಾಲೀಕ ಬಿ.ಎ. ಶ್ರೀನಿವಾಸ ಗುಪ್ತ ಮತ್ತು ಶ್ರೀಲಕ್ಷ್ಮಿ ಶ್ರೀನಿವಾಸ ಗುಪ್ತ ದಂಪತಿಗೆ ಗೃಹ ಸಚಿವ ಜಿ. ಪರಮೇಶ್ವರ ಪ್ರದಾನ ಮಾಡಿದರು. (ಎಡದಿಂದ) ಎಫ್‌ಕೆಸಿಸಿಐನ ಹಿರಿಯ ಉಪಾಧ್ಯಕ್ಷೆ ಉಮಾ ರೆಡ್ಡಿ, ನಿಯೋಜಿತ ಅಧ್ಯಕ್ಷ ಎಂ.ಜಿ. ಬಾಲಕೃಷ್ಣ, ಮಾಜಿ ಅಧ್ಯಕ್ಷ ಬಿ.ಎಸ್ ಅರುಣ್ ಕುಮಾರ್, ಎಫ್‌ಕೆಸಿಸಿಐ ಅಧ್ಯಕ್ಷ ರಮೇಶ್ ಚಂದ್ರ ಲಾಹೋಟಿ ಇದ್ದರು –ಪ್ರಜಾವಾಣಿ ಚಿತ್ರ

ದಾವಣಗೆರೆ: ಸೆ.24ಕ್ಕೆ ವಿದ್ಯಾರ್ಥಿಗಳ ಸಮಾವೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಯುಬಿಡಿಟಿ ಕಾಲೇಜಿನಲ್ಲಿ ಸೀಟು ಮಾರಾಟ ಮಾಡಲಾಗುತ್ತಿದೆ' ಎಂದು ಆರೋಪಿಸಿರುವ ಆಲ್ ಇಂಡಿಯಾ ಡೆಮಾಕ್ರೆಟಿಕ್ ಸ್ಟೂಡೆಂಟ್ ಆರ್ಗನೈಸೇಷನ್(ಎಐಡಿಎಸ್‌ಒ), ಸೆ.24 ರಂದು ದಾವಣಗೆರೆಯ ಕುವೆಂಪು ಕನ್ನಡ ಭವನದಲ್ಲಿ ವಿದ್ಯಾರ್ಥಿಗಳ ಸಮಾವೇಶ ಹಮ್ಮಿಕೊಂಡಿದೆ.

ನಗರದಲ್ಲಿ ಶನಿವಾರ ಪತ್ರಿಕಾ ಗೋಷ್ಠಿಯಲ್ಲಿ ಎಐಡಿಎಸ್‌ಒ ರಾಜ್ಯ ಕಚೇರಿ ಕಾರ್ಯದರ್ಶಿ ಮಹಾಂತೇಶ ಬಿಳೂರ್ ಮಾತನಾಡಿ, 'ಯುಬಿಡಿಟಿ ರಾಜ್ಯದ ಮೊದಲ ಸರ್ಕಾರಿ ಎಂಜಿನಿಯರಿಂಗ್ ಕಾಲೇಜು. ಇದು ಈಗ ಅಳಿವಿನ ಅಂಚಿನಲ್ಲಿದೆ. ಸೀಟುಗಳನ್ನು ಮಾರಾಟ ಮಾಡುವ ಹುನ್ನಾರ ನಡೆದಿದೆ. ಇದರಿಂದ ಬಡ ಹಾಗೂ ಪ್ರತಿಭಾವಂತ ವಿದ್ಯಾರ್ಥಿಗಳಿಗೆ ಅನ್ಯಾಯವಾಗುತ್ತಿದೆ' ಎಂದರು.

'ತಕ್ಷಣವೇ ಪೇಮೆಂಟ್ ಕೋಟಾ ರದ್ದುಗೊಳಿಸಬೇಕು. ಹೆಚ್ಚುವರಿಯಾಗಿ ಪಡೆದಿರುವ ಶುಲ್ಕವನ್ನು ವಿದ್ಯಾರ್ಥಿಗಳಿಗೆ ವಾಪಸ್ ನೀಡಬೇಕು. ಯುಬಿಡಿಟಿ ಕಾಲೇಜು ಅಭಿವೃದ್ಧಿಗೆ ಸರ್ಕಾರದಿಂದ ಹೆಚ್ಚಿನ ಅನುದಾನ ಒದಗಿಸಬೇಕು. ಕಾಲೇಜಿನ ಸಂಪೂರ್ಣ ಆರ್ಥಿಕ ಜವಾಬ್ದಾರಿಯನ್ನು ಸರ್ಕಾರವೇ ವಹಿಸಬೇಕು. ಎಲ್ಲ ಸೆಮಿಸ್ಟರ್ ವಿದ್ಯಾರ್ಥಿಗಳಿಗೂ ಶುಲ್ಕ ಏರಿಕೆ ಕೈಬಿಡಬೇಕು' ಎಂದು ಆಗ್ರಹಿಸಿದರು.

ಪುಣೆ ರೇಸ್

ಜಮಾರಿ ಗೆಲ್ಲುವ ನಿರೀಕ್ಷೆ

ಹೆಚ್.ಪಿ.ಎಸ್.ಎಲ್ ಇಂಡಿಯನ್ ಸೆಂಟ್ ಲೆಗರ್ ಭಾನುವಾರದ ಪುಣೆ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಜಮಾರಿ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 2:00ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ.

1ನೇ ರೇಸ್: ಪ್ರಿನ್ಸ್ ಓ ವಾರ್ 2, ಟೈರೊನ್ ಬ್ಲಾಕ್ 3, ಗೂಮಾ 1
2ನೇ ರೇಸ್: ಮಾನ್ಸ ಮೂಸ 2, ಇಂಕ್ವಿಲಾಬ್ 4, ಡಿವೈನ್ ಹೋಪ್ 3
3ನೇ ರೇಸ್: ಟೈಮ್‌ಲೆಸ್ ವಿಷನ್ 2, ಸೆಲೆಸ್ಟಿನ 7, ರನ್ನಿಂಗ್ ಸ್ಟಾರ್ 1
4ನೇ ರೇಸ್: ಬ್ರೇಕ್ ಪಾಯಿಂಟ್ 5, ಜುಕಾರೊ 7, ಡ್ರೀಮ್ ಅಲೈಯನ್ಸ್ 3
5ನೇ ರೇಸ್: ಜಮಾರಿ 8, ಮೇಡಮ್ ರಿಚ್ 9, ಎಕ್ಸುಮಾ 2
6ನೇ ರೇಸ್: ಚೆಲ್ಸಿಯಾ 5, ಡ್ಯಾಜ್ಲಿಂಗ್ ಡಚ್‌ನೆಸ್ 6, ಗಿಪ್ಸಿ ಸೋಲ್ 8
7ನೇ ರೇಸ್: ಮೀ ಏರಿಯನಾನ್ 2, ಖಲೀಸಿ 1, ಪ್ರೀಸಿಯೊಸೊ 4

ಉತ್ತಮ ಬೆಟ್: ಬ್ರೇಕ್ ಪಾಯಿಂಟ್

ಜಾಕ್‌ಪಾಟ್‌ಗೆ	ಟ್ರಿಬಲ್
3,4,5,6,7	4,5,6

ಚಿತ್ರಾವಳಿ


ಎಚ್‌ಆರ್ ಸಕ್ಸೆಸ್ ಟಾಕ್ ಸಂಸ್ಥೆಯು ನಗರದ ದಿ ಚಾನ್ಸರಿ ಪೆವಿಲಿಯನ್ ಹೋಟೆಲ್‌ನಲ್ಲಿ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ದಿ ಪ್ರಿಂಟರ್ಸ್ ಮೈಸೂರು ಲಿಮಿಟೆಡ್‌ನ ಮಾನವ ಸಂಪನ್ಮೂಲ ವಿಭಾಗದ ಮುಖ್ಯಸ್ಥ ರಾಜೀವ್ ವೇಲೂರ್ ಹಾಗೂ ವಿವಿಧ ಕಂಪನಿಗಳ ಮಾನವ ಸಂಪನ್ಮೂಲ ಅಧಿಕಾರಿಗಳಿಗೆ 'ಎಚ್‌ಆರ್ ಸಕ್ಸೆಸ್ ಟಾಕ್ಸ್ ಗ್ಲೋಬಲ್ ಎಕ್ಸಲೆನ್ಸ್ ಅವಾರ್ಡ್' ಪ್ರದಾನ ಮಾಡಲಾಯಿತು. ಸಂಸ್ಥೆಯ ಸಂಸ್ಥಾಪಕ ಹಾಗೂ ಸಿಇಒ ಗೋವಿಂದ್ ಸಿಂಗ್ ನೇಗಿ, ಸ್ಟ್ಯಾಂಡ್ ಅಪ್ ಕಾಮಿಡಿಯನ್ ಅನ್ಮೋಲ್ ಗರ್ಗ್ ಉಪಸ್ಥಿತರಿದ್ದರು.


ಕೆಎಸ್‌ಆರ್‌ಟಿಸಿ ನೌಕರರಿಗೆ ಹೃದಯ ಸಂಬಂಧಿ ಆರೋಗ್ಯ ತಪಾಸಣೆ ಮತ್ತು ಮುಂಜಾಗ್ರತೆ ವಹಿಸುವ ಉಪಕ್ರಮಗಳಿಗಾಗಿ ರೂಪಿಸಿರುವ 'ಸಾರಿಗೆ ಸಂಜೀವಿನಿ' ಯೋಜನೆ 'ಸ್ಕಾಚ್ ರಾಷ್ಟ್ರೀಯ ಪ್ರಶಸ್ತಿ'ಗೆ ಆಯ್ಕೆಯಾಗಿದ್ದು, ಕೆಎಸ್‌ಆರ್‌ಟಿಸಿ ಮುಖ್ಯ ಕಾನೂನು ಸಲಹೆಗಾರ ವೆಂಕಟೇಶ ಟಿ., ಸಿಬ್ಬಂದಿ ವ್ಯವಸ್ಥಾಪಕ ಅಶ್ರಫ್ ಕೆ.ಎಂ. ಅವರು ಪ್ರಶಸ್ತಿ ಸ್ವೀಕರಿಸಿದರು. ಸ್ಕಾಚ್ ಗ್ರೂಪ್ ಅಧ್ಯಕ್ಷ ಸಮೀರ್ ಕೊಚ್ಚರ್, ಉಪಾಧ್ಯಕ್ಷ ಗುರುಶರಣ್ ಧನ್ಜಾಲ್ ಭಾಗವಹಿಸಿದ್ದರು.

ರಾಮ್‌ರಾಜ್: ದಸರಾಕ್ಕೆ 4 ಸಾವಿರ ನವೀನ ದೋತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗ್ರಾಹಕರಿಗೆ ಒಪ್ಪುವಂತಹ ಉಡುಪು ನೀಡಲು ಬದ್ಧ. ದಸರಾ ಹಬ್ಬದ ಋತುವಿನಲ್ಲಿ ನಾಲ್ಕು ಸಾವಿರಕ್ಕೂ ಹೆಚ್ಚು ನವೀನ ದೋತಿಗಳು ಮಳಿಗೆಗಳಲ್ಲಿ ಲಭ್ಯವಿವೆ ಎಂದು ರಾಮ್‌ರಾಜ್ ಕಾಟನ್ ತಿಳಿಸಿದೆ.

ನಟ ರಿಷಭ್ ಶೆಟ್ಟಿ ಅವರು ರಾಮ್‌ರಾಜ್ ಕಾಟನ್‌ನ ಪ್ರಚಾರ ರಾಯಭಾರಿಯಾಗಿದ್ದಾರೆ. ಕರ್ನಾಟಕದ ಜನರ ಸಂಸ್ಕೃತಿಯನ್ನು ಗೌರವಿಸುವ ಜೊತೆಗೆ ಚಿಲ್ಲರೆ ಮಾರಾಟವನ್ನು ಮತ್ತಷ್ಟು ಸದೃಢಗೊಳಿಸುವ ಗುರಿ ಹೊಂದಲಾಗಿದೆ ಎಂದು ಹೇಳಿದೆ.

ಪರಂಪರೆಯ ದ್ಯೋತಕವಾದ ದೋತಿಯ ಮಹತ್ವ ಕುರಿತು ಹೆಚ್ಚು ಪ್ರಚಾರ ಮಾಡಲಾಗುವುದು. ಎಲ್ಲಾ ವರ್ಗದ ಗ್ರಾಹಕರಲ್ಲಿ ಈ ಸಂಸ್ಕೃತಿ ಬಗ್ಗೆ ಅರಿವು ಮೂಡಿಸುವ ಉದ್ದೇಶ ಹೊಂದಲಾಗಿದೆ ಎಂದು ಹೇಳಿದೆ.

ಹೊಸ ಮಳಿಗೆ ಉದ್ಘಾಟನೆ: ಯಲಹಂಕ ಹೋಬಳಿಯ ಸಿಂಗನಾಯಕನಹಳ್ಳಿಯಲ್ಲಿ ಇತ್ತೀಚೆಗೆ ರಾಮ್‌ರಾಜ್ ಕಾಟನ್‌ನ ಹೊಸ ಮಳಿಗೆಯನ್ನು ಯಲಹಂಕ ಶಾಸಕ ಎಸ್.ಆರ್. ವಿಶ್ವನಾಥ್ ಉದ್ಘಾಟಿಸಿದರು.

ಬಳಿಕ ಮಾತನಾಡಿದ ಅವರು, 'ಭಾರತೀಯ ಸಂಸ್ಕೃತಿಯು ಮೌಲ್ಯಯುತವಾಗಿದೆ. ಯುವಪೀಳಿಗೆಯು ಆ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು' ಎಂದು ಸಲಹೆ ನೀಡಿದರು.

ವಿಶ್ವವಾಣಿ ಫೌಂಡೇಶನ್‌ನ ನಿರ್ದೇಶಕ ಅಶೋಕ್ ವಿಶ್ವನಾಥ್, ಆರ್‌ಎಸ್‌ಎಸ್‌ಎನ್ ಬ್ಯಾಂಕ್ ಅಧ್ಯಕ್ಷೆ ಡಾ.ವಾಣಿಶ್ರೀ ವಿಶ್ವನಾಥ್ ಇದ್ದರು.


ಮಾಲ್‌ನೊಳಗೆ ಪ್ರವೇಶಿಸಲು ಬಿಡದೆ ಅವಮಾನ ಅನುಭವಿಸಿದ್ದ ಹಾವೇರಿ ಜಿಲ್ಲೆಯ ರೈತ ಫಕ್ಕೀರಪ್ಪ ಮೆಣಸಿನಹಾಳ್ ಅವರನ್ನು ನಗರದ ಸಿಂಗನಾಯಕನಹಳ್ಳಿಯಲ್ಲಿ ತೆರೆದಿರುವ ರಾಮ್‌ರಾಜ್ ಕಾಟನ್ ಮಳಿಗೆಯಲ್ಲಿ ಸಂಸ್ಥಾಪಕ ಮತ್ತು ಅಧ್ಯಕ್ಷ ಕೆ.ಆರ್. ನಾಗರಾಜನ್ ಅವರು ಸನ್ಮಾನಿಸಿದರು

'ಸುಳ್ಳು ಸುದ್ದಿಗೆ ಕಡಿವಾಣ ಅಗತ್ಯ'

ಪ್ರಜಾವಾಣಿ ವಾರ್ತೆ

ಮೈಸೂರು: 'ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕದಿದ್ದರೆ ಪ್ರಜಾಪ್ರಭುತ್ವ, ಸಂವಿಧಾನ ಹಾಗೂ ಸಾಮಾಜಿಕ ಮೌಲ್ಯಗಳು ಉಳಿಯುವುದು ಕಷ್ಟ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.


ನಗರದಲ್ಲಿ ಶನಿವಾರ ಜಿಲ್ಲಾ ಪತ್ರಕರ್ತರ ಸಂಘವು ಆಯೋಜಿಸಿದ್ದ ಪತ್ರಿಕಾ ದಿನಾಚರಣೆ, ವಾರ್ಷಿಕ ಪ್ರಶಸ್ತಿ ಪ್ರದಾನ ಕಾರ್ಯಕ್ರಮದಲ್ಲಿ ಮಾತನಾಡಿ, 'ಧಾರ್ಮಿಕ, ಸಾಮಾಜಿಕ ಘರ್ಷಣೆ ಹೆಚ್ಚಲು ಸುಳ್ಳು ಸುದ್ದಿ ಕಾರಣ. ಅದನ್ನು ಹರಡುವುದು ಯಾರಿಗೂ ಶೋಭೆಯಲ್ಲ' ಎಂದರು.

'ಸುಳ್ಳು ಸುದ್ದಿಗಳ ನಿಯಂತ್ರಣಕ್ಕೆ ಎಲ್ಲ ಪೊಲೀಸ್ ಠಾಣೆಗಳಲ್ಲಿ ಫ್ಯಾಕ್ಟ್ ಚೆಕ್ ಘಟಕಗಳನ್ನು ಸ್ಥಾಪಿಸಲಾಗಿದೆ. ಆದರೆ ಎಲ್ಲ ಸುದ್ದಿಗಳನ್ನು ಕಾನೂನಿನಿಂದ ನಿಯಂತ್ರಿಸಲು ಸಾಧ್ಯವಿಲ್ಲ. ವ್ಯಕ್ತಿ-ಸಮಾಜದ ತೇಜೋವಧೆಗೆ ಯಾರೂ ಮುಂದಾಗಬಾರದು' ಎಂದರು.

'ವಾಕ್ ಸ್ವಾತಂತ್ರ್ಯ ಪ್ರಜಾಪ್ರಭುತ್ವದ ಜೀವಾಳ. ಪ್ರಜಾಪ್ರಭುತ್ವದ ಮೂರು ಅಂಗಗಳೂ ಸಮತೋಲನದಿಂದ ಕೆಲಸ ಮಾಡುವುದರೊಂದಿಗೆ ಪತ್ರಿಕಾ ರಂಗವೂ ಎಚ್ಚರಿಕೆಯಿಂದ ನಡೆಯಬೇಕು. ಅವುಗಳಿಗೆ ಅಪಾಯ ಬಂದರೆ ಪ್ರಜಾಪ್ರಭುತ್ವಕ್ಕೆ ಅಪಾಯ ಬಂದಂತೆ. ನೆಹರೂ ಹೇಳುವಂತೆ ಮಾಧ್ಯಮಗಳಿಗೆ ಯಾವ ನಿರ್ಬಂಧವೂ ಇರಬಾರದು' ಎಂದು ಆಶಿಸಿದರು.

'ಪ್ರಜಾವಾಣಿ' ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ ಪ್ರಧಾನ ಭಾಷಣ ಮಾಡಿದರು. ಶಾಸಕರಾದ ತನ್ವೀರ್ ಸೇಠ್, ಡಿ. ರವಿಶಂಕರ್, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ರಾಜ್ಯ ಉಪಾಧ್ಯಕ್ಷೆ ಪುಷ್ಪಾ ಅಮರ ನಾಥ್, 'ನ್ಯೂಸ್ ಫಸ್ಟ್' ಸುದ್ದಿವಾಹಿನಿಯ ಸಿಇಒ ರವಿಕುಮಾರ್, ಜಿಎಸ್‌ಎಸ್ ಸಮೂಹ ಶಿಕ್ಷಣ ಸಂಸ್ಥೆಗಳ ಮುಖ್ಯಸ್ಥ ಶ್ರೀಹರಿ ದ್ವಾರಕನಾಥ್ ಇದ್ದರು.

'ಸುದ್ದಿ ತಿರುಚಿ ಬರೆಯದಿರಿ'



'ನಾನು ಸದನದಲ್ಲಿ ಮಾತನಾಡುವಾಗ ಹಿಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಆಡಿದ್ದ ಮಾತನ್ನು ಉದಾಹರಿಸಿದ್ದೆ. 'ಸಾಲ ಮನ್ನಾ ಮಾಡೋದಕ್ಕೆ ನಮ್ಮ ಬಳಿ ಪ್ರಿಂಟಿಂಗ್ ಮೆಷಿನ್ ಇದೆಯಾ' ಎಂದು ಯಡಿಯೂರಪ್ಪ ಸದನದಲ್ಲೇ ಹೇಳಿದ್ದರು. ಅದನ್ನು ನಾನು ಉದಾಹರಿಸಿದ್ದೆ. ಆದರೆ ಸಾಮಾಜಿಕ ಜಾಲತಾಣಗಳಲ್ಲಿ ನಾನೇ ಅದನ್ನು ಹೇಳಿದ್ದಾಗಿ ನಕಲಿ ಸುದ್ದಿ ಸೃಷ್ಟಿಸಿ, ಅದಕ್ಕೆ ಗ್ಯಾರಂಟಿ ಯೋಜನೆಗಳನ್ನು ಬೆರೆಸಿ ತಪ್ಪು ಸಂದೇಶ ಹರಡಿದರು. ಇದರಿಂದ ಸಮಾಜಕ್ಕೆ ನಷ್ಟವಾಯಿತೇ ಹೊರತು ನನಗಲ್ಲ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬೇಸರ ವ್ಯಕ್ತಪಡಿಸಿದರು.

'ಮೌಢ್ಯ ಬಿತ್ತದಿರಿ'

ಪತ್ರಕರ್ತರಿಗೆ ವಾರ್ಷಿಕ ಪ್ರಶಸ್ತಿ ಪ್ರದಾನ ಮಾಡಿದ ಸಮಾಜ ಕಲ್ಯಾಣ ಸಚಿವ ಡಾ. ಎಚ್.ಸಿ. ಮಹದೇವಪ್ಪ 'ಮಾಧ್ಯಮಗಳು ಸುದ್ದಿಗಳನ್ನು ಅತಿರಂಜಕವಾಗಿ ಬಿತ್ತರಿಸುವುದನ್ನು ಬಿಡಬೇಕು. ಮಾಂಸಾಹಾರ ತಿಂದು ದೇಗುಲಕ್ಕೆ ಹೋದರೆ ಅದನ್ನೇ ತಪ್ಪು ಎನ್ನುವಂತಹ ಮೌಢ್ಯ ಬಿತ್ತುವ ಸುದ್ದಿಗಳಿಗೆ ಮಹತ್ವ ಕೊಡಬಾರದು' ಎಂದು ಕೋರಿದರು.

ನಗರದಲ್ಲಿ ಇಂದು

ಶಿಲಾನ್ಯಾಸ ಸಮಾರಂಭ: ಉಪಸ್ಥಿತಿ: ಡಿ.ವೈ. ಚಂದ್ರಚೂಡ್, ಆರ್. ವೆಂಕಟರಮಣಿ, ಮನನ್ ಕುಮಾರ್ ಮಿಶ್ರಾ, ಸಂಗೀತಾ ಜಿಂದಾಲ್, ಸ್ಥಳ: ಜೆಎಸ್‌ಡಬ್ಲ್ಯೂ ಬ್ಲಾಕ್, ಜೆಎಸ್‌ಡಬ್ಲ್ಯೂ ಸೆಂಟರ್ ಫಾರ್ ದಿ ಫ್ಯೂಚರ್ ಆಫ್ ಲಾ, ರಾಷ್ಟ್ರೀಯ ಕಾನೂನು ಶಾಲೆ ವಿಶ್ವವಿದ್ಯಾಲಯ, ನಾಗರಬಾವಿ, ಬೆಳಿಗ್ಗೆ 9.30

ಸರ್ವ ಸದಸ್ಯರ ಸಭೆ, ಪ್ರತಿಭಾ ಪುರಸ್ಕಾರ: ಅತಿಥಿಗಳು: ರಾಮಲಿಂಗಾರೆಡ್ಡಿ, ಕೆ.ವಿ. ಪ್ರಭಾಕರ್, ರಿಜ್ವಾನ್ ಅರ್ಷದ್, ಅಧ್ಯಕ್ಷತೆ: ರಮೇಶ್ ಎಂ. (ಪಾಳ್ಯ), ಆಯೋಜನೆ: ಕರ್ನಾಟಕ ಪತ್ರಕರ್ತರ ಸಹಕಾರ ಸಂಘ, ಸ್ಥಳ: ಪ್ರೆಸ್‌ಕ್ಲಬ್ ಆಫ್ ಬೆಂಗಳೂರು, ಕಬ್ಬನ್ ಉದ್ಯಾನ, ಬೆಳಿಗ್ಗೆ 10

ವಾರ್ಷಿಕೋತ್ಸವ, ಜಯಪ್ರಕಾಶ್ ನಾಗತಿಹಳ್ಳಿ ಅವರ 'ನಿರೂಪಣೆ ನಿರೂಪಸಿ', 'ಸಾಹಿತ್ಯ ಚಂದನ', 'ವ್ಯಕ್ತಿತ್ವ ಚಂದನ' ಪುಸ್ತಕಗಳ ಬಿಡುಗಡೆ, ಪ್ರಶಸ್ತಿ ಪ್ರದಾನ: ಉದ್ಘಾಟನೆ: ರಾಮಚಂದ್ರ ಗುರೂಜಿ, ಪುಸ್ತಕಗಳ ಬಿಡುಗಡೆ: ನಿರಂಜನ ವಾನಳ್ಳಿ, ಬಿ.ಆರ್. ಲಕ್ಷ್ಮಣರಾವ್, ಡಿ.ಎಸ್. ವಿಶ್ವನಾಥ್, 'ಬಿ. ಉಮೇಶ್ ಕುಮಾರ್ ಪ್ರಶಸ್ತಿ' ಪುರಸ್ಕೃತರು: ಬಸವರಾಜು ಎ.ಬಿ., 'ನಾಗಮ್ಮ ಮಹಿಳಾ ಪ್ರಶಸ್ತಿ' ಪುರಸ್ಕೃತರು: ಪ್ರೇಮಾ ಭಟ್, 'ಎಚ್.ವಿ. ಮುನಿಸ್ವಾಮಿಗೌಡ ಪರಿಸರ ಪ್ರಶಸ್ತಿ' ಪುರಸ್ಕೃತರು: ನಾರಾಯಣ ಸ್ವಾಮಿ ಜಿ.ಎನ್., ಆಯೋಜನೆ: ನಾಗಮ್ಮ ಫೌಂಡೇಷನ್ ಆ್ಯಂಡ್ ಟ್ರಾನ್ಸ್‌ಫಾರ್ಮೇಷನ್ ಅನ್‌ಲಿಮಿಟೆಡ್, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಬೆಳಿಗ್ಗೆ 10


ಲಕ್ಷ್ಮಣರಾವ್

ವಾರ್ಷಿಕ ಸರ್ವಸದಸ್ಯರ ಸಭೆ, ಆರ್ಯ ಈಡಿಗರ ವಧು-ವರರ ರಾಜ್ಯಮಟ್ಟದ ಸಮಾವೇಶ: ಆಯೋಜನೆ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘ, ಸ್ಥಳ: ಈಡಿಗ ಭವನ, ರಾಜೀವ್ ಗಾಂಧಿ ವೃತ್ತ, ಶೇಷಾದ್ರಿಪುರ, ಬೆಳಿಗ್ಗೆ 10.30

ವಿಷ್ಣುವರ್ಧನ್ ಅವರ ಜನ್ಮದಿನಾಚರಣೆ ಅಂಗವಾಗಿ ಕವಿಗೋಷ್ಠಿ, ಗೀತಗಾಯನ, ರಸಪ್ರಶ್ನೆ ಕಾರ್ಯಕ್ರಮ: ಅಧ್ಯಕ್ಷತೆ: ಎಸ್. ಅಂಬುಜಾಪ್ರಕಾಶ್, ಅತಿಥಿಗಳು: ರೂಪಶ್ರೀ ಮೋಹನ್, ಸಂತವಾಣಿ ಸುಧಾಕರ್, ಆಯೋಜನೆ: ರವಿಕಿರಣ ಆರ್ಟ್ಸ್ ಆ್ಯಂಡ್ ಕ್ರಿಯೇಷನ್ಸ್ ಟ್ರಸ್ಟ್, ಸ್ಥಳ: ಕೆನ್‌ಕಲಾ ಶಾಲೆ, ಶೇಷಾದ್ರಿಪುರ, ಬೆಳಿಗ್ಗೆ 10.30

ಭರತನಾಟ್ಯ ರಂಗಪ್ರವೇಶ: ವಿ. ಭವ್ಯಶ್ರೀ, ಉಪಸ್ಥಿತಿ: ಸುಜಯ್ ಶಾನಭಾಗ್, ಆಯೋಜನೆ: ಸರಸ್ವತಿ ನಾಟ್ಯಾಲಯ, ಸ್ಥಳ: ಜನಪದರು ರಂಗಮಂದಿರ, ಅಭಯ ಆಂಜನೇಯಸ್ವಾಮಿ ದೇವಸ್ಥಾನದ ಹತ್ತಿರ, ಬೂದಿಗೆರೆ ಕ್ರಾಸ್, ಬೆಳಿಗ್ಗೆ 10.30

'ಕರ್ನಾಟಕ ಮುಂದೇನು?' ಚಿಂತನಾ ಸಮಾವೇಶ: ಭಾಗವಹಿಸುವವರು: ಸಿ.ಎಂ. ಇಬ್ರಾಹಿಂ, ಕೋಡಿಹಳ್ಳಿ ಚಂದ್ರಶೇಖರ್, ಸಾ.ರಾ. ಗೋವಿಂದು, ಅಶೋಕ್, ನಾಡಗೌಡ, ಬಿ.ಟಿ. ಲಲಿತಾ ನಾಯಕ್, ಮಹಿಮ ಪಟೇಲ್, ಡೊಮೆನಿಕ್, ಗಂಗಾಧರ್, ಮಾರಸಂದ್ರ ಮುನಿಯಪ್ಪ, ಮೋಹನರಾಜ್ ಚನ್ನಕೃಷ್ಣಪ್ಪ, ಎನ್. ಮೂರ್ತಿ, ಪ್ರಕಾಶಮೂರ್ತಿ, ಸ್ಥಳ: ರಾಡಿಸನ್ ಬ್ಲ್ಯೂ (ಏಟ್ರಿಯಾ ಹೋಟೆಲ್), ಸಿಐಡಿ ಕಚೇರಿ ಮುಂಭಾಗ, ಅರಮನೆ ರಸ್ತೆ, ಬೆಳಿಗ್ಗೆ 10.30


'ಕೀರ್ತಿಶೇಷ ಎಸ್.ಎಂ. ನಂಜುಂಡಪ್ಪನವರ 76ನೇ ಸಂಸ್ಮರಣಾ ಮಹೋತ್ಸವ, ಗ್ರಾಮಾಂತರ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ': ಉದ್ಘಾಟನೆ: ಎಸ್. ಪ್ರಕಾಶ್, ಅಧ್ಯಕ್ಷತೆ: ಕೆ.ಸಿ. ಜಯಕುಮಾರ್, ಅತಿಥಿ: ವೈ.ಸಿ. ಕಮಲಾ, ಪ್ರತಿಭಾ ಪುರಸ್ಕಾರ ವಿತರಣೆ: ಎ.ಬಿ. ಶಿವಸುಬ್ರಮಣ್ಯಂ, ಆಯೋಜನೆ: ಎಸ್.ಎಂ. ನಂಜುಂಡಪ್ಪ ಧರ್ಮ ಸಂಸ್ಥೆ, ಸ್ಥಳ: ನಗರೇಶ್ವರಸ್ವಾಮಿ ಜ್ಞಾನ ಮಂದಿರ, ಬಸವನಗುಡಿ, ಬೆಳಿಗ್ಗೆ 10.30

ಸಕಲಮಾ ಅವರ ಆತ್ಮಕಥನ 'ಹಿಮಾಲಯ ಋಷಿಗಳ ದಿವ್ಯ ಸಂದೇಶಗಳು ಸಕಾಲಿಕ ಮತ್ತು ಕಾಲಾತೀತ' (ಇಂಗ್ಲಿಷ್ ಅನುವಾದ) ಪುಸ್ತಕಗಳ ಬಿಡುಗಡೆ: ಪ್ರಿಯಾಂಕಾ ಉಪೇಂದ್ರ, ಉದ್ಘಾಟನೆ: ಅಹಲ್ಯಾ ಶರ್ಮಾ, ಸ್ಥಳ: ಗಾಯನ ಸಮಾಜ, ಕೆ.ಆರ್. ರಸ್ತೆ, ಬಸವನಗುಡಿ, ಬೆಳಿಗ್ಗೆ 10.30


ಪ್ರಿಯಾಂಕಾ

'ಭೃಗುಶಾಪ' ಯಕ್ಷಗಾನ ಪ್ರದರ್ಶನ: ಹಿಮ್ಮೇಳದ ಭಾಗವತರು: ಬಾಲಕೃಷ್ಣ ಹಿಳ್ಳೋಡಿ, ಸೃಜನ್ ಗಣೇಶ ಹೆಗಡೆ, ಮದ್ದಳೆ: ಆಗ್ನೇಯ ಭಟ್ ಕ್ಯಾಸನೂರು, ಚಿನ್ಮಯ್ ಅಂಬಾರಗೋಡ್ಲು, ಚೆಂಡೆ: ಭಾವನಾ ಹೆಗಡೆ ಮಳಗೀಮನೆ, ಮುಮ್ಮೇಳ: ಶಶಿಕಾಂತ ಶೆಟ್ಟಿ ಕಾರ್ಕಳ, ರವಿ ಐತುಮನೆ, ಆದಿತ್ಯ ಹಲ್ಕೋಡ್, ಚಂದನ್ ಕಲಾಹಂಸ, ಅಕ್ಷಯ ಹೆಗಡೆ ಹೂಡ್ಲಮನೆ, ಆಯೋಜನೆ: ನಿರ್ಮಾಣ್ ಯಕ್ಷಬಳಗ, ಸ್ಥಳ: ರಾಮಾಶ್ರಮ ಗಿರಿನಗರ, ಸಂಜೆ 4

'ಶಿವದೂತ ಗುಳಿಗ' ಯಕ್ಷಗಾನ ಪ್ರದರ್ಶನ: ನಿರ್ದೇಶನ: ವಿಜಯ್ ಕುಮಾರ್ ಕೊಡಿಯಾಲ್‌ಬೈಲ್, ಆಯೋಜನೆ: ಸಂಪಾಜೆ ರಂಗ ಸಂಗಮ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಪ್ರದರ್ಶನಗಳು ಬೆಳಿಗ್ಗೆ 11.14ಕ್ಕೆ, ಮಧ್ಯಾಹ್ನ 2.29ಕ್ಕೆ, ಸಂಜೆ 6.14ಕ್ಕೆ



ಡಾ.ಕೆ. ರಾಜೇಶ್ವರಿ ದೊಡ್ಡರಂಗೇಗೌಡ ಸ್ಮಾರಕ ದತ್ತಿ ಕಾರ್ಯಕ್ರಮ: 'ದೊಡ್ಡರಂಗೇಗೌಡರ ಕಥಾಂತರಂಗ' ಕುರಿತು ಉಪನ್ಯಾಸ: ಡಿ. ಭರತ್, ಅಧ್ಯಕ್ಷತೆ: ಬೈರಮಂಗಲ ರಾಮೇಗೌಡ, ಆಯೋಜನೆ: ಬಿ.ಎಂ.ಶ್ರೀ ಪ್ರತಿಷ್ಠಾನ, ಸ್ಥಳ: ಎಂ.ವಿ.ಸೀ ಸಭಾಂಗಣ, ಬಿ.ಎಂ. ಶ್ರೀ ಕಲಾಭವನ, ಎನ್.ಆರ್. ಕಾಲೊನಿ, ಬೆಳಿಗ್ಗೆ 11

ಅನಂತಕುಮಾರ್ ಅವರ 65ನೇ ಜನ್ಮದಿನಾಚರಣೆ: ಸ್ಥಳ: ಅನಂತ ಪ್ರೇರಣಾ ಕೇಂದ್ರ, ಸೌತ್‌ಎಂಡ್ ವೃತ್ತ, ಬೆಳಿಗ್ಗೆ 11

ಎಸ್. ಸುಬ್ಬರಾಮನ್ ಅವರ 'ಅಜಂತಾ ಟು ಅಂಕೋರ್ ವಾಟ್' ಪುಸ್ತಕ ಬಿಡುಗಡೆ: ಅತಿಥಿ: ಡಾ. ಅಲೋಕ್ ತ್ರಿಪಾಠಿ, ಪುಸ್ತಕ ಪರಿಚಯ: ಕೆ. ಕೃಷ್ಣನ್, ಅಧ್ಯಕ್ಷತೆ: ವಿ. ನಾಗರಾಜ್, ಆಯೋಜನೆ ಮತ್ತು ಸ್ಥಳ: ದಿ ಮಿಥಿಕ್ ಸೊಸೈಟಿ, ನೃಪತುಂಗ ರಸ್ತೆ, ಬೆಳಿಗ್ಗೆ 11.30

ಬೆಂಗಳೂರು ನಗರ ಪತ್ರಿಕಾ ವಿತರಕರ ಸಭೆ: ಉಪಸ್ಥಿತಿ: ಶಂಭುಲಿಂಗ, ಸಂಗಮ್ ಸುರೇಶ್, ಆಯೋಜನೆ: ಕರ್ನಾಟಕ ರಾಜ್ಯ ಪತ್ರಿಕಾ ವಿತರಕರ ಒಕ್ಕೂಟ, ಸ್ಥಳ: ವಿಜಯನಗರ ವಿತರಣಾ ಕೇಂದ್ರದ ಬಳಿ ಇರುವ ಕದಂಬ ಹೋಟೆಲ್ ಮುಂಭಾಗದ ಉದ್ಯಾನ, ಸಂಜೆ 4

ರಸತರಂಗ: ಅತಿಥಿ: ಲಕ್ಷ್ಮೀಶ ತೋಳ್ಪಾಡಿ, ಅಭಿನಂದನೆ: ಕನ್ನಡ ಸಾಹಿತ್ಯ ರಂಗ, ಟಿ.ಎನ್. ಸೀತಾರಾಂ, ಶೇಷಾದ್ರಿ ಭಟ್ಟ, ನಾಗತಿಹಳ್ಳಿ ಚಂದ್ರಶೇಖರ್, ಚೂಡಾಮಣಿ ನಂದಗೋಪಾಲ್, ಮೀರಾ ರಾಜಾರಾಂ ಪ್ರಾಣೇಶ್, ಯಮುನಾ ಶ್ರೀನಿಧಿ, ಆಯೋಜನೆ: ಕೂಡ್ಲು ಶ್ಯಾನುಭೋಗ ಸಂಗೀತ ಟ್ರಸ್ಟ್, ಸ್ಥಳ: ಬಿ.ಪಿ. ವಾಡಿಯಾ ಸಭಾಂಗಣ, ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಸವನಗುಡಿ, ಸಂಜೆ 5

'ಪುಕ್ಕಟೆ ಸಲಹೆ' ನಾಟಕ ಪ್ರದರ್ಶನ: ರಚನೆ: ಡುಂಡಿರಾಜ್, ನಿರ್ದೇಶನ: ಅಶೋಕ್ ಬಿ., ಸ್ಥಳ: ಡಾ.ಸಿ. ಅಶ್ವತ್ಥ ಕಲಾಭವನ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 5 ಹಾಗೂ ಸಂಜೆ 7.30ಕ್ಕೆ

ನೂಲು ಗಾಲಿಯ ಸಂಗೀತ: ಭಾಗವಹಿಸುವವರು: ಸಂಜೀವ ಕುಲಕರ್ಣಿ, ಆಯೋಜನೆ: ಸ್ವಯಂದೀಪ ಝಿುನ್ ಕೇಂದ್ರ ಧಾರವಾಡ, ಸ್ಥಳ: ಗಾಂಧಿ ಭವನ, ಕುಮಾರಕೃಪಾ ರಸ್ತೆ, ಸಂಜೆ 5.30

ಸಂಗೀತ ಕಾರ್ಯಕ್ರಮ: ವೀಣಾ: ಶುಭಾ ಸಂತೋಷ್, ಮೃದಂಗ: ರೇಣುಕಾ ಪ್ರಸಾದ್, ಖಂಜೀರಾ: ವ್ಯಾಸ ವಿಠ್ಠಲ, ಆಯೋಜನೆ: ಬಿಟಿಎಂ ಕಲ್ಚರಲ್ ಅಕಾಡೆಮಿ, ಸ್ಥಳ: ಶ್ರೀರಮಣ ಮಹರ್ಷಿ ಅಕಾಡೆಮಿ ಫಾರ್ ಬ್ಲೈಂಡ್, ಮೂರನೇ ಅಡ್ಡರಸ್ತೆ, ಮೂರನೇ ಹಂತ, ಜೆ.ಪಿ. ನಗರ, ಸಂಜೆ 5.30

ಉದ್ಘಾಟನಾ ಸಮಾರಂಭ, 'ಭಾರತೀಯ ಗೋ ವೈಭವಂ' ಪುಸ್ತಕ ಬಿಡುಗಡೆ: ಕೆ.ಎಚ್. ಮುನಿಯಪ್ಪ, ಆರ್. ವೆಂಕಟರಮಣಿ, ಅತಿಥಿಗಳು: ಎಸ್. ಗೋಪಾಲಕೃಷ್ಣನ್, ವಿವೇಕ್ ಸುಬ್ಬಾರೆಡ್ಡಿ, ಮುಖ್ಯಭಾಷಣಕಾರ: ದುಶ್ಯಂತ್ ಶ್ರೀಧರ್, ಅಧ್ಯಕ್ಷತೆ: ಇ.ಎಸ್. ದ್ವಾರಕದಾಸ, ಆಯೋಜನೆ: ಸಂಸ್ಕೃತಿ ಫೌಂಡೇಷನ್ ಸಿಲ್ವರ್ ಜುಬಲಿ ಸೆಲೆಬ್ರೇಷನ್ಸ್, ಸ್ಥಳ: ಶ್ರೀಕೃಷ್ಣರಾಜ ಪರಿಷತ್ತಿನ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 6

ದಾಸರ ಪದಗಳ ಗಾಯನ: ಎಂ.ಬಿ. ಹರಿಹರನ್, ಎಸ್. ಅಶೋಕ್, ಪಿಟೀಲು: ಕಾರ್ತೀಕ್ ಕೌಶಿಕ್, ಮೃದಂಗ: ಆರ್. ಸುಧನ್ವ, ಮೋರ್ಸಿಂಗ್: ಲಿಖಿತ್, ಆಯೋಜನೆ: ಕೃಷ್ಣ ಪರ್ಣ ಕುಟೀರ, ಸ್ಥಳ: ಗುರುದತ್ತ ಸದನ, ನಾಲ್ಕನೇ ಮುಖ್ಯರಸ್ತೆ, ಪ್ರಶಾಂತನಗರ, ಸಂಜೆ 6

'ಭಾರತದ ಪ್ರಸ್ತುತ ಸಂದರ್ಭದಲ್ಲಿ ಜಾತಿ, ಮತೀಯ ತಾರತಮ್ಯ ಮತ್ತು ಅದರ ಪರಿಹಾರಗಳು' ಕುರಿತು ಚರ್ಚೆ: ಅಶ್ವಿನಿ ಕೆ.ಪಿ., ಅಧ್ಯಕ್ಷತೆ: ಜಿ.ಸಿ. ಚಂದ್ರಶೇಖರ್, ಉದ್ಘಾಟನೆ: ಸಿ.ಎಸ್. ದ್ವಾರಕನಾಥ್, ಆಯೋಜನೆ: ಸಾಮಾಜಿಕ ನ್ಯಾಯ ಸಮಿತಿ ಕೆ.ಪಿ.ಸಿ.ಸಿ., ಸ್ಥಳ: ಕೆಪಿಸಿಸಿ ಕಚೇರಿ, ಕ್ವೀನ್ಸ್ ರಸ್ತೆ, ಸಂಜೆ 4


ಅಶ್ವಿನಿ ಕೆ.ಪಿ.

ಮೂಡ್ನಾಕೂಡು ಚಿನ್ನಸ್ವಾಮಿ–70 ಜನ್ಮದಿನಾಚರಣೆ, ಪುಸ್ತಕಗಳ ಬಿಡುಗಡೆ: ಅಗ್ರಹಾರ ಕೃಷ್ಣಮೂರ್ತಿ, ಅಧ್ಯಕ್ಷತೆ: ಎಲ್. ಹನುಮಂತಯ್ಯ, ಅತಿಥಿ: ಎಚ್.ಎಲ್. ಪುಷ್ಪ, 'ಆ ಮಹಾ ಮುಗುಳುನಗೆ–ಕಾವ್ಯ' ಪುಸ್ತಕ ಪರಿಚಯ: ಚ.ಹ. ರಘುನಾಥ, 'ಧಮ್ಮಯಾನ–ಬೌದ್ಧತತ್ವ ಮೀಮಾಂಸೆ' ಪುಸ್ತಕ ಪರಿಚಯ: ಅಗ್ರಹಾರ ಕೃಷ್ಣಮೂರ್ತಿ, 'ಉರಿವ ಕಿಚ್ಚಿಗೆ ಮೈಯೆಲ್ಲ ಬಾಯಿ–ಮೂ.ಚಿ. ಸಾಹಿತ್ಯ ವಿಮರ್ಶೆ' ಪುಸ್ತಕದ ಪರಿಚಯ: ಶಿವಕುಮಾರ, ಆಯೋಜನೆ: ಮೂಡ್ನಾಕೂಡು ಚಿನ್ನಸ್ವಾಮಿ ಅಭಿನಂದನಾ ಸಮಿತಿ, ಸ್ಥಳ: ಅಕ್ಕ ಮಹಾದೇವಿ ಸಭಾಂಗಣ, ಕನ್ನಡ ಸಾಹಿತ್ಯ ಪರಿಷತ್ತು, ಚಾಮರಾಜಪೇಟೆ, ಸಂಜೆ 4.30


ಮೂಡ್ನಾಕೂಡು ಚಿನ್ನಸ್ವಾಮಿ



'ಅಡವಿ'ಗೆ ಸೋಲಿಗರೇ ಮಾಲೀಕರು



ಕಾಫಿ ತೋಟದಲ್ಲಿ ಕೆಲಸ ಮಾಡುತ್ತಿರುವ ಸೋಲಿಗ ಮಹಿಳೆಯರು



ಮಾರಾಟಕ್ಕಾಗಿ ಬಾಟಲಿಯಲ್ಲಿ ತುಂಬಿಟ್ಟ 'ಅಡವಿ' ಜೇನುತುಪ್ಪ

ಒಂದನೇ ಫ್ಲ್ಯಾಪ್ ಪುಟದಿಂದ..

ಇವರು ಕಾಫಿ ಗಿಡಗಳಿಗೆ ರಾಸಾಯನಿಕಗಳು, ರಸಗೊಬ್ಬರ ಹಾಕುವುದಿಲ್ಲ. ಹಟ್ಟಿಗೊಬ್ಬರ, ಹಸಿರೆಲೆಗಳನ್ನೇ ಗೊಬ್ಬರವನ್ನಾಗಿ ಬಳಸುತ್ತಾರೆ.

'ರಾಸಾಯನಿಕ, ರಸಗೊಬ್ಬರಗಳನ್ನು ಬಳಸಿದರೆ ಇಳುವರಿ ಜಾಸ್ತಿ. ಎಕರೆಗೆ 500ರಿಂದ 800 ಕೆಜಿಯವರೆಗೂ ಇಳುವರಿ ಬರುತ್ತದೆ. ನಾವು ಸಾಂಪ್ರದಾಯಿಕ ವಿಧಾನದಲ್ಲಿ ಬೆಳೆಯುವುದರಿಂದ ಎಕರೆಗೆ 300ರಿಂದ 350 ಕೆಜಿಯಷ್ಟೇ ಫಸಲು ಕೈಸೇರುತ್ತದೆ. ನಾವು ಹಿಂದಿನಿಂದಲೂ ಇದೇ ವಿಧಾನದಲ್ಲಿ ಬೆಳೆಯುತ್ತಿದ್ದು, ಅದೇ ಪದ್ಧತಿಯನ್ನು ಮುಂದುವರಿಸಿಕೊಂಡು ಬಂದಿದ್ದೇವೆ' ಎಂದು ಕಾಫಿ ಬೆಳೆಗಾರರೂ ಆಗಿರುವ ಜಿಲ್ಲಾ ಬುಡಕಟ್ಟು ಗಿರಿಜನ ಅಭಿವೃದ್ಧಿ ಸಂಘದ ಕಾರ್ಯದರ್ಶಿಯೂ ಆಗಿರುವ ಸಿ.ಮಾದೇಗೌಡ ತಿಳಿಸಿದರು.

ಕಾಫಿ ಬೆಳೆ ಆರಂಭಿಸುವುದಕ್ಕೂ ಮುನ್ನ, ಕಾಡಿನಿಂದ ಸಂಗ್ರಹಿಸಿದ ಜೇನು, ನೆಲ್ಲಿಕಾಯಿ ಸೇರಿದಂತೆ ಇತರೆ ಉತ್ಪನ್ನಗಳ ಮಾರಾಟದಿಂದ ಬರುವ ಹಣವೇ ಸೋಲಿಗರ ಪ್ರಮುಖ ಆದಾಯವಾಗಿತ್ತು.

'ಕಾಫಿ ಬೆಳೆಯಲು ಶುರು ಮಾಡಿದ ನಂತರ ಸಂಪಾದನೆ ಕೊಂಚ ಜಾಸ್ತಿಯಾಯಿತಾದರೂ ಅವರ ಶ್ರಮಕ್ಕೆ ತಕ್ಕ ಬೆಲೆ ಸಿಗುತ್ತಿರಲಿಲ್ಲ. ಬೆಳೆಯುವ ವಿಧಾನ, ಸಂಸ್ಕರಣೆ, ಮಾರುಕಟ್ಟೆಯ ಬಗ್ಗೆ ಮಾಹಿತಿಯೂ ಇರಲಿಲ್ಲ. ಸಾವಯವ ವಿಧಾನದಲ್ಲಿ ಕಾಫಿ ಬೆಳೆಯುವುದರಿಂದ ಇಳುವರಿ ಕಡಿಮೆ. ಮಧ್ಯವರ್ತಿಗಳೇ ಖರೀದಿ ಮಾಡುತ್ತಿದ್ದರು. ಮಧ್ಯವರ್ತಿಗಳು ಬೆಲೆ ಹೆಚ್ಚು ಕೊಡುತ್ತಿರಲಿಲ್ಲ. ಹಾಗಾಗಿ, ಉತ್ತಮ ಸಂಪಾದನೆ ಆಗುತ್ತಿರಲಿಲ್ಲ' ಎಂದು ಹೇಳುತ್ತಾರೆ ಸೋಲಿಗ ಮುಖಂಡರು.

'ಅಡವಿ' ಬ್ರ್ಯಾಂಡ್‌ನಡಿ ತರಹೇವಾರಿ ಉತ್ಪನ್ನಗಳು: ಕಾಫಿ ಬಿಟ್ಟು, ತಾವು ಸಂಗ್ರಹಿಸುತ್ತಿದ್ದ ಅರಣ್ಯ ಉಪ ಉತ್ಪನ್ನಗಳನ್ನು ಜಿಲ್ಲೆಯಲ್ಲಿರುವ (ಚಾಮರಾಜನಗರ) ನಾಲ್ಕು ಗಿರಿಜನರ ದೊಡ್ಡ ಪ್ರಮಾಣದ ವಿವಿಧೋದ್ದೇಶ ಸಹಕಾರ ಸಂಘಗಳಿಗೆ (ಲ್ಯಾಂಪ್ಸ್ ಸೊಸೈಟಿ) ಮಾರಾಟ ಮಾಡುತ್ತಿದ್ದರು. ಸಂಘದ ಆಡಳಿತ ಮಂಡಳಿಗಳು ಟೆಂಡರ್ ಕರೆದು ಉತ್ಪನ್ನ ಗಳನ್ನು ಬೇರೆ ಸಂಸ್ಥೆಗಳಿಗೆ ಮಾರಾಟ ಮಾಡುತ್ತವೆ. ಇದರಿಂದ ಜಿಲ್ಲೆಯ ಗಿರಿಜನರಿಗೆ ಕೂಲಿ ಬಿಟ್ಟು ಹೆಚ್ಚಿನ ಆರ್ಥಿಕ ಪ್ರಯೋಜನವಾಗುತ್ತಿರಲಿಲ್ಲ. ಇದನ್ನು ಮನಗಂಡ ಬಿಳಿಗಿರಿರಂಗನಬೆಟ್ಟದ ಸಮುದಾಯದ ಪ್ರಮುಖರು 2016ರಲ್ಲಿ ತಮ್ಮದೇ ಆದ ಉತ್ಪಾದಕ ಕಂಪನಿಯನ್ನು ಆರಂಭಿಸಿದರು. ಆ ರೀತಿ ಸ್ಥಾಪನೆಗೊಂಡ ಮೊದಲ ಸಂಸ್ಥೆಯೇ ಬಿಳಿಗಿರಿರಂಗಸ್ವಾಮಿ ಸೋಲಿಗರ ಸಂಸ್ಕರಣ ಸಂಘ. ಈ ಕಾರ್ಯಕ್ಕೆ ಸೋಲಿಗರಿಗೆ ಬೆಂಬಲವಾಗಿ ನಿಂತಿದ್ದು, ಏಟ್ರೀ (ಅಶೋಕ ಟ್ರಸ್ಟ್ ಫಾರ್ ರಿಸರ್ಚ್ ಇನ್ ಇಕಾಲಜಿ ಮತ್ತು ಎನ್ವಿರಾನ್‌ಮೆಂಟ್) ಸಂಸ್ಥೆ. 2018ರಲ್ಲಿ ಕಂಪನಿಯು ಅಧಿಕೃತವಾಗಿ ನೋಂದಣಿಯಾಯಿತು. ಆ ಬಳಿಕ ಅರಣ್ಯ ಉತ್ಪನ್ನಗಳ ಮೌಲ್ಯವರ್ಧನೆ ಆರಂಭಿಸಿತು.

2018ರಲ್ಲಿ ಸಮಾಜಕಲ್ಯಾಣ ಇಲಾಖೆ, ಕಾಫಿ ಮಂಡಳಿಯ ನೆರವಿನೊಂದಿಗೆ ಈ ಸಂಘವು 'ಅಡವಿ' ಬ್ರ್ಯಾಂಡ್‌ನಡಿ ಕಾಫಿ ಪುಡಿ ಸೇರಿದಂತೆ ವಿವಿಧ ಅರಣ್ಯದ ಉಪಉತ್ಪನ್ನಗಳನ್ನು ಮೌಲ್ಯವರ್ಧನೆ ಮಾಡಿ ಮಾರಾಟ ಮಾಡಲು ಆರಂಭಿಸಿತು. ಈಗ ಸಂಘವು ಜೇನುತುಪ್ಪ, ಕಾಫಿಪುಡಿ ಸೇರಿದಂತೆ 17 ಉತ್ಪನ್ನಗಳನ್ನು ತಯಾರಿಸಿ ಮಾರಾಟ ಮಾಡುತ್ತಿದೆ.

ಕಾಫಿಗಿಂತಲೂ ಹೆಚ್ಚಾಗಿ ಜೇನುತುಪ್ಪ ಸಂಗ್ರಹ, ಅದರ ಮೌಲ್ಯವರ್ಧನೆ ಮಾರಾಟಕ್ಕೆ ಸಂಸ್ಥೆ ಹೆಚ್ಚು ಒತ್ತು ನೀಡುತ್ತಿದೆ. ಐದು ಬಗೆಯ ಜೇನುತುಪ್ಪಗಳು (ಹೆಜ್ಜೇನು, ತುಡುವೆ ಜೇನು, ಕಡ್ಡಿ ಜೇನು, ಸೆಸರೆ ಜೇನು ಮತ್ತು ನೇರಳೆ ಜೇನು (ಸೀಸನ್‌ನಲ್ಲಿ ಮಾತ್ರ) ಸಂಘದಲ್ಲಿ ಲಭ್ಯವಿದೆ. ಇದಲ್ಲದೇ, ಅರಿಸಿನ ಪುಡಿ, ಕಾಳು ಮೆಣಸು, ಸೀಗೆಕಾಯಿ ಪುಡಿ, ಅಂಟುವಾಳ ಪುಡಿ, ನೇರಳೆ ಹಣ್ಣಿನ ಷರಬತ್ತು, ನೇರಳೆ ಬೀಜ ಪುಡಿ (ಸೀಸನ್ ಸಮಯದಲ್ಲಿ ಮಾತ್ರ), ನೆಲ್ಲಿಕಾಯಿಯ ವಿವಿಧ ಉತ್ಪನ್ನಗಳು (ನೆಲ್ಲಿಕಾಯಿ ಉಪ್ಪಿನಕಾಯಿ, ನೆಲ್ಲಿಕಾಯಿ ಪುಡಿ, ನೆಲ್ಲಿಕಾಯಿ ಷರಬತ್ತು, ನೆಲ್ಲಿಕಾಯಿ ಉಪ್ಪು, ಸಿಹಿ ಅಡಿಕೆ), ಮಾವಿನಕಾಯಿ ಉಪ್ಪಿನಕಾಯಿ, ಜೇನು ಮೇಣದಿಂದ ಮೋಂಬತ್ತಿ, ಲಿಪ್ ಬಾಮ್‌ಗಳನ್ನು ತಯಾರಿಸಿ ನೇರವಾಗಿ ಗ್ರಾಹಕರ ಕೈಗಿಡುತ್ತಿದೆ.

'ನಮ್ಮ ಸಂಘದಲ್ಲಿ 750 ಮಂದಿ ಸದಸ್ಯರಾಗಿದ್ದಾರೆ. ಬಿಳಿಗಿರಿರಂಗನಬೆಟ್ಟದ 13 ಪೋಡುಗಳು, ಹನೂರು, ಯಳಂದೂರು ತಾಲ್ಲೂಕಿನ ಸೋಲಿಗರು ಕೂಡ ಇದರ ಸದಸ್ಯರಾಗಿದ್ದಾರೆ. ನಾವು ಸದಸ್ಯರಿಂದ ನೇರವಾಗಿ ಉತ್ಪನ್ನಗಳನ್ನು ಖರೀದಿಸುತ್ತೇವೆ. ಕಡಿಮೆಯಾದರೆ ಲ್ಯಾಂಪ್ಸ್ ಸೊಸೈಟಿಯಿಂದಲೂ ಖರೀದಿ ಮಾಡುತ್ತೇವೆ' ಎಂದು ಸಂಘದ ಕಾರ್ಯದರ್ಶಿ ಸಿ.ಮಾದೇಗೌಡ ತಿಳಿಸಿದರು.

'ಉತ್ಪನ್ನಗಳ ಖರೀದಿ ಮಾತ್ರವಲ್ಲ, ಸಮುದಾಯದ ಸುಸ್ಥಿರ ಅಭಿವೃದ್ಧಿಯ ಧ್ಯೇಯವೂ ಈ ಸಂಘದ ಹಿಂದಿದೆ. ಅರಣ್ಯ ಉತ್ಪನ್ನಗಳನ್ನು ವ್ಯವಸ್ಥಿತವಾಗಿ ಸಂಗ್ರಹಿಸುವುದು, ಜೇನು ಸಾಕಣೆ, ಸಂಸ್ಕರಣೆ ಮಾಡುವ ಉಪಕರಣಗಳ ಬಳಕೆ, ಅರಣ್ಯ, ವನ್ಯಜೀವಿ ಸಂರಕ್ಷಣೆಯ ಬಗ್ಗೆ ಜಾಗೃತಿ ಮೂಡಿಸುವುದಕ್ಕಾಗಿ ಸದಸ್ಯರಿಗೆ ನಿರಂತರವಾಗಿ ತರಬೇತಿ, ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುತ್ತಾ ಬರುತ್ತಿದ್ದೇವೆ. ಜೇನು ಸಾಕಣೆಗಾಗಿ ಪೆಟ್ಟಿಗೆಗಳು, ಸಂಸ್ಕರಣೆಗಾಗಿ ಉಪಕರಣಗಳನ್ನು ವಿತರಿಸುವುದು ಸೇರಿದಂತೆ ವಿವಿಧ ಕಾರ್ಯಕ್ರಮಗಳನ್ನು ರೂಪಿಸುತ್ತಾ ಬಂದಿದ್ದೇವೆ' ಎಂದು ಅವರು ವಿವರಿಸಿದರು.

'ಬಿಳಿಗಿರಿರಂಗನ ಬೆಟ್ಟದ ಸುತ್ತಮುತ್ತ ಉತ್ಪಾದನೆಯಾಗುವ ಕಾಫಿ, ಕಿರು ಆಹಾರ ಉತ್ಪನ್ನಗಳನ್ನು ಉತ್ಪಾದಕ ಸಂಘಗಳಿಗೆ ಮಾರಾಟ ಮಾಡುವುದರಿಂದ ಮಧ್ಯವರ್ತಿಗಳ ಕಾಟ ತಪ್ಪಿದೆ. ಕಾಫಿ ಬೆಳೆಗೆ ಸಂಬಂಧಿಸಿದಂತೆ ಕಾಫಿ ಬೋರ್ಡ್ ರೈತರಿಗೆ ತರಬೇತಿ ಮತ್ತು ನೆರವು ನೀಡುತ್ತಿರುವುದರಿಂದ ಅನುಕೂಲವಾಗಿದೆ. ಇದರಿಂದ ಸೋಲಿಗರ ಆದಾಯ ಏರಿಕೆಯಾಗಿದೆ. ಆರ್ಥಿಕವಾಗಿ ಸಬಲೀಕರಣವಾಗುತ್ತ ಹೆಜ್ಜೆಹಾಕುತ್ತಿದ್ದಾರೆ' ಎಂದು ಸಂಘದ ಸದಸ್ಯ ಚಾರಿ ಶಿವಣ್ಣ ಹೇಳಿದರು.

ಅತ್ಯಾಧುನಿಕ ಸಂಸ್ಕರಣ ಘಟಕ: ಕೇಂದ್ರ ಸರ್ಕಾರದ ಸಣ್ಣ, ಅತಿ ಸಣ್ಣ ಮತ್ತು ಮಧ್ಯಮ ಕೈಗಾರಿಕಾ ಇಲಾಖೆಯ (ಎಂಎಸ್‌ಎಂಇ) 'ಸ್ಫೂರ್ತಿ' ಯೋಜನೆಯ ಪ್ರೋತ್ಸಾಹದಿಂದ ಸಂಘವು ಬಿಳಿಗಿರಿರಂಗನಬೆಟ್ಟದಲ್ಲಿ ಅತ್ಯಂತ ವ್ಯವಸ್ಥಿತವಾದ ಜೇನು ಸಂಸ್ಕರಣಾ ಘಟಕವನ್ನೂ ಸ್ಥಾಪಿಸಿದೆ. ಸಂಘದ ಪ್ರಯತ್ನಕ್ಕೆ ಜಿಲ್ಲಾಡಳಿತವೂ ಸಹಕಾರ ನೀಡಿದೆ. ಸಂಸ್ಕರಣಾ ಘಟಕಕ್ಕಾಗಿ ಅರ್ಧ ಎಕರೆ ಜಾಗ ನೀಡಿದೆ. ಈ ಯೋಜನೆಗೆ ₹3.50 ಕೋಟಿ ವೆಚ್ಚವಾಗಿದ್ದು, ಕೇಂದ್ರ ಸರ್ಕಾರ ₹3.20 ಕೋಟಿ ನೀಡಿದೆ. ಏಟ್ರೀ ಸಂಸ್ಥೆ ₹30 ಲಕ್ಷ ನೆರವು ಕೊಟ್ಟಿದೆ.

ಸಂಘವು ವಾರ್ಷಿಕವಾಗಿ ಸದಸ್ಯರು, ಲ್ಯಾಂಪ್ಸ್‌ನಿಂದ 5,000 ಕೆ.ಜಿಯಷ್ಟು ಜೇನು ತುಪ್ಪ ಖರೀದಿಸುತ್ತಿದೆ. ಅದನ್ನು ಘಟಕದಲ್ಲಿ ಸಂಸ್ಕರಿಸಿ, 250 ಗ್ರಾಂ, 500 ಗ್ರಾಂ ಬಾಟಲಿ ಪ್ಯಾಕಿಂಗ್ ಮಾಡಿ ಮಾರಾಟ ಮಾಡುತ್ತಿದೆ. ವಾರ್ಷಿಕವಾಗಿ 3,000ದಿಂದ 4,000 ಕೆ.ಜಿ ಜೇನುತುಪ್ಪವನ್ನು ಮಾರಾಟ ಮಾಡುತ್ತಿದೆ.

ಕರಿಮೆಣಸು (ಸರಾಸರಿ ಐದು ಕ್ವಿಂಟಲ್), ಅರಿಸಿನ (ಎಂಟು ಕ್ವಿಂಟಲ್), ಸೀಗೆಕಾಯಿ (ನಾಲ್ಕು ಕ್ವಿಂಟಲ್), ಅಂಟುವಾಳ ಕಾಯಿ (ಮೂರು ಕ್ವಿಂಟಲ್) ನೆಲ್ಲಿಕಾಯಿಗಳನ್ನು (ಸರಾಸರಿ ಐದು ಕ್ವಿಂಟಲ್) ವಾರ್ಷಿಕವಾಗಿ ಖರೀದಿಸಿ, ವಿವಿಧ ಉತ್ಪನ್ನಗಳನ್ನು ತಯಾರಿಸಿ ನೇರವಾಗಿ ಗ್ರಾಹಕರಿಗೆ ತಲುಪಿಸುತ್ತಿದೆ.

₹50 ಲಕ್ಷ ವಹಿವಾಟು: ಸಂಘ ಸ್ಥಾಪನೆಗೊಂಡ ಆರಂಭದ ಕೆಲವು ವರ್ಷಗಳಲ್ಲಿ ಅದರ ವಾರ್ಷಿಕ ವಹಿವಾಟು ₹5ರಿಂದ ₹8 ಲಕ್ಷದವರೆಗೆ ಇತ್ತು. ಅದೀಗ ₹40 ಲಕ್ಷದಿಂದ ₹50 ಲಕ್ಷದವರೆಗೆ ಏರಿದೆ. ವಾರ್ಷಿಕವಾಗಿ ₹6 ಲಕ್ಷದಿಂದ ₹8 ಲಕ್ಷ ನಿವ್ವಳ ಲಾಭ ಗಳಿಸುತ್ತಿದೆ.

'ಅರಣ್ಯ ಸಂರಕ್ಷಣೆಯನ್ನು ಮಾಡುವುದರ ಜೊತೆಗೆ ಸೋಲಿಗರು ಆರ್ಥಿಕವಾಗಿ ಅಭಿವೃದ್ಧಿ ಹೊಂದಬೇಕು ಎಂಬ ಉದ್ದೇಶದಿಂದ ಆರಂಭಮಾಡಿರುವ ಸಂಸ್ಥೆ ಇದು. ತಕ್ಕ ಮಟ್ಟಿಗೆ ಚೆನ್ನಾಗಿಯೇ ನಡೆಯುತ್ತಿದೆ. ಸರ್ಕಾರ, ಜಿಲ್ಲಾಡಳಿತದ ಸಹಕಾರವನ್ನೂ ನಾವು ನೆನೆಯುತ್ತೇವೆ. ಸೋಲಿಗರೇ ನಿರ್ವಹಿಸುವ ಸಂಸ್ಥೆ ಇದು. ಸಂಘದ ಸಿಬ್ಬಂದಿ, ಸಂಸ್ಕರಣ ಘಟಕದ ಸಿಬ್ಬಂದಿ ಎಲ್ಲರೂ ಸೋಲಿಗರೇ. ಅವರಿಗೆ ವೇತನವನ್ನೂ ನೀಡುತ್ತಿದ್ದೇವೆ. ಉತ್ಪನ್ನಗಳನ್ನು ಖರೀದಿಸುವಾಗ ಸದಸ್ಯರಿಗೆ ಉತ್ತಮ ಬೆಲೆ ನೀಡುತ್ತಿದ್ದೇವೆ. ಬಂದ ಲಾಭದಲ್ಲಿ ಸದಸ್ಯರಿಗೆ ಬೋನಸ್ ಕೂಡ ನೀಡುತ್ತಿದ್ದೇವೆ, ಕಳೆದ ವರ್ಷ ₹2 ಲಕ್ಷ ಬೋನಸ್ ಕೊಟ್ಟಿದ್ದೇವೆ. ಸದ್ಯ ಉತ್ಪನ್ನಗಳನ್ನು ಬಿಳಿಗಿರಿರಂಗನಬೆಟ್ಟ, ಮೈಸೂರು ಬಂಡೀಪುರಗಳಲ್ಲಿ ನಮ್ಮದೇ ಆದ ಮಳಿಗೆಗಳನ್ನು ತೆರೆದು ಮಾರಾಟ ಮಾಡುತ್ತಿದ್ದೇವೆ. ತಮಿಳುನಾಡು, ಕೇರಳ, ಆಂಧ್ರ ಪ್ರದೇಶಗಳಲ್ಲೂ ನಮಗೆ ಗ್ರಾಹಕರಿದ್ದಾರೆ. ಅಂಚೆ, ಕೊರಿಯರ್ ಮೂಲಕವೂ ಉತ್ಪನ್ನಗಳನ್ನು ತಲುಪಿಸುತ್ತಿದ್ದೇವೆ. ಮಾರುಕಟ್ಟೆ ವಿಸ್ತರಣೆ ಮಾಡಲು ಇನ್ನೂ ಅವಕಾಶ ಇದೆ. ಹಂತ ಹಂತವಾಗಿ ಸಂಘವನ್ನು ಅಭಿವೃದ್ಧಿಗೊಳಿಸಲು ಯೋಜನೆಗಳನ್ನು ಹಾಕಿಕೊಂಡಿದ್ದೇವೆ' ಎಂದು ಮಾದೇಗೌಡ ಹೇಳಿದರು.

ಕಾಫಿ ಬೆಳೆಗಾಗಿ ಮತ್ತೊಂದು ಸಂಸ್ಥೆ: ಬಿಳಿಗಿರಿರಂಗನಬೆಟ್ಟದಲ್ಲಿ ಸೋಲಿಗರು ಬೆಳಯುವ ಕಾಫಿಯನ್ನೇ ಗುರಿಯಾಗಿಸಿಕೊಂಡು ಆರಂಭಗೊಂಡ ಮತ್ತೊಂದು ಸಂಸ್ಥೆ ಬಿಳಿಗಿರಿ ಸೋಲಿಗರ ಉತ್ಪಾದಕ ಕಂಪನಿ. ಕರ್ನಾಟಕ ರಾಜ್ಯ ವಾಲ್ಮೀಕಿ ನಿಗಮ, ನಬಾರ್ಡ್ ಮತ್ತು ಕೇಂದ್ರ ಸರ್ಕಾರಗಳ ನೆರವಿನಿಂದ 2020ರಲ್ಲಿ ಆರಂಭಗೊಂಡ ಈ ಕಂಪನಿ ನಾಲ್ಕು ವರ್ಷಗಳ ಅವಧಿಯಲ್ಲೇ ಉತ್ತಮವಾಗಿ ಪ್ರಗತಿ ಕಾಣುತ್ತಿದೆ. ಕಾಫಿ ಮಂಡಳಿಯ ಮಾರ್ಗದರ್ಶನ ತಾಂತ್ರಿಕ ಸಹಕಾರವೂ ಈ ಕಂಪನಿಗಿದೆ. ಸದ್ಯ ಈ ಸಂಸ್ಥೆಯು ತನ್ನ ಸದಸ್ಯರಿಂದ ಕಾಫಿ ಬೀಜ ಖರೀದಿಸಿ, ಅದರಿಂದ ಕಾಫಿ ಪುಡಿ ತಯಾರಿಸುತ್ತಿದೆ. 'ಟ್ರೈ' ಎಂಬ ಬ್ರ್ಯಾಂಡ್ ಅಡಿಯಲ್ಲಿ ಕಾಫಿ ಪುಡಿಯನ್ನು ಮಾರಾಟ ಮಾಡಲಾಗುತ್ತಿದೆ. ಕಾಫಿ ಬೀಜ ಸಂಸ್ಕರಿಸಲು, ಪುಡಿ ಮಾಡಲು, ಪ್ಯಾಕಿಂಗ್ ಮಾಡಲು ಸ್ವಂತ ಘಟಕ ಇಲ್ಲದಿರುವುದರಿಂದ ಈ ಕೆಲಸಗಳನ್ನು ಹೊರಗಡೆ ಮಾಡಿಸುತ್ತಿದೆ.

'ಸಮುದಾಯದವರು ಬೆಳೆಯುವ ಕಾಫಿ ಯಾವಾಗಲೂ ಮಧ್ಯವರ್ತಿಗಳ ಪಾಲಾಗುತ್ತಿತ್ತು. ಹೆಚ್ಚು ಬೆಲೆಯೂ ಸಿಗುತ್ತಿರಲಿಲ್ಲ. ತೂಕದಲ್ಲೂ ಮೋಸವಾಗುತ್ತಿತ್ತು. ಸಾವಯವ ಕಾಫಿ ಬೀಜಗಳಿಗೆ ಉತ್ತಮ ಮಾರುಕಟ್ಟೆ ಕಲ್ಪಿಸುವ ಉದ್ದೇಶ ಮತ್ತು ಅದನ್ನು ಮೌಲ್ಯವರ್ಧನೆ ಮಾಡಿ ಗ್ರಾಹಕರಿಗೆ ನೇರವಾಗಿ ಮಾರಾಟ ಮಾಡುವ ಧ್ಯೇಯದೊಂದಿಗೆ ಕಂಪನಿ ಸ್ಥಾಪನೆ ಮಾಡಿದ್ದೇವೆ. ಆಡಳಿತ ಮಂಡಳಿಯಲ್ಲಿ 10 ಜನ ನಿರ್ದೇಶಕರಿದ್ದಾರೆ' ಎಂದು ಬಿಳಿಗಿರಿ ಸೋಲಿಗರ ಉತ್ಪಾದಕ ಕಂಪನಿಯ ಕಾರ್ಯದರ್ಶಿ ನಂಜೇಗೌಡ ಹೇಳಿದರು.

'ಸೋಲಿಗ ಕುಟುಂಬಗಳ ಮೂಲಕ 160ರಿಂದ 200 ಟನ್‌ಗಳಷ್ಟು ಕಾಫಿ ಬೀಜ ಉತ್ಪಾದನೆಯಾಗುತ್ತದೆ. ಕಂಪನಿಯಲ್ಲಿ 500 ಸದಸ್ಯರಿದ್ದು, ನಾವು ವಾರ್ಷಿಕವಾಗಿ 90ರಿಂದ 100 ಟನ್‌ಗಳಷ್ಟು ಕಾಫಿ ಬೀಜ ಖರೀದಿಸುತ್ತೇವೆ. ಸದಸ್ಯರಿಗೆ ಉತ್ತಮ ಬೆಲೆಯನ್ನು ನೀಡುತ್ತೇವೆ. ಕಂಪನಿಗೆ ಬಂದ ಲಾಭಾಂಶವನ್ನು ಬೋನಸ್ ರೂಪದಲ್ಲಿ ಹಂಚುತ್ತೇವೆ' ಎಂದು ಹೇಳಿದರು.

ಬಿಳಿಗಿರಿರಂಗನಬೆಟ್ಟದಲ್ಲಿ ಸೋಲಿಗರು ರಾಸಾಯನಿಕ ಮುಕ್ತವಾಗಿ, ಸಾವಯವ ವಿಧಾನದಿಂದ ಬೆಳೆಯುವ ಕಾಫಿಯನ್ನು ಪ್ರತ್ಯೇಕ ಬ್ರ್ಯಾಂಡಿಂಗ್ ಮಾಡುವ ಯತ್ನವನ್ನೂ ಕಂಪನಿ ನಡೆಸುತ್ತಿದೆ. ಒಟ್ಟಾರೆ ಕಾಫಿ ಕೃಷಿ ಹಾಗೂ ಅಡವಿ ಜೇನು ಮಾರಾಟವು ಸೋಲಿಗರ ಆರ್ಥಿಕತೆಯನ್ನು ಉತ್ತಮ ಸ್ಥಿತಿಗೆ ತರುವಲ್ಲಿ ಯಶಸ್ವಿ ಪ್ರಯತ್ನವಾಗಿದೆ.

ಪರಿಕಲ್ಪನೆ: ಯತೀಶ್ ಕುಮಾರ್ ಜಿ.ಡಿ

ಸೋಲಿಗರಿಗೆ ಅನುಕೂಲ

ಸೋಲಿಗರು ಕಾಫಿ ಹಾಗೂ ಅರಣ್ಯದ ಉತ್ಪನ್ನಗಳನ್ನು ನೇರವಾಗಿ ಕಂಪನಿಗಳಿಗೆ ಮಾರಾಟ ಮಾಡುತ್ತಿರುವುದರಿಂದ ಉತ್ತಮ ವರಮಾನ ಸಿಗುತ್ತಿದೆ. ಕಾಫಿ ಮಂಡಳಿಯು ತರಬೇತಿ ಮತ್ತು ಬೆಳೆ ನಿರ್ವಹಣೆಯ ಬಗ್ಗೆ ತಾಂತ್ರಿಕ ನೆರವು ಕೂಡ ನೀಡುತ್ತಿದೆ. ಅರಣ್ಯ ಉತ್ಪನ್ನಗಳನ್ನು ಹೆಚ್ಚು ವ್ಯವಸ್ಥಿತವಾಗಿ ಸಂಗ್ರಹಿಸುವ ಬಗ್ಗೆ ತಜ್ಞರ ಮಾರ್ಗದರ್ಶನವೂ ಸಿಗುತ್ತಿದೆ. ನಮ್ಮಲ್ಲಿರುವ ಎರಡು ಕಂಪನಿಗಳಿಂದ ಸಮುದಾಯದವರಿಗೆ ಅನುಕೂಲವಾಗಿದೆ.

ತಂತ್ರಿ ಕೇತಮ್ಮ, ಬಿಳಿಗಿರಿರಂಗನಬೆಟ್ಟ



ಬಿಳಿಗಿರಿರಂಗನಬೆಟ್ಟದಲ್ಲಿರುವ ಬಿಳಿಗಿರಿ ರಂಗಸ್ವಾಮಿ ಸೋಲಿಗರ ಸಂಸ್ಕರಣಾ ಸಂಘದ 'ಅಡವಿ' ಮಳಿಗೆ

ಕಾಫಿ ಸಂಸ್ಕರಣ ಘಟಕದ ಕೊರತೆ

ಎರಡೂ ರೈತ ಉತ್ಪಾದಕ ಕಂಪನಿಗಳು ಸದಸ್ಯರಿಂದ ಖರೀದಿಸಿದ ಕಾಫಿ ಬೀಜಗಳನ್ನು ಸಂಸ್ಕರಿಸಿ, ಪುಡಿ ಮಾಡುವ ಘಟಕ ಬಿಳಿಗಿರಿರಂಗನಬೆಟ್ಟದಲ್ಲಿ ಇಲ್ಲ. ಸದ್ಯ ಬೆಂಗಳೂರಿನಲ್ಲಿ ಖಾಸಗಿ ಘಟಕವೊಂದರಲ್ಲಿ ಪುಡಿ ಮಾಡಿ ನಂತರ ಪ್ಯಾಕಿಂಗ್ ಮಾಡಲಾಗುತ್ತಿದೆ. ಸ್ವಂತ ಸಂಸ್ಕರಣ ಘಟಕ ಸ್ಥಾಪಿಸಬೇಕು ಎಂಬ ಉದ್ದೇಶ ಸಂಘಗಳಿಗಿವೆ. ಆದರೆ, ಅದಕ್ಕೆ ಅನುದಾನ ಮತ್ತು ಜಾಗದ ಅಗತ್ಯವಿದೆ.

ಸುಸಜ್ಜಿತ ಸಂಸ್ಕರಣ ಘಟಕಗಳ ಸ್ಥಾಪನೆಗಾಗಿ ಜಿಲ್ಲಾಡಳಿತಕ್ಕೆ ಎರಡು ಎಕರೆ ಜಾಗ ನೀಡುವಂತೆ ಮನವಿ ಮಾಡಿದ್ದೇವೆ. ಜಿಲ್ಲಾಡಳಿತ ಜಾಗ ಕೊಟ್ಟರೆ ನಮಗೆ ಅನುಕೂಲವಾಗುತ್ತದೆ' ಎಂದು ನಂಜೇಗೌಡ ಹೇಳಿದರು.



ಜೇನುಮೇಣದಿಂದ ತಯಾರಿಸಿದ ಮೇಣದಬತ್ತಿ ಮತ್ತು ಲಿಪ್ ಬಾಮ್

'ಫೈರ್' ಸಂಘಟನೆ ವಿರುದ್ಧ ಕೆಎಫ್‌ಸಿಸಿ ಅಧ್ಯಕ್ಷ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ದೇಶಕಿ ಕವಿತಾ ಲಂಕೇಶ್ ಅಧ್ಯಕ್ಷರಾಗಿರುವ ಫಿಲ್ಮ್ ಇಂಡಸ್ಟ್ರಿ ಫಾರ್ ರೈಟ್ಸ್ ಆ್ಯಂಡ್ ಈಕ್ವಾಲಿಟಿ (ಫೈರ್) ವಿರುದ್ಧ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿ(ಕೆಎಫ್‌ಸಿಸಿ) ಅಧ್ಯಕ್ಷ ಎನ್.ಎಂ.ಸುರೇಶ್ ವಾಗ್ದಾಳಿ ನಡೆಸಿದ್ದಾರೆ.

ಶನಿವಾರ(ಸೆ.21) ನಟಿ ಭಾವನಾ, ನಿರ್ದೇಶಕ ಟೇ.ಶಿ.ವೆಂಕಟೇಶ್ ನೇತೃತ್ವದಲ್ಲಿ 'ಕನ್ನಡ ಚಲನಚಿತ್ರ ಸಂರಕ್ಷಣಾ ವೇದಿಕೆ' ಪ್ರತಿನಿಧಿಗಳು ಕೆಎಫ್‌ಸಿಸಿಗೆ ಭೇಟಿ ನೀಡಿ ಲೈಂಗಿಕ ದೌರ್ಜನ್ಯ ತಡೆ (ಪಾಶ್) ಸಮಿತಿ ರಚನೆ ವಿರುದ್ಧ ಮನವಿ ಸಲ್ಲಿಸಿದರು.



ಎನ್.ಎಂ.ಸುರೇಶ್

ಮನವಿ ಸ್ವೀಕರಿಸಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸುರೇಶ್, 'ಎಲ್ಲ ಹೆಣ್ಣುಮಕ್ಕಳಿಗೆ ಗೌರವ ಕೊಡುವುದು ನಮ್ಮ ಧರ್ಮ. ಹೆಣ್ಣುಮಕ್ಕಳ ಬಗ್ಗೆ ನಮಗೂ ಕಾಳಜಿ ಇದೆ. ಯಾರಿಗಾದರೂ ಶೋಷಣೆ, ದೌರ್ಜನ್ಯ ಆದ ಪಕ್ಷದಲ್ಲಿ ವಾಣಿಜ್ಯ ಮಂಡಳಿಗೆ ನೇರವಾಗಿ ದೂರು ಕೊಡಿ. ಫೈರ್ ಸಂಸ್ಥೆ ಅಥವಾ ಇನ್ಯಾವುದೇ ಸಂಸ್ಥೆಗೂ ನಮಗೂ ಸಂಬಂಧವಿಲ್ಲ. ಚೇತನ್ ಅವರೇ ನಿಮ್ಮ ರೂಪುರೇಷೆ, ಕಾರ್ಯವ್ಯಾಪ್ತಿಯನ್ನು ನಿಮ್ಮಲ್ಲೇ ಇಟ್ಟುಕೊಳ್ಳಿ. ಹಲವು ದಶಕಗಳ ಇತಿಹಾಸ ಇರುವ ವಾಣಿಜ್ಯ ಮಂಡಳಿಗೆ ನೀವು ಸವಾಲು ಹಾಕಲು ಹೋಗಬೇಡಿ. ಚಿತ್ರರಂಗದಲ್ಲಿ ಯಾರಿಗೂ ಏನೂ ತೊಂದರೆ ಆಗಿಲ್ಲ. ತೊಂದರೆಯಾದರೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮದಿದೆ' ಎಂದು ಹೇಳಿದರು.

'ಇಂತಹ ವಾತಾವರಣ ಸೃಷ್ಟಿಸಿ, ನಮ್ಮ ನಮ್ಮಲ್ಲೇ ದ್ವಂದ್ವ ಹುಟ್ಟಿಸುವ ಅವಶ್ಯಕತೆ ಇತ್ತೇ? ಇಂತಹ ಹೆಜ್ಜೆಗಳಿಗೆ ನಾವು ಬೆಂಬಲ ನೀಡುವುದಿಲ್ಲ. ಮುಖ್ಯಮಂತ್ರಿಗಳು ಈ ಬಗ್ಗೆ ಕೇಳಿದಾಗ ನಮಗೂ ಫೈರ್ ಸಂಸ್ಥೆಗೂ ಸಂಬಂಧವೇ ಇಲ್ಲ ಎಂದಿದ್ದೇನೆ' ಎಂದರು.

'ಲೈಂಗಿಕ ದೌರ್ಜನ್ಯ ತಡೆ (ಪಾಶ್) ಸಮಿತಿ ರಚನೆ ಕುರಿತು ಮಹಿಳಾ ಆಯೋಗ ನೀಡಿದ ಪತ್ರಕ್ಕೆ ಕಾನೂನು ತಜ್ಞರ ಜೊತೆ ಚರ್ಚಿಸಿ ಉತ್ತರ ಕೊಡುತ್ತೇವೆ. ನಮ್ಮ ಮಂಡಳಿ ಕಡೆಯಿಂದ ಉತ್ತರಕ್ಕೆ ಸಮಯಾವಕಾಶ ಕೋರಿ ಪತ್ರ ಬರೆಯುತ್ತೇನೆ. ಮಹಿಳಾ ಆಯೋಗ ಈಗೇಕೆ ಏಕಾಏಕಿ ಬಂದು ಪಾಶ್ ಸಮಿತಿ ಮಾಡಲು ಸೂಚಿಸಿತು. ಇಲ್ಲಿಯವರೆಗೆ ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ಗಮನಕ್ಕೆ ಅವರು ಏಕೆ ತಂದಿಲ್ಲ?' ಎಂದು ಪ್ರಶ್ನಿಸಿದರು.

ಆರ್‌ಟಿಐ ಅರ್ಜಿಗೆ ಸೆಬಿ ಉತ್ತರ ಪಾರದರ್ಶಕತೆಯ ಅಣಕ–ಕಾಂಗ್ರೆಸ್

ನವದೆಹಲಿ (ಪಿಟಿಐ): 'ಸೆಬಿ ಅಧ್ಯಕ್ಷೆ ಮಾಧವಿ ಪುರಿ ಬುಚ್ ಅವರು ಹಿತಾಸಕ್ತಿ ಸಂಘರ್ಷದ ಯಾವೆಲ್ಲಾ ಸಂದರ್ಭಗಳಲ್ಲಿ ನಿರ್ಣಯ ತೆಗೆದುಕೊಳ್ಳುವುದರಿಂದ ಹಿಂದೆ ಸರಿದಿದ್ದಾರೆ ಎಂಬ ಮಾಹಿತಿ ನೀಡುವುದಕ್ಕೆ ಸಾಧ್ಯವಿಲ್ಲ' ಎಂದು ಆರ್‌ಟಿಐ ಅರ್ಜಿಯೊಂದಕ್ಕೆ ಸೆಬಿ ನೀಡಿರುವ ಪ್ರತಿಕ್ರಿಯೆಗೆ ಕಾಂಗ್ರೆಸ್ ಶನಿವಾರ ತೀವ್ರ ವಾಗ್ದಾಳಿ ನಡೆಸಿದೆ.

ಆರ್‌ಟಿಐ ಕಾರ್ಯಕರ್ತ ಲೋಕೇಶ್ ಭತ್ರಾ ಅವರು ಈ ಬಗ್ಗೆ ಸೆಬಿಗೆ ಆರ್‌ಟಿಐ ಅರ್ಜಿ ಸಲ್ಲಿಸಿದ್ದರು. ಮಾಧವಿ ತಮ್ಮ ಆಸ್ತಿಯ ಕುರಿತು ಕೇಂದ್ರ ಸರ್ಕಾರ ಹಾಗೂ ಸೆಬಿಗೆ ನೀಡಿರುವ ಮಾಹಿತಿಯನ್ನು ಹಾಗೂ ಇವುಗಳನ್ನು ನೀಡಿದ ದಿನಾಂಕದ ತಿಳಿಸುವಂತೆ ಅರ್ಜಿಯಲ್ಲಿ ಕೇಳಲಾಗಿತ್ತು. ಇವುಗಳನ್ನು ಬಹಿರಂಗಪಡಿಸಲು ಸೆಬಿ ನಿರಾಕರಿಸಿದೆ. 'ಸೆಬಿಯ ಈ ಕ್ರಮವು, ಸಾರ್ವಜನಿಕ ಹೊಣೆಗಾರಿಕೆ ಹಾಗೂ ಪಾರದರ್ಶಕತೆಗೆ ಅಣಕ ಮಾಡಿದಂತಾಗಿದೆ' ಎಂದು ಕಾಂಗ್ರೆಸ್ ಹೇಳಿದೆ.

'ಹಿತಾಸಕ್ತಿ ಸಂಘರ್ಷದ ಯಾವೆಲ್ಲಾ ಸಂದರ್ಭದಲ್ಲಿ ಮಾಧವಿ ಅವರು ನಿರ್ಣಯ ಕೈಗೊಳ್ಳುವಾಗ ಹಿಂದೆ ಸರಿದಿದ್ದಾರೆ ಎಂಬ ಮಾಹಿತಿಯನ್ನು ಕಲೆ ಹಾಕುವುದಕ್ಕೆ ಸೆಬಿಯ ಸಂಪನ್ಮೂಲವು ವ್ಯರ್ಥವಾಗುತ್ತದೆ. ಜೊತೆಗೆ, ತಮ್ಮ ಆಸ್ತಿಯ ಕುರಿತು ಮಾಧವಿ ಅವರು ನೀಡಿರುವ ಮಾಹಿತಿಯನ್ನು ಸಾರ್ವಜನಿಕಗೊಳಿಸುವುದರಿಂದ ಮಾಧವಿ ಅವರ 'ವೈಯಕ್ತಿಕ ಮಾಹಿತಿ'ಯನ್ನು ಬಹಿರಂಗ ಮಾಡಿದಂತಾಗುತ್ತದೆ. ಜೊತೆಗೆ, ಅವರ ಈ ಮಾಹಿತಿಗಳನ್ನು ಬಹಿರಂಗ ಮಾಡುವುದರಿಂದ ಅವರ ಜೀವಕ್ಕೂ ಆಪತ್ತು ತಂದಂತಾಗುತ್ತದೆ' ಎಂದು ಆರ್‌ಟಿಐ ಅರ್ಜಿಗೆ ಸೆಬಿಯು ಶುಕ್ರವಾರ ಉತ್ತರ ನೀಡಿತ್ತು.

ರಾಹುಲ್ ಗಾಂಧಿ ವಿರುದ್ಧ ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ವಿದೇಶಕ್ಕೆ ಹೋದಾಗ ಭಾರತದ ಬಗ್ಗೆ ಅಪಮಾನಕರ ಹೇಳಿಕೆ ನೀಡಿದ್ದಾರೆ. ಸಮುದಾಯಗಳನ್ನು ನಿಂದಿಸಿದ್ದಾರೆ ಎಂದು ಹೈಗ್ರೌಂಡ್ಸ್ ಠಾಣೆಗೆ ಬಿಜೆಪಿ ಶನಿವಾರ ದೂರು ನೀಡಿದೆ.

ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಛಲವಾದಿ ನಾರಾಯಣಸ್ವಾಮಿ, ಮುಖ್ಯ ಸಚೇತಕ ಎನ್. ರವಿಕುಮಾರ್, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ನಿವೃತ್ತ ಪೊಲೀಸ್ ಅಧಿಕಾರಿ ಭಾಸ್ಕರ ರಾವ್, ಬಿಜೆಪಿ ಎಸ್‌ಸಿ ಮೋರ್ಚಾ ರಾಜ್ಯ ಘಟಕದ ಉಪಾಧ್ಯಕ್ಷ ಹೂಡಿ ಮಂಜುನಾಥ್ ಮತ್ತಿತರರು ದೂರು ನೀಡಿದರು.

'ರಾಹುಲ್ ವಿರುದ್ಧ ವಿಜಯಪುರ, ಬೆಳಗಾವಿ, ಬಾಗಲಕೋಟೆಯಲ್ಲೂ ದೂರು ಕೊಡಲಾಗಿದೆ. ಅವರ ವಿರುದ್ಧ ಎಫ್‌ಐಆರ್ ದಾಖಲಿಸಬೇಕು' ಎಂದು ಒತ್ತಾಯಿಸಿದರು.

ಮುನಿರತ್ನಗೆ ಎಸ್‌ಐಟಿ ತನಿಖೆ ಬಿಸಿ

ಒಂದನೇ ಮುಖಪುಟದಿಂದ...

'ಜಾತಿ ನಿಂದನೆ ಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆ ಮಾಡಿ, ಲಂಚಕ್ಕೆ ಬೇಡಿಕೆ ಇಟ್ಟಿರುವ ಕುರಿತು ಮತ್ತು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ (ದೌರ್ಜನ್ಯ ತಡೆ) ಕಾಯ್ದೆಯಡಿ ಸೆ. 13ರಂದು ವೈಯಾಲಿಕಾವಲ್ ಠಾಣೆಯಲ್ಲಿ ಮುನಿರತ್ನ ಮತ್ತು ಇತರರ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಾಗಿದೆ. ಮಹಿಳೆಯೊಬ್ಬರು ನೀಡಿದ ದೂರಿನ ಮೇಲೆ ಕಗ್ಗಲೀಪುರ ಠಾಣೆಯಲ್ಲಿ ಅತ್ಯಾಚಾರ ಪ್ರಕರಣ ಸೆ. 18ರಂದು ದಾಖಲಾಗಿದೆ. ಈ ಪ್ರಕರಣಗಳ ಗಂಭೀರತೆಯನ್ನು ಪರಿಗಣಿಸಿ ತನಿಖೆಗೆ ವಿಶೇಷ ತನಿಖಾ ತಂಡ ರಚಿಸಲಾಗಿದೆ ಎಂದು ಆದೇಶದಲ್ಲಿ ಗೃಹ ಇಲಾಖೆ ವಿವರಿಸಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರನ್ನು ಶುಕ್ರವಾರ ಭೇಟಿ ಮಾಡಿದ್ದ ಒಕ್ಕಲಿಗ ಸಮುದಾಯದ ಸಚಿವರು, ಶಾಸಕರ ನಿಯೋಗವು ಮುನಿರತ್ನ ಮೇಲಿನ ಪ್ರಕರಣಗಳ ತನಿಖೆಗೆ ವಿಶೇಷ ತನಿಖಾ ತಂಡ ರಚಿಸುವಂತೆ ಮನವಿ ಸಲ್ಲಿಸಿತ್ತು.

ಗುಂಡಣ್ಣ



25 ವರ್ಷಗಳ ಹಿಂದೆ

ಬುಧವಾರ, 22-09-1999

- **ತೈವಾನ್‌ನಲ್ಲಿ ಭೀಕರ ಭೂಕಂಪ: 1700ಕ್ಕೂ ಹೆಚ್ಚು ಜನರ ಬಲಿ**

ತೈಪೆ, ಸೆ.21 (ರಾಯಿಟರ್ಸ್)– ತೈವಾನ್‌ನಲ್ಲಿ ಈ ಶತಮಾನದಲ್ಲೇ ಅತ್ಯಂತ ಭೀಕರವೆನಿಸಿದ ಭೂಕಂಪ ಇಂದು ನಸುಕಿನಲ್ಲಿ ಸಂಭವಿಸಿ 1,700ಕ್ಕೂ ಹೆಚ್ಚು ಜನ ಸತ್ತಿದ್ದಾರೆ.

ಕಟ್ಟಡಗಳ ಭಗ್ನಾವಶೇಷಗಳಡಿ ಸುಮಾರು ಮೂರು ಸಾವಿರ ಮಂದಿ ಸಿಲುಕಿದ್ದಾರೆ. ಸುಮಾರು 4,000 ಜನರಿಗೆ ಗಾಯಗಳಾಗಿವೆ. ಒಂದು ಲಕ್ಷಕ್ಕೂ ಹೆಚ್ಚು ಜನರು ಮನೆ ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಪರಿಹಾರ ಕಾರ್ಯ ತಂಡಗಳು ಬದುಕುಳಿದವರನ್ನು ರಕ್ಷಿಸಲು ಅವಿರತವಾಗಿ ಶ್ರಮಿಸುತ್ತಿದ್ದಾವೆ.

50 ವರ್ಷಗಳ ಹಿಂದೆ

ಭಾನುವಾರ, 22-09-1974

- **ಕಳ್ಳಸಾಗಾಣೆದಾರರ ಗೂಢಜಾಲ ಭೇದಿಸಲು ಸರ್ಕಾರದ ದೃಢ ಕ್ರಮ**

ನವದೆಹಲಿ, ಸೆ.21– ಕಳ್ಳಸಾಗಣೆದಾರರ ವಿರುದ್ಧ ಸರ್ಕಾರ ಈಗ ಕೈಗೊಂಡಿರುವ ಉಗ್ರ ಕ್ರಮ ಕಡೆಯ ತನಕ ಮುಂದುವರಿಯುವುದು ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಕೆ.ಆರ್.ಗಣೇಶ್ ಅವರು ಇಂದು ಘೋಷಿಸಿದರು.

ಹಲವು ವರ್ಷಗಳಿಂದ ಸಾಗಾಣೆದಾರರು ರಚಿಸಿಕೊಂಡಿರುವ ವ್ಯಾಪಕ ಮತ್ತು ಸಶಕ್ತ ಜಾಲವನ್ನು ಭೇದಿಸಲು ಮತ್ತು ಕಳ್ಳಸಾಗಣೆ ಕಾರ್ಯಚರಣೆ ಪತ್ತೆಹಚ್ಚಲು ಗೂಢಚರ ಸಂಸ್ಥೆ, ಸುಂಕದಕಟ್ಟೆ ಮತ್ತು ಆದಾಯ ತೆರಿಗೆ ಇಲಾಖೆಗಳನ್ನು ಕ್ರಮ ಕೈಗೊಳ್ಳಲಾಗಿದೆ ಎಂದರು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ — ಭಾನುವಾರ ಸೆಪ್ಟೆಂಬರ್ 22, 2024

ಶ್ರೀ ಕ್ರೋಧಿ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಭಾದ್ರಪದ ಕೃಷ್ಣ ಪಂಚಮಿ ಗಂ. 15-44 ನಕ್ಷತ್ರ: ಕೃತ್ತಿಕಾ ಗಂ. 23-03 ಯೋಗ: ಹರ್ಷಣ ಗಂ. 8-17 ನಂತರ ವಜ್ರ ಗಂ. 29-27 ಕರಣ: ತೈತಿಲ ಗಂ. 15-44, ಕನ್ಯಾ ಮಾಸದ 06 ನೇ ದಿನ, ಮಳೆನಕ್ಷತ್ರ: ಉತ್ತರಫಲ್ಗುಣಿ 3.
ರಾಹುಕಾಲ: ಸಾಯಂಕಾಲ 04-30–06-00
ಸೂರ್ಯೋದಯ: 06-23 ಸೂರ್ಯಾಸ್ತ: 06-23
ಮುಸ್ಲಿಂ ದಿನಾಂಕ: 18 ರಬಿಉಲ್ಲಾವಲ್, ಅದೃಷ್ಟ ಸಂಖ್ಯೆ: 8, 5

ಮೇಷ: ಸ್ವಂತ ಉದ್ಯೋಗ ಮಾಡುವವರಿಗೆ ವರಮಾನದಲ್ಲಿ ಉತ್ತಮ ಸುಧಾರಣೆಯಾಗುವುದು. ದಂತ ವೈದ್ಯ ವೃತ್ತಿಯವರಿಗೆ ಹಾಗೂ ದಂತ ಸಮಸ್ಯೆಗೆ ಚಿಕಿತ್ಸೆ ಪಡೆಯಲು ಅನುಕೂಲವಾದ ದಿನ. ಧರ್ಮ ಕಾರ್ಯಗಳಲ್ಲಿ ಭಾಗಿಯಾಗಿ.

ವೃಷಭ: ಸತ್ಯನಾರಾಯಣ ಸ್ವಾಮಿಯ ಸೇವೆಯನ್ನು ಮಾಡುವುದರಿಂದ ನಿಮ್ಮ ಜಟಿಲ ಸಮಸ್ಯೆಗಳು ಕೂಡ ಸೌಹಾರ್ದಯುತವಾಗಿ ಬಗೆಹರಿಯಲಿದೆ. ಬಹುಮುಖದ ಖರ್ಚು-ವೆಚ್ಚಗಳನ್ನು ನಿರ್ವಹಿಸಬೇಕಾಗಬಹುದು.

ಮಿಥುನ: ಬಂಧುಗಳ ಮನೆಯ ಶುಭಕಾರ್ಯಗಳಲ್ಲಿ ಹೆಚ್ಚಿನ ಜವಾಬ್ದಾರಿ ಮತ್ತು ಓಡಾಟವಿರುವುದು. ವ್ಯವಹಾರದಲ್ಲಿ ಸೋದರನನ್ನು ಸೇರಿಸಿಕೊಂಡು ನೂತನ ಘಟಕಗಳನ್ನು ಆರಂಭಿಸುವಿರಿ. ನಿಶ್ಚಿತ ರೂಪದಲ್ಲಿ ಕೆಲಸಗಳು ಜರುಗಲಿವೆ.

ಕರ್ಕಾಟಕ: ಹಿರಿಯರಿಂದ ತಿಳಿದುಕೊಂಡಿದ್ದ ಕೆಲ ವಿಷಯಗಳು ಉಪಯೋಗಕ್ಕೆ ಬರಲಿದೆ. ಯಾರ ನೆರವೂ ಇಲ್ಲದೆ ನಿಮ್ಮೆಲ್ಲ ಕಾರ್ಯಗಳನ್ನು ಸ್ವಯಂ ನೀವೇ ನಿರ್ವಹಿಸುವುದು ಉತ್ತಮ. ಯೋಗಾಭ್ಯಾಸ ಮನಸ್ಸಿಗೆ ಹಿತವೆನಿಸುವುದು.

ಸಿಂಹ: ವ್ಯಾಪಾರ, ವ್ಯವಹಾರಗಳಲ್ಲಿ ತೀವ್ರವಾದ ಪೈಪೋಟಿ ಎದುರಾಗಿ ಆತಂಕಕ್ಕೆ ಕಾರಣವಾಗಲಿದೆ. ಸಂಧಾನ ಅಥವಾ ಕರಾರು ಒಪ್ಪಂದಗಳು ಅನುಕೂಲಕರ ಎನಿಸಲಿದೆ. ಕೆಲಸ ಕಾರ್ಯಗಳಲ್ಲಿ ಹೆಚ್ಚಿನ ಏಕಾಗ್ರತೆ ಅಗತ್ಯ.

ಕನ್ಯಾ: ದಿನದ ಪ್ರಾರಂಭದಲ್ಲಿ ಕೆಲಸಗಳು ಕುಂಠಿತವಾಗಿ ಸಾಗಿದರೂ ಉತ್ತರಾರ್ಧದ ವೇಳೆಗೆ ತೃಪ್ತಿ ಉಂಟಾಗಲಿದೆ. ಹೆಚ್ಚಿನ ವಿದ್ಯಾಭ್ಯಾಸಕ್ಕಾಗಿ ದೂರ ಪ್ರಯಾಣ ಮಾಡಬೇಕಾಗುವುದು.

ತುಲಾ: ಮನಸ್ಸಿಗೆ ಮುದ ನೀಡುವ ಕಾರ್ಯಕ್ರಮಗಳಲ್ಲಿ ಹೆಚ್ಚಿನ ಉತ್ಸಾಹದಿಂದ ಭಾಗವಹಿಸುವಿರಿ. ಕೆಲಸದ ಸರಿ ತಪ್ಪುಗಳ ಬಗ್ಗೆ ತಿಳಿಯುವ ಪ್ರಯತ್ನವನ್ನು ಮಾಡಿ. ಬಂಧು-ಮಿತ್ರರ ಒಡನಾಟದಿಂದ ಸಂತೋಷ ತೋರಿಬರಲಿದೆ.

ವೃಶ್ಚಿಕ: ಕೆಲವು ಸವಾಲುಗಳನ್ನು ಎದುರಿಸುವ ಸಂದರ್ಭಗಳು ಎದುರಾಗಬಹುದು ಮತ್ತು ಅದರಲ್ಲಿ ಸಮ್ಮಿಶ್ರ ಫಲಿತಾಂಶ ಪಡೆಯುವಂತಾಗಲಿದೆ. ಮನೆ ದೇವರಿಗೆ ಪೂಜೆ ಸಲ್ಲಿಸುವಿರಿ.

ಧನು: ವ್ಯವಹಾರಗಳಲ್ಲಿ ನುರಿತವರ ಸಲಹೆಗಳನ್ನು ಪಡೆದುಕೊಂಡಲ್ಲಿ ಖಂಡಿತವಾಗಿ ಯಶಸ್ವಿಯಾಗುವಿರಿ. ಅನಿರೀಕ್ಷಿತವಾಗಿ ರಾಜಕೀಯದಲ್ಲಿ ಸ್ಥಾನ ದೊರೆತು ರಾಜಕೀಯ ರಂಗದ ಉದ್ದ ಅಗಲದ ಅರಿವಾಗುತ್ತದೆ.

ಮಕರ: ಬಿಡುವಿಲ್ಲದ ಕೆಲಸ ಮತ್ತು ಮೇಲಾಧಿಕಾರಿಗಳ ಹೆಚ್ಚಿನ ಒತ್ತಡಗಳಿಂದಾಗಿ ವೈಯಕ್ತಿಕ ವಿಷಯಗಳತ್ತ ಗಮನ ಹರಿಸಲು ಸಮಯವಿಲ್ಲದಂತಾಗುವುದು.

ಕುಂಭ: ಭರವಸೆಯ ಮಾತುಗಳು ಸಹೋದ್ಯೋಗಿಯೊಬ್ಬರಿಗೆ ಆತ್ಮಸ್ಥೈರ್ಯ ತಂದುಕೊಡುವುದು. ಸರ್ಕಾರಿ ಅಧಿಕಾರಿಗಳ ವರ್ಗಾವಣೆ ಪ್ರಕ್ರಿಯೆ ಆರಂಭಗೊಳ್ಳಲಿದೆ. ಕಬ್ಬಿಣ ಅಥವಾ ಗ್ಲಾಸ್‌ನಿಂದ ಗಾಯಗಳಾಗಬಹುದು.


ಮೀನ: ಸಿನಿಮಾ ನಟ, ನಟಿಯರಿಗೆ ಉತ್ತಮ ಅವಕಾಶದ ಶುಭ ಸುದ್ದಿ ಸಿಗುವುದು. ಹೆಚ್ಚಿನ ಹೊಣೆಗಾರಿಕೆಯನ್ನು ಹೊರಲು ಸಿದ್ಧರಾಗಿರುವಿರಿ. ತಂದೆಯವರ ಮಾತಿನಿಂದ ಅತೃಪ್ತಿಯ ವಾತಾವರಣ ಮೂಡಿ ಬರಲಿದೆ.

ಪದಬಂಧ 5810

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
2.ಇಂದ್ರಿಯ ಗೋಚರವಾದ ಪದಾರ್ಥ (2)
3.ನಡುವೆ ರಾಜಿ ಇದ್ದರೂ ಈತ ಸೋಲಿಸಲ್ಪಟ್ಟವನು (4)
5.ಮಲಗುವಿಕೆಯನ್ನು ಹೀಗೆನ್ನಿ (3)
6.ಕರದಲ್ಲಿರುವ ಚಿನ್ನ ಕಾಣುತ್ತಿದೆಯೇ? (4)
8.ರತ್ನಗಳನ್ನು ಅಡಗಿಸಿಕೊಂಡಿರುವ ಸಮುದ್ರ (4)
12.ಇದಿನ್ನೂ ಎಳೆಯ ಮಗು (4)
14.ಓಡುತ್ತಾ ಹೋಗಿ ಸುದ್ದಿ ಮುಟ್ಟಿಸುವವನು (4)
15.ಆಕಾಶದಲ್ಲಿ ಹಾಡುವ ಪಕ್ಷಿ (3)
16.ಕಳವಳ ಹೀಗೆ ಬಂದಿದೆ (4)
17.ಗುಡಾಣದಂತಿರುವವನ ಸ್ವಭಾವ (2)

ಮೇಲಿಂದ ಕೆಳಕ್ಕೆ
1.ಮೃಗದ ನಡುವಳಿಕೆಯಿದು (5)
2.ವರ ಪಡೆದಿರುವ ಬೇಡ (4)
3.ಕರ ಕೊನೆಗಿದ್ದಾಗಿನ ಸಾಮಾನು (4)
4.ತವರಲ್ಲಿರುವ ಲೋಹ (3)
7.ಎದೆಯನ್ನು ಹೊಟ್ಟೆಯಿಂದ ಬೇರ್ಪಡಿಸುವ ಪದರ (2)
9.ಇನ್ನೂ ಕರು ಹಾಕದ ಹಸು (3)
10.ಲಾಂಗೂಲ ಹಿಡಿದು ಬಂದ ಅನುಯಾಯಿ (5)
11.ಹುರಿಯಾಳು ಹಿಡಿದಿರುವ ಹೊಸೆದ ದಾರ (2)
12.ಹರನಿಂದ ಪ್ರಾರಂಭವಾದ ಮುಷ್ಕರ (4)
13.ಇದು ಹೂವಿನ ಶರ (4)
14.ತೀಕ್ಷ್ಣತೆ ಇಲ್ಲಿ ಕಾಣುತ್ತಿದೆ (3)



5809ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುವಾದ 3.ಮನಸಾಕ್ಷಿ
5.ತಪನ 7.ಜನಜನಿತ
10.ಶುಕ್ರ 11.ರಚ್ಚು
12.ಮಹಾನವಮಿ 15.ಹರಿತ
17.ಪರದಾಟ 18.ಗುಣಗಾನ

ಮೇಲಿಂದ ಕೆಳಕ್ಕೆ:
1.ಅತೀತ 2.ವಾದನ
3.ಮಲಯಜ 4.ಕ್ಷಿತಿಜ
6.ಪರಾಕ್ರಮ 8.ನಟ್ಟುವ
9.ತರಕಾರಿ 13.ನರಳಾಟ
14.ಬಳಪ 15.ಹರಿಣ
16.ತಲ್ಲೀನ

ಸುಡೊಕು 6195

				8			2	
	3	1						8
6		5		9		4		3
	2		6				3	
5		3	2		1	8		9
	1				9		4	
	6			2				4
3		8	9				5	
	5			3				1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6194 ಸುಡೊಕು

1	8	3	5	2	6	9	4	7
2	9	5	3	4	7	1	8	6
7	6	4	9	8	1	5	2	3
9	1	6	4	7	5	2	3	8
3	4	7	2	9	8	6	1	5
5	2	8	6	1	3	7	9	4
8	3	1	7	5	9	4	6	2
6	5	2	1	3	4	8	7	9
4	7	9	8	6	2	3	5	1

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ತಾಲೀಮಿನಲ್ಲಿ ಶನಿವಾರ ಸಮಾಧಾನದಿಂದ ಭಾಗಿಯಾದ 'ಧನಂಜಯ', 'ಕಂಜನ್'

ಗೇಟ್ ತಳ್ಳಿ ರಸ್ತೆಯಲ್ಲಿ ಓಡಾಡಿದ್ದ ಆನೆಗಳು

ಪ್ರಜಾವಾಣಿ ವಾರ್ತೆ

ಮೈಸೂರು: ಇಲ್ಲಿನ ಅಂಬಾವಿಲಾಸ ಅರಮನೆಯ ಜಯಮಾರ್ತಾಂಡ ಗೇಟ್‌ನಲ್ಲಿ ಬ್ಯಾರಿಕೇಡ್ ತಳ್ಳಿ ಹೊರಬಂದು, ಮೈಸೂರು– ಊಟಿ ರಸ್ತೆಯಲ್ಲಿ ಓಡಾಡಿ ಜನರಲ್ಲಿ ಆತಂಕ ಮೂಡಿಸಿದ್ದ ದಸರಾ ಆನೆಗಳಾದ 'ಧನಂಜಯ' ಹಾಗೂ 'ಕಂಜನ್' ಶನಿವಾರ ಬೆಳಿಗ್ಗೆ ಮತ್ತು ಸಂಜೆ ತಾಲೀಮಿನಲ್ಲಿ ಭಾಗವಹಿಸಿದವು. 'ವರಲಕ್ಷ್ಮಿ' ಆನೆ ಬಿಟ್ಟು ಉಳಿದ 13 ಆನೆಗಳಿಗೂ ತಾಲೀಮು ನೀಡಲಾಯಿತು.



'ಕಂಜನ್' ಹಾಗೂ 'ಧನಂಜಯ' ಆನೆಗಳು ಶುಕ್ರವಾರ ರಾತ್ರಿ ಅರಮನೆಯ ಮುಂದಿನ ರಸ್ತೆಯತ್ತ ಓಡಿಬಂದ ದೃಶ್ಯ

ಶುಕ್ರವಾರ ರಾತ್ರಿ ನಡೆದ ಘಟನೆಯಿಂದ ತೀವ್ರ ಆತಂಕ ಉಂಟಾಗಿತ್ತು. ಊಟದ ಸಮಯದಲ್ಲಿ ಎರಡೂ ಆನೆಗಳು ಜಗಳವಾಡಿದ್ದರಿಂದ ಅವುಗಳನ್ನು ಮಾವುತರು ಹಾಗೂ ಕಾವಾಡಿಗಳು ಅರಮನೆ ಆವರಣದೊಳಗೆ ನಿಯಂತ್ರಿಸುವುದು ಸಾಧ್ಯವಾಗಿರಲಿಲ್ಲ. ಧನಂಜಯ ಆನೆಯು ಕಂಜನ್ ಆನೆಯನ್ನು ಅಟ್ಟಾಡಿಸಿಕೊಂಡು ಬಂದಿತ್ತು. ಕಂಜನ್ ಘೀಳಿಡುತ್ತಾ ರಸ್ತೆಗೆ ಬಂದಿದ್ದ. ಆಗ ಅಲ್ಲಿ ಕೆಲವರಷ್ಟೆ ಇದ್ದರು. ಹೆಚ್ಚಿನ ವಾಹನಗಳೂ ಇರಲಿಲ್ಲ. ಹೀಗಾಗಿ ಯಾವುದೇ ಅನಾಹುತ ಸಂಭವಿಸಿಲ್ಲ. ನಂತರ ಮಾವುತ ಹಾಗೂ ಕಾವಾಡಿಗಳು ಕೆಲವೇ ಹೊತ್ತಿನಲ್ಲಿ ಅವುಗಳನ್ನು ನಿಯಂತ್ರಿಸಿದರು.

ಈ ಬಗ್ಗೆ ಶನಿವಾರ ಪ್ರತಿಕ್ರಿಯಿಸಿದ ಡಿಸಿಎಫ್ ಐ.ಬಿ.ಪ್ರಭುಗೌಡ, 'ಸ್ಥಳದಿಂದ ಧನಂಜಯನು ಶುಕ್ರವಾರ ರಾತ್ರಿ ಆಹಾರ ನೀಡುತ್ತಿದ್ದಾಗ, ಹಿಂದಿನಿಂದ ಕಂಜನ್ ಬಂದಿದ್ದ. ಜಗಳ ಮಾಡಿದ ಧನಂಜಯ ಕಂಜನ್‌ನನ್ನು ದಂತದಿಂದ ದೂಡಿ, ಓಡಿಸಿಕೊಂಡು ಹೋಗಿದ್ದ. ಕಂಜನ್ ಓಡುವ ರಭಸಕ್ಕೆ ಮಾವುತ ಕೆಳಗೆ ಬಿದ್ದಿದ್ದ' ಎಂದು ತಿಳಿಸಿದರು.

'ಇವು ದುಬಾರೆ ಶಿಬಿರದ ಆನೆಗಳು. ಅಲ್ಲಿಯೂ ಜಗಳವಾಡುತ್ತಿದ್ದವು. ಗಂಡಾನೆಗಳು ಶೌರ್ಯ ಪ್ರದರ್ಶಿಸುವುದು ಸಾಮಾನ್ಯ. ಅವುಗಳನ್ನು ನಿಯಂತ್ರಿಸಲು ನಮ್ಮ ತಂಡ ಸದಾ ಸನ್ನದ್ಧವಾಗಿರುತ್ತದೆ. ಅಗತ್ಯ ಪರಿಕರಗಳಿವೆ. ವೈದ್ಯರೂ ಇರುತ್ತಾರೆ. ಹೀಗಾಗಿ, ಆತಂಕಪಡುವ ಅಗತ್ಯವಿಲ್ಲ' ಎಂದರು.

ಮುಖ್ಯಾಂಶಗಳು
- ಶುಕ್ರವಾರ ರಾತ್ರಿ ಜಗಳವಾಡಿದ್ದ ಎರಡು ಆನೆಗಳು
- ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದ ವಿಡಿಯೊ
- ತಾಲೀಮಿನಲ್ಲಿ 13 ಆನೆಗಳು ಭಾಗಿ

ಮುಖ್ಯಮಂತ್ರಿಯಾಗಿ ಆತಿಶಿ ಪ್ರಮಾಣ

ಎರಡನೇ ಮುಖಪುಟದಿಂದ...

ಸಮಾರಂಭಕ್ಕೂ ಮುನ್ನ ಆತಿಶಿ ಸೇರಿ ಐವರು ನಾಯಕರು ಕೇಜ್ರಿವಾಲ್ ಅವರನ್ನು ಭೇಟಿ ಮಾಡಿದ್ದರು. 'ಕೇಜ್ರಿವಾಲ್ ಅವರ ಹಠಾತ್ ರಾಜೀನಾಮೆಯ ಘೋಷಣೆಯಿಂದ ಕಾರ್ಯಕರ್ತರು ಬೇಸರದಲ್ಲಿದ್ದರು. ಆದ್ದರಿಂದ ಸಮಾರಂಭವನ್ನು ಸರಳವಾಗಿ ರೂಪಿಸಲಾಗಿತ್ತು' ಎಂದು ನಾಯಕರು ಹೇಳಿದರು.

ಕಾರ್ಯಕ್ರಮದಲ್ಲಿ ಆತಿಶಿ ಅವರ ತಂದೆ ವಿಜಯ್ ಸಿಂಗ್ ಹಾಗೂ ತಾಯಿ ತೃಪ್ತಾ ವಾಹಿ, ಅರವಿಂದ ಕೇಜ್ರಿವಾಲ್, ಮಾಜಿ ಉಪಮುಖ್ಯಮಂತ್ರಿ ಮನೀಷ್ ಸಿಸೋಡಿಯಾ, ಪಕ್ಷದ ಶಾಸಕರು ಹಾಗೂ ಇತರ ನಾಯಕರು ಭಾಗವಹಿಸಿದ್ದರು. ಜೊತೆಗೆ, ವಿಧಾನಸಭೆಯ ಸ್ಪೀಕರ್ ರಾಮ್ ನಿವಾಸ್ ಗೋಯೆಲ್, ವಿರೋಧ ಪಕ್ಷದ ನಾಯಕ ವಿಜೇಂದರ್ ಗುಪ್ತಾ, ಕೇಂದ್ರದ ರಾಜ್ಯ ಖಾತೆ ಸಚಿವ ಹರ್ಷ್ ಮಲ್ಹೋತ್ರಾ ಸೇರಿ ಬಿಜೆಪಿ ಸಂಸದರೂ ಕಾರ್ಯಕ್ರಮದಲ್ಲಿ ಹಾಜರಿದ್ದರು.

ವಿದ್ಯುತ್, ನೀರಿನ ದರಗಳನ್ನು ಕಡಿಮೆ ಮಾಡುವುದರ ಮೂಲಕ ಹೊಸ ಸರ್ಕಾರವು ಜನರಿಗೆ ಅನುಕೂಲ ಮಾಡಿಕೊಡಬೇಕು
ರಾಮ್‌ವೀರ್ ಸಿಂಗ್ ಬಿಧೂಡಿ, ದಕ್ಷಿಣ ದೆಹಲಿ ಕ್ಷೇತ್ರದ ಬಿಜೆಪಿ ಸಂಸದ

ದೆಹಲಿ ಜನರ ಸೇವೆಯೇ ನಮ್ಮ ಆದ್ಯತೆ. ವಿಶೇಷ ಸಂದರ್ಭದಲ್ಲಿ ಸರ್ಕಾರವು ಬದಲಾಗಿದೆ. ಕೇಜ್ರಿವಾಲ್ ಅವರನ್ನು ಮತ್ತೊಮ್ಮೆ ಮುಖ್ಯಮಂತ್ರಿ ಮಾಡುವುದೇ ನಮ್ಮ ಗುರಿ
ಗೋಪಾಲ್ ರಾಯ್, ಸಚಿವ

ಎಲ್‌ಜಿ ನಿಭಾಯಿಸುವ ಸವಾಲು

ಅರವಿಂದ ಕೇಜ್ರಿವಾಲ್ ಅವರು ದೆಹಲಿ ಮುಖ್ಯಮಂತ್ರಿ ಆಗಿದ್ದ ಸಂದರ್ಭದಲ್ಲಿ, ಅವರ ಹಾಗೂ ಲೆಫ್ಟಿನೆಂಟ್ ಗವರ್ನರ್ (ಎಲ್‌ಜಿ) ವಿ.ಕೆ. ಸಕ್ಸೇನಾ ಅವರ ಮಧ್ಯದ ಆಡಳಿತ ಸಂಬಂಧವು ಹಳಸಿತ್ತು. ಅವರ ನಡುವಿನ ಸಂಘರ್ಷವು ಸುಪ್ರೀಂ ಕೋರ್ಟ್‌ವರೆಗೂ ತಲುಪಿತ್ತು.

ಈಗ ಆತಿಶಿ ಅವರು ಮುಖ್ಯಮಂತ್ರಿಯಾಗಿದ್ದಾರೆ. ಫೆಬ್ರುವರಿಯಲ್ಲಿ ವಿಧಾನಸಭೆಗೆ ಚುನಾವಣೆಯೂ ನಡೆಯಲಿದೆ. ಉಳಿದ ಐದು ತಿಂಗಳಲ್ಲಿ ಸರ್ಕಾರಕ್ಕೆ ಚೈತನ್ಯ ತುಂಬಬೇಕಿದೆ. ಬಾಕಿ ಇರುವ ಯೋಜನೆಗಳಿಗೆ ಚಾಲನೆ ನೀಡಬೇಕು. ಜೊತೆಗೆ, ಹೊಸ ಹೊಸ ಯೋಜನೆಗಳನ್ನು ರೂಪಿಸಬೇಕಿದೆ. ಇದಕ್ಕೆ ಎಲ್‌ಜಿ ಅವರ ಸಹಕಾರ ಅಗತ್ಯವಾಗಿದೆ. ಈ ಎಲ್ಲವನ್ನೂ ಸಂಭಾಳಿಸುವುದು ಆತಿಶಿ ಅವರ ಮುಂದಿರುವ ಬಹುದೊಡ್ಡ ಸವಾಲಾಗಿದೆ.

'ಅರ್ಕಾವತಿ ರೀಡೂ ವರದಿ ಕೊಡಿ'

ಮೊದಲನೇ ಮುಖಪುಟದಿಂದ...

ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ, ಕಾಂಗ್ರೆಸ್ ಪಕ್ಷವು ಶೇ 40ರಷ್ಟು ಕಮಿಷನ್ ಆರೋಪ ಮಾಡಿತ್ತು. ಅದಕ್ಕೆ ತಿರುಗೇಟು ನೀಡಿದ್ದ ಬೊಮ್ಮಾಯಿ, ಅರ್ಕಾವತಿ ಹಗರಣವನ್ನು ಹೊರತಂದು ಶಿಕ್ಷೆಗೆ ಗುರಿಪಡಿಸುತ್ತೇವೆ ಎಂದು ಎಚ್ಚರಿಸಿದ್ದರು.

ಆದರೆ, ಯಾವುದೇ ಕ್ರಮವೂ ಆಗಿರಲಿಲ್ಲ.

'ಕೆಂಪಣ್ಣ ಆಯೋಗವು ತಮ್ಮನ್ನು ದೋಷ ಮುಕ್ತಗೊಳಿಸಿ ವರದಿ ನೀಡಿದೆ' ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದ್ದರು.

ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ನಿವೇಶನ ಹಂಚಿಕೆ ಪ್ರಕರಣದಲ್ಲಿ ತಮ್ಮ ವಿರುದ್ಧ ತನಿಖೆಗೆ ರಾಜ್ಯಪಾಲರು ಅನುಮತಿ ನೀಡಿರುವುದನ್ನು ಪ್ರಶ್ನಿಸಿ ಸಿದ್ದರಾಮಯ್ಯ ಅವರು ಸಲ್ಲಿಸಿದ್ದ ರಿಟ್ ಅರ್ಜಿ ಮೇಲಿನ ತೀರ್ಪನ್ನು ಹೈಕೋರ್ಟ್ ನೀಡಲು ಬಾಕಿ ಇರುವ ಮಧ್ಯೆಯೇ, ಅರ್ಕಾವತಿ ಬಡಾವಣೆಗೆ ಸಂಬಂಧಿಸಿದಂತೆ ಕೆಂಪಣ್ಣ ವಿಚಾರಣಾ ಆಯೋಗದ ವರದಿಯನ್ನು ರಾಜ್ಯಪಾಲರು ಕೇಳಿರುವುದು ರಾಜಕೀಯ ವಲಯದಲ್ಲಿ ಚರ್ಚೆಗೆ ಗ್ರಾಸ ಒದಗಿಸಿದೆ.

ರಾಜ್ಯಪಾಲರಿಗೆ ಆಗಸ್ಟ್ 24ರಂದು ಪತ್ರ ಬರೆದಿದ್ದ ವಿಧಾನ ಪರಿಷತ್ ಬಿಜೆಪಿ ಸದಸ್ಯ ಸಿ.ಟಿ. ರವಿ, ಕೆಂಪಣ್ಣ ಆಯೋಗದ ವರದಿಯನ್ನು ಸಾರ್ವಜನಿಕವಾಗಿ ಬಹಿರಂಗಪಡಿಸುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಿರ್ದೇಶನ ನೀಡಬೇಕು ಎಂದು ಮನವಿ ಮಾಡಿದ್ದರು. 'ಕೆಂಪಣ್ಣ ಆಯೋಗವು 2017ರ ಆಗಸ್ಟ್‌ನಲ್ಲಿ ಸರ್ಕಾರಕ್ಕೆ ತನ್ನ ವರದಿ ಸಲ್ಲಿಸಿದೆ. ಜಮೀನುಗಳ ಡಿನೋಟಿಫಿಕೇಷನ್ ವಿಷಯದಲ್ಲಿ ಕಾಂಗ್ರೆಸ್ ಸರ್ಕಾರದ ವಿರುದ್ಧ ಭ್ರಷ್ಟಾಚಾರದ ಆರೋಪಗಳು ಕೇಳಿ ಬಂದಾಗ, ಸಿದ್ದರಾಮಯ್ಯ ಅವರೇ ಈ ಆಯೋಗವನ್ನು ರಚಿಸಿದ್ದರು' ಎಂದೂ ತಮ್ಮ ಪತ್ರದಲ್ಲಿ ಉಲ್ಲೇಖಿಸಿದ್ದರು.

ರಾಜ್ಯಪಾಲರ ನೋಟಿಸ್, ಪತ್ರ...

- ಮುಡಾದಲ್ಲಿನ ನಿವೇಶನ ಹಂಚಿಕೆಗೆ ಸಂಬಂಧಿಸಿ ಸಿ.ಎಂ.ಗೆ ಶೋಕಾಸ್ ನೋಟಿಸ್
- ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಕುಟುಂಬಕ್ಕೆ ಸೇರಿದ ಸಿದ್ಧಾರ್ಥ ವಿಹಾರ ಟ್ರಸ್ಟ್‌ಗೆ ನಿಯಮ ಉಲ್ಲಂಘಿಸಿ ಕೆಐಎಡಿಬಿ ಸಿ.ಎ ನಿವೇಶನ ಹಂಚಿರುವ ಆರೋಪದ ಕುರಿತು ಸ್ಪಷ್ಟನೆ ನೀಡಬೇಕು
- ಕೆಐಎಡಿಬಿಯಿಂದ ಸಿ.ಎ ನಿವೇಶನ ಹಂಚಿಕೆಗೆ ಸಂಬಂಧಿಸಿದಂತೆ ಸಾಮಾಜಿಕ ಕಾರ್ಯಕರ್ತ ದಿನೇಶ್ ಕಲ್ಲಹಳ್ಳಿ ಸಲ್ಲಿಸಿದ್ದ ದೂರಿಗೆ ಸಂಬಂಧಿಸಿದಂತೆ ವಾಸ್ತವಿಕ ವರದಿ ಸಲ್ಲಿಸಬೇಕು
- ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದ ಅವಧಿಯಿಂದ ಈವರೆಗೆ ಅಧಿಕಾರಿ, ನೌಕರರ ವಿರುದ್ಧ ಪ್ರಾಸಿಕ್ಯೂಷನ್ ಅನುಮತಿ ಕೋರಿ ಲೋಕಾಯುಕ್ತ ಸಲ್ಲಿಸಿರುವ ಎಲ್ಲ ಪ್ರಸ್ತಾವಗಳ ಕುರಿತ ಸಮಗ್ರ ಮಾಹಿತಿ ನೀಡಬೇಕು
- ಎಚ್‌ಡಿಕೆ, ನಿರಾಣಿ, ಜೊಲ್ಲೆ, ಜನಾರ್ದನ ರೆಡ್ಡಿ ವಿರುದ್ಧದ ಪ್ರಕರಣಗಳಲ್ಲಿ ಲೋಕಾಯುಕ್ತರು ರಾಜ್ಯಪಾಲರಿಗೆ ಸಲ್ಲಿಸಿದ್ದ ಗೋಪ್ಯ ಮನವಿ ಸರ್ಕಾರಕ್ಕೆ ಗೊತ್ತಾಗಿದ್ದು ಹೇಗೆ ಎಂಬ ಬಗ್ಗೆ ಮಾಹಿತಿ ಕೊಡಬೇಕು

ಗಂಗೇನಹಳ್ಳಿ ಡಿನೋಟಿಫೈ: ಬಿಎಸ್‌ವೈ ವಿಚಾರಣೆ

ಮೊದಲನೇ ಮುಖಪುಟದಿಂದ...

ಸಚಿವರಾದ ಕೃಷ್ಣ ಬೈರೇಗೌಡ, ದಿನೇಶ್ ಗುಂಡೂರಾವ್ ಮತ್ತು ಸಂತೋಷ್ ಲಾಡ್ ಅವರು ಗುರುವಾರವಷ್ಟೇ ಮಾಧ್ಯಮಗೋಷ್ಠಿ ನಡೆಸಿ, 'ಕುಮಾರಸ್ವಾಮಿ ಅವಧಿಯಲ್ಲಿ ಡಿನೋಟಿಫಿಕೇಷನ್‌ಗೆ ಯತ್ನ ನಡೆದಿತ್ತು. ಯಡಿಯೂರಪ್ಪ ಅವಧಿಯಲ್ಲಿ ಆ ಪ್ರಕ್ರಿಯೆ ಪೂರ್ಣಗೊಂಡಿದೆ. ಇದರಿಂದ ಕುಮಾರಸ್ವಾಮಿ ಅವರ ಅತ್ತೆ ಮತ್ತು ಭಾಮೈದನಿಗೆ ಅನುಕೂಲವಾಗಿದೆ. ಈ ಬಗ್ಗೆ ಲೋಕಾಯುಕ್ತವು ತನಿಖೆಯನ್ನು ತ್ವರಿತಗತಿಯಲ್ಲಿ ನಡೆಸಬೇಕು' ಎಂದು ಒತ್ತಾಯಿಸಿದ್ದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ್ದ ಕುಮಾರಸ್ವಾಮಿ ಅವರು, 'ನನ್ನ ಸಂಬಂಧಿಗಳು ಕಾನೂನುಬದ್ಧವಾಗಿಯೇ ಜಮೀನು ಖರೀದಿಸಿದ್ದಾರೆ. ನನ್ನ ಅವಧಿಯಲ್ಲಿ ಡಿನೋಟಿಫಿಕೇಷನ್ ಆಗಿದೆಯೇ? ನಾನು ಡಿನೋಟಿಫಿಕೇಷನ್ ಮಾಡಿದ್ದೇನೆಯೇ' ಎಂದು ಪ್ರಶ್ನಿಸಿದ್ದರು.

'ಮಾಡಿದ್ದು ನಾನೇ...'

'ಡಿನೋಟಿಫಿಕೇಷನ್ ಮಾಡಿದ್ದು ನಾನೇ. ಎಚ್.ಡಿ.ಕುಮಾರಸ್ವಾಮಿ ಅಥವಾ ಯಾರದೇ ಒತ್ತಡಕ್ಕೆ ಮಣಿದು ಅದನ್ನು ಮಾಡಿಲ್ಲ ಎಂದು ಯಡಿಯೂರಪ್ಪ ಅವರು ತನಿಖಾಧಿಕಾರಿಗಳ ಮುಂದೆ ಹೇಳಿದ್ದಾರೆ' ಎಂದು ಮೂಲಗಳು ತಿಳಿಸಿವೆ.

'ಅದು ರೈತರ ಜಮೀನಾಗಿತ್ತು. ಭೂಸ್ವಾಧೀನದಿಂದ ಕೈಬಿಡುವಂತೆ ನನ್ನ ಮುಂದೆ ಅರ್ಜಿ ಬಂದಿತ್ತು. ರೈತರು ಮತ್ತು ಸಾರ್ವಜನಿಕರಿಗೆ ಅನುಕೂಲವಾಗಲಿ ಎಂದು ಡಿನೋಟಿಫಿಕೇಷನ್ ಮಾಡುವಂತೆ ಆದೇಶ ಬರೆದೆ. ಇದರಲ್ಲಿ ನನಗೆ ಯಾವುದೇ ಹಿತಾಸಕ್ತಿ ಇರಲಿಲ್ಲ ಎಂದು ಯಡಿಯೂರಪ್ಪ ಹೇಳಿದ್ದಾರೆ' ಎಂದು ತಿಳಿಸಿವೆ.

ಪ್ರಕರಣವೇನು...

ಮತದಹಳ್ಳಿ ವಿಸ್ತರಿತ ಬಡಾವಣೆಯಲ್ಲಿ ವಸತಿ ಸಮುಚ್ಚಯ ನಿರ್ಮಿಸಲು ಗಂಗೇನಹಳ್ಳಿಯಲ್ಲಿ 1976ರಲ್ಲಿ ಭೂಸ್ವಾಧೀನಕ್ಕೆ ಪ್ರಾಥಮಿಕ, 1977ರಲ್ಲಿ ಅಂತಿಮ ಅಧಿಸೂಚನೆ ಹೊರಡಿಸಲಾಗಿತ್ತು.

ಈ ಜಮೀನನ್ನು ಭೂಸ್ವಾಧೀನದಿಂದ ಕೈಬಿಡುವಂತೆ ರಾಜಶೇಖರಯ್ಯ ಎಂಬುವವರು 2007ರಲ್ಲಿ ಅಂದಿನ ಮುಖ್ಯಮಂತ್ರಿ ಕುಮಾರಸ್ವಾಮಿ ಅವರಿಗೆ ಮನವಿ ಸಲ್ಲಿಸಿದ್ದರು. ಡಿನೋಟಿಫಿಕೇಷನ್ ಸಾಧ್ಯವಿಲ್ಲ ಎಂದು ಅಧಿಕಾರಿಗಳು ಹೇಳಿದ್ದರು. ಆದರೆ, 2010ರಲ್ಲಿ ಅಂದಿನ ಮುಖ್ಯಮಂತ್ರಿ ಯಡಿಯೂರಪ್ಪ ಡಿನೋಟಿಫಿಕೇಷನ್ ಮಾಡಿದ್ದರು.

ಈ ಸಂಬಂಧ 2015ರಲ್ಲಿ ಜಯಕುಮಾರ್ ಹಿರೇಮಠ ಎಂಬುವವರು ಲೋಕಾಯುಕ್ತಕ್ಕೆ ದೂರು ನೀಡಿದ್ದರು. 'ಡಿನೋಟಿಫಿಕೇಷನ್ ಆಗುವ ಮುನ್ನವೇ ಕುಮಾರಸ್ವಾಮಿ ಅವರ ಅತ್ತೆ ವಿಮಲಾ (ಪತ್ನಿಯ ಅಮ್ಮ) ಜಮೀನನ್ನು ಜಿಪಿಎ ಮಾಡಿಸಿಕೊಂಡಿದ್ದರು. ಅಧಿಕಾರಿಗಳು ಬೇಡವೆಂದರೂ, ಯಡಿಯೂರಪ್ಪ ಡಿನೋಟಿಫಿಕೇಷನ್ ಮಾಡಿದ್ದಾರೆ. ಆನಂತರ ಕುಮಾರಸ್ವಾಮಿ ಅವರ ಅತ್ತೆ, ತಮ್ಮ ಮಗ ಚನ್ನಪ್ಪ ಅವರಿಗೆ (ಅನಿತಾ ಕುಮಾರಸ್ವಾಮಿ ಅವರ ಸೋದರ) ಜಮೀನು ಮಾರಿದ್ದಾರೆ' ಎಂದು ಆರೋಪಿಸಿದ್ದರು.

ಈ ದೂರಿನ ಆಧಾರದಲ್ಲಿ ದಾಖಲಾದ ಎಫ್‌ಐಆರ್ ರದ್ದುಪಡಿಸುವಂತೆ ಯಡಿಯೂರಪ್ಪ ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಹೈಕೋರ್ಟ್, 'ಮೇಲ್ನೋಟಕ್ಕೆ ಅಕ್ರಮ ನಡೆದಂತೆ ಕಾಣುತ್ತದೆ. ಈ ಬಗ್ಗೆ ತನಿಖೆಯಾಗುವುದು ಸೂಕ್ತ' ಎಂದು ಹೇಳಿತ್ತು. ಯಡಿಯೂರಪ್ಪಗೆ ₹25,000 ದಂಡವನ್ನೂ ವಿಧಿಸಿತ್ತು.

ಸ್ಯಾಮ್ಸಂಗ್ ನೌಕರರಿಗೆ ನೋಟಿಸ್

ಚೆನ್ನೈ (ಪಿಟಿಐ): ತಕ್ಷಣವೇ ಕೆಲಸಕ್ಕೆ ಹಾಜರಾದರೆ ಕ್ರಮ ಜರುಗಿಸುವುದಿಲ್ಲ. ಹೋರಾಟ ಮುಂದುವರಿಸಿದರೆ ಕೆಲಸದಿಂದ ವಜಾಗೊಳಿಸಲಾಗುವುದು ಎಂದು ಶ್ರೀಪೆರಂಬದೂರು ಘಟಕದಲ್ಲಿ ಪ್ರತಿಭಟನನಿರತ ಉದ್ಯೋಗಿಗಳಿಗೆ ಸ್ಯಾಮ್ಸಂಗ್ ಕಂಪನಿಯು ನೋಟಿಸ್ ನೀಡಿದೆ.

ನೋಟಿಸ್‌ಗೆ ಸೆ. 23ರೊಳಗೆ ಸೂಕ್ತ ಉತ್ತರ ನೀಡಬೇಕು ಎಂದು ಸೂಚಿಸಿದೆ.

ವೇತನ ಪರಿಷ್ಕರಣೆ ಸೇರಿ ವಿವಿಧ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಸೆ. 9ರಿಂದ ಸಿಐಟಿಯು ಬೆಂಬಲಿತ ಸ್ಯಾಮ್ಸಂಗ್ ಇಂಡಿಯಾ ವರ್ಕರ್ಸ್ ಯೂನಿಯನ್ ನೇತೃತ್ವದಡಿ ಒಂದು ಸಾವಿರಕ್ಕೂ ಹೆಚ್ಚು ನೌಕರರು ಹೋರಾಟ ನಡೆಸುತ್ತಿದ್ದಾರೆ. ಇದರಿಂದ ಘಟಕದ ಉತ್ಪಾದನೆಯ ಮೇಲೆ ಪರಿಣಾಮ ಬೀರಿದೆ.

ಪ್ರತಿಭಟನೆ ನಡೆಸುವುದು ಕಾನೂನು ಬಾಹಿರ. ಸಂಧಾನದ ಮೂಲಕ ನೌಕರರ ಎಲ್ಲಾ ಬೇಡಿಕೆಗಳನ್ನು ಈಡೇರಿಸಲು ಬದ್ಧ ಎಂದು ಕಂಪನಿ ತಿಳಿಸಿದೆ.

'ಕೆಲಸವೂ ಇಲ್ಲ; ಸಂಬಳವೂ ಇಲ್ಲ' ಎಂಬ ನೀತಿ ಅನುಸರಿಸಲಾಗುವುದು. ಹೋರಾಟ ನಡೆಸಿದ ದಿನಗಳಿಗೆ ಅನ್ವಯಿಸುವಂತೆ ಸಂಬಳ ನೀಡುವುದಿಲ್ಲ ಎಂದು ಹೇಳಿದೆ.

ಕಳೆದ 16 ವರ್ಷದಿಂದ ಗೃಹೋಪಯೋಗಿ ಉಪಕರಣಗಳನ್ನು ತಯಾರಿಸುತ್ತಿರುವ ಈ ಘಟಕದಲ್ಲಿ 1,800ಕ್ಕೂ ಹೆಚ್ಚು ನೌಕರರು ಇದ್ದಾರೆ.

'ನೌಕರರ ಬೇಡಿಕೆಗಳಿಗೆ ಕಂಪನಿಯು ಸ್ಪಂದಿಸಲಿಲ್ಲ. ತಮಿಳುನಾಡು ಸರ್ಕಾರ ಕೂಡ ಮಧ್ಯಪ್ರವೇಶಿಸಿ ಸಮಸ್ಯೆ ಬಗೆಹರಿಸಲು ವಿಳಂಬ ಮಾಡಿತು. ಹಾಗಾಗಿ, ನಾವು ಕಾನೂನಾತ್ಮಕವಾಗಿ ಹೋರಾಡುತ್ತಿದ್ದೇವೆ. ಆಡಳಿತ ಮಂಡಳಿಯು ಸಂಧಾನದ ಮೂಲಕ ಸಮಸ್ಯೆ ಬಗೆಹರಿಸಲು ಮುಂದಾಗುತ್ತಿಲ್ಲ' ಎಂದು ಶ್ರೀಪೆರಂಬದೂರು ಜಿಲ್ಲಾ ಸಿಐಟಿಯು ಘಟಕದ ಕಾರ್ಯದರ್ಶಿ ಇ. ಮುತ್ತುಕುಮಾರ್ ದೂರಿದ್ದಾರೆ.

ಕ್ವಿಂಟಲ್ ಕೊಬ್ಬರಿ ಹರಾಜು ₹18 ಸಾವಿರ, ಖರೀದಿ ₹17 ಸಾವಿರ!

ರೈತರು–ದಲ್ಲಾಳಿಗಳ ವಾಗ್ವಾದ

ಪ್ರಜಾವಾಣಿ ವಾರ್ತೆ



ತುಮಕೂರು: ತಿಪಟೂರು ಎಪಿಎಂಸಿ ಕೊಬ್ಬರಿ ಮಾರುಕಟ್ಟೆಯಲ್ಲಿ ಶನಿವಾರ ಕ್ವಿಂಟಲ್‌ಗೆ ₹18 ಸಾವಿರಕ್ಕೆ ಹರಾಜು ಕೂಗಿದ್ದರೂ, ರೈತರಿಂದ ಖರೀದಿಸಿದ್ದು ಮಾತ್ರ ₹17 ಸಾವಿರಕ್ಕೆ!

ಹರಾಜಿನಲ್ಲಿ ಭಾಗವಹಿಸಿದ್ದ ವರ್ತಕರು ಒಂದು ಕ್ವಿಂಟಲ್‌ಗೆ ₹18 ಸಾವಿರಕ್ಕೆ ಕೂಗಿದರು. ಆದರೆ, ದಲ್ಲಾಳಿಗಳು ಅಷ್ಟು ಬೆಲೆ ಕೊಟ್ಟು ಕೊಂಡುಕೊಳ್ಳಲು ಸಾಧ್ಯವಿಲ್ಲ ಎಂದು ಪಟ್ಟು ಹಿಡಿದರು. ಕೊನೆಗೆ ₹17 ಸಾವಿರಕ್ಕೆ ಖರೀದಿಸಲಾಯಿತು.

ಕ್ವಿಂಟಲ್‌ಗೆ ಗರಿಷ್ಠ ₹18 ಸಾವಿರ ಹಾಗೂ ಕನಿಷ್ಠ ₹15 ಸಾವಿರ, ಮಾದರಿ ₹16,666 ಬೆಲೆಗೆ ಹರಾಜು ಕೂಗಲಾಗಿದೆ. ಆದರೆ, ₹18 ಸಾವಿರ ಬೆಲೆ ಕೊಟ್ಟು ಕೊಳ್ಳಲು ಸಾಧ್ಯವಿಲ್ಲ ಎಂದು ದಲ್ಲಾಳಿಗಳು ಖರೀದಿಗೆ ನಿರಾಕರಿಸಿದರು. ಇದರಿಂದಾಗಿ ರೈತರು ಹಾಗೂ ದಲ್ಲಾಳಿಗಳ ನಡುವೆ ವಾಗ್ವಾದ ನಡೆಯಿತು.

ಶಾಸಕ ಕೆ. ಷಡಕ್ಷರಿ, ಎಪಿಎಂಸಿ ಅಧಿಕಾರಿಗಳು, ವರ್ತಕರು, ದಲ್ಲಾಳಿಗಳು, ರೈತರ ಸಮ್ಮುಖದಲ್ಲಿ ನಡೆದ ಸಂಧಾನ ಸಭೆಯಲ್ಲಿ ₹17 ಸಾವಿರಕ್ಕೆ ಖರೀದಿಸಲು ಒಮ್ಮತಕ್ಕೆ ಬರಲಾಯಿತು.

ತಿಪಟೂರಿನ ಜಿ.ಆರ್. ಅಂಗಡಿಯಲ್ಲಿ ನಡೆಯುವ ಹರಾಜಿನಲ್ಲಿ ನಿಗದಿಪಡಿಸುವ ಬೆಲೆಯ ಆಧಾರದ ಮೇಲೆ ಇತರೆ ಮಂಡಿ ವರ್ತಕರು ದರ ನಿಗದಿಪಡಿಸಿ (ಸ್ವಲ್ಪ ಕಡಿಮೆ) ಕೊಬ್ಬರಿ ಖರೀದಿಸುವುದು ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಈ ಅಂಗಡಿಯಲ್ಲಿ ಶನಿವಾರ ಗರಿಷ್ಠ ₹18 ಸಾವಿರಕ್ಕೆ ಹರಾಜು ಕೂಗಲಾಗಿದೆ. ಎಲ್ಲಾ ವರ್ತಕರು ಇದೇ ಬೆಲೆಗೆ ಕೊಬ್ಬರಿ ಖರೀದಿಸಬೇಕು ಎಂದು ರೈತರು ಪಟ್ಟು ಹಿಡಿದರು. ಇದಕ್ಕೆ ವರ್ತಕರು ಒಪ್ಪದಿದ್ದಾಗ ಸಂಧಾನ ಸಭೆ ನಡೆಸಿ, ಬೆಲೆ ನಿಗದಿಪಡಿಸಲಾಯಿತು.

ಸೆ.11ರಂದು ಕ್ವಿಂಟಲ್‌ಗೆ ₹15 ಸಾವಿರಕ್ಕೆ ಹೆಚ್ಚಳವಾಗಿತ್ತು. ನಂತರದ ದಿನಗಳಲ್ಲಿ ಬೆಲೆ ಕುಸಿದಿತ್ತು. ಕಳೆದ ಬುಧವಾರದ ಹರಾಜಿನಲ್ಲಿ ₹14,446ಕ್ಕೆ ಏರಿಕೆಯಾಗಿತ್ತು. ಮೂರು ದಿನದ ಅಂತರದಲ್ಲಿ ₹3,500 ಹೆಚ್ಚಳ ಆದಂತಾಗಿದೆ.

2015ರ ಆಗಸ್ಟ್, ಸೆಪ್ಟೆಂಬರ್‌ನಲ್ಲಿ ದಾಖಲೆಯ ₹19,600ಕ್ಕೆ ಹೆಚ್ಚಳ-ವಾಗಿತ್ತು. ಕೋವಿಡ್‌ಗೆ ಮುನ್ನ ₹15 ಸಾವಿರದ ವರೆಗೂ ತಲುಪಿತ್ತು. ನಂತರದ ದಿನಗಳಲ್ಲಿ ಧಾರಣೆ ತೀವ್ರವಾಗಿ ಕುಸಿದು, ₹8 ಸಾವಿರಕ್ಕೆ ತಲುಪಿತ್ತು. ಒಂದು ತಿಂಗಳಿಂದ ನಿಧಾನವಾಗಿ ಏರಿಕೆಯತ್ತ ಮುಖ ಮಾಡಿದೆ.

ಸುದ್ದಿ 2 ನಿಮಿಷ

ಬಿಎಸ್‌ಎನ್‌ಎಲ್ ಬಳಕೆದಾರರ ಏರಿಕೆ

ನವದೆಹಲಿ (ಪಿಟಿಐ): ಮೊಬೈಲ್ ಸೇವಾ ಶುಲ್ಕ ಏರಿಕೆ ಮಾಡಿದ್ದರಿಂದ ಜುಲೈನಲ್ಲಿ ರಿಲಯನ್ಸ್ ಜಿಯೊ, ಭಾರ್ತಿ ಏರ್‌ಟೆಲ್ ಹಾಗೂ ವೊಡಾಫೋನ್ ಐಡಿಯಾ ಕಂಪನಿಗಳ ಒಟ್ಟಾರೆ ಬಳಕೆದಾರರ ಸಂಖ್ಯೆಯಲ್ಲಿ ಇಳಿಕೆಯಾಗಿದೆ ಎಂದು ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರದ (ಟ್ರಾಯ್) ವರದಿ ತಿಳಿಸಿದೆ.

ಈ ಮೂರು ಕಂಪನಿಗಳು ಶೇ 10ರಿಂದ ಶೇ 27ರಷ್ಟು ಮೊಬೈಲ್ ಸೇವಾ ಶುಲ್ಕವನ್ನು ಏರಿಕೆ ಮಾಡಿದ್ದವು. ಏರ್‌ಟೆಲ್ ಮತ್ತು ವೊಡಾಫೋನ್ ಐಡಿಯಾ ಕಂಪನಿಯು ಆರಂಭಿಕ ಶುಲ್ಕವನ್ನು ದುಪ್ಪಟ್ಟುಗೊಳಿಸಿದ್ದವು.

ಖಾಸಗಿ ಕಂಪನಿಗಳ ದರ ಏರಿಕೆ ನೀತಿಯು ಬಿಎಸ್‌ಎನ್‌ಎಲ್‌ಗೆ ವರದಾನವಾಗಿದ್ದು, ಹೊಸದಾಗಿ 29.4 ಲಕ್ಷ ಚಂದಾದಾರರು ಸೇರ್ಪಡೆಯಾಗಿದ್ದಾರೆ ಎಂದು ಟ್ರಾಯ್ ತಿಳಿಸಿದೆ.

ಭಾರ್ತಿ ಏರ್‌ಟೆಲ್ 16.90 ಲಕ್ಷ ಬಳಕೆದಾರರನ್ನು ಕಳೆದುಕೊಂಡಿದೆ. ವೊಡಾಫೋನ್ ಐಡಿಯಾ ಮತ್ತು ರಿಲಯನ್ಸ್ ಜಿಯೊ 14.10 ಲಕ್ಷ ಚಂದಾದಾರರನ್ನು ಕಳೆದುಕೊಂಡಿವೆ ಎಂದು ವಿವರಿಸಿದೆ.

ಸೆಪ್ಟೆಂಬರ್‌ನಲ್ಲಿ ಐಪಿಒ ದಾಖಲೆ

ಮುಂಬೈ (ಪಿಟಿಐ): ಪ್ರಸಕ್ತ ತಿಂಗಳಿನಲ್ಲಿ 28ಕ್ಕೂ ಹೆಚ್ಚು ಕಂಪನಿಗಳು ಆರಂಭಿಕ ಸಾರ್ವಜನಿಕ ಕೊಡುಗೆಯಡಿ (ಐಪಿಒ) ಬಂಡವಾಳ ಸಂಗ್ರಹಿಸುವ ಮೂಲಕ ಷೇರುಪೇಟೆಯನ್ನು ಪ್ರವೇಶಿಸುತ್ತಿವೆ ಎಂದು ಭಾರತೀಯ ರಿಸರ್ವ್ ಬ್ಯಾಂಕ್‌ನ ಮಾಸಿಕ ವರದಿ ತಿಳಿಸಿದೆ.

ದೊಡ್ಡ ಕಂಪನಿಗಳು ಸೇರಿ ಸಣ್ಣ ಮತ್ತು ಮಧ್ಯಮ ಪ್ರಮಾಣದ ಕಂಪನಿಗಳು ಐಪಿಒ ಮೂಲಕ ಬಂಡವಾಳ ಸಂಗ್ರಹಿಸಲು ಮುಂದಾಗಿವೆ. ಕಳೆದ 14 ವರ್ಷಕ್ಕೆ ಹೋಲಿಸಿದರೆ ಸೆಪ್ಟೆಂಬರ್‌ನಲ್ಲಿ ಅತಿಹೆಚ್ಚು ಐಪಿಒಗಳು ಪ್ರಕಟಗೊಂಡಿವೆ ಎಂದು ವಿವರಿಸಿದೆ.

ಕಂಪನಿಯು ಷೇರುಪೇಟೆಗೆ ಸೇರ್ಪಡೆಯಾದ ಒಂದು ವಾರದೊಳಗೆ ಹೂಡಿಕೆದಾರರಿಗೆ ಷೇರುಗಳು ಹಂಚಿಕೆಯಾಗಲಿವೆ ಎಂದು ತಿಳಿಸಿದೆ. ಷೇರುಪೇಟೆಯಲ್ಲಿ ನೋಂದಣಿಯಾದ ಹೊಸ ಕಂಪನಿಗಳು ಪ್ರಸಕ್ತ ವರ್ಷದ ಮೊದಲ ಎಂಟು ತಿಂಗಳ ಅವಧಿಯಲ್ಲಿ ₹60 ಸಾವಿರ ಕೋಟಿ ಬಂಡವಾಳ ಸಂಗ್ರಹಿಸುವ ಗುರಿ ಹೊಂದಿದ್ದವು. ಸದ್ಯ ಈ ಬಂಡವಾಳ ಸಂಗ್ರಹಿಸುವತ್ತ ಗಮನ ಹರಿಸಿವೆ ಎಂದಿದೆ.

ಬೆಂಗಳೂರಿನಲ್ಲಿ ಎನ್‌ಎಸ್‌ಐಸಿ ತರಬೇತಿ ಕೇಂದ್ರ: ಸಚಿವೆ ಶೋಭಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸೂಕ್ಷ್ಮ, ಸಣ್ಣ ಮತ್ತು ಮಧ್ಯಮ ಕೈಗಾರಿಕೆಗಳ ಉದ್ಯೋ-ಗಿಗಳಲ್ಲಿ ಕೌಶಲ ಅಭಿವೃದ್ಧಿಪಡಿಸುವ ಸಲುವಾಗಿ ಬೆಂಗಳೂರಿನಲ್ಲಿ ರಾಷ್ಟ್ರೀಯ ಸಣ್ಣ ಕೈಗಾರಿಕೆಗಳ ಕಾರ್ಪೊರೇಷನ್‌ನ (ಎನ್‌ಎಸ್‌ಐಸಿ) ಶಾಖೆ ಆರಂಭಿಸಲಾಗು-ತ್ತದೆ. ಇದು ದಕ್ಷಿಣ ಭಾರತದಲ್ಲೇ ಮೊದಲ ಎನ್‌ಎಸ್‌ಐಸಿ ಶಾಖೆಯಾಗಲಿದೆ' ಎಂದು ಕೇಂದ್ರ ಎಂಎಸ್‌ಎಂಇ ರಾಜ್ಯ ಖಾತೆ ಸಚಿವೆ ಶೋಭಾ ಕರಂದ್ಲಾಜೆ ಹೇಳಿದರು.

ನಗರದಲ್ಲಿ ಶನಿವಾರ, ಕರ್ನಾಟಕ ದಲಿತ ಉದ್ದಿಮೆದಾರರ ಸಂಘದ 'ದಲಿತ ಉದ್ದಿಮೆದಾರರ ಸಮಾವೇಶ' ಮತ್ತು ಕರ್ನಾಟಕ ಸಣ್ಣ ಕೈಗಾರಿಕೆಗಳ ಸಂಘದ ಸಂವಾದ ಕಾರ್ಯಕ್ರಮ, ಎರಡರಲ್ಲೂ ಈ ವಿಷಯವನ್ನು ಪ್ರಸ್ತಾಪಿಸಿದರು.

'ಎಂಎಸ್‌ಎಂಇಗಳೇ ತುಂಬಿರುವ ಬೆಂಗಳೂರಿನ ಪೀಣ್ಯ ಕೈಗಾರಿಕಾ ಪ್ರದೇಶದಲ್ಲಿ ಎನ್‌ಎಸ್‌ಐಸಿ ಶಾಖೆ ಆರಂಭಿಸಲು ಕೇಂದ್ರ ಸರ್ಕಾರ ಉದ್ದೇಶಿಸಿದೆ. ಇದಕ್ಕಾಗಿ ಜಾಗ ನೀಡುವಂತೆ ರಾಜ್ಯ ಸರ್ಕಾರವನ್ನು ಕೇಳಿದ್ದೇನೆ. ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಮತ್ತು ಮುಖ್ಯ ಕಾರ್ಯದರ್ಶಿ ಶಾಲಿನಿ ರಜನೀಶ್ ಅವರೊಂದಿಗೆ ಈ ವಿಷಯ ಪ್ರಸ್ತಾಪಿಸಿದ್ದೇನೆ. ಮುಂದಿನ ಸಂಪುಟ ಸಭೆಯಲ್ಲಿ ಈ ವಿಷಯ ಪ್ರಸ್ತಾಪಿಸುವುದಾಗಿ ಅವರು ಹೇಳಿದ್ದಾರೆ' ಎಂದು ಮಾಹಿತಿ ನೀಡಿದರು.



ಬೆಂಗಳೂರಿನಲ್ಲಿ ಆಯೋಜಿಸಿದ್ದ ಸಂವಾದ ಕಾರ್ಯಕ್ರಮದಲ್ಲಿ ಕಾಸಿಯಾ ಅಧ್ಯಕ್ಷ ಎಂ.ಜಿ.ರಾಜಗೋಪಾಲ್ (ಎಡದಿಂದ ಮೂರನೆಯವರು) ಅವರು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಅವರಿಗೆ ಮನವಿ ಪತ್ರ ಸಲ್ಲಿಸಿದರು. (ಎಡದಿಂದ) ಕಾಸಿಯಾ ಖಜಾಂಜಿ ಮಂಜುನಾಥ್ ಎಚ್., ಪ್ರಧಾನ ಕಾರ್ಯದರ್ಶಿ ಸುರೇಶ ಎನ್. ಸಾಗರ್, ಉಪಾಧ್ಯಕ್ಷ ಬಿ.ಆರ್ ಗಣೇಶ್ ರಾವ್ ಮತ್ತು ಜಂಟಿ ಕಾರ್ಯದರ್ಶಿ ಜೆ.ಎಸ್. ಬಾಬು ಇದ್ದರು –ಪ್ರಜಾವಾಣಿ ಚಿತ್ರ

'ಪಿಎಫ್ ಕಚೇರಿಯಲ್ಲಿ ಅನ್ಯಭಾಷಿಕರೇ ಹೆಚ್ಚು'

'ರಾಜ್ಯದಲ್ಲಿರುವ ಕಾರ್ಮಿಕರ ಭವಿಷ್ಯ ನಿಧಿ ಕಚೇರಿಗಳಲ್ಲಿ ಅನ್ಯಭಾಷಿಕರೇ ತುಂಬಿದ್ದಾರೆ. ಅನ್ಯಭಾಷಿಕರ ಜತೆಗೆ ವ್ಯವಹರಿಸುವುದು ರಾಜ್ಯದ ಬಡ ಕಾರ್ಮಿಕರಿಗೆ ಕಷ್ಟವಾಗುತ್ತಿದೆ. ಇದನ್ನು ಸರಿಪಡಿಸಬೇಕು' ಎಂದು ಕಾಸಿಯಾ ಅಧ್ಯಕ್ಷ ಎಂ.ಜಿ.ರಾಜಗೋಪಾಲ್ ಒತ್ತಾಯಿಸಿದರು.

ರಾಜ್ಯದಲ್ಲಿ ಎಂಎಸ್‌ಎಂಇಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಬಗೆಹರಿಸುವಂತೆ ಮನವಿ ಪತ್ರವನ್ನು ಅವರು ಶೋಭಾ ಅವರಿಗೆ ಸಲ್ಲಿಸಿದರು.

'ಕೇಂದ್ರದ ಇಪಿಎಫ್‌ಒ ಮಂಡಳಿಯಲ್ಲಿ ಕಾಸಿಯಾಗೆ ಮತ್ತೆ ಸದಸ್ಯತ್ವ ನೀಡಬೇಕು. ಸೌರ ವಿದ್ಯುತ್ ಘಟಕಗಳನ್ನು ಸ್ಥಾಪಿಸಲು ಸಹಾಯಧನ ಒದಗಿಸಬೇಕು, ಪಿಎಫ್ ಕಚೇರಿಗಳಲ್ಲಿನ ಕಂಪ್ಯೂಟರ್ ಮತ್ತು ತಂತ್ರಾಂಶಗಳನ್ನು ಮೇಲ್ದರ್ಜೆಗೆ ಏರಿಸಬೇಕು, ಸುಲಭವಾಗಿ ಸಾಲ ದೊರೆಯುವಂತ ವ್ಯವಸ್ಥೆ ಮಾಡಬೇಕು ಮತ್ತು ಪ್ರತ್ಯೇಕ ಎಂಎಸ್‌ಎಂಇ ನೀತಿ ರೂಪಿಸಬೇಕು' ಎಂದು ಕೋರಿದರು.


ಹಣ್ಣು, ತರಕಾರಿ ಉತ್ಪಾದನೆ ಹೆಚ್ಚಳ ನಿರೀಕ್ಷೆ

ತೋಟಗಾರಿಕೆ ಉತ್ಪಾದನೆ ಅಲ್ಪ ಇಳಿಕೆ

ನವದೆಹಲಿ (ಪಿಟಿಐ): 2023–24ನೇ ಮಾರುಕಟ್ಟೆ ವರ್ಷದಲ್ಲಿ (ಜುಲೈ–ಜೂನ್) ದೇಶದ ತೋಟಗಾರಿಕೆ ಉತ್ಪಾದನೆಯಲ್ಲಿ ಅಲ್ಪ ಪ್ರಮಾಣದಲ್ಲಿ ಇಳಿಕೆಯಾಗುವ ಸಾಧ್ಯತೆಯಿದೆ ಎಂದು ಕೇಂದ್ರ ಸರ್ಕಾರ ಅಂದಾಜಿಸಿದೆ.

353.19 ದಶಲಕ್ಷ ಟನ್‌ನಷ್ಟು ಉತ್ಪಾದನೆಯಾಗುವ ನಿರೀಕ್ಷೆಯಿದೆ. ಕಳೆದ ಮಾರುಕಟ್ಟೆ ವರ್ಷದಲ್ಲಿನ ಉತ್ಪಾದನೆಗೆ ಹೋಲಿಸಿದರೆ ಶೇ 0.65ರಷ್ಟು ಕಡಿಮೆಯಾಗಲಿದೆ ಎಂದು ಕೇಂದ್ರ ತೋಟಗಾರಿಕೆ ಸಚಿವಾಲಯ ಶನಿವಾರ ತಿಳಿಸಿದೆ.

112.73 ದಶಲಕ್ಷ ಟನ್‌ನಷ್ಟು ಹಣ್ಣುಗಳ ಉತ್ಪಾದನೆಯಾಗಲಿದೆ. ಕಳೆದ ಮಾರುಕಟ್ಟೆ ವರ್ಷಕ್ಕೆ ಹೋಲಿಸಿದರೆ ಶೇ 2.29ರಷ್ಟು ಹೆಚ್ಚಳವಾಗುವ ಸಾಧ್ಯತೆಯಿದೆ. ಹಣ್ಣುಗಳ ಪೈಕಿ ಮಾವು, ಬಾಳೆಹಣ್ಣು, ಲಿಂಬೆಹಣ್ಣು, ದ್ರಾಕ್ಷಿ ಮತ್ತು ಸೀತಾಫಲ ಹಣ್ಣಿನ ಉತ್ಪಾದನೆಯಲ್ಲಿ ಏರಿಕೆಯಾಗಲಿದೆ ಎಂದು ವಿವರಿಸಿದೆ.



ಆದರೆ ಸೇಬು, ಕಿತ್ತಲೆ, ಪೇರಳೆ, ಲಿಚಿ, ದಾಳಿಂಬೆ ಮತ್ತು ಅನಾನಸ್ ಉತ್ಪಾದ-ನೆಯಲ್ಲಿ ಇಳಿಕೆಯಾಗುವ ನಿರೀಕ್ಷೆಯಿದೆ ಎಂದು ಅಂದಾಜಿಸಿದೆ.

ತರಕಾರಿ ಉತ್ಪಾದನೆ ಏರಿಕೆ: 205.80 ದಶಲಕ್ಷ ಟನ್ ತರಕಾರಿ ಉತ್ಪಾದನೆಯಾಗುವ ನಿರೀಕ್ಷೆಯಿದೆ. ಟೊಮೆಟೊ, ಎಲೆಕೋಸು, ಹೂಕೋಸು ಸೇರಿ ಹಲವು ತರಕಾರಿಗಳ ಉತ್ಪಾದನೆಯಲ್ಲಿ ಏರಿಕೆಯಾಗಲಿದೆ. ಆದರೆ, ಆಲೂಗೆಡ್ಡೆ ಮತ್ತು ಈರುಳ್ಳಿ ಉತ್ಪಾದನೆಯಲ್ಲಿ ಕುಸಿತವಾಗಲಿದೆ ಎಂದು ಅಂದಾಜಿಸಿದೆ.

ಬಿಹಾರ ಮತ್ತು ಪಶ್ಚಿಮ ಬಂಗಾಳದಲ್ಲಿ ಉತ್ಪಾದನಾ ಪ್ರಮಾಣ ಕಡಿಮೆಯಾಗಿದೆ. ಹಾಗಾಗಿ, ಕಳೆದ ಮಾರುಕಟ್ಟೆ ವರ್ಷಕ್ಕೆ ಹೋಲಿಸಿದರೆ 24.24 ದಶಲಕ್ಷ ಟನ್‌ನಷ್ಟು ಈರುಳ್ಳಿ ಮತ್ತು 57.05 ದಶಲಕ್ಷ ಟನ್‌ನಷ್ಟು ಆಲೂಗೆಡ್ಡೆ ಉತ್ಪಾದನೆ ಇಳಿಕೆಯಾಗುವ ನಿರೀಕ್ಷೆಯಿದೆ ಎಂದು ಹೇಳಿದೆ.

ಜೇನುತುಪ್ಪ, ಹೂವು, ಸಂಬಾರ ಬೆಳೆ, ಸುಗಂಧ ಮತ್ತು ಔಷಧೀಯ ಸಸ್ಯಗಳ ಉತ್ಪಾದನೆಯಲ್ಲಿ ಏರಿಕೆಯಾಗಲಿದೆ ಎಂದು ತಿಳಿಸಿದೆ.

ಎನ್‌ಪಿಎಸ್–ವಾತ್ಸಲ್ಯ: 9,705 ಮಕ್ಕಳ ನೋಂದಣಿ

ನವದೆಹಲಿ (ಪಿಟಿಐ): ಕೇಂದ್ರ ಸರ್ಕಾರ ಆರಂಭಿಸಿರುವ ಎನ್‌ಪಿಎಸ್–ವಾತ್ಸಲ್ಯ ಯೋಜನೆಯಡಿ ಮೊದಲ ದಿನ 9,705 ಚಿಣ್ಣರು ಚಂದಾದಾರಿಕೆ ಪಡೆದಿದ್ದಾರೆ.

ಸೆಪ್ಟೆಂಬರ್ 18ರಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಈ ಯೋಜನೆಗೆ ಚಾಲನೆ ನೀಡಿದ್ದರು. ಬ್ಯಾಂಕ್ ಹಾಗೂ ಅಂಚೆ ಕಚೇರಿಗೆ ತೆರಳಿ ಪೋಷಕರು, ಮಕ್ಕಳ ಹೆಸರಿನಲ್ಲಿ ಖಾತೆ ತೆರೆಯಲು ಅವಕಾಶ ಇದೆ. ಇ-ಎನ್‌ಪಿಎಸ್ ಪೋರ್ಟಲ್ ಮೂಲಕ 2,197 ಖಾತೆ ತೆರೆಯಲಾಗಿದೆ ಎಂದು ಪಿಂಚಣಿ ನಿಧಿ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರ ತಿಳಿಸಿದೆ.

ಪ್ರಾಧಿಕಾರವೇ ಈ ಯೋಜನೆಯನ್ನು ನಿರ್ವಹಣೆ ಮಾಡಲಿದೆ. 18 ವರ್ಷಕ್ಕಿಂತ ಕಡಿಮೆ ವಯಸ್ಸಿನ ಮಕ್ಕಳ ಹೆಸರಿನಲ್ಲಿ ಪೋಷಕರು ಎನ್‌ಪಿಎಸ್–ವಾತ್ಸಲ್ಯ ಖಾತೆ ತೆರೆಯಬಹುದಾಗಿದೆ. ಮಕ್ಕಳಿಗೆ ಬಾಲ್ಯದಲ್ಲಿಯೇ ಆರ್ಥಿಕ ಭದ್ರತೆ ಒದಗಿಸಲು ಈ ಯೋಜನೆ ಸಹಕಾರಿಯಾಗಿದೆ. ದೇಶದಲ್ಲಿ ಪಿಂಚಣಿ ವಲಯದ ವಿಸ್ತರಣೆಯಲ್ಲಿಯೂ ಹೊಸ ಮೈಲಿಗಲ್ಲು ಆಗಿದೆ ಎಂದು ಪ್ರಾಧಿಕಾರ ತಿಳಿಸಿದೆ.

30 ತುಂಡಾಗಿ ಕತ್ತರಿಸಿ ಮಹಿಳೆ ಹತ್ಯೆ

ಮೊದಲ ಮುಖಪುಟದಿಂದ...

ವೈಯಾಲಿಕಾವಲ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

> ಕೊಲೆ ನಡೆದು ಕೆಲ ದಿನಗಳೇ ಆಗಿರಬಹುದು. ಆರೋಪಿಯ ಶೋಧ ಕಾರ್ಯ ಚುರುಕುಗೊಳಿಸಲಾಗಿದೆ
> **ಸತೀಶ್ ಕುಮಾರ್**
> ಹೆಚ್ಚುವರಿ ಪೊಲೀಸ್ ಕಮಿಷನರ್

ಸೆ.3ರಂದೇ ಮೊಬೈಲ್ ಸ್ವಿಚ್ಡ್ ಆಫ್: ಮಹಾಲಕ್ಷ್ಮಿ ಅವರ ಮೊಬೈಲ್ ಸೆ.3ರಂದೇ ಸ್ವಿಚ್ಡ್ ಆಫ್ ಆಗಿತ್ತು. ಅಂದೇ ಕೊಲೆ ಮಾಡಿ ಆರೋಪಿ ಪರಾರಿ ಆಗಿರುವ ಶಂಕೆ ವ್ಯಕ್ತವಾಗಿದೆ.

'ಮಹಾಲಕ್ಷ್ಮಿ ಅವರ ಪೋಷಕರು ನೇಪಾಳದವರು. 30 ವರ್ಷಗಳ ಹಿಂದೆ ನಗರಕ್ಕೆ ಬಂದಿದ್ದರು. ಬೆಂಗಳೂರು ಗ್ರಾಮಾಂತರ ಜಿಲ್ಲೆಯ ನೆಲಮಂಗಲದಲ್ಲಿ ವಾಸಿಸುತ್ತಿದ್ದರು. ಮಹಾಲಕ್ಷ್ಮಿ ಅವರು ಪಶ್ಚಿಮ ಬಂಗಾಳದ ಹೇಮಂತ್‌ದಾಸ್ ಅವರನ್ನು ಐದು ವರ್ಷದ ಹಿಂದೆ ಮದುವೆ ಆಗಿದ್ದರು. ದಂಪತಿಗೆ ನಾಲ್ಕು ವರ್ಷದ ಹೆಣ್ಣು ಮಗುವಿದೆ. ದಂಪತಿ ಮಧ್ಯೆ ಇತ್ತೀಚೆಗೆ ವೈಮನಸ್ಸು ಉಂಟಾಗಿತ್ತು. ಮಹಾಲಕ್ಷ್ಮಿ ಅವರು ಪತಿಯಿಂದ ಪ್ರತ್ಯೇಕವಾಗಿ ಆರು ತಿಂಗಳಿಂದ ಪೈಪ್‌ಲೈನ್ ಕೆ.ವಿ. ರಸ್ತೆಯ ನಾಲ್ಕು ಅಂತಸ್ತಿನ ಕಟ್ಟಡದ ಒಂದನೇ ಮಹಡಿಯ ಬಾಡಿಗೆ ಮನೆಯಲ್ಲಿ ಒಬ್ಬರೇ ಇದ್ದರು. ಬಾಡಿಗೆ ಮನೆಯನ್ನು ಸ್ನೇಹಿತೆಯರು ಕೊಡಿಸಿದ್ದರು. ಮಗು ಅಜ್ಜಿಯ ಜತೆಗಿತ್ತು. ದಂಪತಿ ವಿಚ್ಛೇದನ ಪಡೆದು-ಕೊಂಡಿರಲಿಲ್ಲ' ಎಂದು ಪೊಲೀಸರು ಹೇಳಿದರು.

'ಮಹಾಲಕ್ಷ್ಮಿ ಅವರು ಪ್ರತಿನಿತ್ಯ ಕೆಲಸಕ್ಕೆ ಹೋಗಿಬರುತ್ತಿದ್ದನ್ನು ಅಕ್ಕಪಕ್ಕದ ನಿವಾಸಿಗಳು ಗಮನಿಸಿದ್ದರು. 20 ದಿನಗಳಿಂದ ಅವರ ಸುಳಿವು ಇರಲಿಲ್ಲ. ಅನುಮಾನಗೊಂಡು ಅಕ್ಕಪಕ್ಕದ ಮನೆಯವರು ಸ್ನೇಹಿತೆಯರಿಂದ ಫೋನ್ ಸಂಖ್ಯೆ ಪಡೆದು ಮಹಾಲಕ್ಷ್ಮಿ ಅವರ ತಾಯಿಗೆ ಕರೆ ಮಾಡಿ ವಿಷಯ ತಿಳಿಸಿದ್ದರು. ಅವರು ಬಂದು ಬೀಗ ಒಡೆದು ಶನಿವಾರ ಸಂಜೆ ಮನೆ ಪರಿಶೀಲಿಸಿದರು. ಬಾಗಿಲು ತೆರೆಯುತ್ತಿದ್ದಂತೆಯೇ ದುರ್ವಾಸನೆ ಬರಲು ಆರಂಭಿಸಿತ್ತು. ರಕ್ತದ ಕಲೆಗಳು ಮನೆಯಲ್ಲಿ ಪತ್ತೆಯಾದವು. ಮನೆಯಲ್ಲಿದ್ದ ಫ್ರಿಡ್ಜ್‌ನ ಬಾಗಿಲು ತೆರೆದು ಪರಿಶೀಲಿಸಿದಾಗ ಕೊಲೆ ನಡೆದಿರುವುದು ಗೊತ್ತಾಗಿದೆ. ಬಳಿಕ ಪೊಲೀಸರಿಗೆ ಮಾಹಿತಿ ನೀಡಿದರು' ಎಂದು ಮೂಲಗಳು ತಿಳಿಸಿವೆ.

ಪತಿಯ ವಿಚಾರಣೆ: 'ಹೇಮಂತ್‌ದಾಸ್ ಅವರು ನೆಲಮಂಗಲದಲ್ಲಿ ಮೊಬೈಲ್ ಬಿಡಿಭಾಗ ಮಾರಾಟ ಮಾಡುತ್ತಿದ್ದಾರೆ. ಅವರನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಪ್ರತ್ಯೇಕವಾಗಿ ವಾಸಿಸಲು ಕಾರಣ ಏನು ಎಂಬ ಮಾಹಿತಿ ಪಡೆದುಕೊಳ್ಳಲಾಗಿದೆ' ಎಂದು ಪೊಲೀಸರು ಹೇಳಿದರು.

'ನಾಯಿ ನೋಡಿಕೊಳ್ಳುವ ವಿಚಾರವಾಗಿ ಮಹಾಲಕ್ಷ್ಮಿ ಅವರು ನಮ್ಮೊಂದಿಗೆ ಮಾತ-ನಾಡುತ್ತಿದ್ದರು. ಹೆಚ್ಚು ಮಾತನಾಡುತ್ತಿರಲಿಲ್ಲ. ಮನೆಯಲ್ಲಿ ಒಂಟಿಯಾಗಿ ಇರುತ್ತಿದ್ದರು. ಕೆಲವು ದಿನಗಳ ಕಾಲ ಅವರ ಅಣ್ಣ ಮನೆಗೆ ಬಂದಿದ್ದರು. ಅವರು ಹೋದ ಬಳಿಕ ಈಕೆ ಒಬ್ಬಳೇ ಮನೆಯಲ್ಲಿ ಇರುತ್ತಿದ್ದಳು' ಎಂದು ಸ್ಥಳೀಯರೊಬ್ಬರು ಹೇಳಿದರು.

ಫ್ರಿಡ್ಜ್ ಆನ್ ಮಾಡಿಟ್ಟಿದ್ದ ಆರೋಪಿ: 'ಮೃತದೇಹವನ್ನು ಪ್ರತ್ಯೇಕವಾಗಿಸಿ ಫ್ರಿಡ್ಜ್‌ನಲ್ಲಿ ತುಂಬಿದ್ದ ಆರೋಪಿ, ಫ್ರಿಡ್ಜ್ ಆನ್ ಮಾಡಿದ್ದ. ಫ್ರಿಡ್ಜ್‌ನಲ್ಲಿ ಮೃತದೇಹ ಇಟ್ಟುಹೋದರೆ ಯಾರಿಗೂ ಅನುಮಾನ ಬರುವುದಿಲ್ಲ ಎಂಬ ಕಾರಣಕ್ಕೆ ಈ ರೀತಿ ಕೃತ್ಯ ಎಸಗಿದ್ದಾನೆ' ಎಂದರು ಪೊಲೀಸರು.

ಶ್ರೀಲಂಕಾ: ಶೇ 75ಕ್ಕೂ ಹೆಚ್ಚು ಮತದಾನ

ಕೊಲಂಬೊ (ಪಿಟಿಐ): ಆರ್ಥಿಕ ಬಿಕಟ್ಟಿನಿಂದ ಸುಧಾರಿಸಿಕೊಳ್ಳುತ್ತಿ-ರುವ ಶ್ರೀಲಂಕಾದಲ್ಲಿ ಹೊಸ ಅಧ್ಯಕ್ಷರ ಆಯ್ಕೆ ಸಂಬಂಧ ಶನಿವಾರ ನಡೆದ ಚುನಾವಣೆಯಲ್ಲಿ ಶೇ 75ರಷ್ಟು ಮತದಾನವಾಗಿದ್ದು, ಎಣಿಕೆ ಕಾರ್ಯ ಆರಂಭವಾಗಿದೆ.

ಮತದಾನ ಪ್ರಕ್ರಿಯೆ ವೇಳೆ ಹಿಂಸಾಚಾರ ಸೇರಿದಂತೆ ಯಾವುದೇ ಅಹಿತಕರ ಘಟನೆಗಳು ವರದಿಯಾಗಿಲ್ಲ. ಸುಮಾರು 1.7 ಕೋಟಿ ಜನರು ಮತ ಚಲಾಯಿಸಲು ಅರ್ಹತೆ ಹೊಂದಿದ್ದರು. ಒಟ್ಟು 13,400 ಮತಗಟ್ಟೆಗಳನ್ನು ಸ್ಥಾಪಿಸಲಾಗಿತ್ತು. ಚುನಾವಣೆ ನಡೆಸಲು 2 ಲಕ್ಷಕ್ಕೂ ಹೆಚ್ಚು ಅಧಿಕಾರಿಗಳನ್ನು ಮತ್ತು ಬಂದೋಬಸ್ತ್‌ಗಾಗಿ 63 ಸಾವಿರ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸ-ಲಾಗಿತ್ತು.

1982ರ ಚುನಾವಣೆಯ ಬಳಿಕ ಇದೇ ಮೊದಲ ಬಾರಿಗೆ ಅಧ್ಯಕ್ಷೀಯ ಚುನಾವಣೆಯಲ್ಲಿ ತೀವ್ರ ಪೈಪೋಟಿ ಎದುರಾಗಿತ್ತಲ್ಲದೇ, 38 ಅಭ್ಯರ್ಥಿಗಳು ಕಣದಲ್ಲಿದ್ದರು. ಬೌದ್ಧ ದೇವಾಲಯದ ಸಭಾಂಗಣಗಳು, ಶಾಲೆಗಳು ಮತ್ತು ಸಮುದಾಯ ಕೇಂದ್ರಗಳನ್ನೂ ಮತದಾನ ಕೇಂದ್ರಗಳನ್ನಾಗಿ ಪರಿವರ್ತಿಸಲಾಗಿತ್ತು. ಬೆಳಿಗ್ಗೆ 7 ಗಂಟೆಗೆ ಆರಂಭವಾದ ಮತದಾನ ಪ್ರಕ್ರಿಯೆ ಸಂಜೆ 4 ಗಂಟೆಯವರೆಗೆ ನಡೆಯಿತು.



ಶ್ರೀಲಂಕಾ ಅಧ್ಯಕ್ಷೀಯ ಸ್ಥಾನಕ್ಕೆ ಪುನರಾಯ್ಕೆ ಬಯಸಿರುವ ಅಧ್ಯಕ್ಷ ರನಿಲ್ ವಿಕ್ರಮಸಿಂಘೆ ಶನಿವಾರ ಮತಚಲಾಯಿಸಿದರು –ಎಪಿ ಚಿತ್ರ

ದ್ವೀಪ ರಾಷ್ಟ್ರದಲ್ಲಿ 2022ರಲ್ಲಿ ನಡೆದ ಜನತಾ ದಂಗೆಯು ಗೋಟಬಯ ರಾಜಪಕ್ಷ ಅವರನ್ನು ಅಧ್ಯಕ್ಷ ಸ್ಥಾನದಿಂದ ಪದಚ್ಯುತಗೊಳಿಸಿತ್ತು. ಅವರು ದೇಶಬಿಟ್ಟು ಪಲಾಯನ ಮಾಡಿದ ಬಳಿಕ 75 ವರ್ಷದ ರನಿಲ್ ವಿಕ್ರಮಸಿಂಘೆ ಅವರನ್ನು ಅಧ್ಯಕ್ಷರನ್ನಾಗಿ ಸಂಸತ್ತು ಆಯ್ಕೆ ಮಾಡಿತ್ತು.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ



ಬೆಂಗಳೂರು	
100 ಮೊಟ್ಟೆಗೆ	₹555
12 ಮೊಟ್ಟೆಗೆ	₹75
ಮೈಸೂರು	
100 ಮೊಟ್ಟೆಗೆ	₹555

ಎನ್.ಆರ್.ಪುರ ರಬ್ಬರ್



ಆರ್‌ಎಸ್‌ಎಸ್-4	₹228
ಆರ್‌ಎಸ್‌ಎಸ್-5	₹223
ಗುಡ್ ಲಾಟ್	₹208

(ಪ್ರತಿ ಕೆ.ಜಿಗೆ)

ರಾಮನಗರ ರೇಷ್ಮೆ ಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹395-570
ದ್ವಿತಳಿ (ಬಿ.ವಿ)	₹405-730

ಟರ್ಕಿ ರಾಯಭಾರಿ ಮುಕ್ತೇಶ್ ನೇಮಕ

ನವದೆಹಲಿ (ಪಿಟಿಐ): ಅನುಭವಿ ರಾಜತಾಂತ್ರಿಕ ಮುಕ್ತೇಶ್ ಕುಮಾರ್ ಪರದೇಶಿ ಅವರನ್ನು ಟರ್ಕಿಗೆ ಭಾರತದ ಹೊಸ ರಾಯಭಾರಿಯಾಗಿ ನೇಮಿಸಲಾಗಿದೆ.



ಮುಕ್ತೇಶ್ ಕುಮಾರ್

1991ರ ಬ್ಯಾಚ್‌ನ ಐಎಫ್‌ಎಸ್ ಅಧಿಕಾರಿ ಮುಕ್ತೇಶ್, ಪ್ರಸ್ತುತ ವಿದೇಶಾಂಗ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ-ಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಅವರು ಶೀಘ್ರವೇ ತಮಗೆ ವಹಿಸಿದ ಕೆಲಸ ನಿರ್ವಹಿಸಲಿದ್ದಾರೆ ಎಂದು ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಮುಕ್ತೇಶ್ ಅವರು ಕಳೆದ ವರ್ಷ ನಡೆದ ಜಿ20 ಶೃಂಗಸಂಭೆ ಆಯೋಜಿಸುವಲ್ಲಿ ಪ್ರಮುಖ ಪಾತ್ರ ವಹಿಸಿದ್ದ ಉನ್ನತ ಅಧಿಕಾರಿಗಳ ಗುಂಪಿನ ಮುಖ್ಯ ಸದಸ್ಯರೂ ಆಗಿದ್ದರು. ವೀರೇಂದರ್ ಪೌಲ್ ಅವರ ದೀರ್ಘ ಕಾಲದ ಅನಾರೋಗ್ಯದಿಂದ ಟರ್ಕಿ ರಾಯಭಾರಿ ಹುದ್ದೆ ಖಾಲಿಯಾಗಿತ್ತು.

ಮುಕ್ತೇಶ್ ಅವರು ಜುಲೈ 2019ರಿಂದ 2022ರ ವರೆಗೆ ನ್ಯೂಜಿಲ್ಯಾಂಡ್‌ಗೆ ಭಾರತದ ಹೈಕಮಿಷನರ್ ಆಗಿದ್ದರು. ಅದರೊಂದಿಗೆ ಅವರು ಸಮೋವಾ, ವನವಾಟು, ನಿಯು ಮತ್ತು ಕುಕ್ ದ್ವೀಪಗಳಿಗೂ ಏಕಕಾಲದಲ್ಲಿ ಹೈ ಕಮಿಷನರ್ ಆಗಿದ್ದರು. 2016ರಿಂದ 2019ರವರೆಗೆ ಮೆಕ್ಸಿಕೋಗೂ ಭಾರತದ ರಾಯಭಾರಿ-ಯಾಗಿದ್ದರು.

ಸಂಕ್ಷಿಪ್ತ ಸುದ್ದಿ

ಸೂರತ್‌ನಲ್ಲಿ ರೈಲು ಹಳಿಗೆ ಹಾನಿ

ಸೂರತ್ (ಪಿಟಿಐ): ಗುಜರಾತ್‌ನ ಸೂರತ್ ಜಿಲ್ಲೆಯಲ್ಲಿ ಅಪರಿಚಿತ ದುಷ್ಕರ್ಮಿಗಳು ರೈಲ್ವೆ ಕಂಬಿಗಳಿಗೆ ಅಳವಡಿಸುವ 'ಫಿಶ್ ಪ್ಲೇಟ್' ತೆಗೆದು, ಹಳಿಯ ಕೆಲವೆಡೆ ಬೋಲ್ಟ್‌ಗಳನ್ನು ಸಡಿಲಗೊಳಿಸಿರುವುದು ಶನಿವಾರ ಪತ್ತೆಯಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ. ಇದು ರೈಲುಗಳು ಹಳಿ ತಪ್ಪುವಂತೆ ಮಾಡುವ ಉದ್ದೇಶದ ಕೃತ್ಯ ಎಂದು ಅವರು ಹೇಳಿದ್ದಾರೆ.

ಕೊಸಂಬಾ ಮತ್ತು ಕೀಮ್ ರೈಲು ನಿಲ್ದಾಣಗಳ ನಡುವೆ ಹಳಿ ಈ ರೀತಿ ಆಗಿರುವುದನ್ನು ರೈಲ್ವೆ ಲೈನ್‌ಮ್ಯಾನ್ ಒಬ್ಬರು ಗಮನಿಸಿ, ರೈಲ್ವೆ ಅಧಿಕಾರಿಗಳಿಗೆ ಮಾಹಿತಿ ನೀಡಿದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ರೈಲು ಕಂಬಿಗಳು ಜೋಡಣೆ ಆಗುವಲ್ಲಿ ಅಳವಡಿಸುವ 'ಫಿಶ್ ಪ್ಲೇಟ್'ಗಳನ್ನು ಅಪರಿಚಿತರು ತೆಗೆದಿದ್ದಾರೆ. ಅವುಗಳನ್ನು ಸಮಾ-ನಾಂತರವಾಗಿರುವ ಇನ್ನೊಂದು ಹಳಿಯ ಮೇಲೆ ಇರಿಸಿದ್ದಾರೆ ಎಂದು ಸೂರತ್ ಗ್ರಾಮಾಂತರ ಎಸ್‌ಪಿ ಹಿತೇಶ್ ಜೊಯ್ಸರ್ ತಿಳಿಸಿದ್ದಾರೆ. ಅಲ್ಲದೆ ಅವರು 40ರಿಂದ 50 ಬೋಲ್ಟ್‌ಗಳನ್ನು ಸಡಿಲಗೊಳಿಸಿದ್ದಾರೆ ಎಂದಿದ್ದಾರೆ.

ವಿಷಯ ಗೊತ್ತಾಗುತ್ತಿದ್ದಂತೆ ಸ್ಥಳಕ್ಕೆ ಭೇಟಿ ನೀಡಿದ ರೈಲ್ವೆ ಎಂಜಿನಿಯರ್‌ಗಳು ಮತ್ತು ಇತರ ಸಿಬ್ಬಂದಿ ಹಳಿಯ ದುರಸ್ತಿ ಮಾಡಿದ್ದಾರೆ. ರೈಲುಗಳ ಸಂಚಾರವು ನಂತರ ಶುರುವಾಗಿದೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಈ ರೀತಿ ಮಾಡಿರುವವರು ಯಾರು ಎಂಬುದನ್ನು ಪತ್ತೆ ಮಾಡಲು ತನಿಖೆ ಆರಂಭಿಸಲಾಗಿದೆ ಎಂದು ಹೇಳಿದ್ದಾರೆ.

ಪುರಿ ಜಗನ್ನಾಥ ದೇವಾಲಯ ಎಎಸ್‌ಐ ಸಮೀಕ್ಷೆ ಆರಂಭ

ಪುರಿ (ಪಿಟಿಐ): ಇಲ್ಲಿನ ಜಗನ್ನಾಥ ದೇವಾಲಯದ 'ರತ್ನ ಭಂಡಾರ'ದ ಎರಡನೇ ಸುತ್ತಿನ ತಾಂತ್ರಿಕ ಸಮೀಕ್ಷೆಯನ್ನು ಭಾರತೀಯ ಪುರಾತತ್ವ ಸರ್ವೇಕ್ಷಣಾ ಇಲಾಖೆಯ (ಎಎಸ್‌ಐ) ಶನಿವಾರ ಮಧ್ಯಾಹ್ನ ಆರಂಭಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸಮೀಕ್ಷೆ ಕಾರ್ಯ ಮೂರು ದಿನ ನಡೆಯಲಿದೆ ಎಂದು ಶ್ರೀ ಜಗನ್ನಾಥ ದೇವಸ್ಥಾನ ಆಡಳಿತ (ಎಸ್‌ಜೆಟಿಎ) ಹೇಳಿದೆ.

'ಸಮೀಕ್ಷೆಯ ಕಾರಣ ಶನಿವಾರ ಮಧ್ಯಾಹ್ನ 1ರಿಂದ ಸಂಜೆ 6ರ ವರೆಗೆ ಭಕ್ತರಿಗೆ 'ದರ್ಶನ'ಕ್ಕೆ ಅವಕಾಶ ನೀಡಲಾಗಿಲ್ಲ. ಈ ನಿರ್ಬಂಧ ಸೆ.22 ಮತ್ತು 23ರಂದೂ ಮುಂದುವರಿಯಲಿದೆ. ದೇವಾಲಯದ ಮುಖ್ಯ ದ್ವಾರದ ಮೂಲಕ ಭಕ್ತರ ಪ್ರವೇಶಕ್ಕೆ ಅವಕಾಶ ಇರುವುದಿಲ್ಲ' ಎಂದು ಎಸ್‌ಜೆಟಿಎ ಮುಖ್ಯ ಆಡಳಿತಾಧಿಕಾರಿ ಅರವಿಂದ್ ಪಾಢಿ ತಿಳಿಸಿದ್ದಾರೆ.

'ರತ್ನ ಭಂಡಾರದ ಒಳಗೆ ಸುರಂಗ ಇದೆಯೇ ಎಂಬುದನ್ನು ಪತ್ತೆಹಚ್ಚಲು ಸಮೀಕ್ಷೆ ಕೈಗೆತ್ತಿಕೊಳ್ಳಲಾಗಿದೆ. ಅದಕ್ಕಾಗಿ ಅತ್ಯಾಧುನಿಕ ರೆಡಾರ್ ಬಳಸಲಾಗಿದೆ' ಎಂದು 'ರತ್ನ ಭಂಡಾರ'ದ ಮೇಲುಸ್ತುವಾರಿ ಸಮಿತಿ ಮುಖ್ಯಸ್ಥ ಬಿಸ್ವನಾಥ್ ರಥ್ ಹೇಳಿದ್ದಾರೆ.

ಮೊದಲ ಸುತ್ತಿನ ಸಮೀಕ್ಷೆ ಸೆ.18ರಂದು ನಡೆದಿತ್ತು. ಎಎಸ್‌ಐನ 17 ಸದಸ್ಯರ ತಂಡವು ಸಮೀಕ್ಷೆ ಕಾರ್ಯ ನಡೆಸಿತ್ತು.

ಧಾರಾವಿ ಕೆಲಕಾಲ ಉದ್ವಿಗ್ನ

ಮುಂಬೈ (ಪಿಟಿಐ): ಅನಧಿಕೃತವಾಗಿ ನಿರ್ಮಾಣಗೊಂಡಿರುವ ಮಸೀದಿಯ ಭಾಗವನ್ನು ನೆಲಸಮ ಮಾಡುವ ಅಧಿಕಾರಿಗಳ ನಿರ್ಧಾರವನ್ನು ವಿರೋಧಿಸಿ ನೂರಾರು ನಿವಾಸಿಗಳು ಪ್ರತಿಭಟನೆ ನಡೆಸಿದ್ದರಿಂದ ಧಾರಾವಿ ಕೊಳೆಗೇರಿಯಲ್ಲಿ ಶನಿವಾರ ಕೆಲಕಾಲ ಉದ್ವಿಗ್ನ ವಾತಾವರಣ ನಿರ್ಮಾಣವಾಗಿತ್ತು.

ಮಧ್ಯಾಹ್ನದ ವೇಳೆಗೆ ಮಸೀದಿಯ ಟ್ರಸ್ಟಿಗಳು, ಬೃಹನ್‌ಮುಂಬೈ ಮಹಾನಗರ ಪಾಲಿಕೆ (ಬಿಎಂಸಿ) ಅಧಿಕಾರಿ-ಗಳೊಂದಿಗೆ ಮಾತುಕತೆ ನಡೆಸಿ ಒತ್ತುವರಿ ತೆರವಿಗೆ ನಾಲ್ಕರಿಂದ ಐದು ದಿನ ಕಾಲಾವಕಾಶ ಕೇಳಿದರು. ಇದಕ್ಕೆ ಅಧಿಕಾರಿಗಳು ಒಪ್ಪಿಗೆ ನೀಡಿದ ನಂತರ ಪರಿಸ್ಥಿತಿ ಸುಧಾರಿಸಿತು.

ಮುಂಜಾಗ್ರತಾ ಕ್ರಮವಾಗಿ ಸ್ಥಳದಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿತ್ತು ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮೆಹಬೂಬ್-ಎ-ಸುಭಾನಿ ಮಸೀದಿಯ ಅನಧಿಕೃತ ಭಾಗಗಳನ್ನು ನೆಲಸಮ ಮಾಡಲು ಬಿಎಂಸಿ ಅಧಿಕಾರಿಗಳು ಬೆಳಿಗ್ಗೆ 9 ಗಂಟೆ ಸುಮಾರಿಗೆ 90 ಅಡಿ ರಸ್ತೆ ತಲುಪಿದ್ದರು. ಕೂಡಲೇ ನಿವಾಸಿಗಳು ಒಟ್ಟಿಗೆ ಸೇರಿ ಅಧಿಕಾರಿಗಳು ಮಸೀದಿ ಇರುವ ಪ್ರದೇಶ ಪ್ರವೇಶಿಸುವುದನ್ನು ತಡೆದರು. ನಂತರ ಧಾರಾವಿ ಪೊಲೀಸ್ ಠಾಣೆ ಎದುರು ರಸ್ತೆ ಮೇಲೆಯೇ ಕುಳಿತು ಅಧಿಕಾರಿಗಳ ನಡೆ ವಿರುದ್ಧ ಪ್ರತಿಭಟಿಸಿದರು' ಎಂದರು.



ಧಾರಾವಿ ಕೊಳೆಗೇರಿಯಲ್ಲಿ ಅನಧಿಕೃತವಾಗಿ ನಿರ್ಮಾಣಗೊಂಡಿರುವ ಮಸೀದಿಯ ಭಾಗವನ್ನು ನೆಲಸಮ ಮಾಡುವ ಬಿಎಂಸಿ ಅಧಿಕಾರಿಗಳ ನಿರ್ಧಾರವನ್ನು ವಿರೋಧಿಸಿ ನಿವಾಸಿಗಳು ಪ್ರತಿಭಟಿಸಿದರು –ಪಿಟಿಐ ಚಿತ್ರ

ಸಂಕ್ಷಿಪ್ತ ಸುದ್ದಿ

ಎಐಎಡಿಎಂಕೆ ಮಾಜಿ ಸಚಿವನ ವಿರುದ್ಧ ಎಫ್‌ಐಆರ್



ಚೆನ್ನೈ (ಪಿಟಿಐ): ಲಂಚ ಸ್ವೀಕರಿಸಿದ ಆರೋಪದ ಮೇಲೆ ಮಾಜಿ ವಸತಿ ಸಚಿವ ಹಾಗೂ ಎಐಎಡಿಎಂಕೆಯ ಉಚ್ಚಾಟಿತ ನಾಯಕ ಆರ್. ವೈತಿಲಿಂಗಂ ಮತ್ತು ಅವರ ಕುಟುಂಬದ ಸದಸ್ಯರ ವಿರುದ್ಧ ತಮಿಳುನಾಡಿನ ವಿಚಕ್ಷಣಾ ಮತ್ತು ಭ್ರಷ್ಟಾಚಾರ ನಿಗ್ರಹ ನಿರ್ದೇಶನಾಲಯ ಪ್ರಕರಣ ದಾಖಲಿಸಿದೆ. ವಸತಿ ಯೋಜನೆಗೆ ಯೋಜನಾ ಅನುಮತಿ ನೀಡಲು ರಿಯಲ್ ಎಸ್ಟೇಟ್ ಕಂಪನಿಯೊಂದರಿಂದ ವೈತಿಲಿಂಗಂ ಲಂಚ ಪಡೆದಿದ್ದಾರೆ ಎಂದು ಆರೋಪಿಸಲಾಗಿದೆ. ವೈತಿಲಿಂಗಂ ಅವರ ಮಕ್ಕಳು ಮತ್ತು ಶ್ರೀರಾಂ ಪ್ರಾಪರ್ಟೀಸ್ ಎಂಬ ಕಂಪನಿ ವಿರುದ್ಧ ಪ್ರಕರಣ ದಾಖಲಾಗಿದೆ. ವಸತಿ ಸಮುಚ್ಚಯಕ್ಕೆ ಯೋಜನಾ ಅನುಮತಿ ಪಡೆಯಲು ಶ್ರೀರಾಂ ಪ್ರಾಪರ್ಟೀಸ್ ಕಂಪನಿಯು ₹27.9 ಕೋಟಿ ಹಣವನ್ನು ವೈತಿಲಿಂಗಂ ಅವರ ಅಜ್ಞಾತ ಕಂಪನಿ ಮುತ್ತಮ್ಮಲ್ ಎಸ್ಟೇಟ್ಸ್‌ಗೆ ರವಾನಿಸಿತ್ತು ಎಂದು ಆರೋಪಿಸಲಾಗಿದೆ.

ಟೆಂಡರ್ ನೀಡಿಕೆಯಲ್ಲಿ ಅವ್ಯವಹಾರ: ಕೆಟಿಆರ್

ಹೈದರಾಬಾದ್: ತೆಲಂಗಾಣದ ಮುಖ್ಯಮಂತ್ರಿ ಎ. ರೇವಂತ ರೆಡ್ಡಿ ಹಾಗೂ ಅವರ ಕುಟುಂಬದ ಸದಸ್ಯರು ಭಾಗಿಯಾಗಿರುವ ₹8,888 ಕೋಟಿ ಮೊತ್ತದ ಭಾರಿ ಹಗರಣವೊಂದು ನಡೆದಿದೆ ಎಂದು ಬಿಆರ್‌ಎಸ್ ಪಕ್ಷದ ಕಾರ್ಯಾಧ್ಯಕ್ಷ ಕೆ.ಟಿ. ರಾಮ ರಾವ್ (ಕೆಟಿಆರ್) ಆರೋಪಿಸಿದರು.



ಕೆ.ಟಿ. ರಾಮ ರಾವ್

ಕೇಂದ್ರ ಸರ್ಕಾರದ 'ಅಮೃತ್ 2.0' ಯೋಜನೆಯ ಅಡಿಯಲ್ಲಿ ಟೆಂಡರ್ ಹಂಚಿಕೆಯಲ್ಲಿ ಅಕ್ರಮ ನಡೆದಿದೆ, ಮುಖ್ಯಮಂತ್ರಿ ರೆಡ್ಡಿ ಅವರು ತಮ್ಮ ಸ್ಥಾನವನ್ನು ತಮ್ಮ ಕುಟುಂಬದ ಸದಸ್ಯರಿಗೆ ಹಾಗೂ ಜೊತೆಗಾರರಿಗೆ ಲಾಭ ಮಾಡಿಕೊಡಲು ಬಳಸಿದ್ದಾರೆ ಎಂದು ಕೆಟಿಆರ್ ದೂರಿದರು.

ಅಗತ್ಯ ಅರ್ಹತೆ ಇಲ್ಲದ ಕಂಪನಿಗಳಿಗೂ ಭಾರಿ ಪ್ರಮಾಣದ ಗುತ್ತಿಗೆ ನೀಡಲಾಗಿದೆ ಎಂದು ಕೆಟಿಆರ್ ಆರೋಪ ಹೊರಿಸಿದ್ದಾರೆ.

ಹ್ಯಾಕ್ ಆಗಿದ್ದ 'ಸುಪ್ರೀಂ' ಯೂಟ್ಯೂಬ್ ಚಾನೆಲ್ ಪುನರಾರಂಭ

ನವದೆಹಲಿ (ಪಿಟಿಐ): ಶುಕ್ರವಾರ ಹ್ಯಾಕ್ ಆಗಿದ್ದ ಸುಪ್ರೀಂ ಕೋರ್ಟ್‌ನ ಯೂಟ್ಯೂಬ್ ಚಾನೆಲ್ ಸೇವೆಯು ಇದೀಗ ಪುನರಾರಂಭವಾಗಿದೆ.



ಈ ಕುರಿತು ತನ್ನ ಅಧಿಕೃತ ವೆಬ್‌ಸೈಟ್‌ನಲ್ಲಿ ಶುಕ್ರವಾರ ಮಾಹಿತಿ ನೀಡಿರುವ ಸುಪ್ರೀಂ ಕೋರ್ಟ್ 'ನ್ಯಾಯಾಲಯದ ಯೂಟ್ಯೂಬ್ ಚಾನೆಲ್ ಇದೀಗ ಮತ್ತೆ ಪುನರಾರಂಭವಾಗಿದೆ ಎಂದು ಈ ಮೂಲಕ ಎಲ್ಲರಿಗೂ ತಿಳಿಸಲಾಗುತ್ತಿದೆ' ಎಂದು ಹೇಳಿದೆ.

ಕೋರ್ಟ್‌ನ ಯೂಟ್ಯೂಬ್ ಚಾನೆಲ್ ಅನ್ನು ಶುಕ್ರವಾರ ಹ್ಯಾಕ್ ಮಾಡಲಾಗಿತ್ತು. ಅದರ ಚಾನೆಲ್‌ನಲ್ಲಿ ಅಮೆರಿಕ ಮೂಲದ ರಿಪ್ಪಲ್ ಲ್ಯಾಬ್ಸ್ ಎಂಬ ಕಂಪನಿ ಅಭಿವೃದ್ಧಿಪಡಿಸಿದ ಕ್ರಿಪ್ಟೊ ಕರೆನ್ಸಿಯ ವಿಡಿಯೊಗಳು ಪ್ರಸಾರವಾಗಿದ್ದವು. ಬಳಿಕ ಚಾನೆಲ್ ಹ್ಯಾಕ್ ಆಗಿರುವ ಬಗ್ಗೆ ದೃಢಪಡಿಸಿದ ಕೋರ್ಟ್, 'ಶೀಘ್ರವೇ ಚಾನೆಲ್ ಸೇವೆಯನ್ನು ಆರಂಭಿಸಲಾಗುತ್ತದೆ' ಎಂದು ತನ್ನ 'ಎಕ್ಸ್' ಖಾತೆಯಲ್ಲಿ ಬರೆದುಕೊಂಡಿತ್ತು.

ಸಂವಿಧಾನ ಪೀಠಗಳ ಮುಂದಿರುವ ಹಾಗೂ ಸಾರ್ವಜನಿಕ ಹಿತಾಸಕ್ತಿಗೆ ಸಂಬಂಧಿಸಿದ ಪ್ರಕರಣಗಳ ವಿಚಾರಣೆಯ ನೇರ ಪ್ರಸಾರಕ್ಕಾಗಿ ಸುಪ್ರೀಂ ಕೋರ್ಟ್ ಯೂಟ್ಯೂಬ್ ಚಾನೆಲ್ ಬಳಸುತ್ತಿದೆ.

ಜಮ್ಮು ಮತ್ತು ಕಾಶ್ಮೀರದಲ್ಲಿ ಚುನಾವಣಾ ಪ್ರಚಾರ– ಬಿಜೆಪಿ ವಿರುದ್ಧ ಖರ್ಗೆ ವಾಗ್ದಾಳಿ

'ಪಾಕ್‌ನಲ್ಲಿ ಬಿರಿಯಾನಿ ಸವಿದವರಾರು?'

ಪ್ರಜಾವಾಣಿ ವಾರ್ತೆ

ಶ್ರೀನಗರ: 'ಪಾಕಿಸ್ತಾನಕ್ಕೆ ಹೋಗಿ ಬಿರಿಯಾನಿ ಸವಿದು, ಅಲ್ಲಿಯ ಅಂದಿನ ಪ್ರಧಾನಿ ನವಾಜ್ ಶರೀಫ್ ಅವರನ್ನು ಆಲಿಂಗಿಸಿ ಬಂದವರು ಯಾರು' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶನಿವಾರ ಪ್ರಶ್ನಿಸಿದ್ದಾರೆ.

ಕಾಂಗ್ರೆಸ್ ಪಕ್ಷಕ್ಕೆ ಪಾಕಿಸ್ತಾನದಿಂದ ಬೆಂಬಲ ದೊರೆಯುತ್ತದೆ. ದೇಶವಿರೋಧಿ ಶಕ್ತಿಗಳ ಜೊತೆ ಕಾಂಗ್ರೆಸ್ ಶಾಮೀಲಾಗಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಮಾಡಿರುವ ಆರೋಪಕ್ಕೆ ಪ್ರತಿಯಾಗಿ ಖರ್ಗೆ ಅವರು ಈ ಪ್ರಶ್ನೆ ಕೇಳಿದ್ದಾರೆ.

ಸದ್ಯ ನಡೆಯುತ್ತಿರುವ ಜಮ್ಮು ಮತ್ತು ಕಾಶ್ಮೀರ ವಿಧಾನಸಭೆ ಚುನಾವಣೆ ಕಣದಲ್ಲಿರುವ ಕಾಂಗ್ರೆಸ್ ಅಭ್ಯರ್ಥಿಯ ಪರವಾಗಿ ಪ್ರಚಾರ ನಡೆಸಲು ಜಮ್ಮುವಿಗೆ ಆಗಮಿಸಿದ ಅವರು ಸುದ್ದಿಗೋಷ್ಠಿಯೊಂದರಲ್ಲಿ ಮಾತನಾಡಿದರು. 'ಮೋದಿ ಅವರು ಜನರ ಗಮನ ಬೇರೆಡೆ ತಿರುಗಿಸಲು ಪ್ರಯತ್ನಿಸುತ್ತಿದ್ದಾರೆ. ಪಾಕಿಸ್ತಾನದ ಜೊತೆ ಮಾತುಕತೆಯನ್ನು ಕಾಂಗ್ರೆಸ್ ಪುನಃ ಆರಂಭಿಸಲಿದೆ ಎಂದು ಅಮಿತ್ ಶಾ ಮತ್ತು ಮೋದಿ ಅವರು ಸುಳ್ಳು ಹೇಳುತ್ತಿದ್ದಾರೆ. ನಾವು ಪಾಕಿಸ್ತಾನಕ್ಕೆ ತೆರಳಿ, ಬಿರಿಯಾನಿ ಸವಿದು ಅಲ್ಲಿಯ ಪ್ರಧಾನಿಯನ್ನು ಆಲಂಗಿಸಿಲ್ಲ' ಎಂದರು.



ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಜಮ್ಮುವಿನಲ್ಲಿ ಶನಿವಾರ ಸುದ್ದಿಗೋಷ್ಠಿ ನಡೆಸಿದರು –ಪಿಟಿಐ ಚಿತ್ರ

ಪ್ರಜಾ ಮತ
ಜನತಂತ್ರದ ಹಬ್ಬ

ಜಮ್ಮು ಮತ್ತು ಕಾಶ್ಮೀರದಲ್ಲಿ ನಡೆಯುತ್ತಿರುವ ಭಯೋತ್ಪಾದನೆ ಕುರಿತು ಮಾತನಾಡಿದ ಖರ್ಗೆ, ಶಾಂತಿ ಮತ್ತು ಅಭಿವೃದ್ಧಿ ಕುರಿತು ಮೋದಿ ಅವರ ಸಂಕಥನವನ್ನು ಪ್ರಶ್ನಿಸಿದರು. ಬಿಜೆಪಿಯಿಂದ ಮಾತ್ರ ಜಮ್ಮು ಮತ್ತು ಕಾಶ್ಮೀರಕ್ಕೆ ಸಂಪೂರ್ಣ ರಾಜ್ಯದ ಸ್ಥಾನಮಾನ ನೀಡಲು ಸಾಧ್ಯ ಎಂದು ಮೋದಿ ಹೇಳುತ್ತಿರುತ್ತಾರೆ. ಕೇಂದ್ರದಲ್ಲಿ ಅವರ ಪಕ್ಷವೇ ಅಧಿಕಾರದಲ್ಲಿರುವುದು. ಆದರೂ ಈ ನಿಟ್ಟಿನಲ್ಲಿ ತಡ ಏಕೆ ಆಗುತ್ತಿದೆ ಎಂದರು. ಜೊತೆಗೆ, ಜಮ್ಮು ಮತ್ತು ಕಾಶ್ಮೀರಕ್ಕೆ ರಾಜ್ಯದ ಸ್ಥಾನಮಾನ ನೀಡುವ ನಿಟ್ಟಿನಲ್ಲಿ ಕಾಂಗ್ರೆಸ್‌ಗೆ ಇರುವ ಬದ್ಧತೆಯನ್ನು ಪುನರುಚ್ಚರಿಸಿದರು.

ಬಿಜೆಪಿ ವಿರುದ್ಧ ಕಾಂಗ್ರೆಸ್ ಹೋರಾಟ

ಜಮ್ಮು (ಪಿಟಿಐ): 'ಆರ್‌ಎಸ್‌ಎಸ್ ಮತ್ತು ಬಿಜೆಪಿಯ ವಿಷಪೂರಿತ ಮನಃಸ್ಥಿತಿಗೆ ನಾವು ಹೆದರುವುದಿಲ್ಲ. ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಒಡ್ಡುತ್ತಿರುವ ಬೆದರಿಕೆಗಳ ವಿರುದ್ಧ ನಾವು ಹೋರಾಡುತ್ತೇವೆ' ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರು ಶನಿವಾರ ಹೇಳಿದ್ದಾರೆ.

ಜಮ್ಮುವಿನಲ್ಲಿ ನಡೆದ ಸುದ್ದಿಗೋಷ್ಠಿಯೊಂದರಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ನಾಯಕರ ನಾಲಿಗೆ ಕತ್ತರಿಸುವುದಾಗಿ ಶಾಸಕರು ಮತ್ತು ಸಂಸದರೂ ಸೇರಿ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ಹೇಳಿಕೆ ನೀಡುತ್ತಿದ್ದಾರೆ. ನಿಜ ಹೇಳಿದ್ದಕ್ಕಾಗಿ ರಾಹುಲ್ ಗಾಂಧಿ ಅವರ ಮೇಲೆ ದಾಳಿ ನಡೆಸಲಾಗುತ್ತಿದೆ. ಮಾಜಿ ಪ್ರಧಾನಿ ಇಂದಿರಾ ಗಾಂಧಿ ಅವರ ವಿರುದ್ಧ ದ್ವೇಷದ ವಾತಾವರಣ ಹುಟ್ಟುಹಾಕಿದ ಮಾದರಿಯಲ್ಲೇ ರಾಹುಲ್ ವಿರುದ್ಧವೂ ದ್ವೇಷ ಪಸರಿಸಲಾಗುತ್ತಿದೆ' ಎಂದಿದ್ದಾರೆ.

ಲೋಕಸಭೆಯಲ್ಲಿ ವಿರೋಧ ಪಕ್ಷಗಳ ನಾಯಕರಾದ ರಾಹುಲ್ ಗಾಂಧಿ ಅವರ ವಿರುದ್ಧ ಬಿಜೆಪಿ ಮತ್ತು ಆರ್‌ಎಸ್‌ಎಸ್ ನಾಯಕರು ನೀಡುತ್ತಿರುವ ಪ್ರಚೋದನಾಕಾರಿ ಹೇಳಿಕೆಗಳನ್ನು ತಡೆಯಲು ಅಥವಾ ಆ ನಾಯಕರ ವಿರುದ್ಧ ಕ್ರಮ ಕೈಗೊಳ್ಳುವ ಯಾವ ಪ್ರಯತ್ನವನ್ನೂ ಪ್ರಧಾನಿ ನರೇಂದ್ರ ಮೋದಿ ಅವರು ಮಾಡುತ್ತಿಲ್ಲ. ಏಕೆಂದರೆ ಮೋದಿ ಅವರೇ ಈ ನಾಯಕರಿಗೆ ಹೆದರುತ್ತಾರೆ ಎಂದು ಖರ್ಗೆ ಅವರು ಆಕ್ಷೇಪಿಸಿದ್ದಾರೆ.

'ಪ್ರಧಾನಿಗೆ ಪಾಕ್ ಹೆದರಿ ಶಾಂತವಾಯ್ತು ಗಡಿ'

ಮೆಂಧರ್ (ಪಿಟಿಐ): ಜಮ್ಮು–ಕಾಶ್ಮೀರ ಗಡಿಯು ಶಾಂತಿಯಿಂದ ಇರಲು ಪಾಕಿಸ್ತಾನಕ್ಕೆ ಪ್ರಧಾನಿ ನರೇಂದ್ರ ಮೋದಿ ಮೇಲಿರುವ ಭಯವೇ ಕಾರಣ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಹೇಳಿದರು.



ಪೂಂಛ್ ಜಿಲ್ಲೆಯಲ್ಲಿ ಬಿಜೆಪಿ ಅಭ್ಯರ್ಥಿ ಮುರ್ತಾಜಾ ಖಾನ್ ಅವರನ್ನು ಬೆಂಬಲಿಸಿ ನಡೆದ ಚುನಾವಣಾ ರ‍್ಯಾಲಿಯನ್ನು ಉದ್ದೇಶಿಸಿ ಶಾ ಮಾತನಾಡಿದರು.

ಯುವಕರ ಕೈಯಲ್ಲಿ ಬಂದೂಕು ಮತ್ತು ಕಲ್ಲುಗಳ ಬದಲಿಗೆ ಲ್ಯಾಪ್‌ಟಾಪ್‌ಗಳನ್ನು ನೀಡುವ ಮೂಲಕ ಭಯೋತ್ಪಾದನೆಯನ್ನು ನಿರ್ಮೂಲನೆ ಗೊಳಿಸುವಲ್ಲಿ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಪಾತ್ರವಿದೆ ಎಂದ ಅವರು, 'ಜಮ್ಮುವಿನ ಬೆಟ್ಟಗಾಡು ಪ್ರದೇಶಗಳಲ್ಲಿ ನಮ್ಮ ಸರ್ಕಾರವು ಬಂದೂಕುಗಳ ಬಳಕೆಗೆ ಅನುಮತಿ ನೀಡುವುದಿಲ್ಲ' ಎಂದರು.

'ಜನರ ಸುರಕ್ಷತೆಗಾಗಿ ಗಡಿ ಪ್ರದೇಶದಲ್ಲಿ ಹೆಚ್ಚು ಬಂಕರ್‌ಗಳನ್ನು ನಿರ್ಮಿಸುತ್ತೇವೆ. 1990ರ ದಶಕದಲ್ಲಿ ಇದ್ದ ಗಡಿಯಾಚೆಗಿನ ಗುಂಡಿನ ದಾಳಿಯನ್ನು ನಾನು ಈಗ ನೆನಪಿಸಲು ಬಯಸುತ್ತೇನೆ. ಅಂತಹ ಗುಂಡಿನ ದಾಳಿಗಳು ಈಗ ನಡೆಯುತ್ತಿವೆಯೇ' ಎಂದು ಪ್ರಶ್ನಿಸಿದರು. 'ಹಿಂದಿನ ಆಡಳಿತಗಾರರು ಪಾಕಿಸ್ತಾನಕ್ಕೆ ಹೆದರುತ್ತಿದ್ದರು. ಆದರೆ, ಈಗ ಪಾಕಿಸ್ತಾನವೇ ಮೋದಿಗೆ ಹೆದರುತ್ತಿದೆ. ದಾಳಿ ಮಾಡಲು ಈಗ ಅವರಿಗೆ ಧೈರ್ಯ ಇಲ್ಲ. ಒಂದು ವೇಳೆ ದಾಳಿ ಮಾಡಿದರೆ ಅದಕ್ಕೆ ತಕ್ಕ ಪ್ರತಿಫಲ ತೆರಬೇಕಾಗುತ್ತದೆ' ಎಂದರು.

'ನನ್ನ ಬಾಯಿ ಮುಚ್ಚಿಸಲು ಯತ್ನ'

ನವದೆಹಲಿ (ಪಿಟಿಐ): ಅಮೆರಿಕದಲ್ಲಿ ನಾನು ನೀಡಿದ ಹೇಳಿಕೆ ವಿಚಾರವಾಗಿ ಬಿಜೆಪಿ ಸುಳ್ಳು ಸುದ್ದಿ ಹರಡುತ್ತಿದೆ ಎಂದು ಲೋಕಸಭೆಯ ವಿರೋಧಪಕ್ಷದ ನಾಯಕ ರಾಹುಲ್ ಗಾಂಧಿ ಅವರು ಶನಿವಾರ ಆರೋಪಿಸಿದರು.



ರಾಹುಲ್ ಗಾಂಧಿ

'ಭಾರತ ಮತ್ತು ವಿದೇಶಗಳಲ್ಲಿರುವ ಸಿಖ್ ಸಹೋದರ, ಸಹೋದರಿಯರಲ್ಲಿ ನನ್ನದೊಂದು ಪ್ರಶ್ನೆ– ನಾನು ಹೇಳಿದ್ದರಲ್ಲಿ ಏನಾದರೂ ತಪ್ಪಿದೆಯೇ? ಸಿಖ್ ಸೇರಿದಂತೆ ಪ್ರತಿಯೊಬ್ಬ ಭಾರತೀಯ ಯಾವುದೇ ಭಯ ಇಲ್ಲದೆ ತಮಗೆ ಒಪ್ಪಿತವಾದ ಧರ್ಮವನ್ನು ಪಾಲಿಸಬಾರದೇ? ಎಂದು 'ಎಕ್ಸ್'ನಲ್ಲಿ ಕೇಳಿದ್ದಾರೆ.

'ಎಂದಿನಂತೆ ಬಿಜೆಪಿ ಸುಳ್ಳಿನ ಮೊರೆಹೋಗಿದೆ. ಸತ್ಯವನ್ನು ಅರಗಿಸಿಕೊಳ್ಳಲಾಗದೆ ನನ್ನ ಬಾಯಿ ಮುಚ್ಚಿಸಲು ಯತ್ನಿಸುತ್ತಿದೆ. ವಿವಿಧತೆಯಲ್ಲಿ ಏಕತೆ, ಸಮಾನತೆ ಮತ್ತು ಪ್ರೀತಿ ಮುಂತಾದ ಮೌಲ್ಯಗಳನ್ನು ಸಾರುವ ಭಾರತದ ಪರವಾಗಿ ಸದಾ ನಾನು ಧ್ವನಿ ಎತ್ತುತ್ತೇನೆ' ಎಂದು ಹೇಳಿದ್ದಾರೆ.

ಅಮೆರಿಕದಲ್ಲಿ ತಾವು ಮಾತನಾಡಿದ ವಿಡಿಯೊದ ತುಣುಕನ್ನೂ ಇದರೊಂದಿಗೆ ಹಂಚಿಕೊಂಡಿದ್ದಾರೆ.

'ಸಿಖ್ ವಿರೋಧಿ ಹೇಳಿಕೆ ಹಿಂಪಡೆಯಲಿ'

ನವದೆಹಲಿ (ಪಿಟಿಐ): ರಾಹುಲ್ ಗಾಂಧಿ ಅವರು ಅಮೆರಿಕ ಭೇಟಿ ಸಂದರ್ಭದಲ್ಲಿ ಸಿಖ್ ಸಮುದಾಯದ ಬಗ್ಗೆ ನೀಡಿರುವ ಹೇಳಿಕೆಯನ್ನು ಹಿಂಪಡೆಯಬೇಕು ಎಂದು ಹಲವು ಸಿಖ್ ಸಂಘಟನೆಗಳು ಆಗ್ರಹಿಸಿರುವ ಜಂಟಿ ಹೇಳಿಕೆಯನ್ನು ಬಿಜೆಪಿ ಶನಿವಾರ ಬಿಡುಗಡೆ ಮಾಡಿದೆ.

ಸುದ್ದಿಗಾರರೊಂದಿಗೆ ಮಾತನಾಡಿದ ಬಿಜೆಪಿ ನಾಯಕ ಮಂಜಿಂದರ್ ಸಿಂಗ್ ಸಿರ್ಸಾ ಅವರು, 'ಹಲವು ಸಿಖ್ ಮತ್ತು ಗುರುದ್ವಾರ ನಿರ್ವಹಣಾ ಸಂಸ್ಥೆಗಳು ಕೇಂದ್ರ ಗೃಹ ಇಲಾಖೆಯ ರಾಜ್ಯ ಖಾತೆ ಸಚಿವ ನಿತ್ಯಾನಂತ ರಾಯ್ ಅವರನ್ನು ಭೇಟಿ ಮಾಡಿವೆ. ಸಿಖ್ಖರು ಮಾಡಿರುವ ತ್ಯಾಗವು ಈ ದೇಶವನ್ನು ಬಲಿಷ್ಠವನ್ನಾಗಿಸಿದೆ' ಎಂದು ಹೇಳಿದರು.

ಸಿಖ್ ವಿರೋಧಿ ದಂಗೆ–1984ಕ್ಕೂ ಮೊದಲು ಸಿಖ್ ಸಮುದಾಯವನ್ನು ಗುರಿ ಮಾಡಲಾಗಿತ್ತು. ಈಗಲೂ ಅಂಥದ್ದೇ ವಾತಾವರಣ ನಿರ್ಮಾಣ ಮಾಡಲು ಕಾಂಗ್ರೆಸ್ ಪ್ರಯತ್ನಿಸುತ್ತಿದೆ ಎಂದು ಆರೋಪಿಸಿದರು.

'ಕೆಲಸದ ಸ್ಥಳಗಳ ಪರಿಸ್ಥಿತಿ ಸುಧಾರಣೆಗೆ ಹೋರಾಟ'

ನವದೆಹಲಿ (ಪಿಟಿಐ): ಕೆಲಸದ ಒತ್ತಡದಿಂದ ಮೃತಪಟ್ಟಿದ್ದಾರೆ ಎನ್ನಲಾದ ಅರ್ನ್ಸ್ಟ್ ಆ್ಯಂಡ್ ಯಂಗ್ ಸಂಸ್ಥೆಯ ಮಹಿಳಾ ಉದ್ಯೋಗಿ ಅನ್ನಾ ಸೆಬಾಸ್ಟಿಯನ್ ಪೆರಾಯಿಲ್ ಅವರ ಕುಟುಂಬಕ್ಕೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಸಾಂತ್ವನ ಹೇಳಿದ್ದು, ಕೆಲಸದ ಸ್ಥಳಗಳ ಪರಿಸ್ಥಿತಿ ಸುಧಾರಣೆಗೆ ಹೋರಾಡುವುದಾಗಿ ಭರವಸೆ ನೀಡಿದ್ದಾರೆ.

ಕೊಚ್ಚಿಯಲ್ಲಿರುವ ಸಂತ್ರಸ್ತೆಯ ಮನೆಗೆ ಭೇಟಿ ನೀಡಿದ್ದ ಅಖಿಲ ಭಾರತ ವೃತ್ತಿಪರರ ಕಾಂಗ್ರೆಸ್ (ಎಐಪಿಸಿ) ಘಟಕದ ಅಧ್ಯಕ್ಷ ಪ್ರವೀಣ್ ಚಕ್ರವರ್ತಿ ಅವರು ಅನ್ನಾ ಅವರ ಕುಟುಂಬದೊಂದಿಗೆ ಮಾತನಾಡಲು ರಾಹುಲ್ ಗಾಂಧಿ ಅವರಿಗೆ ವಿಡಿಯೊ ಕರೆ ವ್ಯವಸ್ಥೆ ಮಾಡಿದ್ದರು. ಈ ವೇಳೆ ರಾಹುಲ್ ಅವರು, ತಮ್ಮ ದುಃಖದ ಸಂದರ್ಭದಲ್ಲೂ ಭಾರತದ ಉದ್ಯೋಗಿಗಳ ಹಿತದೃಷ್ಟಿಯಿಂದ ಕೆಲಸದ ಸ್ಥಳಗಳ ಪರಿಸ್ಥಿತಿ ಸುಧಾರಣೆ ಕುರಿತು ಗಮನ ಸೆಳೆದ ಅನ್ನಾ ಕುಟುಂಬದ ನಡೆಯ ಬಗ್ಗೆ ಮೆಚ್ಚುಗೆ ವ್ಯಕ್ತಪಡಿಸಿದರು.



ಸಿದ್ಧತೆ ನವರಾತ್ರಿ ಉತ್ಸವದ ಸಿದ್ಧತೆ ಹಿನ್ನೆಲೆಯಲ್ಲಿ ಅಹಮದಾಬಾದ್‌ನಲ್ಲಿ ಕಾರ್ಮಿಕರು ಬಣ್ಣದ ಕೊಡೆಗಳಿಗೆ ಅಂತಿಮ ಸ್ಪರ್ಶ ನೀಡಿದರು –ಪಿಟಿಐ ಚಿತ್ರ

ವೈದ್ಯ ವಿದ್ಯಾರ್ಥಿನಿ ಹತ್ಯೆ: ಮತ್ತೊಬ್ಬ ವೈದ್ಯನ ವಿಚಾರಣೆ

ಕೋಲ್ಕತ್ತ (ಪಿಟಿಐ): ಇಲ್ಲಿ ನಡೆದಿದ್ದ ವೈದ್ಯ ವಿದ್ಯಾರ್ಥಿನಿಯ ಅತ್ಯಾಚಾರ ಮತ್ತು ಹತ್ಯೆಗೆ ಸಂಬಂಧಿಸಿದಂತೆ ಈಗಾಗಲೇ ಬಂಧನದಲ್ಲಿರುವ ಆರ್.ಜಿ. ಕರ್ ಮೆಡಿಕಲ್ ಕಾಲೇಜು ಮತ್ತು ಆಸ್ಪತ್ರೆಯ ಮಾಜಿ ಪ್ರಾಂಶುಪಾಲ ಸಂದೀಪ್ ಘೋಷ್ ಅವರಿಗೆ ಆಪ್ತರಾಗಿದ್ದ ವೈದ್ಯರೊಬ್ಬರ ವಿಚಾರಣೆಯನ್ನು ಶನಿವಾರ ಆರಂಭಿಸಲಾಗಿದೆ ಎಂದು ಸಿಬಿಐ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪಶ್ಚಿಮ ಬಂಗಾಳ ಆರೋಗ್ಯ ಇಲಾಖೆಯು ವೈದ್ಯ ಬಿರುಪಾಕ್ಷ ಬಿಸ್ವಾಸ್ ಅವರನ್ನು ಈಚೆಗಷ್ಟೇ ಬುರ್ದ್ವಾನ್ ವೈದ್ಯಕೀಯ ಕಾಲೇಜು ಮತ್ತು ಆಸ್ಪತ್ರೆಯಿಂದ ದಕ್ಷಿಣ 24 ಪರಗಣ ಜಿಲ್ಲೆಯ ಕಕ್‌ದ್ವೀಪ್ ಆಸ್ಪತ್ರೆಗೆ ವರ್ಗಾಯಿಸಲಾಗಿತ್ತು. ವೈದ್ಯಕೀಯ ಕಾಲೇಜುಗಳಲ್ಲಿ ನಡೆವ ಅವ್ಯವಹಾರಗಳಲ್ಲಿ ಬಿಸ್ವಾಸ್ ಹೆಸರು ಈ ಹಿಂದೆ ಕೇಳಿಬಂದಿತ್ತು. ಮೃತ ಮಹಿಳೆಯ ದೇಹ ಪತ್ತೆಯಾದ ಆಗಸ್ಟ್ 9ರಂದು ಬಿಸ್ವಾಸ್ ಆರ್.ಜಿ. ಕರ್ ಆಸ್ಪತ್ರೆಯಲ್ಲಿದ್ದರು.

ಅಧಿಕೃತ ಕೆಲಸ ಇಲ್ಲದಿದ್ದರೂ ಕಾಲೇಜಿನಲ್ಲಿ ಕಾಣಿಸಿಕೊಂಡ ಕುರಿತು ಅವರನ್ನು ವಿಚಾರಣೆಗೆ ಒಳಪಡಿಸಲಾಗಿದೆ. ವಿದ್ಯಾರ್ಥಿಗಳನ್ನು ಬೆದರಿಸಿದ ಆರೋಪದ ಮೇಲೆ ಈ ಹಿಂದೆಯೂ ಬಿಸ್ವಾಸ್ ಮತ್ತು ಇತರ ಇಬ್ಬರು ವೈದ್ಯರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿತ್ತು. ಪ್ರಕರಣವನ್ನು ವಿರೋಧಿಸಿ ನಡೆಸುತ್ತಿದ್ದ ಪ್ರತಿಭಟನೆ ಅಂತ್ಯಗೊಂಡಿದ್ದು, ಶನಿವಾರ ಕೆಲ ಜೂನಿಯರ್ ವೈದ್ಯರು ಕೆಲಸಕ್ಕೆ ಹಾಜರಾದರು ಎಂದು ವೈದ್ಯಾಧಿಕಾರಿಗಳು ಹೇಳಿದ್ದಾರೆ.

ಮಣಿಪುರ: 18 ತಾಸು ಬಂದ್

ಇಂಫಾಲ್ (ಪಿಟಿಐ): ನಿಷೇಧಿತ ಸಂಘಟನೆ ನ್ಯಾಷನಲ್ ರೆವಲ್ಯೂಷನರಿ ಫ್ರಂಟ್ ಆಫ್ ಮಣಿಪುರ (ಎನ್‌ಆರ್‌ಎಫ್‌ಎಂ) ಕರೆ ನೀಡಿದ್ದ 18 ತಾಸು ಬಂದ್, ಇಂಫಾಲ್ ಸೇರಿದಂತೆ ಕಣಿವೆಯ ಇತರ ಜಿಲ್ಲೆಗಳ ಜನಜೀವನದ ಮೇಲೆ ವ್ಯತಿರಿಕ್ತ ಪರಿಣಾಮ ಬೀರಿತ್ತು.

ಐದು ಜಿಲ್ಲೆಗಳಲ್ಲಿ ಮಾರುಕಟ್ಟೆ, ವಾಣಿಜ್ಯ ಮಳಿಗೆಗಳು, ಬ್ಯಾಂಕ್‌ಗಳು ಬಾಗಿಲು ಮುಚ್ಚಿದ್ದವು. ಸಾರ್ವಜನಿಕ ಸಾರಿಗೆಗಳ ಸಂಚಾರ ಸ್ಥಗಿತಗೊಂಡು, ಖಾಸಗಿ ವಾಹನಗಳು ಮಾತ್ರ ಅಲ್ಲಲ್ಲಿ ಸಂಚರಿಸಿದವು. ಅಗತ್ಯ ಸೇವೆಗಳಿಗೆ ಬಂದ್‌ನಿಂದ ವಿನಾಯಿತಿ ನೀಡಲಾಗಿತ್ತು.


ಎನ್‌ಆರ್‌ಎಫ್‌ಎಂ ಸಂಘಟನೆಯು ಶನಿವಾರ ರಾತ್ರಿಯಿಂದ ಬಂದ್‌ಗೆ ಕರೆ ನೀಡಿತ್ತು.

ಕಣಿವೆ ರಾಜ್ಯದ ವಿಲೀನಕ್ಕೆ ಸಂಬಂಧಿಸಿದಂತೆ ಸೆಪ್ಟೆಂಬರ್ 21, 1949ರಂದು ಮಣಿಪುರದ ಮಹಾರಾಜ ಬೋಧಚಂದ್ರ ಮತ್ತು ಭಾರತ ಸರ್ಕಾರದ ನಡುವೆ ಒಪ್ಪಂದ ನಡೆದಿತ್ತು. ಒಪ್ಪಂದದ ನಂತರ ಮಣಿಪುರವು ಅಖಂಡ ಭಾರತ ಭಾಗವಾಗಿತ್ತು. ಈ ಒಪ್ಪಂದವನ್ನು ವಿರೋಧಿಸಿ ಎನ್‌ಆರ್‌ಎಫ್‌ಎಂ ಬಂದ್‌ಗೆ ಕರೆ ನೀಡಿತ್ತು.

'ಪ್ರಸಾದದಲ್ಲಿ ಕಲಬೆರಕೆ ಖಂಡನೀಯ'

ಪ್ರಜಾವಾಣಿ ವಾರ್ತೆ

ಉಡುಪಿ: 'ಹಿಂದೂ ಧರ್ಮೀಯರ ಅತ್ಯಂತ ಪ್ರಮುಖ ಶ್ರದ್ಧಾ ಕೇಂದ್ರವಾದ ತಿರುಪತಿಯ ಶ್ರೀವೆಂಕಟೇಶ್ವರ ದೇವರ ಪರಮ ಪಾವನವಾದ ಲಾಡು ಪ್ರಸಾದಕ್ಕೆ ಕಲಬೆರಕೆಯ ತುಪ್ಪವನ್ನು ಮಿಶ್ರಣ ಮಾಡುವ ಮೂಲಕ ದೊಡ್ಡ ಅಪಚಾರವನ್ನು ಮಾಡಲಾಗಿದೆ. ಇದು ಖಂಡನೀಯ' ಎಂದು ಪರ್ಯಾಯ ಪುತ್ತಿಗೆ ಮಠದ ಸುಗುಣೇಂದ್ರತೀರ್ಥ ಸ್ವಾಮೀಜಿ ಹೇಳಿದ್ದಾರೆ.



ಸುಗುಣೇಂದ್ರತೀರ್ಥ ಸ್ವಾಮೀಜಿ

ದೇವಸ್ಥಾನ ಮತ್ತು ಮಠ ಮಂದಿರಗಳ ಮೇಲೆ ನಿರಂತರವಾಗಿ ನಡೆಯುತ್ತಿರುವ ಆಕ್ರಮಣಗಳನ್ನು ಶಾಶ್ವತವಾಗಿ ತಡೆಯಬೇಕಿದೆ. ಇದಕ್ಕಾಗಿ ರಾಜಕೀಯ ಪಕ್ಷಗಳ ಕಪಿಮುಷ್ಟಿಯಿಂದ ದೇವಸ್ಥಾನ ಮತ್ತು ಮಠ ಮಂದಿರಗಳನ್ನು ಮುಕ್ತಗೊಳಿಸಬೇಕು ಎಂದು ಹೇಳಿಕೆಯಲ್ಲಿ ಆಗ್ರಹಿಸಿದ್ದಾರೆ.

ಸನಾತನ ಧರ್ಮದ ಸಂರಕ್ಷಣೆಗಾಗಿ ರಾಷ್ಟ್ರ ಮಟ್ಟದಲ್ಲಿ ಸಂತರ, ಪೀಠಾಧಿಪತಿಗಳ ನೇತೃತ್ವದ ಮಾರ್ಗದರ್ಶಕ ಮಂಡಳಿಯನ್ನು ರಚಿಸಬೇಕು. ಯಾವುದೇ ಕಾರಣಕ್ಕೂ ರಾಜಕೀಯ ಹಸ್ತಕ್ಷೇಪ ಇರಬಾರದು ಎಂದೂ ಹೇಳಿದ್ದಾರೆ.

ಭಂಡಾರಿಕೇರಿ ಶ್ರೀ ಖಂಡನೆ: ತಿರುಪತಿಯ ಶ್ರೀನಿವಾಸನ ಸನ್ನಿಧಿಯಲ್ಲಿ ನಡೆದಿರುವ ಅಪಚಾರ ಖಂಡನೀಯ ಎಂದಿರುವ ಭಂಡಾರಕೇರಿ ಮಠಾಧೀಶ ವಿದ್ಯೇಶತೀರ್ಥ ಸ್ವಾಮೀಜಿ, ಧರ್ಮ ಸಂಸತ್ ಅನ್ನು ರಚಿಸಬೇಕು ಎಂದು ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ತಿರುಪತಿ ಲಾಡುವಿನ ಶುದ್ಧತೆ ಯಥಾಸ್ಥಿತಿಗೆ (ತಿರುಪತಿ ವರದಿ): ತಿರುಪತಿಯ ಲಾಡು ಪ್ರಸಾದದ ಪರಿಶುದ್ಧತೆಯನ್ನು ಯಥಾಸ್ಥಿತಿಗೆ ತರಲಾಗಿದೆ ಎಂದು ತಿರುಮಲ ತಿರುಪತಿ ದೇವಸ್ಥಾನಂ (ಟಿಟಿಡಿ) ತಿಳಿಸಿದೆ.

ಪ್ರಸಾದದ ಪಾವಿತ್ರ್ಯಕ್ಕೆ ಧಕ್ಕೆ ಬಾರದಂತೆ ಅಗತ್ಯ ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ. ಲಾಡುವಿನ 'ದೈವತ್ವ ಮತ್ತು ಪರಿಶುದ್ಧತೆ ಈಗ ಕಳಂಕರಹಿತವಾಗಿದೆ' ಎಂದು ಅದು ಶುಕ್ರವಾರ ರಾತ್ರಿ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದೆ. ಭಕ್ತರಿಗೆ ತೃಪ್ತಿಯಾಗುವಂತೆ ಲಾಡು ಪ್ರಸಾದದ ಪಾವಿತ್ರ್ಯ ರಕ್ಷಿಸಲು ಟಿಟಿಡಿ ಬದ್ಧವಾಗಿದೆ ಎಂದು ಪೋಸ್ಟ್‌ನಲ್ಲಿ ಅದು ತಿಳಿಸಿದೆ.

'ಪ್ರಸಾದ; ಶ್ರದ್ಧೆಗೆ ಧಕ್ಕೆಯಾಗದಿರಲಿ'



ಹುಬ್ಬಳ್ಳಿ: 'ರಾಜ್ಯದ ಎಲ್ಲ ದೇವಸ್ಥಾನಗಳಲ್ಲಿ ನೀಡುವ ಪ್ರಸಾದಕ್ಕೆ ಸಂಬಂಧಿಸಿದಂತೆ ಸ್ವಚ್ಛತೆ, ಜನರ ಶ್ರದ್ಧೆಗೆ ಧಕ್ಕೆ ಆಗದಂತೆ ದೇವಸ್ಥಾನದ ಆಡಳಿತ ಮಂಡಳಿಯವರು ಕಾಲಕಾಲಕ್ಕೆ ಪರಿಶೀಲಿಸಬೇಕು. ಇದರಲ್ಲಿ ಸರ್ಕಾರ ಹಸ್ತಕ್ಷೇಪ ಮಾಡಬಾರದು' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಶನಿವಾರ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ತಿರುಪತಿ ಪ್ರಸಾದ ಲಾಡುವಿನ ಬಗ್ಗೆ ಗಂಭೀರ ಆರೋಪ ಕೇಳಿ ಬಂದಿದೆ. ಲಾಡು ತಯಾರಿಕೆಗೆ ರಾಜ್ಯದ ನಂದಿನಿ ತುಪ್ಪ ತರಿಸಿಕೊಳ್ಳ ಲಾಗುತ್ತಿತ್ತು. ಆಂಧ್ರ ಪ್ರದೇಶದ ಹಿಂದಿನ ಸರ್ಕಾರ ಅದನ್ನು ನಿಲ್ಲಿಸಿ, ಬೇರೆ ಕಡೆಯಿಂದ ತುಪ್ಪ ತರಿಸಿಕೊಳ್ಳಲು ಆರಂಭಿಸಿದಾಗಿನಿಂದ ಈ ರೀತಿಯ ಘಟನೆ ನಡೆದಿದೆ' ಎಂದು ದೂರಿದರು. 'ಇದಕ್ಕೆ ಸಂಬಂಧಿಸಿದ ಪ್ರಯೋಗಾಲಯದ ವರದಿಯನ್ನು ಆಂಧ್ರಪ್ರದೇಶ ಮುಖ್ಯಮಂತ್ರಿ ಚಂದ್ರಬಾಬು ನಾಯ್ಡು ಬಿಡುಗಡೆ ಮಾಡಿದ್ದಾರೆ. ಈ ಬಗ್ಗೆ ಸಮಗ್ರ ತನಿಖೆಯಾಗಬೇಕು. ತಪ್ಪಿತಸ್ಥರಿಗೆ ಶಿಕ್ಷೆ ಅಗಬೇಕು. ಇದು ದೇಶದ ಜನರ ಶ್ರದ್ಧೆ, ಸಂಸ್ಕೃತಿಯ ಪ್ರಶ್ನೆ. ಈ ರೀತಿ ದ್ರೋಹ ಮಾಡುವುದು ಸರಿಯಲ್ಲ. ಇದನ್ನು ಗಂಭೀರವಾಗಿ ಪರಿಗಣಿಸುತ್ತೇವೆ, ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯುತ್ತೇವೆ' ಎಂದರು.



ಅಪಪ್ರಚಾರ: ದೂರು ದಾಖಲು

ಅಹಮದಾಬಾದ್ (ಪಿಟಿಐ): ಅಮೂಲ್ ಬ್ರ್ಯಾಂಡ್ ಬಗ್ಗೆ 'ಎಕ್ಸ್'ನಲ್ಲಿ ಅಪಪ್ರಚಾರ ಮಾಡುತ್ತಿದ್ದ ಏಳು ಬಳಕೆದಾರರ ವಿರುದ್ಧ ಶನಿವಾರ ಪೊಲೀಸರು ದೂರು ದಾಖಲಿಸಿದ್ದಾರೆ.

ಆಂಧ್ರಪ್ರದೇಶದ ತಿರುಪತಿಯಲ್ಲಿ ಲಾಡು ತಯಾರಿಕೆಗೆ ಪ್ರಾಣಿಗಳ ಕೊಬ್ಬಿನ ಜೊತೆಗೆ ಅಮೂಲ್‌ನ ಕಡಿಮೆ ಗುಣಮಟ್ಟದ ತುಪ್ಪವನ್ನು ಕೂಡ ಬಳಸಲಾಗುತ್ತಿತ್ತು ಎಂದು ಈ ಬಳಕೆದಾರರು ಸುಳ್ಳು ಮಾಹಿತಿ ಹಬ್ಬಿಸುತ್ತಿದ್ದರು. ಆ ಮೂಲಕ ಗುಜರಾತ್ ಸಹಕಾರ ಹಾಲು ಮಾರುಕಟ್ಟೆ ಒಕ್ಕೂಟದ (ಜಿಸಿಎಂಎಂಎಫ್) ಗೌರವಕ್ಕೆ ಧಕ್ಕೆ ತರುವ ಕೆಲಸದಲ್ಲಿ ನಿರತರಾಗಿದ್ದರು ಎಂದು ಸೈಬರ್ ಅಪರಾಧ ವಿಭಾಗದ ಪೊಲೀಸರು ತಿಳಿಸಿದ್ದಾರೆ.

ಆರೋಪಿಗಳ ವಿರುದ್ಧ ಭಾರತೀಯ ನ್ಯಾಯ ಸಂಹಿತೆಯ ವಿವಿಧ ಸೆಕ್ಷನ್‌ನಡಿ ದೂರು ದಾಖಲಿಸಲಾಗಿದೆ. ತಿರುಪತಿ ದೇಗುಲಕ್ಕೆ ಅಮೂಲ್ ತುಪ್ಪವನ್ನು ಪೂರೈಕೆ ಮಾಡಿಲ್ಲ ಎಂದು ಜಿಸಿಎಂಎಂಎಫ್ ತಿಳಿಸಿದೆ.









ಎಮ್ಮೆಗಳಿಗೂ ಬ್ಯೂಟಿ ಪಾರ್ಲರ್!

ಇಮಾಮ್‌ಹುಸೇನ್ ಗೂಡುನವರ

ಇಲ್ಲೊಂದು ಬ್ಯೂಟಿ ಪಾರ್ಲರ್ ಇದೆ. ಒಳಗೆ ಹೋದ ತಕ್ಷಣ ಘಮಘಮ ಎನ್ನುವ ಸೋಪು ಹಾಕಿ ಸ್ನಾನ ಮಾಡಿಸುತ್ತಾರೆ. ಅನಗತ್ಯ ಮೈಗೂದಲು ತೆಗೆಯುತ್ತಾರೆ. ಮೈತುಂಬ ಎಣ್ಣೆ ಹಚ್ಚಿ ಮಾಲೀಶ್ ಮಾಡುತ್ತಾರೆ. ಕಾಲುಗಳಿಗೆ ಗೆಜ್ಜೆ ಕಟ್ಟಿ, ಕಿವಿಯೋಲೆ ಹಾಕಿ ಅಲಂಕಾರ ಮಾಡುತ್ತಾರೆ. ಇಷ್ಟಾದ ಮೇಲೆ ವಯ್ಯಾರಿ ಬಿಂಕ ಬಿನ್ನಾಣದಿಂದ ಹೊರಬರುತ್ತಾಳೆ.

ಅರೆರೇ! ಇದೇನು ಮದುವಣಗಿತ್ತಿಯನ್ನು ತಯಾರು ಮಾಡುತ್ತಿದ್ದಾರೆಯೇ ಎಂದು ಕೇಳಬೇಡಿ. ಇಲ್ಲಿ ಸುಂದರಿಯಂತೆ ಅಲಂಕಾರಗೊಳ್ಳುತ್ತಿರುವುದು ಎಮ್ಮೆ! ಹೌದು, ಇದು ಎಮ್ಮೆಗಳ ಪಾರ್ಲರ್..!

ಮಹಾರಾಷ್ಟ್ರದ ಕೊಲ್ಹಾಪುರದ ವಿಜಯ ಸೂರ್ಯವಂಶಿ ಇಂಥ ವಿಶಿಷ್ಟ, ವಿನೂತನ ಪ್ರಯೋಗ ಮಾಡಿ ಯಶಸ್ವಿಯಾಗಿದ್ದಾರೆ. ಕೊಲ್ಹಾಪುರ ಮಹಾನಗರ ಪಾಲಿಕೆ ಸದಸ್ಯರೂ ಆಗಿರುವ ಅವರು, ಪಾಲಿಕೆ ಅನುದಾನದಲ್ಲೇ ಈ ಪಾರ್ಲರ್ ತೆರೆದಿದ್ದಾರೆ.

ಪಾರ್ಲರ್ ಒಳಗೆ ಬಂದರೆ ಸಾಕು, ಎಮ್ಮೆಗಳಿಗೆ ಉಚಿತವಾಗಿ ಅಲಂಕಾರ ಮಾಡಿಸಿಕೊಂಡು 'ಯಾರೇ ಕೂಗಾಡಲಿ, ಊರೇ ಹೋರಾಡಲಿ, ಎಮ್ಮೆ ನಿನಗೆ ಸಾಟಿ ಇಲ್ಲ, ನಿನ್ನ ನೆಮ್ಮದಿಗೆ ಭಂಗವಿಲ್ಲ...' ಎಂದು ಹಾಡುತ್ತ ಹೋಗಬಹುದು.

ಹೇಳಿ ಕೇಳಿ ಕೊಲ್ಹಾಪುರ ಗೌಳಿಗರ ಊರು. ಇಡೀ ನಗರದಲ್ಲಿ ಎಲ್ಲಿ ನೋಡಿದರೂ ಎಮ್ಮೆಗಳ ಹಿಂಡೇ ಕಾಣಿಸುತ್ತದೆ. ಇಲ್ಲಿ ಉದ್ಯೋಗಿ, ವ್ಯಾಪಾರಿಗಳಂತೆ ಗೌಳಿಗರ ಸಂಖ್ಯೆಯೂ ದೊಡ್ಡದಿದೆ. ಎಮ್ಮೆಗಳು ಮೈ ಗಲೀಜು ಮಾಡಿಕೊಂಡಾಗ ನದಿ, ಕೆರೆ–ಕಟ್ಟೆಗಳಲ್ಲಿ ಅವುಗಳ ಮೈತೊಳೆದು ಸ್ವಚ್ಛ ಮಾಡಲಾಗುತ್ತಿತ್ತು. ಇದರಿಂದ ಜೀವಜಲ ಕಲುಷಿತವಾಗುತ್ತಿತ್ತು. ಈ ಸಮಸ್ಯೆಗೆ ಸುಲಭ ಪರಿಹಾರ ಕಂಡುಕೊಳ್ಳಬೇಕು. ಎಮ್ಮೆಗಳನ್ನು ನೋಡಿ ಯಾರೂ ಅಸಹ್ಯಪಟ್ಟುಕೊಳ್ಳದಂತೆ ಏನಾದರೂ ಮಾಡಬೇಕು ಎಂಬ ಆಲೋಚನೆ ವಿಜಯ ಅವರಲ್ಲಿ ಬಂದಿತು. ಅದರ ಪ್ರತಿಫಲವೇ ಈ ಪಾರ್ಲರ್.

'ಎಮ್ಮೆಗಳಿಗೂ ಪಾರ್ಲರ್ ತೆಗೆದಿದ್ದಾರಾ?', 'ಒಂದು ದೊಡ್ಡ ಕಟ್ಟೆಕಟ್ಟಿ, ಪ್ರತಿದಿನ ಎಮ್ಮೆಗಳ ಮೈತೊಳೆದರೆ, ಕೂದಲು ಕತ್ತರಿಸಿದರೆ ಅದಕ್ಕೆ ಪಾರ್ಲರ್ ಅಂತಾರೆಯೇ'... ಹೀಗೆ ನಾನಾ ರೀತಿಯಲ್ಲಿ ಜನರು ಗೇಲಿ ಮಾಡಿದ್ದುಂಟು. ಆದರೆ, ಇಂಥ ವ್ಯಂಗ್ಯದ ಮಾತುಗಳಿಗೆ ಕಿವಿಗೊಡದ ವಿಜಯ, ಇಂಥದ್ದೊಂದು ವಿಶಿಷ್ಟ ಯೋಜನೆ ಕಾರ್ಯಗತಗೊಳಿಸಿದ್ದಾರೆ.

ತಮ್ಮ ವಾರ್ಡಿಗೆ ಬಂದ ₹14.95 ಲಕ್ಷ ವಿಶೇಷ ಅನುದಾನದಲ್ಲಿ ವಿಜಯ ಅವರು ಎಮ್ಮೆಗಳ ಪಾರ್ಲರ್ ತೆರೆದಿದ್ದಾರೆ. 2019ರಲ್ಲಿ ಆರಂಭಗೊಂಡ ಈ ಪಾರ್ಲರ್, ವರ್ಷದಿಂದ ವರ್ಷಕ್ಕೆ 'ಎಮ್ಮೆಪ್ರಿಯ'ವಾಗುತ್ತಲೇ ಇದೆ. ಈಗಂತೂ ಪ್ರತಿದಿನ ಇಲ್ಲಿ ಎಮ್ಮೆಗಳು ಸಾಲುಗಟ್ಟಿ ನಿಲ್ಲುತ್ತಿವೆ. ಪಾಲಿಕೆ ಸದಸ್ಯರೊಬ್ಬರ ವಿಭಿನ್ನ ಆಲೋಚನೆ ಗೌಳಿ ಸಮುದಾಯಕ್ಕೆ ವರವಾಗಿದೆ. ಚುಚ್ಚುಮದ್ದು ಹಾಕಲು, ಔಷಧೋಪಚಾರ ಮಾಡಲು, ಚಿಕಿತ್ಸೆಗೆ ಕೂಡ ಈ ಪಾರ್ಲರ್ ಬಳಕೆಯಾಗುತ್ತಿದೆ.

'ನಾನು ಹದಿನೈದು ಎಮ್ಮೆಗಳನ್ನು ಸಾಕಿದ್ದೇನೆ. ಅವು ಆಗಾಗ ಅನಾರೋಗ್ಯಕ್ಕೆ ಈಡಾಗುತ್ತಿದ್ದವು. ಪಾರ್ಲರ್‌ನಲ್ಲಿ ಮೈ ತೊಳೆಯಿಸಿ, ವಾರಕ್ಕೊಮ್ಮೆ ಎಣ್ಣೆಯಿಂದ ಮಾಲೀಶ್ ಮಾಡಿಸುತ್ತೇನೆ. ಈಗ ಅವುಗಳ ಆರೋಗ್ಯ ಚೆನ್ನಾಗಿದೆ. ಹೆಚ್ಚು ಹಾಲು ಕೊಡುತ್ತಿವೆ. ಪಾರ್ಲರ್‌ನಿಂದ ಹೊರಬಂದ ಎಮ್ಮೆಗಳು ಲಕಲಕ ಅಂಥ ಲಕ್ಷಣವಾಗಿ ಕಾಣುತ್ತವೆ. ಅದನ್ನು ನೋಡುವುದೇ ಖುಷಿ' ಎಂದರು ಮನೋಜ್ ಮಾಳಿ.

ಮಂಗೇಶಕರ್ ನಗರದಿಂದ ಎರಡು ಕಿಲೊಮೀಟರ್ ದೂರದಲ್ಲಿ ಕೋಟಿತೀರ್ಥ ಕೆರೆ ಇದೆ. ಮೊದಲು ಅಲ್ಲಿ ಮೈ ತೊಳೆಯುತ್ತಿದ್ದರು. ಸಂಚಾರ ದಟ್ಟಣೆಯಿಂದ ಎಮ್ಮೆಗಳನ್ನು ಸಂಬಾಳಿಸುವುದು ಸವಾಲಾಗಿತ್ತು. ವಾಹನ ಸವಾರರಿಗೂ ಕಿರಿಕಿರಿ ಆಗುತ್ತಿತ್ತು. ಅಲ್ಲದೇ ಕೆರೆ ನೀರು ಕಲುಷಿತಗೊಂಡಿತ್ತು. ಅದೇ ನೀರಿನಲ್ಲಿ ಪದೇಪದೇ ಮೈ ತೊಳೆಯುವುದರಿಂದ ಎಮ್ಮೆಗಳು ಮತ್ತು ಗೌಳಿಗರ ಆರೋಗ್ಯ ಹದಗೆಡುತ್ತಿತ್ತು. ಪಾರ್ಲರ್‌ನಿಂದ ಈ ಸಮಸ್ಯೆ ತಪ್ಪಿದೆ ಎಂದು ಗೌಳಿಗರು ಖುಷಿಯಿಂದ ಹೇಳಿದರು.

'ಹತ್ತು ಎಮ್ಮೆಗಳಿವೆ. ಮೊದಲು ಎಲ್ಲ ಸೇರಿ ನಲವತ್ತು ಲೀಟರ್ ಹಾಲು ಕೊಡುತ್ತಿದ್ದವು. ಪಾರ್ಲರ್ ಆರಂಭದ ನಂತರ ಉತ್ತಮ ಆರೈಕೆ ಸಿಗುತ್ತಿದೆ. ಈಗ ಹಾಲಿನ ಪ್ರಮಾಣ ಐವತ್ತು ಲೀಟರ್‌ಗೆ ಹೆಚ್ಚಿದೆ' ಎಂದರು ರವೀಂದ್ರ ಜಾಧವ.

ಕೊಲ್ಹಾಪುರದ ಮಂಗೇಶಕರ್ ನಗರದಲ್ಲಿ ಶತಮಾನದ ಹಿಂದಿನ ಬಾವಿ ಇದೆ. ನಿರುಪಯುಕ್ತವಾಗಿದ್ದ ಈ ಬಾವಿಯಿಂದ ಪಾರ್ಲರ್‌ಗೆ ನೀರಿನ ಸಂಪರ್ಕ ಕಲ್ಪಿಸಲಾಗಿದೆ. ಸುಸಜ್ಜಿತ ಕಟ್ಟಡದಲ್ಲಿ ಎರಡು ಬದಿಗೆ ಎಮ್ಮೆಗಳಿಗೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗಿದೆ.

13ನೇ ಪುಟಕ್ಕೆ...

ದೂಧ್ ಕಟ್ಟಾ

ಕೊಲ್ಹಾಪುರ ನಗರ ಪಂಚಗಂಗಾ ನದಿ ದಡದಲ್ಲಿದೆ. ಎಮ್ಮೆಗಳಿಗೆ ಭರಪೂರ ಪೌಷ್ಟಿಕ ಮೇವು ಸಿಗುತ್ತದೆ. ಹೀಗಾಗಿ ಇಲ್ಲಿನ ಎಮ್ಮೆಗಳು ಗಟ್ಟಿಮುಟ್ಟು. ಅವು ನೀಡುವ ಹಾಲು ಸಹ ಗಟ್ಟಿ. ಮಹಾರಾಷ್ಟ್ರದ ಪುಣೆ, ಪಂಜಾಬ್, ದೆಹಲಿ, ಹರಿಯಾಣದಿಂದ ಬರುವ ಪೈಲ್ವಾನರಿಗೂ ಇಲ್ಲಿನ ಎಮ್ಮೆಗಳ ಹಾಲು ಬಲುಇಷ್ಟ.

ಈ ನಗರದಲ್ಲಿ ಹಲವು ದೂಧ್ ಕಟ್ಟಾ (ಹಾಲಿನ ಕಟ್ಟೆ) ಗಳಿವೆ. ಎಮ್ಮೆಗಳನ್ನು ಅಲ್ಲಿಗೆ ಕರೆತಂದು ಹಾಲು ಹಿಂಡಿ ತಾಜಾವಾಗಿಯೇ ಕೊಡುವುದು ರೂಢಿ.

ಕೊಲ್ಹಾಪುರ ಕೃಷಿ ಪ್ರಧಾನ ಜಿಲ್ಲೆ. ಇಲ್ಲಿನ ರೈತರು ಕೃಷಿಯೊಂದಿಗೆ ಹೈನುಗಾರಿಕೆಗೆ ಒತ್ತು ಕೊಡುತ್ತ ಬಂದಿದ್ದಾರೆ. ರೈತರು ಹಾಗೂ ಗೌಳಿಗರು ಹಾಲು ಮಾರಾಟ ಮಾಡಿ, ಅದರಲ್ಲಿ ಬರುವ ಆದಾಯದಲ್ಲೇ ಬದುಕು ಕಟ್ಟಿಕೊಳ್ಳುತ್ತಿದ್ದಾರೆ. ಜಿಲ್ಲೆಯ ಪ್ರತಿ ಊರಿನಲ್ಲೂ ಹೈನುಗಾರಿಕೆ ಖ್ಯಾತಿ ಪಡೆದಿದೆ. ಇಲ್ಲಿ ಅಂದಾಜು ನಾಲ್ಕು ಲಕ್ಷದಷ್ಟು ಎಮ್ಮೆಗಳಿದ್ದು, 20 ಲಕ್ಷ ಲೀಟರ್ ಹಾಲು ಪ್ರತಿದಿನ ಉತ್ಪಾದನೆ ಆಗುತ್ತದೆ. ಎಂಟರಿಂದ ಹತ್ತು ಕೋಟಿ ರೂಪಾಯಿ ವ್ಯವಹಾರ ನಡೆಯುತ್ತದೆ.

ಮಹಾರಾಷ್ಟ್ರದ ಕೊಲ್ಹಾಪುರ ಮಹಾನಗರ ಪಾಲಿಕೆಯ ಸದಸ್ಯರೊಬ್ಬರಿಗೆ ಹೊಳೆದ ಈ ಐಡಿಯಾ ಈಗ 'ಎಮ್ಮೆಪ್ರಿಯ'ವಾಗುತ್ತಿದೆ. ಅಲ್ಲಿ ಎಮ್ಮೆಗಳಿಗೆ ಬ್ಯೂಟಿ ಪಾರ್ಲರ್ ತೆರೆಯಲಾಗಿದೆ. ಈ ಸುದ್ದಿ ನಿಧಾನಕ್ಕೆ ಹರಡುತ್ತಿದ್ದು ಹಲವಾರು ಸ್ಥಳೀಯ ಸಂಸ್ಥೆಗಳ ಪ್ರತಿನಿಧಿಗಳು ಇಲ್ಲಿಗೆ ಭೇಟಿ ಕೊಟ್ಟು, ತಮ್ಮೂರಿನಲ್ಲೂ ಇಂತಹ ಬ್ಯೂಟಿ ಪಾರ್ಲರ್ ಆರಂಭಿಸುವ ಯೋಚನೆಯಲ್ಲಿದ್ದಾರೆ.



ಬ್ಯೂಟಿ ಪಾರ್ಲರ್‌ನಲ್ಲಿ ಎಮ್ಮೆಗಳಿಗೆ 'ಫೇಸ್ ಮಸಾಜ್'

ಮೇಘಾಲಯದ ಮನಮೋಹಕ ಗುಹಾಲೋಕ



ಮೇಘಾಲಯದ ಮೌಸ್ಮಯಿ ಗುಹೆಯ ಒಳನೋಟ

ಎಚ್.ಎಸ್. ನಂದಕುಮಾರ್

'ಗುಹೆ' ಎಂದರೆ ನಮಗೆ ತಕ್ಷಣ ಕಾಡುಮೃಗಗಳ ನೆನಪಾಗುತ್ತದೆ. ಇದಕ್ಕೆ ಮುಖ್ಯ ಕಾರಣ ಹಲವಾರು ಕಾಡು ಪ್ರಾಣಿಗಳು ಗುಹೆಯನ್ನು ಆಶ್ರಯ ತಾಣವಾಗಿರಿಸಿಕೊಂಡಿರುವುದು. ಅಂತೆಯೇ ಕಡಿಮೆ ಬೆಳಕು ಬೀಳುವ ಅಥವಾ ಬೆಳಕೇ ಬೀಳದ, ತಲೆ ಕೆಳಗಾಗಿ ನೇತಾಡುತ್ತಾ ವಿಚಿತ್ರ ಭಯ ಹುಟ್ಟಿಸುವ ಬಾವಲಿಗಳಿರುವ, ನೀರು ಹರಿಯುತ್ತಿರುವ, ಹಿಮ ಪ್ರವಾಹವಿರುವ, ಮನುಷ್ಯ ಒಳ ಪ್ರವೇಶಿಸಲು ಕಷ್ಟ ಪಡಬೇಕಾದ ಅಥವಾ ಸಾಧ್ಯವೇ ಇಲ್ಲದ ಗುಹೆಗಳಿರುವ ಕಾರಣದಿಂದಲೋ ಏನೋ, ಮನುಷ್ಯನಿಗೆ ಈ ಗುಹೆಗಳ ಕುರಿತು ಭಯ ಮಿಶ್ರಿತ ಕುತೂಹಲವಿದೆ! ಆದರೆ 'ನಾವು ಪ್ರವೇಶಿಸಲು ಹೆದರುವ ಗುಹೆ, ನಾವು ಬಯಸುವ ನಿಧಿಯನ್ನು ತನ್ನೊಳಗೆ ಹುದುಗಿಸಿಕೊಂಡಿದೆ' ಎನ್ನುತ್ತಾರೆ ಅಮೆರಿಕದ ಪ್ರಸಿದ್ಧ ಸಾಹಿತಿ ಜೋಸೆಫ್ ಕ್ಯಾಂಬೆಲ್. ಇಲ್ಲಿ ನಿಧಿ ಎಂದರೆ ಬೆಳ್ಳಿ-ಬಂಗಾರದ ನಾಣ್ಯಗಳು, ಆಭರಣಗಳು ಅಲ್ಲ. ಪ್ರಕೃತಿಯ ವಿಶಿಷ್ಟ ರಚನೆಗಳು ಹಾಗೂ ಅನೂಹ್ಯ ಮಾಹಿತಿ.

ಗವಿ, ಗಹ್ವರ ಎಂದೂ ಕರೆಯಲಾಗುವ ಗುಹೆಗಳು ಪ್ರಕೃತಿಯ ವಿಸ್ಮಯಕಾರಿ ನಿರ್ಮಿತಿಗಳಲ್ಲಿ ಒಂದು. ಕೋಟ್ಯಂತರ ವರ್ಷಗಳ ನೀರಿನ, ಹಿಮ ನದಿಗಳ ಪ್ರವಾಹ ಹಾಗೂ ಜ್ವಾಲಾಮುಖಿಯ ಸ್ಫೋಟಗಳಿಂದ ರಚನೆಯಾದ ವಿವಿಧ ಆಕಾರ, ಗಾತ್ರದ ಮಿಲಿಯಾಂತರ ಗುಹೆಗಳು ಈ ಭುವಿಯಲ್ಲಿವೆ ಎಂದು ಅಂದಾಜಿಸಲಾಗಿದೆ. ಕೇವಲ ನೆಲದ ಮೇಲಷ್ಟೇ ಅಲ್ಲದೆ ನೀರಿನೊಳಗೂ ಸಹ ಸಾವಿರಾರು ಗುಹೆಗಳಿವೆ! ಹಾಗೆಯೇ ಸಂಪೂರ್ಣ ಮಂಜಿನಿಂದಾವರಿಸಿದ ನೀರ್ಗಲ್ಲ ಗುಹೆಗಳೂ ಇವೆ!

ಇಂತಹ ವಿಸ್ಮಯಕಾರಿ ಗುಹೆಗಳ ಕುರಿತು ನನಗೆ ವಿಶೇಷ ಸೆಳೆತ. ಹಾಗಾಗಿ ನಮ್ಮ ಇತ್ತೀಚಿನ ಮೇಘಾಲಯ ಪ್ರವಾಸದ ವೇಳೆ ನಾವು ಆಕರ್ಷಕ ಗುಹೆಗಳಾದ 'ಅರ್ವಾ'(Arwah) ಹಾಗೂ 'ಮೌಸ್ಮಯಿ'(Mawsmai) ಗುಹೆಗಳನ್ನು ವೀಕ್ಷಿಸಿದೆವು. ಇಲ್ಲಿಯವರೆಗೆ ಅಜಂತಾ, ಎಲ್ಲೋರಾ, ಎಲಿಫೆಂಟಾ, ಕಾರ್ಲಾಬಾಜ ಹಾಗೂ ನಮ್ಮ ರಾಜ್ಯದ ಬಾದಾಮಿಯ ಗುಹೆಗಳನ್ನು ವೀಕ್ಷಿಸಿದ್ದ ನಮಗೆ ಇವು ವಿಭಿನ್ನ, ಅವಿಸ್ಮರಣೀಯ ಅನುಭವ ನೀಡಿದವು.

ನಮ್ಮ ದೇಶದಲ್ಲಿ ಇಲ್ಲಿಯವರೆಗೆ 2,702 ಗುಹೆಗಳನ್ನು ಪತ್ತೆ ಹಚ್ಚಲಾಗಿದೆ. ಆದರೆ ಇನ್ನೂ ಪತ್ತೆ ಹಚ್ಚಲಾಗದ ಅಪಾರ ಗುಹೆಗಳು ಇವೆ ಎಂಬುದು ಪರಿಣತರ ಅಭಿಮತ. ಇಲ್ಲಿಯವರೆಗೆ ಪತ್ತೆಯಾದ 2,702 ಗುಹೆಗಳಲ್ಲಿ ಹೆಚ್ಚಿನವು 'ಮೇಘಗಳಿಗೆ ಮುತ್ತಿಕ್ಕುವ' ಅಗಾಧ ಪರ್ವತಗಳ ನಾಡಾದ ಮೇಘಾಲಯದಲ್ಲಿನ ಜೈಂತಿಯಾ, ಗಾರೋ ಹಾಗೂ ಖಾಸಿ ಪರ್ವತ ಶ್ರೇಣಿಗಳಲ್ಲಿವೆ. ಈ ಪರ್ವತ ಶ್ರೇಣಿಗಳಲ್ಲಿ ಸುಮಾರು 1,700 ಪ್ರಕೃತಿ ನಿರ್ಮಿತ ಗುಹೆಗಳಿವೆ ಎಂದು ಅಂದಾಜಿಸಲಾಗಿದೆ. ಆದರೆ, ಅವುಗಳಲ್ಲಿ 1,100 ಗುಹೆಗಳನ್ನಷ್ಟೇ ಪೂರ್ಣವಾಗಿ ಇಲ್ಲವೇ ಸ್ವಲ್ಪಮಟ್ಟಿಗೆ ಅನ್ವೇಷಿಸಲಾಗಿದೆ. ಪರಿಣತರ ಪ್ರಕಾರ ಇದು ಮೇಘಾಲಯದಲ್ಲಿರುವ ಗುಹೆಗಳ ಒಟ್ಟು ಸಂಖ್ಯೆಯ ಶೇಕಡ ಐದರಷ್ಟು ಮಾತ್ರ! ಭಾರತದಲ್ಲಿನ ಹತ್ತು ಉದ್ದವಾದ ಹಾಗೂ ಆಳವಾದ ಗುಹೆಗಳಲ್ಲಿ ಒಂಬತ್ತು ಮೇಘಾಲಯದಲ್ಲಿವೆ. 1844 ರಲ್ಲಿ ಬ್ರಿಟಿಷ್ ಲೆಫ್ಟಿನೆಂಟ್ ಯೂಲ್ ಕಂಡು ಹಿಡಿದ ಪೂರ್ವ ಖಾಸಿ ಪರ್ವತ ಶ್ರೇಣಿಯಲ್ಲಿನ 'ಮಾಮ್ಲೂ' (Mawmluh) ಹಾಗೂ ಗಾರೋ ಪರ್ವತ ಶ್ರೇಣಿಯಲ್ಲಿನ 'ಶಿಜು' (Siju) ಗುಹೆಗಳು ಮೇಘಾಲಯದ ಮೊದಲ ಅನ್ವೇಷಿತ ಗುಹೆಗಳಾಗಿವೆ.

11ನೇ ಪುಟಕ್ಕೆ...

ಆರು ತಿಂಗಳು ಹರಕೆಯ ಆಟ



ಗುಂಡಬಾಳ ಕ್ಷೇತ್ರದ ಆವರಣದಲ್ಲೇ ಇರುವ ರಂಗಸ್ಥಳದಲ್ಲಿ ಯಕ್ಷಗಾನ ಆಟ

ಸುರೇಂದ್ರ ಪೈ

'ದೇವ್ರೇ, ನನ್ನ ಮಗಳಿಗೆ ಮದುವೆಯಾದರೆ ನಿನಗೊಂದು ಬೆಳ್ಳಿ ಕಂಕಣ ಮಾಡಿಸುತ್ತೇನೆ' ಎಂತಲೋ, 'ನಿನ್ನ ಹೆಸರಿನಲ್ಲಿ ಸಮಾರಾಧನೆ ಮಾಡಿಸುತ್ತೇನೆ' ಎಂತಲೋ ಹರಕೆ ಹೊರುವುದು ಸಾಮಾನ್ಯ. ಆದರೆ 'ನಿನ್ನ ಹೆಸರಲ್ಲಿ ಯಕ್ಷಗಾನ ಆಟ ಕೊಡಿಸ್ತೇನೆ' ಎಂದು ಹರಕೆ ಹೊರುವುದನ್ನು ಕೇಳಿದ್ದೀರಾ?!

ಉತ್ತರ ಕನ್ನಡ ಜಿಲ್ಲೆಯ ಹೊನ್ನಾವರದಿಂದ ಐದು ಕಿಲೊಮೀಟರ್ ದೂರದ ಗುಂಡಬಾಳದಲ್ಲಿರುವ ಶ್ರೀ ಮುಖ್ಯಪ್ರಾಣ ಲಕ್ಷ್ಮಿ ವೆಂಕಟೇಶ ದೇವಸ್ಥಾನಕ್ಕೆ ಶತಮಾನಗಳಷ್ಟು ಹಿನ್ನೆಲೆ ಇದೆ. ಈ ದೇವರಿಗೆ ಹೀಗೊಂದು ಹರಕೆ ಸಲ್ಲಿಸುವ ಸಂಪ್ರದಾಯ ಇದೆ. ಹರಕೆ ತೀರಿಸಲೆಂದೇ ಇಲ್ಲಿ ಪ್ರತಿ ರಾತ್ರಿ ಯಕ್ಷ ಕಲಾವಿದರು ವೇಷ ಕಟ್ಟಿಕೊಂಡು ಪೌರಾಣಿಕ ಪ್ರಸಂಗವನ್ನು ಶಾಸ್ತ್ರೋಕ್ತವಾಗಿ ಚಂಡೆ ಮದ್ದಳೆ, ಭಾಗವತಿಕೆ ಸಮೇತ ಅಭಿನಯಿಸುತ್ತಾರೆ. ಪ್ರೇಕ್ಷಕರು ಇರಲಿ, ಇಲ್ಲದಿರಲಿ ವರ್ಷಕ್ಕೆ ಸತತ ಆರು ತಿಂಗಳು (ಮಳೆಗಾಲದ ಆರು ತಿಂಗಳು ಬಿಟ್ಟು) ಪ್ರದರ್ಶನ ಇರುತ್ತದೆ!.

ದೇವಸ್ಥಾನದ ಆಡಳಿತ ಮಂಡಳಿ ಶ್ರೀ ಮುಖ್ಯಪ್ರಾಣ ಪ್ರಸಾದಿತ ಯಕ್ಷಗಾನ ಮಂಡಳಿ ಮೂಲಕ ಯಕ್ಷಗಾನ ಸೇವೆಯನ್ನು ನಡೆಸಿಕೊಂಡು ಬರುತ್ತಿದ್ದು, ಪ್ರತಿ ವರ್ಷ ಡಿಸೆಂಬರ್ ಕೊನೆ ವಾರದಲ್ಲಿ ಪ್ರಾರಂಭಗೊಂಡು ನಿರಂತರವಾಗಿ ರಾತ್ರಿ 9 ರಿಂದ ಬೆಳಗಿನ ಜಾವ 6ರ ತನಕ ಯಕ್ಷಗಾನ ಸೇವೆ ನಡೆಯುತ್ತದೆ.

ಆ ಕಾಲದಲ್ಲಿ ಜನ ಬಡತನದಿಂದ ಬಳಲುತ್ತಿದ್ದರೂ ಆಟ ನೋಡುವುದನ್ನು ಬಿಡುತ್ತಿರಲಿಲ್ಲ. ಹಲಸಿನ ಬೀಜವನ್ನು, ತಾಳೆಮರದ ಹಣ್ಣಿನಿಂದ ಹಿಟ್ಟನ್ನು (ಗಂಜಿ ರೂಪದಲ್ಲಿ) ತಯಾರಿಸಿ ಜೊತೆಯಲ್ಲಿ ತೆಗೆದುಕೊಂಡು ಕಾಲ್ನಡಿಗೆಯಲ್ಲಿ ಗುಂಡಬಾಳಕ್ಕೆ ಹೋಗುತ್ತಿದ್ದರು. ರಾತ್ರಿ ಆಟ ನೋಡಿ, ಹಗಲು ಪಕ್ಕದಲ್ಲಿರುವ ಹೊಳೆಯ ಬದಿ ಹಲಸಿನ ಬೀಜ, ತಾಳೆಮರದ ಹಿಟ್ಟಿನ ಗಂಜಿ ಮಾಡಿ ಊಟ ಮಾಡಿ ನಿದ್ರೆ ಮಾಡುತ್ತಿದ್ದರು. ಮತ್ತೆ ರಾತ್ರಿ ಆಟ ನೋಡುತ್ತ ನಾಲ್ಕಾರು ದಿನ ಉಳಿದು ಬರುತ್ತಿದ್ದರು. ಬೆಳಗಿನಜಾವ ಕಾಡಿಗೆ ಹೋಗಿ ಸೊಪ್ಪು, ಉರುವಲು ತರುವವರು ರಾತ್ರಿ ಊಟವಾದ ಮೇಲೆ ಗುಂಡಬಾಳಕ್ಕೆ ಹೋಗಿ ಬೆಳಗಿನಜಾವದ ತನಕ ಆಟ ನೋಡಿ ಮತ್ತೆ ಕಾಡಿಗೆ ಹೋಗುತ್ತಿದ್ದರು. ಹಿಂದೆ ಇಲ್ಲಿಗೆ ಬರಲು ನಡೆಯಬೇಕಿತ್ತು. ಈಗ ಹೊನ್ನಾವರದಿಂದ ಸರ್ಕಾರಿ ಬಸ್ ವ್ಯವಸ್ಥೆ ಇದೆ ಎಂದು ವಯೋವೃದ್ಧ ಗಣಪಯ್ಯ ನೆನಪಿಸಿಕೊಂಡರು.

'ಪ್ರತಿನಿತ್ಯ ಅಪರೂಪದ ಪೌರಾಣಿಕ ಪ್ರಸಂಗಗಳು ಮಾತ್ರ ಇಲ್ಲಿ ನಡೆಯುತ್ತವೆ. ಅಂದಿನ ಪ್ರಸಂಗವನ್ನು ಅಂದೇ ನಿರ್ಧರಿಸಲಾಗುತ್ತದೆ. ಭಕ್ತರ ಹರಕೆಯ ಆಟಗಳು ಮಾತ್ರ ನಡೆಯದೇ, ಅಪಾರಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಯಕ್ಷಗಾನವನ್ನು ಅಭ್ಯಾಸ ಮಾಡಲು ಬರುತ್ತಾರೆ. ವಿದ್ಯಾರ್ಥಿಗಳಿಗೆ ರಂಗಸ್ಥಳದ ಪಕ್ಕದಲ್ಲಿ ವಸತಿ ನಿಲಯವಿದ್ದು, ಆಸಕ್ತ ವಿದ್ಯಾರ್ಥಿಗಳು ಅಲ್ಲಿಯೇ ಉಳಿದುಕೊಳ್ಳಬಹುದು. ಹೆಚ್ಚಿನದಾಗಿ ಮಕ್ಕಳು ಬೇಸಿಗೆ ರಜೆಯ ಸಮಯದಲ್ಲಿ ಇಲ್ಲಿಯೇ ಉಳಿದು ಪೂರ್ಣ ಪ್ರಮಾಣದ ಶಿಕ್ಷಣ ಪಡೆಯುತ್ತಾರೆ. ಆದ್ದರಿಂದ ಯಕ್ಷಗಾನವನ್ನು ಕಲಿಯುವಂತಹ ಆಸಕ್ತಿಯುಳ್ಳ ಪ್ರತಿಯೊಬ್ಬರಿಗೂ ಇದೊಂದು ಯಕ್ಷ-ಪಾಠಶಾಲೆಯಾಗಿದೆ' ಎಂದು ಮುಖ್ಯಪ್ರಾಣ ಪ್ರಸಾದಿತ ಮೇಳಕ್ಕೆ ಯಜಮಾನರಾಗಿರುವ ಪ್ರಭಾಕರ ಚಿಟ್ಟಾಣಿ ಹೇಳುತ್ತಾರೆ.

ಸಾಮಾನ್ಯವಾಗಿ ಕರಾವಳಿ ತೀರದ ಹಲವಾರು ದೇವಸ್ಥಾನಗಳು ಯಕ್ಷಗಾನ ಮೇಳಗಳನ್ನು ಹೊಂದಿದ್ದರೂ, ಅವೆಲ್ಲವುಗಳಿಗಿಂತಲೂ ಇಲ್ಲಿ ಹಲವಾರು ವಿಶೇಷಗಳಿವೆ. ಯಕ್ಷಗಾನಕ್ಕೆ ಬೇಕಾದ ಎಲ್ಲಾ ಪರಿಕರಗಳುಳ್ಳ ವ್ಯವಸ್ಥಿತ ರಂಗಸ್ಥಳ ಇಲ್ಲಿದೆ. ಇಲ್ಲಿ ಪುರಾತನ ಕಾಲದಿಂದಲೂ ಹಲವಾರು ವಿದ್ಯಾರ್ಥಿಗಳು ಯಕ್ಷಗಾನವನ್ನು ಕಲಿಯಲು ಬಂದಿದ್ದಾರೆ. ಮೇಳದ ಯಜಮಾನರು ಯಕ್ಷಗಾನವನ್ನು ಕಲಿಯಲು ಬಂದ ವಿದ್ಯಾರ್ಥಿಗಳಿಗೆ ಹೇಗೆ ಪ್ರಸಂಗದ ಪದ್ಯವನ್ನು ನೆನಪಿಟ್ಟುಕೊಳ್ಳಬೇಕು, ಪದ್ಯದ ಅರ್ಥವನ್ನು ತಿಳಿಸಿಕೊಡುವುದು, ಗೆಜ್ಜೆ ಕಟ್ಟುವುದು, ವೇಷಭೂಷಣ ಧರಿಸುವುದು, ಬಣ್ಣ ಹಚ್ಚುವುದು, ಸ್ತ್ರೀ ವೇಷ, ಬಾಲ ವೇಷ ಇತರ ಪ್ರಧಾನ ವೇಷಗಳನ್ನು ಹೇಗೆ ಹಾಕಬೇಕು ಎನ್ನುವುದನ್ನು ಹಂತ ಹಂತವಾಗಿ ಕಲಿಸಿಕೊಡುತ್ತಾರೆ. ಇಷ್ಟೇ ಅಲ್ಲದೇ ಚಂಡೆ, ಮದ್ದಳೆ, ಭಾಗವತಿಕೆಯನ್ನು ಹಿರಿಯ ಕಲಾವಿದರು, ಯಜಮಾನರು ಕಲಿಸುತ್ತಾರೆ. ಜೊತೆಗೆ ಬೇರೆ ಎಲ್ಲಾ ದೇವಸ್ಥಾನಗಳ ಮೇಳಗಳು, ಹರಕೆ ಆಟಕ್ಕಾಗಿ ತಮ್ಮ ಮೇಳ ಡೇರೆಗಳನ್ನು ಹಾಕುತ್ತಾರೆ. ಆದರೆ, ಇಲ್ಲಿ ಮಾತ್ರ ಹರಕೆಯನ್ನು ಒಪ್ಪಿಸಲು ಸೇವಾದಾರರು ಗುಂಡಬಾಳ ಕ್ಷೇತ್ರಕ್ಕೆ ಬಂದು ದೇವಸ್ಥಾನದ ಮುಂಭಾಗದಲ್ಲಿರುವಂತಹ ರಂಗಸ್ಥಳದಲ್ಲಿಯೇ ಸೇವೆಯನ್ನು ನೀಡಬೇಕಾಗುತ್ತದೆ ಎಂದು ಹಿರಿಯ ಕಲಾವಿದ ರಾಮಚಂದ್ರ ಹೆಗಡೆ ಕೊಂಡದಕುಳಿ ಅವರು ವಿವರಿಸಿದರು.



ಹರಕೆಯ ಆಟ ನೋಡಲು ಸೇರಿದ ನೂರಾರು ಜನ

ಇಲ್ಲಿ ಆಟ ಆಡಿಸಬೇಕೆಂದರೆ ಹತ್ತು ವರ್ಷ ಕಾಯಬೇಕು! ಮುಂದಿನ ಹತ್ತು ವರ್ಷಕ್ಕೆ ಸೇವೆ ಆಟಗಳು ಈಗಾಗಲೇ ಬುಕ್ ಆಗಿವೆ. ವರ್ಷಕ್ಕೆ ಕನಿಷ್ಠ 500ಕ್ಕೂ ಮೇಲ್ಪಟ್ಟು ಹರಕೆ ಆಟಗಳ ಮುಂಗಡ ನೋಂದಣಿಯಾಗುತ್ತವೆ. ದೇವಸ್ಥಾನದ ಆಡಳಿತ ಮಂಡಳಿ ಅವರವರ ಸರತಿ ಬಂದಾಗ ತಿಂಗಳು ಮುಂಚಿತವಾಗಿ ಸೇವಾದಾರರಿಗೆ ಮಾಹಿತಿಯನ್ನು ಒದಗಿಸುತ್ತದೆ' ಎಂದು ಅರ್ಚಕ ವೇದಮೂರ್ತಿ ಅರವಿಂದ ಭಟ್ ತಿಳಿಸಿದರು.

ಎಲ್ಲ ದಿನವೂ ನೂರಾರು ಪ್ರೇಕ್ಷಕರು ಇರುವುದಿಲ್ಲ. ಕೆಲವೊಮ್ಮೆ ಮೂರೋ, ನಾಲ್ಕೋ ಜನ ಇರುತ್ತಾರೆ. ಒಂದೊಂದು ದಿನ ಯಾರೂ ಇರುವುದಿಲ್ಲ. ಆದರೆ, ಆಟ ಕುಣಿಯುವವರಿಗೆ ವ್ಯತ್ಯಾಸವೇ ಆಗುವುದಿಲ್ಲ. ನಮಗೆ ಅದೊಂದು ತಾಲೀಮು ಅನ್ನುವ ಹಾಗೆ ಶ್ರದ್ಧೆಯಿಂದ ವೇಷ ಕಟ್ಟಿ ಕುಣಿಯುತ್ತೇವೆ. ಪ್ರತಿ ಆಟಕ್ಕೆ ₹500 ಸಿಗುತ್ತದೆ. ಜೊತೆಗೆ ದಿನದಿನಕ್ಕೆ ನಮ್ಮ ಕುಣಿತ, ಮಾತುಗಾರಿಕೆಯನ್ನು ಸುಧಾರಿಸಿಕೊಳ್ಳುವ ಅವಕಾಶವೂ ಸಿಗುತ್ತದೆ' ಎಂದು ಕೃಷ್ಣನ ವೇಷ ಧರಿಸಿದ್ದ ತೋಟಿಮನೆ ಗಣಪತಿ ನಾಯ್ಕ ಹೇಳುತ್ತಾರೆ.

ಹರಕೆ ಸೇವೆಯನ್ನು ನೀಡುವ ಸೇವಾದಾರರು ಅಂದಿನ ದಿನ ದೇವಸ್ಥಾನದಲ್ಲಿ ಉಳಿದುಕೊಳ್ಳಲು ಕೊಠಡಿಗಳ ವ್ಯವಸ್ಥೆ ಇದ್ದು, ಮುಂಚಿತವಾಗಿ ಕಚೇರಿಗೆ ತಿಳಿಸಬೇಕಾಗುತ್ತದೆ. ಈ ಹಳ್ಳಿಯಲ್ಲಿ ಪ್ರೇಕ್ಷಕರನ್ನು ನಂಬಿ ದಿನವೂ ಆಟ ಆಡಿಸುವುದು ಸಾಧ್ಯವಿಲ್ಲ ಎಂಬುದು ವ್ಯವಸ್ಥಾಪಕರಿಗೂ ಗೊತ್ತು. ಹಾಗಾಗಿ ಇಲ್ಲಿ ಊಟ ಅಥವಾ ವಸತಿಯ ವ್ಯವಸ್ಥೆ ಇಲ್ಲ. ದೇವಸ್ಥಾನದ ಪಕ್ಕದಲ್ಲಿ ಒಂದು ಚಿಕ್ಕ ಹೋಟೆಲ್ ಇದೆ ಅಷ್ಟೇ.

ಈ ಸನ್ನಿಧಿಯಲ್ಲಿ ಕಲಾವಿದರಾಗಿ ಆಟ ಕುಣಿಯುವುದು, ಸೇವಾದಾರನಾಗಿ ಆಟ ಆಡಿಸುವುದು, ಪ್ರೇಕ್ಷಕನಾಗಿ ಆಟ ನೋಡುವುದು ಸಹ ಸೇವೆಯೇ ಆಗಿದೆ. ಇಂದಿನ ನಾನಾ ಸಮೂಹ ಮಾಧ್ಯಮಗಳ ನಡುವೆಯು ಯಕ್ಷಗಾನ ಕಲೆಯನ್ನು ಪ್ರಕೃತಿಯ ಮಡಿಲಿನಲ್ಲಿ ಕುಳಿತು, ಮೊಬೈಲ್‌ನಿಂದ ದೂರ ಉಳಿದು ನೆಮ್ಮದಿಯಿಂದ ಆಸ್ವಾದಿಸುವ ದೃಶ್ಯವನ್ನು ಕಣ್ತುಂಬಿಕೊಳ್ಳಬಹುದು.

'ಬೆನಕ' ತಂಡಕ್ಕೀಗ 50 ರ ಸಂಭ್ರಮ. ಈ ಸಂದರ್ಭದಲ್ಲಿ ಬಿ.ವಿ. ಕಾರಂತರ ಜೀವನ ಮತ್ತು ಪ್ರೇಮಾ ಕಾರಂತರ ಆತ್ಮಕಥೆಯನ್ನು ಹೇಳುವ 'ಬಾಬಾ ಕಾರಂತ' ನಾಟಕವನ್ನು ರಂಗದ ಮೇಲೆ ಪ್ರದರ್ಶಿಸಲಾಯಿತು.

ರಂಗದ ಮೇಲೆ ಕಾರಂತ ಅನಾವರಣ

ಬಿ.ಎಸ್.ವಿದ್ಯಾರಣ್ಯ

'ಎಲ್ಲರೂ ತಮಗೆ ಬೇಕಾದ ಉತ್ತರದ ಅಪೇಕ್ಷೆಯಲ್ಲಿರುವಾಗ ಸತ್ಯ ವಿಫಲವಾಗುತ್ತದೆ.' ಇತ್ತೀಚೆಗೆ ಬೆನಕ ನಾಟಕ ತಂಡವು ತನ್ನ ಐವತ್ತನೇ ವರ್ಷದ ಆಚರಣೆಯ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ಪ್ರದರ್ಶಿಸಿದ ನಾಟಕ 'ಬಾಬಾ ಕಾರಂತ'ದಲ್ಲಿ ಬಿ.ವಿ.ಕಾರಂತ ಪಾತ್ರಧಾರಿ ಹೇಳುವ ಮಾತಿದು.

ಈ ಮಾತಿಗೆ ಅನುಗುಣವಾದ ರೀತಿಯಲ್ಲಿ ಸರ್ವರಿಗೂ ಪ್ರಿಯವಾಗುವಂತೆ ನಾಟಕ ಕಟ್ಟಲಾಗಿದೆ. ಸಮಕಾಲೀನ ವ್ಯಕ್ತಿ ಅಥವಾ ಘಟನೆಯನ್ನು ಯಾವುದೇ ಕಲಾ ಮಾಧ್ಯಮದಲ್ಲಿ ಹಿಡಿದಿಡಬೇಕಾದರೆ ಅವರ ಕೊಡುಗೆಯ ಬಗ್ಗೆಯೇ ಹೆಚ್ಚು ಒತ್ತುಕೊಡುವ ಭಾವನಾತ್ಮಕ ಒತ್ತಡಗಳಿಂದಾಗಿ, ನಿಷ್ಠೂರ ಚರಿತ್ರೆಯ ಹಂಗು ತೊರೆಯುವುದು ಲೋಕಾರೂಢಿ. ಹೀಗಾಗಿ ಈ ಪ್ರಯೋಗವು ಬಿ.ವಿ. ಕಾರಂತರ 'ಸೃಜನಾತ್ಮಕ ಕಲಾವಿದ'ನ ವೈರುಧ್ಯಗಳನ್ನು, ಅದರಿಂದ ಉಂಟಾಗುವ ಸಮಸ್ಯೆಗಳನ್ನು ಬಹಳ ಕರುಣೆಯಿಂದ ನೋಡುತ್ತಾ, ಅವುಗಳಿಂದ ಉಂಟಾದ ವಿವಾದಾತ್ಮಕ ವಿಷಯಗಳನ್ನು ಹೆಚ್ಚು ತಡವದೆ, ನಯವಾಗಿ ನೇವರಿಸಿ ಮುಂದೆ ಸಾಗಿಬಿಡುತ್ತದೆ. ಅವರ ಸಾಧನೆಗಳನ್ನು ಎತ್ತಿಹಿಡಿಯುವತ್ತಲೇ ಹೆಚ್ಚು ಗಮನಕೊಡುತ್ತದೆ. ವೈದೇಹಿ ರಚಿಸಿದ ಬಿ.ವಿ. ಕಾರಂತರ ಜೀವನ ಚರಿತ್ರೆ ಮತ್ತು ಪ್ರೇಮಾ ಕಾರಂತರ ಆತ್ಮಕಥೆಯನ್ನು ಆಧರಿಸಿ ಟಿ.ಎಸ್. ನಾಗಾಭರಣ, ಕೃಷ್ಣಪ್ರಸಾದ ಮತ್ತು ಶ್ರೀಪತಿ ಮಂಜನಬೈಲು ರಚಿಸಿದ ಈ ನಾಟಕವನ್ನು ಟಿ.ಎಸ್. ನಾಗಾಭರಣ ನಿರ್ದೇಶಿಸಿದ್ದಾರೆ.

ನಾಟಕ ಆರಂಭವಾಗುವುದು 'ಗೋಕುಲ ನಿರ್ಗಮನ' ನಾಟಕದ ಸಂಗೀತದೊಂದಿಗೆ, ಒಂದು ರೀತಿಯ ರಮ್ಯ ವಿಷಾದದ ಅಲೆಗಳೊಂದಿಗೆ. ನಂತರ ಕಾರಂತರು ಮಕ್ಕಳಿಗೆ ನಾಟಕ ಕಲಿಸುವ ದೃಶ್ಯ. ಆದಾದ ನಂತರ ಕಾರಂತರ ಆತ್ಮಚರಿತ್ರೆಯನ್ನು ಬರೆದ ಲೇಖಕಿಯ ಪಾತ್ರವನ್ನೇ ರಂಗದ ಮೇಲೆ ತರಲಾಗಿದೆ. ಲೇಖಕಿ ವೈದೇಹಿಯವರಿಗೆ ಕಾರಂತರು ತಮ್ಮ ಕಥೆಯನ್ನು ಹೇಳುವ ತಂತ್ರದ ಮೂಲಕ ನಾಟಕ ಮುಂದುವರೆಯುತ್ತದೆ. ಕಾರಂತರ ಬಾಲ್ಯದ ಚೇಷ್ಟೆಗಳು, ತುಡುಗುತನ ಇತ್ಯಾದಿ ಘಟನೆಗಳು ಲವಲವಿಕೆಯಿಂದ ಸಾಗುತ್ತವೆ. ನಂತರದ ತರುಣ ಕಾರಂತ ಗುಬ್ಬಿ ಕಂಪನಿಯಲ್ಲಿ ಕೆಲಸ ಮಾಡುವುದು, ಕಂಪನಿಯ ಮಾಲೀಕರು ಹಣಕಾಸಿನ ಸಹಾಯ ಮಾಡುವುದು ಇವೆಲ್ಲವೂ ಚಕಚಕನೆ ಸಾಗುತ್ತವೆ. ಬಳಿಕ ಕಾರಂತರು ಕಾಶಿಗೆ ಓದಲು ಹೋಗುತ್ತಾರೆ. ಅಲ್ಲಿ ಸಾಹಿತಿ ಹಜಾರಿ ಪ್ರಸಾದ್, ಕಾರಂತರ ಆತ್ಮೀಯರಾಗುತ್ತಾರೆ. ಒಂದು ವರ್ಷ ಪಿಎಚ್.ಡಿ ಮಾಡುವಷ್ಟರಲ್ಲಿ ಸ್ಕಾಲರ್ ಶಿಪ್ ನಿಂತುಹೋಗುತ್ತದೆ. ಇದರ ಮಧ್ಯೆ ಬೆಂಗಳೂರಿನ ಲಾಲ್‌ಬಾಗ್‌ನಲ್ಲಿ ಪ್ರೇಮಾ ಕಾರಂತರ ಮೊದಲ ಭೇಟಿ ನಡೆದಿರುತ್ತದೆ. ಆ ಸಂದರ್ಭದಲ್ಲಿ ಬರುವ 'ಎಲ್ಲವಳೆಲ್ಲವಳು, ನಿಲದಾಡವ ಕಂಗಳ ಸೊಲ್ಲವಳು' ಎಂಬ



'ಬಾಬಾ ಕಾರಂತ' ನಾಟಕದ ದೃಶ್ಯ

ಹಿನ್ನೆಲೆ ಹಾಡನ್ನು ಬಿಟ್ಟರೆ ಹೆಚ್ಚೇನೂ ರೊಮ್ಯಾಂಟಿಕ್ ಸಂಗತಿಗಳು ನಡೆಯದೆ ವ್ಯಾವಹಾರಿಕ ಒಪ್ಪಂದದ ರೀತಿ ಇಬ್ಬರೂ ಮದುವೆ ಮಾತುಕತೆ ನಡೆಸಿದರಲ್ಲ ಎಂದು ಅಚ್ಚರಿ ಪಡುತ್ತಿರುವಾಗಲೇ, ಚಿಟಕಿ ಹೊಡೆಯುವಷ್ಟರಲ್ಲಿ ಮದುವೆಯ ದೃಶ್ಯವೂ ಮುಗಿದುಹೋಗುತ್ತದೆ. ಕಾರಂತರು ಎನ್‌ಎಸ್‌ಡಿಯಲ್ಲಿ ಕಲಿಯುವಾಗ ಅದರ ಅವಧಿ ಎರಡು ವರ್ಷಗಳಿರುತ್ತದೆ. ಇವರು ತಮ್ಮ ಮಿತ್ರರೊಂದಿಗೆ ಸೇರಿ ಪ್ರಧಾನಿ ನೆಹರೂ ಅವರನ್ನು ಭೇಟಿ ಮಾಡಿ ಅದನ್ನು ಮೂರು ವರ್ಷಗಳಿಗೆ ಹೆಚ್ಚಿಸುವ ದೃಶ್ಯ ಚೆನ್ನಾಗಿದೆ. ಹಾಗೆ ಹೆಚ್ಚಿಸಲು ಒಂದು ಕಾರಣ ಅವರಿಗೆ ಪ್ರತಿ ತಿಂಗಳು ಸಿಗುತ್ತಿದ್ದ ಇನ್ನೂರು ರೂಪಾಯಿ ಭತ್ಯೆ, ಇನ್ನೊಂದು ವರ್ಷಕ್ಕೆ ಮುಂದುವರೆಯುವುದೂ ಆಗಿತ್ತು. ಬಳಿಕ ಕಾರಂತರು ಮೊದಲು ನಿರ್ದೇಶಿಸಿದ ಮೊದಲ ಹಿಂದಿ ನಾಟಕ 'ಹಯವದನ'.

ಆನಂತರ ಕರ್ನಾಟಕಕ್ಕೆ ಬಂದ ಕಾರಂತರು 'ಸತ್ತವರ ನೆರಳು' ನಾಟಕ ಮಾಡಿಸುತ್ತಾರೆ. ಮುಂದೆ ಎನ್‌ಎಸ್‌ಡಿಗೆ ನಿರ್ದೇಶಕರಾಗಿ ಹೋಗುತ್ತಾರೆ. ಅಲ್ಲಿ ಅವರು ಅನೇಕ ಕಷ್ಟಗಳನ್ನು ಅನುಭವಿಸುತ್ತಾರೆ. ವಿದ್ಯಾರ್ಥಿಗಳು ಇವರ ವಿರುದ್ಧ ದಂಗೆ ಏಳುತ್ತಾರೆ. ಕಾರಂತರು ಅಲ್ಲಿಂದ ಭೋಪಾಲ್‌ಗೆ ಹೋಗುತ್ತಾರೆ. ಅಲ್ಲಿ ಮೊದಲಿನಿಂದಲೇ ಅವರ ಬಗ್ಗೆ ಒಂದಷ್ಟು ಅಸಹನೆ ಇರುವ ಗುಂಪೊಂದು ಬೆಳೆಯುತ್ತದೆ. ಕಾರಂತರಿಗೆ 'ಆತ್ಮೀಯ'ಳಾಗಿದ್ದ ಪ್ರತಿಭಾನ್ವಿತ ನಟಿ ವಿಭಾ ಮಿಶ್ರಾ ತನ್ನ ಸಿಟ್ಟಿನ ಆವೇಗದಲ್ಲಿ ಬೆಂಕಿ ಹಚ್ಚಿಕೊಂಡ ಮತ್ತು ಕಾರಂತರನ್ನು ಆ ಪ್ರಕರಣದಲ್ಲಿ ಬಲಿಪಶು ಮಾಡಿದ ಒಂದು ದೃಶ್ಯವಿದೆ. ದೇಶದಾದ್ಯಂತ ಬಹಳ ಸದ್ದು ಮಾಡಿದ್ದ ಈ ಪ್ರಕರಣವನ್ನು ಈ ಪ್ರಯೋಗದಲ್ಲಿ ಸಾಕಷ್ಟು ತಣ್ಣಗೆ, ನಿರ್ವಿಕಾರವಾಗಿ ಒಂದು ಪತ್ರಿಕಾ ವರದಿಯಂತೆ ತೋರಿಸಲಾಗಿದೆ. ಆ ಗಂಭೀರ ದುರಂತಕ್ಕೆ ಅನುವು ಮಾಡುವ ಯಾವುದೇ ಸಂಘರ್ಷಗಳು ಎಲ್ಲೂ ಸ್ಪಷ್ಟವಾಗಿ ಕಾಣದೆ, ಆ ದೃಶ್ಯ ಬಹುತೇಕ ಮಾತುಕತೆಯಲ್ಲೇ ಘಟಿಸುತ್ತದೆ. ಇಡೀ ನಾಟಕದಲ್ಲಿ ಈ ರೀತಿಯ ಎಲ್ಲ ಸಂದರ್ಭಗಳಲ್ಲಿ, ಉದಾಹರಣೆಗೆ ಎನ್‌ಎಸ್‌ಡಿಯ ವಿದ್ಯಾರ್ಥಿಗಳ ದಂಗೆ, ರಂಗಾಯಣದ ಕಲಾವಿದರೊಂದಿಗಿನ ಸೈದ್ಧಾಂತಿಕ ತಿಕ್ಕಾಟ ಮಾತ್ರವಲ್ಲದೆ, ಕಾರಂತರ ಸರೀಕರೊಂದಿಗಿನ ಜಗಳ, ಅವರ ವ್ಯಸನಗಳು, ಅವರ ಒಳಗಿನ ತುಮುಲಗಳು ಮಾತ್ರವಲ್ಲದೆ, ಕಾರಂತ-ಪ್ರೇಮ ಕಾರಂತರ ಮೊದಲ ಭೇಟಿಯ ಪ್ರಸಂಗವನ್ನು ನಿರ್ದೇಶಕರು ಮೆದುಗೊಳಿಸಿ ನಿಭಾಯಿಸಿದ್ದಾರೆ. ಹೀಗಾಗಿ ನಾಟಕದ ತೀವ್ರತೆ ಹೆಚ್ಚಾಗಬಹುದಾಗಿದ್ದ ಸಾಧ್ಯತೆಯನ್ನು ಗಣನೀಯವಾಗಿ ತಡೆದಿದೆ. ನಾಟಕವು, ಬಹುತೇಕ ಕಾರಂತರ ರಂಗ ಕಾಯಕಗಳ ಉತ್ತಮಿಕೆಯನ್ನು ಸಕಾರಣವಾಗಿ ಆನಂದಿಸುವ ಡಾಕ್ಯುಮೆಂಟರಿಯಾಗಿದ್ದು ಅದನ್ನು ಚೆನ್ನಾಗಿ ನಿರ್ದೇಶಕರು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ಕಾರಂತರ ಸಂಗೀತ ನಿರ್ದೇಶನದ ಹಾಡುಗಳು ಇಲ್ಲಿ ವಿಫುಲವಾಗಿದ್ದು, ಪ್ರೇಕ್ಷಕರನ್ನು ಬೇರೆಯೇ ಲೋಕಕ್ಕೆ ಒಯ್ಯುತ್ತವೆ. ಕಾರಂತರ ರಂಗ ಸಂಗೀತದ ವಿಸ್ಮಯಕಾರಿ ಶಬ್ದ ವಿನ್ಯಾಸದ ಪ್ರಸ್ತುತಿ ನಾಟಕದ ಅತ್ಯಂತ ಪ್ರಶಂಸನೀಯ ಅಂಶ. ನಾಟಕದ ಅಂತ್ಯವನ್ನು ಪ್ರೇಕ್ಷಕರ ಮನಸ್ಸಿಗೆ ತಟ್ಟುವ ಭಾವುಕವಾಗಿ ಕಟ್ಟಲಾಗಿದೆ.

ಬಾಲ ಕಾರಂತ (ಅಭಿನಂದನ್), ತರುಣ ಕಾರಂತ (ಪ್ರಭಂಜನ್) ಚೆನ್ನಾಗಿ ನಟಿಸಿದ್ದಾರೆ. ವೃದ್ಧ ಕಾರಂತರ ಪಾತ್ರದಲ್ಲಿ ಮೈಕೊ ಮಂಜು ಅಭಿನಯ ಪ್ರೌಢವಾಗಿದ್ದು, ಬಾಹ್ಯ ಅನುಕರಣೆಯ ಜೊತೆಗೆ ಅವರ ಅಂತರಂಗದ ತಳಮಳ, ಚಡಪಡಿಕೆಗಳನ್ನು ಸೂಕ್ಷ್ಮತೆಯಿಂದ ಹಿಡಿಯುವ ಪ್ರಾಮಾಣಿಕ ಪ್ರಯತ್ನವಿದೆ. ಪ್ರೇಮಾ ಕಾರಂತ ಪಾತ್ರಧಾರಿ ಬೃಂದಾ ವಿಕ್ರಂ ಸುಲಲಿತವಾಗಿ ಅಭಿನಯಿಸಿದ್ದಾರೆ. 50 ವರ್ಷ ದಾಟಿದ ಬೆನಕ ತಂಡದ ಪ್ರಬುದ್ಧ ನಟ ವರ್ಗ ಮತ್ತು ನೇಪಥ್ಯದವರ ವೃತ್ತಿಪರ ರಂಗ ಕಾಯಕ ಮೆಚ್ಚುಗೆಗೆ ಅರ್ಹ.

ಕೆಲವು ಕೊರತೆಗಳ ನಡುವೆಯೂ ಬಹುಕಾಲ ಮನದಲ್ಲಿ ಉಳಿದು ಕಾಡುವ ಉತ್ತಮ ಪ್ರಯೋಗ. ❖

ಎಲ್ಲೆಲ್ಲೂ ಸಂಗೀತವನ್ನೇ ಕಂಡ ವಿಜಯಭಾಸ್ಕರ್

ಎನ್.ಎಸ್.ಶ್ರೀಧರ ಮೂರ್ತಿ

ವಿಜಯಭಾಸ್ಕರ್ ಅವರ ಮನೆ ಇದ್ದಿದ್ದು ಬೆಂಗಳೂರಿನ ಮಲ್ಲೇಶ್ವರಂನಲ್ಲಿ. ಮನೆ ಸಮೀಪವಿದ್ದ ಕನ್ನಿಕಾ ಪರಮೇಶ್ವರಿ ದೇವಸ್ಥಾನದಲ್ಲಿ ಲೆಗ್ ಹಾರ್ಮೋನಿಯಂ ಮೂಲಕ ಸಂಗೀತ ನೀಡುತ್ತಿದ್ದ ಕ್ರಮ ಅವರನ್ನು ಬಲುವಾಗಿ ಆಕರ್ಷಿಸಿತು. ತಂದೆಯ ಅರಿವಿಗೆ ಬಾರದಂತೆ ಸಂಗೀತವನ್ನು ಕಲಿತಿದ್ದರು ವಿಜಯಭಾಸ್ಕರ್. ಲೀನ್ ಹಂಟ್ ಅವರಿಂದ ಪಾಶ್ಚಾತ್ಯ ಸಂಗೀತ ಕೂಡ ಕಲಿತರು. ಮುಂದೆ ಬಾಲಿವುಡ್‌ಗೆ ಹೋಗಿ ನೌಷಾದ್, ಮದನ್ ಮೋಹನ್ ಬಳಿ ಕೆಲಸ ಮಾಡಿದರು. ಹಿಂದಿಯ ಟಾಪ್ ಹೀರೊ ದಿಲೀಪ್ ಕುಮಾರ್ ಅವರು ವಿಜಯಭಾಸ್ಕರ್ ಅವರ ಪಿಯಾನೊ ಕೈಚಳಕ ನೋಡಿ 'ನಿಮಗೆ ಮುಂಬೈನಲ್ಲಿ ಮನೆ ಕೊಡಿಸ್ತೀನಿ, ನನ್ನ ಸಿನಿಮಾಗಳಿಗೆ ನಿಮ್ಮನ್ನೇ ರೆಕಮೆಂಡ್ ಮಾಡ್ತೀನಿ' ಎಂದಿದ್ದರು. ಮುಂಬೈನಲ್ಲಿ ಪರಿಚಿತರಾಗಿದ್ದ ಬಿ.ಆರ್.ಕೃಷ್ಣಮೂರ್ತಿ, 'ಕನ್ನಡದಲ್ಲಿ ಸಿನಿಮಾ ಮಾಡ್ತಾ ಇದ್ದೀನಿ, ನಿಮ್ಮ ಸಹಾಯ ಬೇಕು' ಎಂದು ಕೇಳಿದರು. ಅವರಿಗೆ ನೆರವಾಗುವ ಸಲುವಾಗಿ ಬಂದ ವಿಜಯಭಾಸ್ಕರ್ ಕನ್ನಡಕ್ಕೆ ದಕ್ಕಿದರು.

ವಿಜಯಭಾಸ್ಕರ್ ಮೇಲ್ನೋಟಕ್ಕೆ ಅಂತರ್ಮುಖಿ ಎನ್ನಿಸಿದರೂ ಸ್ನೇಹಿತರೊಂದಿಗೆ ಬೆರೆಯುವ ಸ್ವಭಾವದವರು. ಯಾರನ್ನೂ ಅಷ್ಟು ಸುಲಭವಾಗಿ ಹಚ್ಚಿಕೊಳ್ಳುತ್ತಿರಲಿಲ್ಲ. ಹಚ್ಚಿಕೊಂಡರೆ ಆ ಸಂಬಂಧವನ್ನು ಕಡಿದು ಕೊಳ್ಳುವವರಲ್ಲ. ವಿಜಯಭಾಸ್ಕರ್ ಹತ್ತಾರು ಚಟುವಟಿಕೆಗಳಲ್ಲಿ ತೊಡಗಿಕೊಂಡಿದ್ದರೂ ಕುಟುಂಬಕ್ಕೆ ಸಮಯವನ್ನು ಕೊಡುತ್ತಿದ್ದರು. ಅವರ ಸಂಗೀತ ಸಂಯೋಜನೆ ಹೆಚ್ಚಾಗಿ ಮದ್ರಾಸಿನಲ್ಲಿದ್ದರೆ ಪಾಮ್ ಗ್ರೂವ್ ಹೋಟಲ್‌ನಲ್ಲಿಯೂ, ಬೆಂಗಳೂರಿನಲ್ಲಿದ್ದರೆ ಹೋಟೆಲ್ ಜನಾರ್ದನದಲ್ಲಿ ನಡೆಯುತ್ತಿತ್ತು. ಅವರು ಕಥೆ ರೂಪುಗೊಳ್ಳುವ ಸಮಯದಿಂದಲೇ ಸ್ವರೂಪವನ್ನು ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದರು. ಮದ್ರಾಸಿನ ಫಿಲಂ ಸೆಂಟರ್‌ನಲ್ಲಿ ಸುಸಜ್ಜಿತ ಸಂಗೀತ ವಿಭಾಗವನ್ನು ಕಟ್ಟಿ ಬೆಳೆಸಿದಂತಹ ಹೆಗ್ಗಳಿಕೆ ಅವರದು. 60-70 ವಾದ್ಯಗಳನ್ನು ಬಳಸಿ ಸಂಗೀತ ನೀಡುವಂತೆ ಮಿತ ವಾದ್ಯಗಳ ಮೂಲಕ ಪರಿಣಾಮವನ್ನು ತರುವುದೂ ಕೂಡ ಅವರಿಗೆ ಸಾಧ್ಯವಿತ್ತು.



ವಿಜಯಭಾಸ್ಕರ್

ಸದಾ ಗುನುಗುವಂತಹ, ಮನಸಿನಾಳಕ್ಕೆ ಇಳಿದು ಕಾಡುವ, ಬಗೆ ಬಗೆಯ ಭಾವಗಳನ್ನು ಉಕ್ಕಿಸುವ, ಧ್ಯಾನಸ್ಥರನ್ನಾಗಿಸುವಂತಹ ಸ್ವರ ಸಂಯೋಜನೆ ಮಾಡಿದವರು ವಿಜಯಭಾಸ್ಕರ್. ಅವರು ಬದುಕಿದ್ದರೆ ನೂರು ವರ್ಷಗಳಾಗುತ್ತಿತ್ತು. ಅವರು ನಮ್ಮೊಂದಿಗಿಲ್ಲ ನಿಜ. ಆದರೆ ಅವರು ಕೊಟ್ಟ ಸಾವಿರಾರು ಗೀತೆಗಳು ಅವರನ್ನು ಬದುಕಿಸಿವೆ!

ವಿಜಯಭಾಸ್ಕರ್ 'ಗೆಜ್ಜೆಪೂಜೆ' ಚಿತ್ರದ 'ಪಂಚಮ ವೇದ ಪ್ರೇಮದ ನಾದ' ಗೀತೆಯಲ್ಲಿ ಚತುಶ್ರುತ ರಿಷಭದ ಬದಲು ಶುದ್ಧ ರಿಷಭ ಬಳಸಿದರು. ಈ ಗೀತೆ ಸಂಯೋಜಿತವಾಗಿರುವ ಅಭೇರಿ ಅಥವಾ ಭೀಮ್ ಪಲಾಸ್ ಶ್ರೀಕೃಷ್ಣನೇ ಸೃಷ್ಟಿಸಿದ ಎಂದು ನಂಬಲಾದ ದೈವಿಕ ಪ್ರೇಮವನ್ನು ಹೇಳುತ್ತದೆ ಎಂದು ನಂಬಲಾದ ರಾಗ. ಚಿತ್ರದಲ್ಲಿ ಪ್ರೇಮ ಅಪೂರ್ಣವಾಗುತ್ತದೆ ಎನ್ನುವುದನ್ನು ಸೂಚಿಸುವ ಸಲುವಾಗಿ ಈ ಪ್ರಯೋಗವನ್ನೇ ಮಾಡಿದರು. ಇದೇ ರಾಗದಲ್ಲಿ ಚಿತ್ರದ ಇನ್ನೊಂದು ಗೀತೆ 'ಗಗನವು ಎಲ್ಲೋ'ವನ್ನು ಸಂಯೋಜಿಸಿದರು. ಇದು ನಾಯಕಿಯ ಪ್ರೇಮದ ಉತ್ಕರ್ಷವನ್ನು ಹೇಳುವ ಗೀತೆ. ಇದನ್ನು ಸೂಚಿಸುವ ಸಲುವಾಗಿ ಜೀವ ಸ್ವರ ರಿಷಭವನ್ನೇ ಕೈ ಬಿಟ್ಟರು. (ಆರೋಹಣ ಸ ಗ2 ಮ1 ಪ ನಿ2 ಸ, ಅವರೋಹಣ ಸ ನಿ2 ಪ ಮ2 ಗ2) ಭೀಮ್ ಪಲಾಸ್ ಔಢವ ಸಂಪೂರ್ಣ ರಾಗವಾಗಿರುವುದರ ಲಕ್ಷಣಗಳನ್ನು ಬಳಸಿ ಕೊಂಡಿದ್ದಾರೆ.

ಇದರಂತೆ ಅವರು ವಿಜಾತಿ ಸ್ವರಗಳನ್ನು ಬಳಸುವಲ್ಲಿ ಕೂಡ ವೈಶಿಷ್ಟ್ಯವನ್ನು ತೋರಿದ್ದಾರೆ. 'ನಾಂದಿ' ಚಿತ್ರದ 'ಹಾಡೊಂದು ಹಾಡುವೆ' ಗೀತೆ ಮಧ್ಯಮಾವತಿಯಲ್ಲಿ ಸಂಯೋಜಿತವಾಗಿದ್ದರೂ ಈ ರಾಗದಲ್ಲಿ ಇಲ್ಲದ ಗ 2 ಬಂದಿದೆ. ಇದು ಗೀತೆಗೆ ಬೇಕಾದ ಭಾವನಾತ್ಮಕ ಚೌಕಟ್ಟನ್ನು ನಿರ್ಮಿಸಿದೆ. 'ಮಗುವೇ ನಿನ್ನ ಹೂನಗೆ' ಚಿತ್ರದ ಇನ್ನೊಂದು ವಿಶಿಷ್ಟವಾದ ಗೀತೆ. ಇಲ್ಲಿ ಜೋಗಳದ ಸಂಭ್ರಮದಲ್ಲಿಯೇ ನೋವಿನ ಎಳೆ ಕೂಡ ಬರುವಂತೆ ಸ್ವರ ಸಂಯೋಜನೆ ಮಾಡಿದ್ದಾರೆ. ಸಾರಮತಿ ವಿಜಯಭಾಸ್ಕರ್ ಅವರಿಗೆ ಬಹಳ ಪ್ರಿಯವಾದಂತಹ ರಾಗ. ಈ ರಾಗದಲ್ಲಿ ಅವರು ರಾಗ ಸಂಯೋಜನೆ ಮಾಡಿದ 'ಭಾರತ ಭೂಶಿರ ಮಂದಿರ ಸುಂದರಿ' (ಉಪಾಸನೆ) 'ಎಲ್ಲೆಲ್ಲೂ ಸಂಗೀತವೆ' (ಮಲಯ ಮಾರುತ) ಎರಡೂ ಪ್ರಯೋಗಶೀಲ ಗೀತೆಗಳೇ ಆಗಿವೆ.

ಮದ್ರಾಸಿನ ಅಶೋಕ ನಗರದ ವಿಶಾಲವಾದ ಮನೆಯಲ್ಲಿದ್ದಾಗ ಮನೆಯೇ ಮುಚ್ಚಿ ಹೋಗುವಷ್ಟು ಗಿಡಗಳನ್ನು ಬೆಳೆಸಿದ್ದರು. ಅವುಗಳ ಜೊತೆಗೆ ಒಡನಾಡುತ್ತಾ ಸಂಗೀತವನ್ನು ಅರಸುತ್ತಿದ್ದರು. ಅವರ ಬಳಿ ಹಸಿರು ಬಣ್ಣದ ಮಾರುತಿ ಕಾರು ಇತ್ತು. ಅದನ್ನು ಅವರೇ ಡ್ರೈವ್ ಮಾಡುತ್ತಿದ್ದರು. ಬೇಸರವಾದಾಗ ಮರೀನಾ ಬೀಚ್‌ಗೆ ಹೋಗಿ ಕಾಲ ಕಳೆಯುವುದು ಅವರ ಅಭ್ಯಾಸವಾಗಿತ್ತು. ಕನ್ನಡದಲ್ಲಿ ಸಾಕಷ್ಟು ಪ್ರತಿಭಾವಂತ ಗಾಯಕರಿದ್ದಾರೆ. ಅವರಿಗೆ ಅವಕಾಶಗಳು ಸಿಗಬೇಕು ಎಂದು ಪ್ರತಿಪಾದಿಸುತ್ತಿದ್ದ ಅವರು, ತಮ್ಮ ಚಿತ್ರಗಳಲ್ಲಿ ಅನೇಕ ಹೊಸ ಗಾಯಕರಿಗೆ ಅವಕಾಶಗಳನ್ನು ನೀಡಿದ್ದರು. ಕನ್ನಡ ಚಿತ್ರರಂಗ ಬೆಂಗಳೂರಿನಲ್ಲಿಯೇ ನೆಲೆ ನಿಲ್ಲಬೇಕು. ಆಗ ಕನ್ನಡ ವಾದ್ಯಗಾರರಿಗೆ ಅವಕಾಶ ಸಿಕ್ಕುತ್ತದೆ ಎಂದು ಪ್ರತಿಪಾದಿಸಿದ್ದರು. ಸಂಕೇತ್ ಸ್ಟುಡಿಯೋ ಆದಾಗ ಬಹಳ ಸಂಭ್ರಮಿಸಿದ್ದರು. ಹೋಟೆಲ್ ರೂಂನಲ್ಲಿ ಸಂಗೀತ ಸಂಯೋಜನೆ ಮಾಡುವ ಆಗಿನ ಪದ್ಧತಿಯ ಕುರಿತು ಅವರಿಗೆ ವಿರೋಧವೇನು ಇರಲಿಲ್ಲ. ಸ್ಟುಡಿಯೋಗಳಲ್ಲಿ ಕಾಲ್‌ಶೀಟ್ ದುಬಾರಿಯಾಗಿದ್ದ ಕಾರಣ ಇದು ಅನಿವಾರ್ಯವಾಗಿತ್ತು. ಹಾಡು ಹುಟ್ಟುವುದಕ್ಕೆ ಇಂತಹ ಸ್ಥಳವೇ ಬೇಕು ಎಂದೇನು ಇಲ್ಲ ಎನ್ನುವುದು ಅವರ ವಿಚಾರಧಾರೆ.

ವಿಜಯಭಾಸ್ಕರ್ ಅವರಿಗೆ ಬೆಂಗಳೂರಿಗೆ ಬರುವ ಹಂಬಲ ಮೂಡಿ ಚೆನ್ನೈನಲ್ಲಿ ಸ್ವಂತ ಮನೆ ಇದ್ದರೂ ಜೆ.ಪಿ. ನಗರದಲ್ಲಿ ತಮ್ಮ ಕಲ್ಪನೆಯ ಮನೆಯನ್ನು ಕಟ್ಟಿಸಿಕೊಂಡು ಇಲ್ಲಿಯೇ ವಾಸಕ್ಕೆ ಬಂದರು. ಆದರೆ 2002ರ ಮಾರ್ಚ್ 3ರಂದು ತೀವ್ರ ಹೃದಯಾಘಾತದಿಂದ ನಿಧನರಾದರು. ಕನ್ನಡ ಚಿತ್ರರಂಗ ಮಾತ್ರವಲ್ಲ, ಭಾರತೀಯ ಚಿತ್ರರಂಗ ಅವರಿಂದ ಪಡೆಯಬೇಕಾದ ಬಹಳಷ್ಟನ್ನು ಕಳೆದುಕೊಂಡಿತು. ಅವರು ಮಧುರವಾಗಿ ಮೂಡಿಸಿದ ಸಾವಿರಾರು ಹಾಡುಗಳು ಮಾತ್ರ ಇಂದಿಗೂ ಅವರ ನೆನಪಾಗಿ ನಮ್ಮ ಜೊತೆಯಲ್ಲಿ ಉಳಿದು ಕೊಂಡಿವೆ. ❖

ಮೇಘಾಲಯದ ಮನಮೋಹಕ ಗುಹಾಲೋಕ

10ನೇ ಪುಟದಿಂದ...

ಆಕರ್ಷಕ ಅರ್ವಾ

ದೇಶದಲ್ಲೇ ಅತ್ಯಂತ ಹೆಚ್ಚು ಮಳೆ ಬೀಳುವ ಪ್ರದೇಶವೆಂದು ಖ್ಯಾತವಾದ ಚಿರಾಪುಂಜಿಯ ಹತ್ತಿರವಿರುವ, ಸಮುದ್ರ ಮಟ್ಟದಿಂದ 850 ಮೀಟರ್ ಎತ್ತರದ ಖಾಸಿ ಪರ್ವತ ಶ್ರೇಣಿಯಲ್ಲಿರುವ 'ಅರ್ವಾ' ಗುಹೆ ಸುಣ್ಣಕಲ್ಲಿನದು. ಮಿಲಿಯಾಂತರ ವರ್ಷಗಳ ನೀರಿನ ಹರಿಯುವಿಕೆಯಿಂದ ರೂಪುಗೊಂಡ, ದಟ್ಟವಾದ ಅರಣ್ಯದ ಮಧ್ಯದಲ್ಲಿರುವ ಅರ್ವಾ ಗುಹೆ ತನ್ನೊಡಲಲ್ಲಿ ಮೀನು, ನಾಯಿಯ ತಲೆ ಬುರುಡೆ ಮುಂತಾದ ಪ್ರಾಣಿ, ಜಲಚರಗಳ ಪಳೆಯುಳಿಕೆಗಳನ್ನು ಹುದುಗಿಸಿಟ್ಟುಕೊಂಡಿದೆ. ಇದರ ಇನ್ನೊಂದು ಪ್ರಮುಖ ಆಕರ್ಷಣೆ ನೆಲದೊಳಗಿನ 12 ಮೀಟರ್ ಎತ್ತರದಿಂದ ಧುಮುಕುವ ಜಲಪಾತ! ಈ ಜಲಪಾತದ ಸದ್ದು ಗುಹೆಯಲ್ಲಿ ಪ್ರತಿಧ್ವನಿಸಿ ಇಡೀ ಗುಹೆಯಲ್ಲಿ ಅನುರಣಿಸುತ್ತದೆ. ಇಷ್ಟೇ ಅಲ್ಲದೇ ಈ ಗುಹೆಯ ಮಾಡಿನಿಂದ ಕೆಳಗೆ ಚಾಚಿಕೊಂಡಿರುವ ವಿವಿಧ ಆಕಾರ, ಗಾತ್ರಗಳ 'ತೂಗುತೊಂಗಲುಗಳು' (Stalagmites and stalactites formations) ಬಹಳ ಆಕರ್ಷಕವಾಗಿವೆ. ಇವು 'ಅವರವರ ಭಾವಕ್ಕೆ, ಅವರವರ ಭಕುತಿಗೆ' ಎಂಬ ನಾಣ್ಣುಡಿಯಂತೆ ವಿವಿಧ ಪ್ರಾಣಿ, ಪಕ್ಷಿ, ದೇವಾನುದೇವತೆಗಳ ಮೂರ್ತಿಗಳು, ಕಲ್ಲಿನಲ್ಲಿ ಕೆತ್ತಿದ ಅಮೂರ್ತ ಶಿಲ್ಪಗಳಂದದಿ ಗೋಚರಿಸಿ ಮನಸ್ಸಿಗೆ ಮುದ ನೀಡುತ್ತವೆ. ಈ ಗುಹೆ ಒಳಗೆ ಯಾವಾಗಲೂ ಇರುವ ನೀರಿನ ಹರಿವು ಮೊದಲೇ ತಣ್ಣಗಿನ ವಾತಾವರಣದ ಗುಹೆಯನ್ನು ಇನ್ನಷ್ಟು ತಂಪಾಗಿಸಿದೆ. ಈ ಗುಹೆಯ 300 ಮೀಟರಿನಷ್ಟು ಭಾಗದಲ್ಲಿ ಮಾತ್ರ ಪ್ರವಾಸಿಗರ ಭೇಟಿಗೆ ಅವಕಾಶವಿದೆ.



ಅರ್ವಾ ಗುಹೆಯ ಒಳನೋಟ

ಮನಮೋಹಕ ಮೌಸ್ಮಯಿ

ಇದೂ ಸಹ ಲಕ್ಷಾಂತರ ವರ್ಷಗಳ ಸತತ ನೀರಿನ ಹರಿವಿನಿಂದ ನಿರ್ಮಾಣಗೊಂಡ ಸುಣ್ಣದ ಕಲ್ಲಿನ ಗುಹೆ. 'ಶಿಲ್ಪಿಯ ಉಳಿ'ಯಂತೆ ಇಲ್ಲಿ 'ನೀರು' ಸುಣ್ಣದ ಕಲ್ಲಿನಲ್ಲಿ ವಿವಿಧ ರೀತಿಯ ಶಿಲಾ ರಚನೆಗಳನ್ನು ಕಡೆದು 'ಕಲೆಯ ಬಲೆ'ಯನ್ನೇ ಹೆಣೆದಿದೆ. ವಿಸ್ಮಯಕಾರಿ, ಚಿತ್ತಾಪಹಾರಿ, ಮನಮೋಹಕ ಶಿಲಾ ರಚನೆಗಳನ್ನು ನೋಡುತ್ತಾ, ಪ್ರಕೃತಿ ಸೌಂದರ್ಯವನ್ನು ಸವಿಯುತ್ತಾ ಗಂಟೆಗಟ್ಟಲೆ ಮೈ ಮರೆಯಬಹುದು. ಇಲ್ಲಿಯೂ ಸಹ ಪಳೆಯುಳಿಕೆಯಾಗಿರುವ ಪ್ರಾಣಿಗಳನ್ನು ನೋಡಬಹುದು. ಚಿರಾಪುಂಜಿ ಬಳಿಯ ಪೂರ್ವ ಖಾಸಿ ಪರ್ವತ ಶ್ರೇಣಿಯಲ್ಲಿರುವ ಮೌಸ್ಮಯಿ ಗುಹೆ ಸುಮಾರು 150 ಮೀಟರ್ ಉದ್ದವಾಗಿದೆ. ಕೆಲವೆಡೆ ನೇರವಾಗಿ ನಡೆದು ಕ್ರಮಿಸಬಹುದಾದರೆ, ಇನ್ನೂ ಕೆಲವೆಡೆ ಬಾಗಿ, ಬಳುಕಿ, ಮೊಣಕಾಲೂರಿ ಮುಂದುವರಿಯಬೇಕಾಗುವಷ್ಟು ಕಿರಿದಾದ ಹಾದಿ. ಜೊತೆಗೆ ಸದಾ ನೀರಿನ ಹರಿವಿನಿಂದಾಗಿ ಕೆಳಗಿನ ಕಲ್ಲು, ಬಂಡೆಗಳ ಮೇಲೆ ಕಾಲಿಟ್ಟ ಕೂಡಲೇ ಜಾರುತ್ತದೆ. ಹಾಗಾಗಿ ಬಹಳ ಜಾಗರೂಕತೆಯಿಂದ ಹೆಜ್ಜೆ ಇಡಬೇಕು. ಆದ್ದರಿಂದ ಕೈ ಕಾಲು ಗಟ್ಟಿಯಾಗಿರುವ ಸಾಹಸ ಪ್ರಿಯರು ಮಾತ್ರ ಈ ಗುಹೆಯ ತುದಿಯವರೆಗೂ ಹೋಗಿ ವೀಕ್ಷಿಸಬಹುದು. 'ತೂಕದ ವ್ಯಕ್ತಿ'ಗಳಿಗೆ, 'ಅಜಾನುಬಾಹು'ಗಳಿಗೆ ಮುಂದೆ ಹೋಗಲು ಸಾಧ್ಯವೇ ಇಲ್ಲ. ತೀರಾ ಪ್ರಯತ್ನ ಪಟ್ಟರೆ ತೆವಳಿಕೊಂಡು ಹೋಗಬಹುದೇನೋ. ಆದ್ದರಿಂದಲೇ ಇಂತಹ ತೂಕದ ವ್ಯಕ್ತಿಗಳು, ಅಜಾನುಬಾಹುಗಳು ಒಳ ಹೋಗುವ ಸಾಹಸಿಗರನ್ನು ಹುರಿದುಂಬಿಸುತ್ತಾ, ಅವರ ಕೈಚೀಲ, ಚಪ್ಪಲಿ ಮುಂತಾದ ಸಾಮಾನುಗಳ ಮೇಲುಸ್ತುವಾರಿ ಮಾಡುತ್ತಾ ಹೊರಗೇ ಕುಳಿತಿರುವುದನ್ನು ನೋಡಬಹುದು.

ಗುಹೆಗಳು ಆದಿ ಮಾನವನ ಆಶ್ರಯ ತಾಣಗಳು ಹಾಗೂ ಆತನ ಚಿತ್ರಕಲಾ ಕೌಶಲ ಪ್ರದರ್ಶನಕ್ಕೆ ಅನುವು ಮಾಡಿಕೊಟ್ಟ ಪ್ರಕೃತಿದತ್ತ 'ಮೊದಲ ಮನೆಗಳು'. ಇಂತಹ ಗುಹೆಗಳು ಕಾಲ ಕ್ರಮೇಣ ಆಧುನಿಕತೆ ಬೆಳೆದಂತೆ ಆತನಲ್ಲಿ ಭೀತಿ ಹುಟ್ಟಿಸುವ ತಾಣಗಳಾಗಿ ಪರಿವರ್ತಿತವಾಗಿರುವುದು ಸೋಜಿಗ. ಪ್ರಕೃತಿ ನಿರ್ಮಿತ ಈ 'ಅನನ್ಯ ಕಲಾಕೃತಿ'ಗಳ ಕುರಿತು ಈಗ ಹಲವಾರು ಸಂಶೋಧನೆಗಳು ನಡೆದಿದ್ದು ಸಾಕಷ್ಟು ಮಾಹಿತಿ ಲಭ್ಯವಿದೆ. ಆದ್ದರಿಂದ ಕುತೂಹಲಕಾರಿಯಾದ ಈ ಗುಹೆಗಳು ಜೀವನದಲ್ಲಿ ಒಮ್ಮೆಯಾದರೂ ಭೇಟಿ ನೀಡಲೇಬೇಕಾದ ಚೆಲುವಿನ ತಾಣಗಳು. ❖

ಚಿರಾಪುಂಜಿ ಸಮೀಪದ ಅರ್ವಾ ಗುಹೆ



ಮುನ್ನೋಟ 22-09-2024 ರಿಂದ 28-09-2024

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ಚುರುಕುತನ ನಿಮ್ಮಲ್ಲಿ ಮೈದುಂಬಿರುತ್ತದೆ. ಆದಾಯವು ನಿಮ್ಮ ನಿರೀಕ್ಷೆಯನ್ನು ಮೀರಿರುತ್ತದೆ. ಬಂಧುಗಳ ಸಹಕಾರ ಲಭಿಸುತ್ತದೆ. ವಿದ್ಯಾರ್ಥಿಗಳಿಗೆ ಅವಕಾಶ ದೊರೆಯುತ್ತದೆ. ಕೆಲವರಿಗೆ ಕಣ್ಣಿನ ಸೋಂಕು ಉಂಟಾಗುವ ಸಾಧ್ಯತೆಗಳಿವೆ. ಸಂಗಾತಿಯಿಂದ ನಿರೀಕ್ಷಿತ ಸಹಕಾರ ದೊರೆಯುತ್ತದೆ. ವೃತ್ತಿಯಲ್ಲಿ ಅಭಿವೃದ್ಧಿ ಇರುತ್ತದೆ ಹಾಗೂ ಕೆಲವರಿಗೆ ಹೊಸ ಸ್ಥಾನಮಾನ ಸಿಗಬಹುದು.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ಯಾವುದೇ ಸಮಸ್ಯೆಯನ್ನು ಎದುರಿಸುವ ಛಲ ಮತ್ತು ಶಕ್ತಿ ನಿಮ್ಮಲ್ಲಿ ಇರುತ್ತದೆ. ಮಾತಿನಲ್ಲಿ ಒರಟುತನವಿರುತ್ತದೆ. ಬಹಳ ಚುರುಕಾದ ನಡವಳಿಕೆ ಮೈಗೂಡುತ್ತದೆ. ರಿಯಲ್ ಎಸ್ಟೇಟ್ ವ್ಯವಹಾರಗಳಲ್ಲಿ ಮುಂದುವರೆಯುವಿರಿ. ಧರ್ಮವಿದ್ಯೆಯನ್ನು ಕಲಿಯುತ್ತಿರುವವರಿಗೆ ಸಾಕಷ್ಟು ಪ್ರಗತಿ ಇರುತ್ತದೆ. ಮೂತ್ರ ಸಂಬಂಧಿ ದೋಷಗಳು ಕೆಲವರನ್ನು ಬಾಧಿಸಬಹುದು. ಸಂಗಾತಿ ಆದಾಯ ಹೆಚ್ಚಾಗುವ ಸಂದರ್ಭವಿದೆ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಸಾಹಸ ಪ್ರದರ್ಶನ ಮಾಡಲು ಮುಂದಾಗುವಿರಿ. ಆದಾಯವು ಸ್ವಲ್ಪ ಕಡಿಮೆ ಇರುತ್ತದೆ. ನಿಮ್ಮ ವ್ಯಾವಹಾರಿಕ ಬುದ್ಧಿಯಿಂದ ಸಂಪಾದನೆ ಹೆಚ್ಚು ಮಾಡಿಕೊಳ್ಳಲು ಪ್ರಯತ್ನ ಪಡುವಿರಿ. ವಿದ್ಯಾರ್ಥಿಗಳಿಗೆ ಮಧ್ಯಮ ಫಲಿತಾಂಶವಿರುತ್ತದೆ. ಮೂಳೆಯ ತೊಂದರೆಗಳ ಬಗ್ಗೆ ಎಚ್ಚರವಿರಿ. ಸಂಗಾತಿಯ ವ್ಯವಹಾರಗಳಿಗಾಗಿ ಹೆಚ್ಚು ಹಣ ಕೊಡಬೇಕಾಗುತ್ತದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಈ ವಾರದಲ್ಲಿ ಒಂದು ರೀತಿ ಸಂತೋಷವಿರುತ್ತದೆ. ನಿಮ್ಮ ವ್ಯವಹಾರಗಳಿಂದ ಮತ್ತು ವಾಕ್ಚಾತುರ್ಯದಿಂದ ಹೆಚ್ಚು ಆದಾಯ ಮಾಡಿಕೊಳ್ಳುವಿರಿ. ಹಿರಿಯರನ್ನು ಓಲೈಸಿಕೊಂಡು ನಿಮ್ಮ ಕೆಲಸ ಕಾರ್ಯಗಳನ್ನು ಸಾಧಿಸುವಿರಿ. ಆಸ್ತಿ ವಿಚಾರದಲ್ಲಿ ಮೇಲುಗೈ ಸಾಧಿಸುವಿರಿ. ಶೀತ ಬಾಧೆ ಮತ್ತು ಶ್ವಾಸಕೋಶದ ತೊಂದರೆಗಳಿರುವವರು ಎಚ್ಚರವಹಿಸಿರಿ. ಸಂಗಾತಿ ನಿಮ್ಮ ಮಾತಿಗೆ ಸಹಮತ ನೀಡದಿರಬಹುದು.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮ ನಡವಳಿಕೆಯಲ್ಲಿ ಅತಿಯಾದ ವ್ಯಾವಹಾರಿಕತೆ ಇರುತ್ತದೆ. ಆದಾಯದಲ್ಲಿ ಸಲ್ಪ ಸುಧಾರಣೆಯನ್ನು ಕಾಣಬಹುದು. ಸರ್ಕಾರಿ ಸಾಲಗಳು ಸುಲಭವಾಗಿ ಸಿಗುತ್ತವೆ. ಭೂಮಿ ವ್ಯವಹಾರಗಳಲ್ಲಿ ಹೆಚ್ಚು ಲಾಭವಿರುತ್ತದೆ. ಕಟ್ಟಡ ನಿರ್ಮಾಣಕಾರರಿಗೆ ಹೆಚ್ಚಿನ ಕೆಲಸ ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಒಳ್ಳೆಯ ಫಲಿತಾಂಶ ಪಡೆಯುವ ಯೋಗವಿದೆ. ಅಜೀರ್ಣ ನಿಮ್ಮನ್ನು ಕಾಡಬಹುದು.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಎಲ್ಲ ವಿಚಾರಗಳಲ್ಲೂ ಸ್ವಂತ ಆಲೋಚನೆ ಮಾಡಲು ಸಿದ್ಧರಾಗುವಿರಿ. ಆದಾಯವು ಈಗ ಮಧ್ಯಮಗತಿಯಲ್ಲಿರುತ್ತದೆ. ವೃತ್ತಿಯಲ್ಲಿ ನಿಮ್ಮ ಶ್ರಮಕ್ಕೆ ತಕ್ಕ ಫಲವಿರುತ್ತದೆ. ಭೂಮಿ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿರುವುದಿಲ್ಲ. ವಕೀಲರಿಗೆ ಹೆಚ್ಚು ದಾವೆಗಳು ದೊರೆತು ಆದಾಯ ಹೆಚ್ಚುತ್ತದೆ. ಸಂಗಾತಿಯ ಪ್ರತಿಕೂಲ ನಡವಳಿಕೆಗಳು ನಿಮಗೆ ಕೋಪ ತರಿಸಬಹುದು. ಕೃಷಿಯಿಂದ ಸ್ವಲ್ಪ ಆದಾಯವಿರು ತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಬಹಳ ಅಲಂಕಾರಿಕವಾಗಿ ಕಾಣಿಸಿಕೊಳ್ಳಲು ಪ್ರಯತ್ನ ಪಡುವಿರಿ. ಆದಾಯವು ಚೇತರಿಯ ಹಾದಿಯಲ್ಲಿರುತ್ತದೆ. ಸಮಾಜದ ಪ್ರಮುಖರು ನಿಮ್ಮ ಕಾರ್ಯ ವೈಖರಿಯ ಬಗ್ಗೆ ಪ್ರಶ್ನೆ ಮಾಡುವರು. ರಾಜಕೀಯ ನಾಯಕರುಗಳಿಗೆ ವಿಚಿತ್ರ ಸನ್ನಿವೇಶ ಒದಗಿ ಲಾಭವಾಗಬಹುದು. ವಿದೇಶಿ ಕಂಪನಿಗಳಿಂದ ಸಾಲ ತೆಗೆದುಕೊಂಡಿರುವವರಿಗೆ ಸಂಕಷ್ಟ ಎದುರಾಗಬಹುದು.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ಕೆಲವೊಂದು ವಿಚಾರಗಳಲ್ಲಿ ನೀವು ಅಸಹಾಯಕರಾಗಿರುವಿರಿ. ಆದಾಯವು ನಿಮ್ಮ ಅಗತ್ಯವನ್ನು ಪೂರೈಸುತ್ತದೆ. ರಾಜಕೀಯ ನಾಯಕರಗಳು ತಮ್ಮ ನಡವಳಿಕೆಯಿಂದ ಜನರನ್ನು ಆಕರ್ಷಿಸಲು ಪ್ರಯತ್ನಪಡುವರು. ಕೃಷಿ ಪಂಡಿತರಿಗೆ ಸಾಕಷ್ಟು ಬೆಲೆ ಬರುತ್ತದೆ. ವಿದೇಶಿ ಭಾಷೆಯ ಜೊತೆಗೆ ತಾಂತ್ರಿಕ ವ್ಯಾಸಂಗ ಮಾಡಬೇಕೆಂಬ ಆಶಿಸುತ್ತಿದ್ದವರಿಗೆ ಈಗ ಅವಕಾಶ ದೊರೆಯುತ್ತದೆ.


ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಸಮಸ್ಯೆಗಳನ್ನು ಅವಲೋಕಿಸಿ ಅದರ ಸಾಧಕ ಬಾಧಕಗಳನ್ನು ಅರಿತು ಮುನ್ನಡೆಯುವಿರಿ. ಆದಾಯವು ಸ್ವಲ್ಪ ಮಟ್ಟಿಗೆ ಕಡಿಮೆ ಇರುತ್ತದೆ. ಶತ್ರುಗಳಲ್ಲಿ ಒಡಕುಹುಟ್ಟಿಸಿ, ಅವರವರೇ ಬಡಿದಾಡಿಕೊಳ್ಳುವಂತೆ ಮಾಡುವಿರಿ. ವಾಹನ ತಯಾರಿಕಾ ಕಂಪನಿಗಳು ಹೊಸ ಶಾಖೆಗಳನ್ನು ತೆರೆಯಬಹುದು. ಹಳೆಯ ಸಾಲಗಳನ್ನು ಈಗ ತೀರಿಸುವ ಸಮಯ ಬರಬಹುದು. ಸಂಗಾತಿಯು ನಿಮಗೆ ಬೆಂಗಾವಲಾಗಿ ನಿಲ್ಲುವರು.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ನಿಮ್ಮ ಕೆಲಸಕ್ಕೆ ತಕ್ಕ ಪ್ರತಿಫಲ ದೊರೆಯುತ್ತದೆ. ಆದಾಯವು ಕಡಿಮೆ ಇದ್ದರೂ ಹಣ ನಿರ್ವಹಣೆಯ ಮಾರ್ಗಗಳು ನಿಮಗೆ ತಿಳಿದಿರುತ್ತದೆ. ಬಂಧುಗಳಿಂದ ವಿರೋಧವಿದ್ದರೂ ಅದನ್ನು ಎದುರಿಸಿ ಮುನ್ನಡೆಯುವಿರಿ. ಭೂಮಿಯ ವ್ಯವಹಾರಗಳಲ್ಲಿ ನಿರೀಕ್ಷಿತ ಲಾಭವಿರುವುದಿಲ್ಲ. ವಿದ್ಯಾರ್ಥಿಗಳಿಗೆ ಈಗ ಉತ್ತಮ ಫಲಿತಾಂಶ ಪಡೆಯುವ ಯೋಗವಿರುತ್ತದೆ. ಬಂಧುಗಳ ನಡುವೆ ಹಣದ ವ್ಯವಹಾರ ಬೇಡ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಆದಾಯವು ಕಡಿಮೆ ಇರುತ್ತದೆ. ಮಾತನಾಡುವಾಗ ಎಚ್ಚರವಿರಲಿ. ಆಸ್ತಿ ವ್ಯವಹಾರಗಳನ್ನು ಮಾಡುವವರಿಗೆ ಸಾಕಷ್ಟು ಅಭಿವೃದ್ಧಿ ಇರುತ್ತದೆ. ಎಲೆಕ್ಟ್ರಾನಿಕ್ಸ್ ವಿಭಾಗದಲ್ಲಿ ಓದುತ್ತಿರುವವರಿಗೆ ಹೆಚ್ಚಿನ ಯಶಸ್ಸು ದೊರೆಯುತ್ತದೆ. ಹೈನುಗಾರಿಕೆ ಮಾಡುವವರಿಗೆ ಆದಾಯ ಸ್ವಲ್ಪ ಕಡಿಮೆಯಾಗಬಹುದು. ಸಂಗಾತಿ ಮಾಡುವ ವ್ಯವಹಾರಗಳಲ್ಲಿ ಲಾಭವಿರುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಅಸಹನೆಯನ್ನು ಬಿಟ್ಟು ಮುಂದುವರೆಯುವುದು ಬಹಳ ಒಳ್ಳೆಯದು. ಆದಾಯವು ಮಧ್ಯಮಗತಿಯಲ್ಲಿರುತ್ತದೆ. ಬಯಸಿದ್ದ ಆಸ್ತಿಯನ್ನು ಖರೀದಿಸಲು ಮುಂದಾಗುವಿರಿ. ವಿದ್ಯಾರ್ಥಿಗಳು ನಿರೀಕ್ಷಿತ ಮಟ್ಟದ ಫಲಿತಾಂಶವನ್ನು ಪಡೆಯುವಲ್ಲಿ ಸಫಲರಾಗುವರು. ಚರ್ಮರೋಗ ಕೆಲವರನ್ನು ಬಾಧಿಸಬಹುದು. ವ್ಯವಹಾರಗಳಲ್ಲಿ ನಿರೀಕ್ಷಿತ ಅಭಿವೃದ್ಧಿ ಇರುವುದಿಲ್ಲ. ಸಂಗಾತಿಯಿಂದ ಸಿಗುತ್ತಿದ್ದ ಸಹಕಾರ ಕಡಿಮೆಯಾಗಬಹುದು.

ಪದಬಂಧ 2859



ಮೇಲಿನಿಂದ ಕೆಳಕ್ಕೆ

1. ಇಮ್ಮಡಿಯ ಸೇವಂತಿಗೆ ಅಪರೂಪವವಾಗಿ ಹಣದ ಕಾಣಿಕೆಯಾಗಿ ಸಿಗುತ್ತದೆ 5
2. ದೇವರಾಣೆಗೂ ಇದು ಸತ್ಯ 2
3. ಕಪ್ಪಗಿರುವ ಗಜವನ್ನು ಕೂಗು 2
5. ಲಯಬದ್ಧವಾಗಿ ಹಾಡುವ ವೇದ 2
6. ಕೆಲಸವಾಗಬೇಕಾದರೆ ಹೊಡೆಯಬೇಕಾದ ನಮಸ್ಕಾರ 3
8. ಕಾವಡಗಿಸಿಕೊಂಡು ಹರಿಯುವ ನದಿ 3
10. ಏರುಪೇರಿಲ್ಲದೆ ಪದ್ಧತಿಯಂತೆ ಸಿಗುವ ಸುದ್ದಿ 4
12. ನಟನೆಯ ಕೊಡುಗೆಯನ್ನು ಪಡೆದ ಶ್ರೇಷ್ಠ 4
14. ಪದಕವನ್ನು ಧರಿಸಿರುವ ಮನೆತನವೇ ಇದು 3
15. ಬುದ್ಧಿಯ ನಾಲ್ಕು ಮುಖಗಳುಳ್ಳವ 5
16. ಸಹಿಸಿಕೊಳ್ಳುವ ಶಕ್ತಿ 3
19. ಒಂಟಿ ಕಾಲಲ್ಲಿ ನಿಂತು ಧ್ಯಾನಿಸುವ ಕೊಕ್ಕರೆ 2
20. ಒಂದರ ಪಕ್ಕ ಒಂದು ಜೋಡಿಸಿದಾಗ ಆಗುವ ನೇರ ಪಂಕ್ತಿ 2
22. ಕುಸುಮದಲ್ಲಿ ಅಡಗಿರುವ ಹೂವು 2

ಎಡದಿಂದ ಬಲಕ್ಕೆ

1. ಇರುಳು ಹಗಲುಗಳ ನಡುವೆ ಬೀಳುವ ಮಂಜು ಹನಿ 3
3. ಕನ್ನಡಕ್ಕೆ ಬಂದ ಇಂಗ್ಲೀಷಿನ ಬಣ್ಣ 3
4. ನೀರಿನಂತೆ ಹರಿವ ಮೋಜು ಮಜಾ 3
6. ನೀರಿನ ಜೊತೆ ಏರಿ ಹೋಗುವ ಪಯಣ 3
7. ಕೊನೆಯಲ್ಲಿ ಶ್ರೇಷ್ಠನೆನೆಸಿಕೊಂಡ ಸಂತ 3
9. ರಾಡಿಯಿಲ್ಲದೆ ಮೇಲೆ ತೇಲಿ ಬಂದ ನಗೆ 4
11. ಅರಳುತ್ತಿರುವ ಮೊಗ್ಗಿನಂತಿರುವ ಮಂದಹಾಸ 5
13. ಮರ್ಯಾದೆಯೇ ದೊಡ್ಡದೆಂದು ನಂಬಿರುವ ಮಾನಿನಿ 4
14. ಇತರರಿಂದ ಸೋಲುಂಟಾದ ಸ್ಥಿತಿ 4
15. ಕಾಲಡಿಯಲ್ಲಿರುವ ಸೇವಕ 5
17. ವರ್ಷ, ವಸಂತ, ಹೇಮಂತ ಇತ್ಯಾದಿಗಳಲ್ಲಿ ದ್ರವ ಹರಿಯುವ ಕಾಲವೇ ಇದು 4
18. ಕತ್ತೆಯ ಜೊತೆ ಬರುವ ಕಾಡು ಪ್ರಾಣಿ 3
20. ಚಪ್ಪಾಳೆಗೆ ಅರ್ಹವಾಗುವ ಫಲ ಕಂಡ ಯತ್ನ 3
21. ಅರ್ಥವಾಗುವಂತೆ ಪಾಠ ಹೇಳಿಕೊಡು 3
23. ಗರಿಗೆದರಿ ಕುಣಿಯುವ ಮಯೂರ 3
24. ಮದವೇರಿದ ಮನ್ಮಥ 3

ಪದಬಂಧ ಉತ್ತರ -2858


ಮೇಲಿಂದ ಕೆಳಕ್ಕೆ

2.ತಬಲಾ 3.ಕಪಿಕೋಪ 4.ಆತುರಗಾರ 5.ದಿಟ್ಟತನ 7.ಮುದಿತನ 8.ಮುನಿಜನ 10.ಮಹಾಸಮರ 14.ಮಹಾಶಯ 15.ತರಂಗಿಣಿ 16. ವಿರಹಗೀತೆ 17.ಗುಣವಂತ 19.ಸಾನಂದನ 21.ಕ್ಷಿತಿಜ

ಎಡದಿಂದ ಬಲಕ್ಕೆ

1. ಹಿತಚಿಂತಕ 4.ಆಶಾವಾದಿ 6. ಪಿಸುಮಾತು 7.ಮುಲಾಮು 9.ನಿರುಪಮ 11.ಗಾಢಮೌನ 12.ಹಾದರ 13.ಸಮೀಪ 14.ಮರುತ 16. ವಿನಮ್ರ 17.ಗುರುದ್ವಾರ 18.ರಸಾವೇಶ 20.ಯಕ್ಷಿಣಿ 22.ಗೀಗೀಪದ 23.ತರುಲತೆ 24.ನಗರಜನ

ಹೀಗಿದ್ರು ಅನಂತಕುಮಾರ್



ಅನಂತಕುಮಾರ್ ಪ್ರತಿಷ್ಠಾನ ಮತ್ತು ಅದಮ್ಯ ಚೇತನ ಜೊತೆಯಾಗಿ ಸೆಪ್ಟೆಂಬರ್ 22 ರ ಭಾನುವಾರ ರಾಜಸ್ಥಾನದ ಜೋಧಪುರದಲ್ಲಿ 'ಅನಂತ ನಮನ–65' ಕಾರ್ಯಕ್ರಮವನ್ನು ಹಮ್ಮಿಕೊಂಡಿವೆ. ಈ ಸಂದರ್ಭದಲ್ಲಿ ಕೇಂದ್ರದ ಮಾಜಿ ಸಚಿವ ದಿವಂಗತ ಅನಂತಕುಮಾರ್ ಅವರ ಪತ್ನಿ ತೇಜಸ್ವಿನಿ ಅನಂತಕುಮಾರ್ ಪತಿ ಕುರಿತು ಆಪ್ತವಾಗಿ ಬರೆದಿದ್ದಾರೆ.

ಮಳೆಗಾಲದ ಒಂದು ದಿನ. ಇಬ್ಬರು ಹುಡುಗರು ಶಾಲೆಯಿಂದ ಮನೆಯತ್ತ ಹೊರಟಿದ್ದರು. ರಸ್ತೆಯ ಬದಿಯಲ್ಲಿ ಇಳಿವಯಸ್ಸಿನ ಭಿಕ್ಷುಕನೊಬ್ಬ ಚಳಿಯಲ್ಲಿ ನಡುಗುತ್ತ ಕುಳಿತಿರುವುದನ್ನು ಕಂಡರು. ಆ ಬಾಲಕರಲ್ಲಿ ದೊಡ್ಡವನಿಗೆ ಏನು ತೋಚಿತೋ ಏನೋ, ತನ್ನ ಜೇಬಿಗೆ ಕೈಹಾಕಿ ಹುಡುಕಿದ. ಒಂದೆರಡು ನಾಣ್ಯಗಳು ಸಿಕ್ಕವು. ಅವನ್ನು ಆ ಮುದುಕನಿಗೆ ಕೊಡುವನೆಂದು ಚಿಕ್ಕವನು ನಿರೀಕ್ಷಿಸಿದ್ದ. ಆದರೆ, ಹುಡುಗ ಹಾಗೆ ಮಾಡಲಿಲ್ಲ. ಹತ್ತಿರದ ಅಂಗಡಿಗೆ ಹೋದ. ಕೈಯಲ್ಲಿದ್ದ ಕಾಸನ್ನು ಅಂಗಡಿಯವನಿಗೆ ಕೊಟ್ಟು ಒಂದಷ್ಟು ಬೀಡಿಗಳನ್ನು ಕೊಡುವಂತೆ ಕೇಳಿದ. ಸಿಕ್ಕಷ್ಟು ಬೀಡಿಗಳನ್ನು ಆ ಮುದುಕನ ಕೈಯಲ್ಲಿಟ್ಟು ಮುಂದೆ ನಡೆದ. ಇದನ್ನೆಲ್ಲ ನೋಡುತ್ತಿದ್ದ ಚಿಕ್ಕವನು ಕೇಳಿದ, "ಅಣ್ಣಾ, ಇದ್ಯಾಕೆ ಹೀಗೆ ಮಾಡಿದೆ? ನಾವು ಅಂಗಡಿಯಲ್ಲಿ ಬೀಡಿ ಕೊಳ್ಳುವುದು ಸರಿಯೇ? ಅಪ್ಪ ಅಮ್ಮ ಬೈಯುವುದಿಲ್ಲವೇ?" ತಮ್ಮನ ಪ್ರಶ್ನೆಗಳಿಗೆ ಹಿರಿಯ ಹುಡುಗ ಸಮಾಧಾನದಿಂದಲೇ ಉತ್ತರಿಸಿದ, "ನೋಡು, ಆ ಮುದುಕ ಚಳಿಯಲ್ಲಿ ನಡುಗುತ್ತಿದ್ದಾನೆ. ಅವನಿಗೆ ಕಂಬಳಿ ಕೊಡಿಸುವಷ್ಟು ಹಣ ನಮ್ಮ ಕೈಯಲ್ಲಿಲ್ಲ. ಅದು ಸಾಧ್ಯವೂ ಇಲ್ಲ. ನಮ್ಮ ಹತ್ತಿರ ಇರುವಷ್ಟು ಕಾಸಿನಲ್ಲಿ ಕಡೇ ಪಕ್ಷ ಅವನಿಗೆ ಬೀಡಿ ಕೊಡಿಸಬಹುದು. ಆ ಬೀಡಿ ಸೇದುವುದರಿಂದ ಮುದುಕನ ನಡುಕ ಕಡಿಮೆಯಾಗಬಹುದೋ ಏನೋ. ಅಷ್ಟಾದರೂ ಸಹಾಯ ಮಾಡಿದಂತೆ ಆಯಿತಲ್ಲ"

ಹೀಗೆ ಬೀಡಿ ಕೊಂಡು ಭಿಕ್ಷುಕನ ಕೈಗಿತ್ತವ ಅನಂತಕುಮಾರ್. ಆತನ ಜೊತೆಗಿದ್ದವ ತಮ್ಮ ನಂದಕುಮಾರ್. ಕಷ್ಟದಲ್ಲಿದ್ದವರಿಗೆ ಕೈಲಾದ ಸಹಾಯ ಮಾಡಬೇಕೆಂದು ತಾಯಿ ತಂದೆ ತಮ್ಮ ನಡೆನುಡಿಗಳಲ್ಲಿ ತೋರಿಸಿಕೊಟ್ಟದ್ದು ಆ ಮಕ್ಕಳ ಬದುಕಿನುದ್ದಕ್ಕೂ ಪ್ರೇರಣೆ ನೀಡಿದುದರಲ್ಲಿ ಅಚ್ಚರಿಯಿಲ್ಲ.

ತಮ್ಮ ಜೀವನದುದ್ದಕ್ಕೂ ಅನಂತಕುಮಾರ್ ತೋರುತ್ತಿದ್ದ ಮಾನವೀಯತೆಯ ಪ್ರತಿಸ್ಪಂದನ ಎಂದೋ ಎಲ್ಲೋ ಕ್ವಚಿತ್ತಾಗಿ ಸ್ಫುರಿಸುವಂಥದ್ದಾಗಿರಲಿಲ್ಲ. ಕೇಂದ್ರ ಸಚಿವರಾಗಿಯೋ, ಗಣ್ಯ ವ್ಯಕ್ತಿಯಾಗಿಯೋ, ಜನನಾಯಕನಾಗಿಯೋ ಉಳಿದವರೆದುರಿಗೆ ಪ್ರದರ್ಶನ ಮಾಡುವ ತೋರ್ಪಡಿಕೆಯಾಗಿರಲಿಲ್ಲ. ತಂದೆ ತಾಯಿ ದಿನನಿತ್ಯ ತಮಗೆ ಕಲಿಸಿದ ಬದುಕಿನ ಪಾಠವನ್ನು ಚಾಚೂ ತಪ್ಪದೆ ಪಾಲಿಸಿದ ಅನಂತಕುಮಾರ್‌ಗೆ ಮಾನವೀಯ ಪ್ರತಿಕ್ರಿಯೆಯೆನ್ನುವುದು ಸಹಜ ಪ್ರವೃತ್ತಿಯಾಗಿತ್ತು. ಇದರಿಂದಾಗಿ ಅವರು ನಾಯಕತ್ವದ ಸೋಪಾನವೇರಿ ಎಷ್ಟೇ ಉನ್ನತಿಗೇರಿದರೂ ಜನಸಾಮಾನ್ಯರಲ್ಲಿ ಒಬ್ಬನಾಗಿ ಬೆರೆಯಲು ಸುಲಭ ಸಾಧ್ಯವಾಗಿತ್ತು.

ತಮ್ಮನ್ನು ಕಾಣಬರುವವರು ಬಡವರಿರಲಿ, ಗಣ್ಯರಿರಲಿ, ಅನಂತಕುಮಾರ್ ವರ್ತನೆ ಒಂದೇ ರೀತಿಯಾಗಿರುತ್ತಿತ್ತು. ಕೇವಲ ಬನಿಯನ್, ಪಂಚೆ ಧರಿಸಿ ಅವರು ಯಾರ ಎದುರೂ ಕಾಣಿಸಿಕೊಂಡವರೇ ಅಲ್ಲ. ಇತರರ ಬಗೆಗೆ ಅಲಕ್ಷ್ಯ ಅನಾದರವೆಂಬುದು ತಾವು ಧರಿಸುವ ಉಡುಪಿನಲ್ಲೂ ಗೋಚರಿಸುವಂತಿರಬಾರದು. ಅದೇ ಒಬ್ಬ ಬಡವ ಹರಿದ ಬಟ್ಟೆಯಲ್ಲಿ ಬಂದನೆಂದು ಅವನನ್ನು ಅಲಕ್ಷಿಸುವುದೂ ಸರಿಯಲ್ಲ. ಕೇಂದ್ರ ಸಚಿವ ಸ್ಥಾನದಲ್ಲಿದ್ದು, ಠಾಕುಠೀಕಾಗಿ ಬಟ್ಟೆ ಧರಿಸಿದ ಶ್ರೀಮಂತ ಉದ್ಯಮಿಯೊಬ್ಬರನ್ನು ಮಾತನಾಡಿಸುವಷ್ಟೇ ಆದರ ವ್ಯವಧಾನಗಳಿಂದ ಸಮಾಜದ ಕೆಳಸ್ತರದ ದೀನದಲಿತರೊಡನೆ ಅರ್ಧತಾಸಿನವರೆಗೆ ಸಂಭಾಷಿಸಬಲ್ಲವರಾಗಿದ್ದರು.

ತಮ್ಮ ಊರಿನ ಬೇಡಿಕೆ ಒಪ್ಪಿಸುವುದಕ್ಕಾಗಿ ಜನರು ದೂರದ ದೆಹಲಿಗೂ ಹೋಗುತ್ತಿದ್ದರು. ಅವರ ಬೇಡಿಕೆಗೂ ಅನಂತಕುಮಾರ್ ಇಲಾಖೆಗೂ ಸಂಬಂಧವೇ ಇರದಿದ್ದರೂ ಜನರು ಅವರ ಮನೆಗೇ ಬಂದು ಕಾಯುತಿರುತ್ತಿದ್ದರು. ಸಚಿವರು ಬಂದಕೂಡಲೇ ಬಂದವರ ಊಟತಿಂಡಿಗೆ ವ್ಯವಸ್ಥೆ ಮಾಡಲಾಗಿದೆಯೇ ಎಂಬುದನ್ನು ಮೊದಲಿಗೆ ಖಚಿತಪಡಿಸಿಕೊಂಡು, ಆನಂತರ ಬಂದವರ ಕಷ್ಟಸುಖ ವಿಚಾರಿಸುತ್ತಿದ್ದರು.

ಬೆಂಗಳೂರಿನ ನ್ಯಾಷನಲ್ ಕಾಲೇಜು ಮೈದಾನದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಅನಂತಕುಮಾರ್ ಮುಖ್ಯ ಅತಿಥಿ. ಕಾರ್ಯಕ್ರಮದ ಮಧ್ಯಂತರದಲ್ಲಿ ಗಣ್ಯರಿಗೆ ಪ್ರತ್ಯೇಕವಾಗಿ ಊಟದ ವ್ಯವಸ್ಥೆ ಮಾಡಲಾಗಿತ್ತು. ಅನಂತಕುಮಾರ್ ಅಲ್ಲಿಗೆ ಹೋದರು. ಊಟ ಬಡಿಸಲು ಇನ್ನೂ ಸಿದ್ಧತೆ ನಡೆದಿತ್ತು. ಅಷ್ಟರಲ್ಲಿ ಅವರು ಕುಳಿತಿರುವಲ್ಲಿಗೆ ಇದ್ದಕ್ಕಿದ್ದಂತೆ ಹರಿದ ಬಟ್ಟೆಯ ಹುಚ್ಚನೊಬ್ಬ ಓಡಿ ಬಂದ. ಆಗಂತುಕನ ಅವಾಂತರವನ್ನು ತಡೆಯಲು ಪೋಲೀಸರು ಧಾವಿಸಿ ಬಂದರು. ಅನಂತಕುಮಾರ್ ಮುಂದೆಯೇ ನಿಂತು ಆತ 'ಹಸಿವು ಹಸಿವು' ಎನ್ನುತ್ತ ಹೊಟ್ಟೆಯ ಮೇಲೆ ಬಡಿದುಕೊಳ್ಳತೊಡಗಿದ. ಪೋಲೀಸರು ಅವನನ್ನು ಹೊರಗೆ ಕಳುಹಿಸುವ ಯತ್ನದಲ್ಲಿದ್ದರು. ಅನಂತಕುಮಾರ್ ಕಿಂಚಿತ್ತೂ ಸಿಡಿಮಿಡಿಗೊಳ್ಳದೆ ಅವನಿಗೆ ಊಟಹಾಕಿಸಿದ ನಂತರವೇ ಕಳುಹಿಸತಕ್ಕದ್ದು ಎಂದು ಸೂಚಿಸಿದರು. ಹಾಗೆ ಬಂದವನು ಸಾಂಸ್ಕೃತಿಕ ಕಾರ್ಯಕ್ರಮದ ಪಾತ್ರಧಾರಿಯಾಗಿದ್ದ ಪರಿಚಿತ ವ್ಯಕ್ತಿ ಶ್ರೀಕೃಷ್ಣಸಂಪಗಾಂವಕರನೇ ಎಂದು ಸಚಿವರಿಗೆ ಆಮೇಲೆ ತಿಳಿಯಿತು.

ತಾವು ಯಾರೊಡನೆ ಸಂವಹನ ನಡೆಸಬೇಕಾಗಿದೆಯೋ ಅವರ ಸ್ಥಿತಿಗತಿಗಳನ್ನು ಗಮನಿಸುವುದೂ ಅನಂತಕುಮಾರ್ ಅವರ ಸಂವೇದನಾ ಸೂಕ್ಷ್ಮತೆಯ ಒಂದು ಭಾಗವಾಗಿದ್ದಿತು. ಒಂದೆಡೆ ಅವರ ಭಾಷಣ ಕಾರ್ಯಕ್ರಮ ಏರ್ಪಟ್ಟಿತ್ತು. ಸಚಿವರನ್ನು ನೋಡಲು, ಭಾಷಣವನ್ನು ಆಲಿಸಲು ಬಹಳ ಜನ ಸೇರಿದ್ದರು. ಮಧ್ಯಾಹ್ನದ ಸಮಯವಾದ್ದರಿಂದ ಬಿಸಿಲೇರಿತ್ತು. ಅನಂತಕುಮಾರ್ ಆಗಮನವನ್ನು ನಿರೀಕ್ಷಿಸುತ್ತ ವೇದಿಕೆಯ ನೆರಳಿನಲ್ಲಿ ಗಣ್ಯರು, ಸುಡುಬಿಸಿಲಲ್ಲಿ ಸಭಿಕರು ಕಾಯುತ್ತಿದ್ದರು. ಕಾರ್ಯಕ್ರಮಕ್ಕೆ ಆಗಮಿಸಿದ ಅನಂತಕುಮಾರ್ ಭಾಷಣ ಮಾಡಲು ಎದ್ದವರೇ ವೇದಿಕೆಯಿಂದ ಕೆಳಗಿಳಿದು ಜನರ ಮಧ್ಯೆ ಬಂದು ನಿಂತರು. ಭಾಷಣ ಆಲಿಸುವ ಜನರು ಬಿಸಿಲು ಲೆಕ್ಕಿಸದೆ ಇರುವಾಗ ತಾನು ಅವರ ನಡುವೆಯೇ ನಿಂತು ಮಾತನಾಡುವುದು ಸೂಕ್ತ ಎಂದು ಹೇಳಿಯೇ ಭಾಷಣಕ್ಕೆ ತೊಡಗಿದರು.

ಒಮ್ಮೆ ಅನಂತಕುಮಾರ್ ಮುಂಬೈಗೆ ಕಾರ್ಯನಿಮಿತ್ತ ಹೋಗಿದ್ದರು. ಅವರ ಓಡಾಟಕ್ಕಾಗಿ ಗೊತ್ತುಪಡಿಸಿದ್ದ ಕಾರಿನ ಚಾಲಕನೊಡನೆ ಮಾತನಾಡಿ ಎಂದಿನ ರೂಢಿಯಂತೆ ಅವನ ಸ್ಥಿತಿಗತಿಗಳನ್ನು ವಿಚಾರಿಸಿದ್ದರು. ಇಡೀ ದಿನದ ಬಿಡುವಿಲ್ಲದ ಕಾರ್ಯಕ್ರಮದ ನಡುವೆ ಕಾರಿನ ಚಾಲಕನ ವರ್ತನೆ ಸರಿಯಿಲ್ಲದಿರುವುದನ್ನು ಅನಂತಕುಮಾರ್ ಗಮನಿಸಿದ್ದರು. ಒರಟಾಗಿ ವರ್ತಿಸುತ್ತಿದ್ದ ಅವನ ನಡವಳಿಕೆಯ ಬಗೆಗೆ ಕಾರಿನ ಮಾಲೀಕರಿಗೆ ದೂರವಾಣಿಯಲ್ಲಿ ತಿಳಿಸಿಯೂ ಆಯಿತು.

ಮಾರನೇ ದಿನ ಬೆಳಗ್ಗೆ ಕಾರಿನಲ್ಲಿ ಬಂದು ಕುಳಿತಾಗ ಚಾಲಕನ ಸ್ಥಾನದಲ್ಲಿ ಬೇರೆಯೊಬ್ಬನಿದ್ದ. ನಿನ್ನೆ ಬಂದವನೆಲ್ಲಿ ಎಂದು ಅನಂತಕುಮಾರ್ ಕೇಳಿದರು. ಚಾಲಕನ ದುರ್ವರ್ತನೆಯ ಬಗೆಗೆ ಮಾಹಿತಿ ಪಡೆದಿದ್ದ ಮಾಲೀಕ ಕೋಪಗೊಂಡು ಅವನನ್ನು ಕೆಲಸದಿಂದಲೇ ವಜಾ ಮಾಡಿ ಬೇರೆಯವನನ್ನು ಕಳಿಸಿದ್ದರೆಂದು ತಿಳಿಯಿತು. ಅನಂತಕುಮಾರ್ ಕಾರಿನಿಂದ ಇಳಿದರು. ವಾಹನದ ಮಾಲೀಕನನ್ನು ಫೋನ್ ಮೂಲಕ ಸಂಪರ್ಕಿಸಿ ಹೇಳಿದರು "ನಿನ್ನೆಯ ಚಾಲಕ ಬಂದಹೊರತು ನಾನು ನಿಮ್ಮ ಕಾರಿನಲ್ಲಿ ಕೂರುವುದಿಲ್ಲ"

ಆ ಚಾಲಕ ಬರುವವರೆಗೆ ಅನಂತಕುಮಾರ್, ಮತ್ತವರ ಸ್ನೇಹಿತರು ಅಲ್ಲಿಯೇ ನಿಂತಿದ್ದರು. ಚಾಲಕ ಅನಂತಕುಮಾರ್‌ಗೆ ನಮಸ್ಕರಿಸಿ ಕ್ಷಮೆ ಕೋರಿದ್ದು ಹಾಗಿರಲಿ, ತಪ್ಪಾಗಿ ವರ್ತಿಸಿದವನನ್ನು ತಿದ್ದಿ ತಿಳಿಹೇಳುವ ಬದಲು ಹೊಟ್ಟೆಪಾಡಿನ ಉದ್ಯೋಗವನ್ನೇ ಕಿತ್ತುಕೊಳ್ಳುವುದು ಅಮಾನವೀಯವೆಂದು ಕಾರಿನ ಮಾಲೀಕನಿಗೂ ಪಾಠ ಹೇಳಿದಂತಾಯಿತು.

ಅನಂತಕುಮಾರ್ ನಮ್ಮೊಂದಿಗಿಲ್ಲ. ಅವರು ನಂಬಿ ನಡೆದ ಜೀವನದ ಮೌಲ್ಯಗಳು ನಮ್ಮಿಂದ ದೂರವಾಗುತ್ತಿವೆ. ಹೀಗಾಗಿ ಇಂದಿನ ಬದುಕಿನ ಡಾಂಭಿಕತೆ, ಜಡತೆ, ಸತ್ವಹೀನ ಪ್ರತಿಕ್ರಿಯೆಗಳು ಸಮಾಜವನ್ನು ಎತ್ತ ಕೊಂಡೊಯ್ಯಬಹುದೆಂಬ ಚಿಂತೆ ಕಾಡುತ್ತದೆ. ಅನಂತಕುಮಾರ್ ಬದುಕಿನ ಪುಟಗಳಲ್ಲಿ ತುಂಬಿ ತುಳುಕುವ ಮಾನವೀಯ ಸಂವೇದನೆ ಸೂಕ್ಷ್ಮತೆಗಳು ವರ್ತಮಾನದ ಜೀವನದ ಶುಷ್ಕ ದಿನಚರ್ಯೆಗೆ ಪ್ರೇರಣೆ ನೀಡುವಂತಾಗಲಿ. ❖

ಕಥೆ
ಪ. ರಾಮಕೃಷ್ಣ ಶಾಸ್ತ್ರಿ ಅವರ
ಮೀಟರ್ ರೀಡರ್ ಮುಕುಂದನೂ ಪ್ರೇತಾತ್ಮ ಬಾಧೆಯೂ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಸತ್ಯಾನಂದ ಪಾತ್ರೋಟ ಅವರ
ಕುರ್ಚಿ ಖಾಲಿ ಇಲ್ಲ
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry

ಸಾದರ ಸ್ವೀಕಾರ
ಮಾರುಕಟ್ಟೆಯಲ್ಲಿನ ಹೊಸ ಪುಸ್ತಕಗಳ ಮಾಹಿತಿಗೆ ಮೊಬೈಲ್‌ನಲ್ಲಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಕಥೆ, ಕವಿತೆ, ಲೇಖನ, ಪ್ರತಿಕ್ರಿಯೆಗಳನ್ನು ಈ ಇ–ಮೇಲ್‌ಗೆ ಕಳುಹಿಸಿ
bhanuvara@prajavani.co.in

ಮಂಟೇಸ್ವಾಮಿ–ಕೊಡೇಕಲ್ಲ ಪರಂಪರೆಗಳ ಮುಖಾಮುಖಿ

ಮಹಾದೇವ ಶಂಕನಪುರ

ಭಾರತದ ಆಧ್ಯಾತ್ಮಿಕ ಲೋಕದಲ್ಲಿ ಗುರು–ಶಿಷ್ಯ ಪರಂಪರೆಗೆ ತನ್ನದೇ ಆದ ಇತಿಹಾಸವಿದೆ. ಇಂತಹ ಹಲವು ಗುರುಪಂಥಗಳಲ್ಲಿ ಕನ್ನಡ ನೆಲದ ಕೊಡೇಕಲ್ಲ ಬಸವಣ್ಣ-ಮಂಟೇಸ್ವಾಮಿ ಪರಂಪರೆಯೂ ಒಂದು. ಕಳೆದ ಎಂಟು ಶತಮಾನಗಳಿಂದ ಅಜ್ಞಾತವಾಗಿದ್ದ ಈ ಪಂಥಗಳು ಈಚೆಗೆ ಪರಸ್ಪರ ಬೆಸೆದುಕೊಳ್ಳುತ್ತ ಇತಿಹಾಸದ ಮರು ನಿರ್ಮಾಣಕ್ಕೆ ಮುಂದಾಗಿದ್ದು, ಇದಕ್ಕೆ ಮೈಸೂರು ವೇದಿಕೆಯಾಯಿತು. ಉಭಯ ಗುರು–ಶಿಷ್ಯ ಪರಂಪರೆಗಳು ಕರ್ನಾಟಕದ ಉತ್ತರ ಮತ್ತು ದಕ್ಷಿಣದ ಜನ ಸಮುದಾಯಗಳ ಅಧ್ಯಾತ್ಮಿಕ ಸಾಮಾಜಿಕ ಸ್ವಾಸ್ಥ್ಯ ಕಾಪಾಡುವಲ್ಲಿ ಮಹ್ವತ ಪಡೆದಿವೆ.

ಮಂಟೇಸ್ವಾಮಿ ನೀಲಗಾರ ಪರಂಪರೆ ಮೈಸೂರು ಸೀಮೆಯಲ್ಲಿ ಅಪಾರ ಒಕ್ಕಲುಗಳನ್ನು ಹೊಂದಿರುವ ಶೈವ ಸಿದ್ಧಪಂಥ. ಹಾಗೇ ಕಲಬುರಗಿ-ಯಾದಗಿರಿ ಸೀಮೆಯ ಕೊಡೇಕಲ್ಲು ಬಸವಣ್ಣ ಪರಂಪರೆ ಕೂಡ ದೊಡ್ಡ ಅನುಯಾಯಿಗಳನ್ನು ಹೊಂದಿರುವ ಆರೂಢ ಸಿದ್ಧಪಂಥ. ನೀಲಗಾರರು ಮಂಟೇಸ್ವಾಮಿ ಮತ್ತವರ ಶಿಷ್ಯರ ಕುರಿತು ಜನಪದ ಕಾವ್ಯ ಕಟ್ಟಿ ಹಾಡಿದರೆ, ಕೊಡೇಕಲ್ಲ ಬಸವಣ್ಣ ಮತ್ತವರ ಕುಟುಂಬ, ಪಂಥದವರು ಬರೆದ ವಚನಗಳನ್ನು ಪಠಿಸುವ ಮತ್ತು ಹಾಡುವ ಪದ್ಧತಿ ಕೊಡೇಕಲ್ಲ ಪರಂಪರೆಯಲ್ಲಿದೆ.

ಮಂಟೇಸ್ವಾಮಿ ನೀಲಗಾರ ಪಂಥ ಜಾತ್ಯತೀತವಾದದ್ದು. ಮಂಟೇಸ್ವಾಮಿ ಎಂದರೆ ಭಿನ್ನಬೇಧವಿಲ್ಲದೆ ಕುಲೇಳು ಹದಿನೆಂಟು ಜಾತಿಗಳನು ಒಂದು ಮಾಡಿ ಏಕವಾಗಿ ಬೆಳಗುವ ಪರಂಜ್ಯೋತಿ. ಕೊಡೇಕಲ್ಲ ಪರಂಪರೆ ಕೂಡ ಜಾತಿ, ಮತ, ಧರ್ಮಗಳ ನಡುವೆ ಸೌಹಾರ್ದತೆ, ಏಕತೆಯನ್ನು ಪ್ರತಿಪಾದಿಸುತ್ತ ಇಂದಿಗೂ ಬಾಳುತ್ತಿರುವ ಪಂಥ. ಕೊಡೇಕಲ್ಲ ಬಸವಣ್ಣ ಒಂದು ಕಾಲಿಗೆ ಮುಸ್ಲಿಮರು ಮೆಡುವ ಚೂಪು ಬೂಟು (ಕಂಸಿ), ಇನ್ನೊಂದು ಕಾಲಿಗೆ ಹಿಂದೂ ಪಾದರಕ್ಷೆ (ರಾಕ್ಷಿ) ತೊಟ್ಟು ಮೈಗೆ ಚರ್ಮಾಂಭರ ಉಟ್ಟು, ಕೈಯಲ್ಲಿ ಹಂಡಿ ಹಿಡಿದು ಹಿಂದೂ–ಮುಸ್ಲಿಂ ಭಾವೈಕ್ಯತೆಗಾಗಿ ಸಮಾನತೆಯ ಕಾಲಜ್ಞಾನ ಸಾರಿದವರು. ತಾತ್ವಿಕವಾಗಿ ಒಂದೇ ನೆಲಗಟ್ಟನ್ನು ಹೊಂದಿರುವ ಮಂಟೇಸ್ವಾಮಿ ಮತ್ತು ಕೊಡೇಕಲ್ಲು ಬಸವಣ್ಣ ಪರಂಪರೆಗಳು ಚಾರಿತ್ರಿಕವಾಗಿ ಕೂಡ ಒಂದೇ ಮೂಲದವು. ಅಷ್ಟೇ ಅಲ್ಲದೆ ಕೊಡೇಕಲ್ಲು ಬಸವಣ್ಣ- ಮಂಟೇಸ್ವಾಮಿ ಗುರು–ಶಿಷ್ಯ ಪಂಥಗಳು ಎಂಬುದು ಗಮನಾರ್ಹ. ಈ ಇಬ್ಬರೂ 15ನೇ ಶತಮಾನದ ಚಾರಿತ್ರಿಕ ಸಿದ್ಧಪುರುಷರು.

ಕೊಡೇಕಲ್ಲ ಬಸವಣ್ಣನ ಮರಿಮೊಮ್ಮಗ ವೀರಸಂಗಪ್ಪಯ್ಯ ಕ್ರಿ.ಶ. 1589ರಲ್ಲಿ ರಚಿಸಿದ 'ನಂದಿಯ ಆಗಮಲೀಲೆ' ಕೃತಿ ಈ ಗುರು–ಶಿಷ್ಯ ಪರಂಪರೆಗಳ ಚಾರಿತ್ರಿಕ ಸಂಗತಿಗಳ ಕುರಿತು ಬೆಳಕು ಚೆಲ್ಲುತ್ತದೆ. ಕೊಡೇಕಲ್ಲು ಬಸವಣ್ಣ ಕಲ್ಯಾಣದ ಬಸವಣ್ಣನ ಪ್ರತಿನಿಧಿ ಎಂದು ಪ್ರತಿಪಾದಿಸುತ್ತದೆ. ಹಾಗೇ ಮಂಟೇಸ್ವಾಮಿ, ಅಲ್ಲಮಪ್ರಭು ದೇವರ ಅವತಾರ ಎಂದು ಮಂಟೇಸ್ವಾಮಿ ಕಾವ್ಯ ಪ್ರತಿಪಾದಿಸುತ್ತದೆ. ಕನ್ನಡನಾಡಿನ ಉತ್ತರದಲ್ಲಿ ಕೊಡೇಕಲ್ಲ ಬಸವಣ್ಣ, ದಕ್ಷಿಣದಲ್ಲಿ ಮಂಟೇಸ್ವಾಮಿ 12ನೇ ಶತಮಾನದ ಬಸವ ಅಲ್ಲಮರ ಚಳವಳಿಯನ್ನು ಮುಂದುವರಿಸಿರುವುದು ಮಾತ್ರವಲ್ಲ, ವಿಸ್ತರಿಸಿದ್ದಾರೆ. ಇನ್ನೂ ಮುಂದುವರೆದು ನಾಥ, ಸೂಫಿ, ಸಿದ್ಧ, ಆರೂಢ, ಅವಧೂತ ಪಂಥಗಳ ಆವಾಹಿಸಿಕೊಂಡು ಕಲ್ಯಾಣದ ಕ್ರಾಂತಿಯ ಆಶಯಗಳನ್ನು ಸಾಧಿಸಿದ್ದಾರೆ. ಕೊಡೇಕಲ್ಲ ಬಸವಣ್ಣ ವಚನಗಳ ನಾಲ್ಕು ಕೃತಿಗಳನ್ನು, ಹಿರಿಯ ಮಗ ರಾಚಪ್ಪಯ್ಯ 10 ಕೃತಿ, 46 ತತ್ವಪದಗಳನ್ನು, ಮಡದಿ ನೀಲಮ್ಮ, ಮಕ್ಕಳಾದ ಗುಹೇಶ್ವರ, ಸಂಗಪ್ಪಯ್ಯ ವಚನಗಳನ್ನು, ಮಂಟೇಸ್ವಾಮಿ 13 ವಚನಗಳನ್ನು ಬರೆದಿರುವುದು ಕೊಡೇಕಲ್ಲ ಮಠದಲ್ಲಿ ದೊರೆತಿವೆ.



ಮಂಟೇಸ್ವಾಮಿ–ಕೊಡೇಕಲ್ಲ ಪೀಠಾಧಿಪತಿಗಳಾದ ವರ್ಚಸ್ವಿ ಬುದ್ಧಿ ಮತ್ತು ವೃಷಬೇಂದ್ರ ಅಪ್ಪನವರು.

ಇಷ್ಟಿದ್ದರೂ ಒಂದೇ ಮೂಲದ ಗುರು–ಶಿಷ್ಯ ಪರಂಪರೆಗಳಾದ ಮಂಟೇಸ್ವಾಮಿ-ಕೊಡೇಕಲ್ಲ ಪರಂಪರೆಗಳ ಪರಸ್ಪರ ಸಂಪರ್ಕವಿಲ್ಲದೆ ಅಜ್ಞಾತವಾಗೇ ಉಳಿದಿವೆ. ಇದಕ್ಕೆ ಕಾರಣ ಕೊಡೇಕಲ್ಲ ಪರಂಪರೆ ತನಗೆ ತಾನೇ ಹಾಕಿಕೊಂಡಿರುವ ನಿರ್ಬಂಧ. 'ನಂದಿಯ ಆಗಮಲೀಲೆ' ಈ ಬಗೆಗೆ ಬೆಳಕು ಚೆಲ್ಲುತ್ತದೆ. ಮಂಟೇಸ್ವಾಮಿ ದ್ರಾವಿಡ ದೇಶ ಎಂಬ ಮೈಸೂರು ಸೀಮೆಯಿಂದ ಕೊಡೇಕಲ್ಲ ಬಸವಣ್ಣ ಬಳಿ ಬಂದು ಕಾಯಸಿದ್ಧ ಪಡೆದರು. ಈ ನಡುವೆ ಕೊಡೇಕಲ್ಲ ಬಸವಣ್ಣರ ಹಿರಿಯ ಮಗ ರಾಚಪ್ಪಯ್ಯನ ಮಗ ಅಕಾಲಿಕ ಮರಣ ಹೊಂದಿದ. ಕೊಡೇಕಲ್ಲ ಶರಣರಿಗೆ ಬಹುಮನಿ ಸುಲ್ತಾನರಿಂದ ಬಂಧನದ ಭೀತಿಯಿತ್ತು. ರಾಚಪ್ಪಯ್ಯನಿಗೆ ತಂದೆಯ ಜೊತೆ ಮನಸ್ತಾಪವೂ ಆಯಿತು. ಇದರಿಂದ ವೈರಾಗ್ಯ ತಳೆದ ರಾಚಪ್ಪಯ್ಯ ಕೊಡೇಕಲ್ಲ ತೊರೆದು ಮಂಟೇಸ್ವಾಮಿ ಮತ್ತೆ ಹಲವು ಶಿಷ್ಯರ ಜೊತೆ ಮೈಸೂರು ಸೀಮೆಗೆ ಬಂದು ನೆಲೆಸಿದರು. ರಾಚಪ್ಪಯ್ಯನ ಈ ನಿರ್ಗಮನ ಕೊಡೇಕಲ್ಲವರ ಪಾಲಿಗೆ ದಕ್ಷಿಣದ ಮಂಟೇಸ್ವಾಮಿ ಪರಂಪರೆ ಜತೆಗಿನ ಮುನಿಸಾಗಿ ಉಳಿಯಿತು. ಎರಡು ಗುರು–ಶಿಷ್ಯ ಪರಂಪರೆಗಳ ಭಕ್ತರಿಗೆ ಗುರುಪೀಠದ ಸಂಪರ್ಕವೂ, ಪರಿಜ್ಞಾನವೂ ಇಲ್ಲದಂತಾಯಿತು.

ಮೌನ ಮುರಿಯಿತು ಮುನಿಸು ಕರಗಿತು


ಶತಮಾನಗಳು ಕಳೆದು ಕಾಲಚಕ್ರ ಉರುಳಿದಂತೆ ಗುರು–ಶಿಷ್ಯ ಪೀಠಗಳಲ್ಲಿ ಮುನಿಸು ಕರಗತೊಡಗಿತು. ಎರಡು ದಶಕಗಳ ಹಿಂದೆ ಬೊಪ್ಪೇಗೌಡನಪುರ ಮಂಟೇಸ್ವಾಮಿ ಮಠದ ಪ್ರಭುದೇವರಾಜೇ ಅರಸ್, ಕೊಡೇಕಲ್ಲ ಬಸವಣ್ಣ ಮಠಕ್ಕೆ ಭೇಟಿ ನೀಡಿ ವಿಚಾರ ವಿನಿಮಯ ಮಾಡಿದರು. ಅಂದಿನ ಕೊಡೇಕಲ್ಲ ಪೀಠಾಧಿಪತಿ ವೀರಯ್ಯ ಅಪ್ಪನವರು ಮೊದಲ ಬಾರಿಗೆ ಮಂಟೇಸ್ವಾಮಿ ರಾಚಪ್ಪಾಜಿ ಕ್ಷೇತ್ರ ದರ್ಶನ ಮಾಡಿದರು. ಕಳೆದ ವರ್ಷ ಈ ಗುರು–ಶಿಷ್ಯ ಪರಂಪರೆಗಳು ಮುಖಾಮುಖಿಯನ್ನು ಪರಸ್ಪರ ಒಡನಾಟವನ್ನು ಮತ್ತೆ ಮುಂದುವರಿಸಲಾಗಿದೆ. ಮಳವಳ್ಳಿ ಮಂಟೇಸ್ವಾಮಿ ಪೀಠಾಧಿಪತಿ ವರ್ಚಸ್ವಿ ಬುದ್ಧಿಯವರು ಕೊಡೇಕಲ್ಲ ಪೀಠಕ್ಕೆ ಭೇಟಿ ನೀಡಿದ್ದರು. ಮಂಟೇಸ್ವಾಮಿ ಕಾವ್ಯ ಮತ್ತು ಮೈಸೂರು ಅರಸರ ಚರಿತ್ರೆಯಲ್ಲಿ ಒಂದು ಪ್ರಸಂಗವಿದೆ. ದಳವಾಯಿ ನಂಜರಾಜಯ್ಯ-ವೀರರಾಜಯ್ಯ ಮೈಸೂರು ರಾಜ್ಯಾಧಿಕಾರ ಕಬಳಿಸುವ ಸಂಚು ರೂಪಿಸುತ್ತಾರೆ. ಈ ವೇಳೆಗೆ ಉತ್ತರದಿಂದ ಬರುವ ರಾಚಪ್ಪಯ್ಯ, ಮಂಟೇಸ್ವಾಮಿ ಅರಸರ ಬೆಂಬಲಕ್ಕೆ ನಿಂತು ಕಾರುಗಳ್ಳಿ ವೀರರಾಜಯ್ಯ ಸೋದರರ ಸಂಚು ವಿಫಲಗೊಳಿಸಿ ರಾಜ್ಯ ರಕ್ಷಿಸುತ್ತಾರೆ.

ಆಗಸ್ಟ್ 24, 2024ರಂದು ಮೈಸೂರು ಮಾನಸಗಂಗೋತ್ರಿಯ ವಿಜ್ಞಾನ ಭವನದಲ್ಲಿ 'ಮಂಟೇಸ್ವಾಮಿ ಮರುದರ್ಶನ ಹಾಗೂ ಧರೆಯ ತಂದವರು' ಪುಸ್ತಕ ಬಿಡುಗಡೆ ಸಮಾರಂಭ ನಡೆಯಿತು. ಕೊಡೇಕಲ್ಲ ಬಸವ ಮತ್ತು ರಾಚಪ್ಪಯ್ಯನನ್ನು ಪ್ರತಿನಿಧಿಸುವ ಕೊಡೇಕಲ್ಲ ಪೀಠಾಧಿಪತಿ ವೃಷಬೇಂದ್ರ ಅಪ್ಪನವರು ಮಂಟೇಸ್ವಾಮಿ ಪ್ರತಿನಿಧಿಸುವ ಮಳವಳ್ಳಿ ಮಠದ ಪೀಠಾಧಿಪತಿ ವರ್ಚಸ್ವಿ ಬುದ್ಧಿಯವರು ಮುಖಾಮುಖಿಯಾಗಿ ಒಂದೇ ವೇದಿಕೆಯಲ್ಲಿ ಹಾಸೀನರಾಗಿದ್ದರು. ಇದು ಗುರು–ಶಿಷ್ಯ ಪರಂಪರೆಗಳ ಮುಖಾಮುಖಿ ಮತ್ತು ಚಾರಿತ್ರಿಕ ಘಟನೆಯ ಪುನರಾವರ್ತನೆಯಂತಿತ್ತು.

ಅನಂತರ ಕೊಡೇಕಲ್ಲ ಪೀಠಾಧಿಪತಿ ವೃಷಬೇಂದ್ರ ಅಪ್ಪನವರು ಮೈಸೂರು ಜಿಲ್ಲೆ ಕಪ್ಪಡಿಯಲ್ಲಿ ಐಕ್ಯರಾಗಿರುವ ರಾಚಪ್ಪಯ್ಯನ ಗದ್ದಿಗೆ ದರ್ಶನಕ್ಕೆ ತೆರಳಿದರು. ಗದ್ದಿಗೆ ಮುಂದೆ ಕೈ ಜೋಡಿಸಿ ಮಂಡಿಯೂರಿ ತಲೆಬಾಗಿ ಶರಣು ಹೋದರು. ಕೊಡೇಕಲ್ಲ ಬಸವಣ್ಣ ಸ್ವತಃ ಪುತ್ರನ ಮೇಲಿನ ಮುನಿಸು ಮರೆತು ಮರುಗಿ ಮಣಿದಂತೆ ಅನಿಸಿತು. ರಾಚಪ್ಪಯ್ಯ ಮೌನವಾಗಿ ಮುಖದಲ್ಲಿ ಮನ್ನಿಸೆಂಬ ಭಾವ ಸೂಸಿದಂತಿತು. ಮರುದಿನ ಚನ್ನಾಜಮ್ಮ ಮುಟ್ಟನಹಳ್ಳಿ ತೋಪಿನ ದೊಡ್ಡಮ್ಮ ಗದ್ದಿಗೆಗಳ ದರ್ಶನ ಮಾಡಿ ಬೊಪ್ಪೇಗೌಡನಪುರಕ್ಕೆ ತೆರಳಿದರು. ಕೊಡೇಕಲ್ಲಲ್ಲಿ ಕಾಯಸಿದ್ಧ ಪಡೆದು ಬಂದು ಅಲ್ಲಮಪ್ರಭು ಪ್ರತಿರೂಪ ಎನಿಸಿದ ಮಂಟೇಸ್ವಾಮಿ ಗದ್ದಿಗೆ ಮುಂದೆ ಕೊಡೇಕಲ್ಲ ವೃಷಬೇಂದ್ರ ಅಪ್ಪನವರು ಭಾವ ಪರವಶರಾಗಿ ಕೈ ಮುಗಿದು ತಲೆಬಾಗಿದರು. ಕಲ್ಯಾಣ ಮತ್ತು ಕೊಡೇಕಲ್ಲ ಬಸವಣ್ಣರ ಪ್ರತಿನಿಧಿಯಂತಿದ್ದ ಬೊಪ್ಪೇಗೌಡನಪುರ ಮಠದ ಬಸವ ತನ್ನ ಪಾಡಿಗೆ ತಾನು ಧ್ಯಾನಸ್ಥವಾಗಿ ನಿಂತಿತ್ತು. ಕೊಡೇಕಲ್ಲ ಅಪ್ಪನವರು ಬಸವನ ತಲೆ ಸವರಿ ಮೈದಡವಿ ಕೈ ಮುಗಿದರು. ಬಸವ ಕರುಣೆ ತುಂಬಿದ ಕಣ್ಣುಗಳಿಂದ ದಿಟ್ಟಿಸಿತು. ಅಪ್ಪನವರ ಮೊಗ ಮಂದಹಾಸದಿ ಅರಳಿತು. ❖

ಮೊದಲ ಓದು

ಅಭಿವೃದ್ಧಿಯೊಂದಿಗಿನ ವಿನಾಶದ ವಿಶ್ಲೇಷಣೆ



ಪು: 222
₹225

ಅಭಿವೃದ್ಧಿ ಎಂಬ ವಿನಾಶ
ತೆಲುಗು ಮೂಲ: ಡಾ.ಕೆ. ಬಾಲಗೋಪಾಲ್
ಕನ್ನಡಕ್ಕೆ: ಡಾ. ಬಂಜಗೆರೆ ಜಯಪ್ರಕಾಶ
ಪ್ರ: ಆಕೃತಿ ಪುಸ್ತಕ
ಸಂ: 080– 23409479

ಬಾಲಗೋಪಾಲ್ ವೃತ್ತಿಯಿಂದ ಅಧ್ಯಾಪಕ. ಓದಿನಿಂದ ಗಣಿತಶಾಸ್ತ್ರಜ್ಞ. ಜನಪರ ಚಳವಳಿಯನ್ನು ಕರುಣೆಯಿಂದ ಕಾಣುವ ಮಾನವತಾವಾದಿ. ಸಮಾಜದೊಳಗಿನ ಅಸಮಾನತೆ ಅದರ ವಿರುದ್ಧದ ಹೋರಾಟದ ಕಡೆ ದೃಷ್ಟಿ ನೆಟ್ಟು ಉದ್ಯೋಗಕ್ಕೆ ರಾಜೀನಾಮೆ ನೀಡಿ ಮಾನವ ಹಕ್ಕುಗಳ ರಕ್ಷಣೆಗೆ ನಿಲ್ಲುತ್ತಾರೆ. ಕೋಮುವಾದ ಸೃಷ್ಟಿಸಿರುವ ಅನಾಹುತ, ವರ್ತಮಾನದ ತಲ್ಲಣಗಳಿಗೆ ಸ್ಪಂದನೆಯೇ 'ಅಭಿವೃದ್ಧಿ ಎಂಬ ವಿನಾಶ' ಅವತರಿಸಿದೆ.

ಕೃತಿ 'ಅಭಿವೃದ್ಧಿ ಎಂಬ ವಿನಾಶ', 'ಸರ್ಕಾರ–ಸಂಕ್ಷೇಮ', 'ಜಾತಿಯನ್ನು ಅರ್ಥಮಾಡಿಕೊಳ್ಳುವುದು ಹೇಗೆ', 'ಜಾತಿ ವ್ಯವಸ್ಥೆ ಮತ್ತು ಪ್ರಜಾಪ್ರಭುತ್ವ' ಎಂಬ ನಾಲ್ಕು ಸುದೀರ್ಘ ಅಧ್ಯಯಗಳನ್ನು ಒಳಗೊಂಡಿದೆ. ಅಭಿವೃದ್ಧಿ ಎನ್ನುವುದು ಗ್ರಾಮಗಳ ಉದ್ಧಾರ ಅಥವಾ ಜನರ ಬದುಕಿನ ಸುಧಾರಣೆ ನಿಟ್ಟಿನಲ್ಲಿ ಆಗಿದ್ದರೆ ಅದನ್ನು ಪ್ರಗತಿಯ ಸೂಚಕದಲ್ಲಿ ಅಳೆಯಬಹುದು. ಅಭಿವೃದ್ಧಿ ಬಂಡವಾಳಶಾಹಿ ಕಂಪನಿಗಳ ಅಗತ್ಯಗಳಿಗೆ ಆಗುತ್ತಿದೆ. ಅದಕ್ಕೆ ಬಹುಮುಖಿಯ ಆಯಾಮ ಇಲ್ಲದೆ ವಿನಾಶಕ್ಕೆ ನಾಂದಿ ಹಾಡುತ್ತಿದೆ ಎನ್ನುವುದು ಭಯಾನಕ. ಈ ಕುರಿತು ಸುದೀರ್ಘವಾಗಿ ಚರ್ಚಿಸುತ್ತಾರೆ.

ಜನರ ಕ್ಷೇಮ ಸರ್ಕಾರಗಳ ಜವಾಬ್ದಾರಿ. ಅದು ದುರ್ಬಲರನ್ನು ರಕ್ಷಿಸಬೇಕು. ಸಂಕ್ಷೇಮ ಅಂದರೆ ಅಷ್ಟೇ ಅಲ್ಲ. ಸಾಮಾಜಿಕ ನ್ಯಾಯ, ಆರ್ಥಿಕ ನ್ಯಾಯ, ರಾಜಕೀಯ ನ್ಯಾಯವೂ ಅವರಿಗೆ ಸಲ್ಲಬೇಕು. ಸಾಮಾಜಿಕ ನ್ಯಾಯಕ್ಕಾಗಿ ದನಿ ಎತ್ತಿದರೆ, ಅದನ್ನು ಎಷ್ಟು ಮಂದಿ ಸ್ವಾಗತಿಸುತ್ತಾರೆ ಎನ್ನುವ ಅನುಮಾನವನ್ನು ಲೇಖಕರು ವ್ಯಕ್ತಪಡಿಸಿದ್ದಾರೆ.

ಜಾತಿ ಸಮಾಜದಲ್ಲಿ ಜಾತಿಯನ್ನು ವಿವರವಾಗಿ ಅಧ್ಯಯನ ಮಾಡಬೇಕು. ಅದನ್ನು ಜಾತಿ, ಜಾತಿ ವ್ಯವಸ್ಥೆ, ವರ್ಣ ಧರ್ಮ ಎಂಬ ಮೂರು ವಿಷಯಗಳ ಮೇಲೆ ನೋಡಬೇಕು. ಅಂತೆಯೇ ರಾಜಕೀಯ ಸಿದ್ಧಾಂತವನ್ನು ನಂಬುವುದು ತಪ್ಪಲ್ಲ. ಅದುವೇ ಪರಮ ಸತ್ಯ ಎಂದುಕೊಳ್ಳುವುದು ತಪ್ಪು ಎನ್ನುವ ವಿವರವನ್ನು ಲೇಖಕರು ನೀಡುತ್ತಾರೆ. ಸಂಶೋಧನಾ ಮನೋಭೂಮಿಕೆಯಲ್ಲಿ ಕೃತಿ ಅರಳಿದ್ದು, ಲೇಖಕರ ಅಧ್ಯಯನ, ಪ್ರವಾಸ, ಹೋರಾಟದ ನೆಲೆ ಗೋಚರಿಸುತ್ತದೆ. ಒಟ್ಟಿನಲ್ಲಿ ಬಹುಶಿಸ್ತಿನ ಅಧ್ಯಯನಕ್ಕೆ ಇನ್ನೊಂದು ಮಾದರಿ ರೂಪದಲ್ಲಿ ಈ ಕೃತಿ ನಿಲ್ಲುತ್ತದೆ.

ಬಣ್ಣದ ಕಥೆಗಳಲ್ಲಿನ ಬೆರಗು...



ಪು: 200
₹250

ಹಾರೈಸಿ ತೆರೆದ ಕಣ್ಣ ಕೋರೈಸೋ ನೂರು ಬಣ್ಣ
ಲೇ: ಡಿ.ಜಿ.ಮಲ್ಲಿಕಾರ್ಜುನ
ಪ್ರ: ನವಕರ್ನಾಟಕ
ಸಂ: 08022161900

ಮನಸ್ಸು ಸದಾ ಸಂಚಾರಿ. ಇದ್ದಲ್ಲೇ ಇದ್ದು ಬೇರು ಬಿಡುವಾಗೆಲ್ಲ, ದೂರ ತೀರ ಯಾನವೂ ಕೈ ಬೀಸಿ ಕರೆಯುತ್ತಿರುತ್ತದೆ. ಹೆಚ್ಚು ಹೆಚ್ಚು ತಿಳಿದುಕೊಳ್ಳುವುದಕ್ಕೆ ಈಗಂತೂ ಜ್ಞಾನ ಸಾಗರವೇ ಕಣ್ಮುಂದಿದೆ. ಆದರೆ ನಮ್ಮ ಕುತೂಹಲವಿರುವುದೆಲ್ಲ ಮನುಷ್ಯರ ಕಥೆಗಳತ್ತವೇ. ಕಟ್ಟಿ, ಕೆಡವಿಕೊಂಡ ಸಾಮ್ರಾಜ್ಯಗಳು, ಶತಮಾನ ಕಳೆದರೂ ಅದರ ನೆನಪಿನೊಂದಿಗೆ ಬದುಕನ್ನು ಹುಡುಕುತ್ತಿರುವವರ ಕಥೆಗಳು, ಪ್ರತಿ ಗೋಡೆಯೂ ಸಾರುವ ಅನೂಹ್ಯ ಸಂಗತಿಗಳು ಹೀಗೆ ಇಂಥವನ್ನೆಲ್ಲ ತಿಳಿದುಕೊಳ್ಳಬೇಕಾದರೆ ಆಗಾಗಂತೂ ಒಂದಷ್ಟು ಪ್ರವಾಸ ಹೊರಡಲೇಬೇಕು.

ಎಲ್ಲೆಲ್ಲೂ ಇರಬಹುದಾದ, ನಮ್ಮ ನಿಮ್ಮಂತೆ ಯೋಚಿಸುವ. ಸಹಜ ಬದುಕಿನ ಅನುಭವವನ್ನು ಮೊಗೆದುಕೊಡುವ ಸ್ನಿಗ್ಧ ನಗುವಿನ ಮನುಷ್ಯರ ಕಥೆಗಳನ್ನು ಕಟ್ಟಿಕೊಟ್ಟಿದೆ 'ಹಾರೈಸಿ ತೆರೆದ ಕಣ್ಣ ಕೋರೈಸೋ ನೂರು ಬಣ್ಣ' ಕೃತಿ.

ಲೇಖಕ ಡಿ.ಜಿ.ಮಲ್ಲಿಕಾರ್ಜುನ ಛಾಯಾಗ್ರಾಹಕರೂ ಆಗಿರುವುದರಿಂದ ಚಿತ್ರ ಸಮೇತ ಕಥೆ ಹೇಳಿದ್ದಾರೆ. ಈ ಬಣ್ಣದ ಕಥೆಗಳಲ್ಲಿ ಬೆರಗು ಇದೆ. ಭೂತಾನ್, ಬ್ಯಾಂಕಾಕ್ ಪಟ್ಟಾಯ್. ಥಾಯ್ಲೆಂಡ್, ಟರ್ಕಿ, ಇಸ್ತಾನ್ ಬುಲ್. ಯುಎಇ ಹೀಗೆ ಈ ದೇಶಗಳನ್ನು ನೋಡಬೇಕೆನ್ನುವವರಿಗೆ ಇದೊಂದು ಮಾರ್ಗದರ್ಶಿ ಕೈಪಿಡಿಯಾಗಬಲ್ಲದು.

ಸಂಚಾರ ಹೊರಟಂತೆ ಎಷ್ಟೊಂದು, ನಂಬಿಕೆಗಳು, ಆಚಾರ ವಿಚಾರಗಳು, ಹೇಗಿರಬೇಕು, ಹೇಗಿರಬಾರದು ಎನ್ನುವ ಅಂಶಗಳು ಮನದಟ್ಟಾಗುತ್ತಾ ಹೋಗುತ್ತವೆ. ಮನಸ್ಸು ಕಟ್ಟಿಕೊಂಡ ಗೋಡೆಗಳನ್ನು ಕೆಡವಿಕೊಳ್ಳಲು ಪ್ರವಾಸಕ್ಕಿಂತ ಉತ್ತಮ ದಾರಿ ಏನಿದೆ?.

ಒಂದೂರಿನಿಂದ ಮತ್ತೊಂದು ಊರಿಗೆ ಬದಲಾಗುವ ಆಹಾರ, ಅಧ್ಯಾತ್ಮ, ಆಚಾರ ವಿಚಾರಗಳೆಲ್ಲವೂ ತುಲನಾತ್ಮಕ ಅಧ್ಯಯನಕ್ಕೆ ಯೋಗ್ಯವಾಗಿವೆ. ಆಯಾ ಊರಿನ ಕಥೆಗಳನ್ನು ಸಾಂಕೇತಿಕವಾಗಿ ಬಿಂಬಿಸುವ ಛಾಯಾಚಿತ್ರಗಳು ತುಸು ಬಣ್ಣ ಕಂಡಿದ್ದರೆ ಈ ಪುಸ್ತಕ ಇನ್ನಷ್ಟು ಪ್ರವಾಸಿಗರನ್ನು ಸೆಳೆಯುತ್ತಿತ್ತು.

ಸರಾಗ ಓದಿನ ಹಕ್ಕಿ ಹಾಂಗ



ಪು: 104
₹120

ಹಕ್ಕಿ ಹಾಂಗ
ಲೇ: ಡಿ.ಎನ್. ಅಕ್ಕಿ
ಪ್ರ: ಕವಿಕುಂಚ

ನಾಲ್ಕು ಸಾಲುಗಳ ಮಕ್ಕಳ ಕವಿತೆಗಳು ಗಮನ ಸೆಳೆಯುವಂತಿವೆ. ಒಂದನೆಯ ತರಗತಿಯಿಂದಲೇ ಸರಳ ಕನ್ನಡ ಕಲಿಯುವ ಯಾವ ಮಗುವಾದರೂ ಓದುವಂತಿವೆ. ಸ್ವಜಾತಿ ಒತ್ತಾಕ್ಷರದ ಪದಗಳನ್ನು ಹೊರತು ಪಡಿಸಿದರೆ ಒತ್ತಾಕ್ಷರಗಳಿಲ್ಲದ, ಓದಲು ಸರಳವೆನಿಸುವ, ತಿಳಿಯಲು ಸುಲಭವೆನಿಸುವ ಕವಿತೆಗಳು ಈ ಸಂಕಲನದಲ್ಲಿವೆ.

ಕೆಲ ಸಾಲುಗಳಲ್ಲಿನ ಆದಿಪ್ರಾಸ, ಕೆಲವು ಕವಿತೆಗಳಲ್ಲಿನ ಅಂತ್ಯಪ್ರಾಸಗಳು ಗಮನಸೆಳೆಯುವುದಲ್ಲದೆ ಪದಗಳ ಲಾಲಿತ್ಯ ಮಕ್ಕಳಿಗೆ ಬಾಯಿಪಾಠವಾಗುವಂತೆ ಸರಳವಾಗಿವೆ.

ತರಿಯದಿರು ಕಂಟಿಯ/ಕಡಿಯದಿರು ಗಿಡಗಂಟೆಯ ಎಂಬಂಥ ಸಾಲುಗಳು ನೀತಿಪಾಠದೊಂದಿಗೆ ಮಗುವಿನ ಮನಸು ಸೂರೆಗೊಳ್ಳುತ್ತವೆ. ತನ್ನೊಂದಿಗೆ ಸಂವಾದಿಸುತ್ತಿರುವ ಕವಿಮಾತು ಉಪದೇಶವೆನಿಸದಂತಹ ಎಚ್ಚರವನ್ನೂ ಅಕ್ಕಿಯವರು ವಹಿಸಿಕೊಂಡಿದ್ದಾರೆ.

ಸಮೂಹಗಾನಗಳಿಗೆ ಸರಳವಾಗುವಂಥ ಅನೇಕ ರಚನೆಗಳು ಈ ಪುಸ್ತಕದಲ್ಲಿ ಸಿಗುತ್ತವೆ. ರಾಗ ಸಂಯೋಜನೆ ಮಾಡಿಸಿ, ಮಕ್ಕಳಿಂದಲೇ ಹಾಡಿಸುವಂಥ ಹಲವಾರು ಸರಳ ರಚನೆಗಳು ಈ ಸಂಕಲನದಲ್ಲಿವೆ. ಸೋನೆ ಬಂತು ನಾಡಿಗೆ, ನವ ಪಲ್ಲವ ಹಾಡಿಗೆ ಎಂಬಂಥ ಸರಳ ರಚನೆಗಳು ಮಕ್ಕಳಿಗೆ ಬಲುಬೇಗ ಬಾಯಿಪಾಠವಾಗುತ್ತದೆ.

ಮನೆಯಲ್ಲಿ ಕನ್ನಡವನ್ನು ಕಲಿಯುವ ಮಕ್ಕಳಿದ್ದರೆ, ಎರಡನೆಯ ಮತ್ತು ಮೂರನೆಯ ಭಾಷೆಯಾಗಿ ಕಲಿಯುವ ಮಕ್ಕಳಿಗೆ ಈ ಕವಿತೆಗಳು ಹೊಸ ಹೊಸ ಪದಗಳನ್ನು ಸರಳವಾಗಿ ಕಲಿಸಿಕೊಡುತ್ತವೆ. ಕನ್ನಡದ ಓದು ಸರಾಗ ಎಂಬ ಭರವಸೆಯನ್ನು ಮೂಡಿಸುತ್ತವೆ.

ಕುವೆಂಪು ಪದ ಸೃಷ್ಟಿ

ಜಿ.ಕೃಷ್ಣಪ್ಪ

ಎದೆಯಗ್ಗಿ

ಎದೆಯಗ್ಗಿ (ನಾ). ಎದೆಯ ಅಗ್ನಿ - ಸಂತಾಪ. (ಎದೆ + ಅಗ್ಗಿ)

ದಶರಥ ಮಹಾರಾಜನು ಒಮ್ಮೆ ತನ್ನ ಅರಮನೆಯ ಸಂಪದ್ಭರಿತ ತೋಟದಲ್ಲಿ ತಿರುಗಾಡುತ್ತಿದ್ದನು. ಅಲ್ಲಿ ಒಂದು ತಾಯಿ ಗುಬ್ಬಚ್ಚಿ ಬಾಯಿ ತೆರೆದ ಮರಿಗೆ ಗುಟುಕು ಕೊಡುತ್ತಿದ್ದುದನ್ನು ನೋಡಿದನು. ಮಕ್ಕಳನ್ನು ಪಡೆದ ಹಕ್ಕಿಯ ಸಿರಿತನವು ಚಕ್ರವರ್ತಿಗೆ ತನ್ನ ಬಡತನವನ್ನು ಮೂದಲಿಸಿದಂತಾಯಿತು. ಉದ್ಯಾನದಿಂದ ಹಿಂತಿರುಗಿ, ಗುರು ವಾಮದೇವ, ವಸಿಷ್ಠ, ಸಚಿವರನ್ನು ಕರೆಸಿ,

ಓ ವಂದ್ಯರಿರ;
ತವಿಸಿಮೆನ್ನೆದೆಯಗ್ಗಿಯಂ, ಬರಿಸೆ
ಸುಗ್ಗಿಯಂ'
ಎಂದು ಹೇಳಿದನು.

ಕುವೆಂಪು ಅವರು ಈ ಮಾತಿನಲ್ಲಿ ದಶರಥನ ಎದೆಯಲ್ಲಿ ಬೆಂಕಿಯಂತೆ ಆವರಿಸಿ ಪುತ್ರಾಪೇಕ್ಷೆಯುಂಟಾದುದನ್ನು ಅಭಿವ್ಯಕ್ತಿಸಲು 'ಎದೆಯಗ್ಗಿ' ಪದ ಪ್ರಯೋಗಿಸಿದ್ದಾರೆ.

ತೊಳ್ತುಗೆಯ್ಮೆ

ತೊಳ್ತುಗೆಯ್ಮೆ (ನಾ). ತೊತ್ತಿನ ಕೆಲಸ; ಸೇವೆ; ಊಳಿಗ [ತೊಳು, (< ತೊಮ್ತಿ) + ಗೆಯ್ಮೆ (ಕೈಮೆ)]

ಮಂಥರೆಯ ತೊತ್ತಿನ ಕೆಲಸದ ಹೆಮ್ಮೆಯಲ್ಲಿ ಒಳ್ಳೆಯದನ್ನು ಮಾಡುವೆನೆಂದು ರಾಮನನ್ನು ಕಾಡಿಗೆ ಕಳಿಸುವ ಕೆಲಸ ಮಾಡಿದಳು. ಅವಳಲ್ಲಿ ಕೈಕೆ ಮತ್ತು ಭರತರಲ್ಲಿಯ ಮುಗ್ಧ ಸೇವಾನುರಾಗ, ಊಳಿಗ ಭಕ್ತಿಯಲ್ಲಿ ಬೇರೆಯವರಿಗಾಗಿ ಮಾಡುವ ಶುದ್ಧ ಕಾಯಕವಿದೆ. ಅದರಲ್ಲಿ ಸ್ವಾರ್ಥದೋಷವನ್ನು ಕಾಣುವರಾರು ಎಂದು ಕವಿ ಪ್ರಶ್ನಿಸಿದ್ದಾರೆ.

ತಾನು ಹುಟ್ಟಿದಾಗಿನಿಂದ ಇನ್ನೊಬ್ಬರ ಚೆಲುವಿನಲ್ಲಿ ತನ್ನ ಚೆಲುವನ್ನು ಕಂಡು ಪ್ರೀತಿಸಿದಳು. ಇನ್ನೊಬ್ಬರ ಸೊಬಗಿನಲ್ಲಿ ತನ್ನ ಸೊಬಗನ್ನು ಕಂಡು ಉಂಡಳು. ತನ್ನ ಜೀವಭಾವದ ಶಿಶು ಭರತನ ಮೋಹ, ಪ್ರೀತಿ, ವಾತ್ಸಲ್ಯದಲ್ಲಿ ಒಂದಾಗಿ ತೊತ್ತಿನ ಕೆಲಸವನ್ನು ಚೆನ್ನಾಗಿ ನಿರ್ವಹಿಸಿದಳು. ಅದನ್ನು ಅಭಿವ್ಯಕ್ತಿಸಲು ಕುವೆಂಪು ಅವರು 'ತೊಳ್ತುಗೆಯ್ಮೆ' ಪದ ರಚಿಸಿ, ಅವಳ ಸೇವಾತತ್ಪರತೆ ಪ್ರಕಟಪಡಿಸಿದ್ದಾರೆ.

ದಾಸಿ
ನೆಚ್ಚಿನೊಡತಿಗೆ ಮತ್ತೆ ಮೆಚ್ಚಿನಾಕೆಯ ಶಿಶುಗೆ
ತೊಳ್ತುಗೆಯ್ಮೆಯ ಪೆರ್ಮೆಗೊಳ್ಪನೆಸಗುವೆನೆಂದು
ಕಜ್ಜಮಂ ಕೈಕೊಂಡೊಡೇಂ ಸ್ವಾರ್ಥದೋಷಮಂ
ಕಾಣ್ಬರಾರಾಕೆಯ ಪರಾರ್ಥತೆಯ ಶುದ್ಧಿಯಲಿ?

ಗಗನಚುಂಬಿ ಮಿನಾರುಗಳ ಕ್ವಾಲಾಲಂಪುರ

ಮಲೇಷ್ಯಾದ ಕ್ವಾಲಾಲಂಪುರದಲ್ಲಿ ಎರಡು ಸಾವಿರಕ್ಕೂ ಹೆಚ್ಚು ಗಗನಚುಂಬಿ ಕಟ್ಟಡಗಳಿವೆ. ಈ ನಗರದ ಪ್ರದಕ್ಷಿಣೆಗೆ ಹೊರಟರೆ ಸದಾ ತಲೆ ಎತ್ತಿ ನೋಡುತ್ತಿರಬೇಕು. ಏಕೆಂದರೆ, ಈ ನಗರದ ತುಂಬೆಲ್ಲಾ ಗಗನಚುಂಬಿ ಕಟ್ಟಡಗಳೇ ತುಂಬಿಕೊಂಡಿವೆ!





ಕ್ವಾಲಾಲಂಪುರದಲ್ಲಿ ಹೀಗೆ ಎಲ್ಲೆಲ್ಲೂ ಗಗನಚುಂಬಿ ಕಟ್ಟಡಗಳದ್ದೇ ಕಾರುಬಾರು!

ಎಚ್.ಎಸ್. ನವೀನ ಕುಮಾರ್ ಹೊಸದುರ್ಗ

ಮಲೇಷ್ಯಾದ ರಾಜಧಾನಿ ಕ್ವಾಲಾಲಂಪುರ ಹೆಚ್ಚು ಅತಿ ಎತ್ತರದ ಗೋಪುರಗಳನ್ನು ಹೊಂದಿರುವ ಪ್ರಪಂಚದ ಹತ್ತು ನಗರಗಳಲ್ಲಿ ಒಂದು. ಹಾಗಾಗಿ ಇದನ್ನು 'ಸಿಟಿ ಆಫ್ ಮಿನಾರ್ಸ್' ಅಂದರೆ 'ಮಿನಾರುಗಳ ನಗರಿ' ಎಂದೂ ಕರೆಯಲಾಗುತ್ತದೆ.

ಪ್ರಪಂಚದ ಅತ್ಯಂತ ಎತ್ತರದ ಅವಳಿ ಗೋಪುರವನ್ನು ಹೊಂದಿರುವ ಹೆಗ್ಗಳಿಕೆ ಈ ನಗರದ್ದು. ಮಲೇಷ್ಯಾದ ಪ್ರಮುಖ ಉದ್ಯಮ ಹಾಗೂ ಇಲ್ಲಿನ ಶ್ರೀಮಂತಿಕೆಗೆ ಕಾರಣವಾಗಿರುವ ಪೆಟ್ರೋಲಿಯಂ ವ್ಯವಹಾರದ ರಾಷ್ಟ್ರೀಕೃತ ಸಂಸ್ಥೆ 'ಪೆಟ್ರೋನಾಸ್'ನ ಕೇಂದ್ರ ಕಚೇರಿಯನ್ನು ಹೊಂದಿರುವ ಪೆಟ್ರೋನಾಸ್ ಟವರ್ 451.9 ಮೀಟರ್ ಎತ್ತರದ ಎರಡು ಗೋಪುರಗಳನ್ನು ಹೊಂದಿದೆ. ಇದು ಪ್ರಪಂಚದ ಅತ್ಯಂತ ಎತ್ತರದ ಅವಳಿ ಕಟ್ಟಡ. 88 ಅಂತಸ್ತಿನ ಈ ಕಟ್ಟಡದ 42ನೇ ಅಂತಸ್ತಿನಲ್ಲಿ ಎರಡು ಗೋಪುರಗಳನ್ನು ಜೋಡಿಸುವ ಸೇತುವೆ ಇದೆ. 1993 ರಿಂದ 1996ರ ಒಳಗೆ ನಿರ್ಮಾಣಗೊಂಡ ಈ ಕಟ್ಟಡ ತಳಪಾಯವೇ 114 ಮೀಟರ್‌ಗಳಷ್ಟು ಆಳವಿದೆ! ಇದಕ್ಕೆ ಪ್ರಪಂಚದಲ್ಲಿಯೇ ಅತ್ಯಂತ ಆಳದ ತಳಪಾಯ ಹೊಂದಿರುವ ಕಟ್ಟಡ ಎಂಬ ಹೆಗ್ಗಳಿಕೆಯೂ ಇದೆ. ಸುಮಾರು 54 ಗಂಟೆ ನಿರಂತರವಾಗಿ ಕಾಂಕ್ರೀಟ್ ಸುರಿದು ಇದರ ತಳಪಾಯವನ್ನು ಭದ್ರಗೊಳಿಸಲಾಗಿದೆ. ಈ ಅವಳಿ ಗೋಪುರಗಳಲ್ಲಿ ಒಂದು ಗೋಪುರವನ್ನು ಜಪಾನ್ ದೇಶದ ನಿರ್ಮಾಣ ಸಂಸ್ಥೆ ನಿರ್ಮಿಸಿದ್ದರೆ, ಇನ್ನೊಂದು ಗೋಪುರದ ನಿರ್ಮಾಣ ಕೊರಿಯಾ ಸಂಸ್ಥೆಯದ್ದು. ಇವೆರಡರ ನಡುವೆ ಯಾರು ಮೊದಲು ನಿರ್ಮಾಣ ಕೆಲಸ ಮುಗಿಸುತ್ತಾರೆ ಎಂಬ ಸ್ಪರ್ಧೆ ಇತ್ತಂತೆ. ಕೊರಿಯಾ ಈ ಸ್ಪರ್ಧೆಯಲ್ಲಿ ಗೆದ್ದಿತಾದರೂ, ಸೋಲೊಪ್ಪದ ಜಪಾನ್ ತಾನು ನಿರ್ಮಾಣ ಮಾಡಿರುವ ಗೋಪುರವನ್ನು ಕೊರಿಯಾ ನಿರ್ಮಾಣದ ಗೋಪುರಕ್ಕಿಂತ ಕೊಂಚ ಎತ್ತರ ಮಾಡಿತು. ಹೀಗಾಗಿ ಜಪಾನ್ ನಿರ್ಮಿಸಿದ ಪಶ್ಚಿಮ ಗೋಪುರ, ಕೊರಿಯಾ ನಿರ್ಮಾಣದ ಪೂರ್ವ ಗೋಪುರಕ್ಕಿಂತ ಕೊಂಚ ಎತ್ತರವಿದೆ ಎನ್ನುವುದು ವೀಕ್ಷಣೆಗೆ ಪ್ರವಾಸಿಗರನ್ನು ಕರೆದೊಯ್ಯುವ ಗೈಡ್‌ಗಳು ತಪ್ಪದೇ ಹೇಳುತ್ತಾರೆ.

ಈ ಮಿನಾರ್ ನಗರಿಯ ಎತ್ತರದ ಗೋಪುರಗಳ ಪ್ರೇಮ ಶುರುವಾಗಿದ್ದು 1945ರಲ್ಲಿ. ಆಗ 73 ಮೀಟರ್ ಎತ್ತರದ 18 ಅಂತಸ್ತಿನ ಲಿಯಾನ್ ಲೈನ್ ಕಟ್ಟಡ ನಿರ್ಮಾಣವಾಯಿತು. 1963ರಲ್ಲಿ 20 ಅಂತಸ್ತಿನ 77 ಮೀಟರ್ ಎತ್ತರದ ಮಲೇಷ್ಯಾದ ಲೋಕಸಭಾ ಕಟ್ಟಡ 'ಮಲೇಶಿಯನ್ ಹೌಸ್ ಆಫ್ ಪಾರ್ಲಿಮೆಂಟ್' ತಲೆಯೆತ್ತಿತು. 1970ರಿಂದ 1980ರ ವರೆಗೆ ತೀವ್ರವಾಗಿ ನಡೆದ ಕೈಗಾರಿಕೀಕರಣ, ಕ್ವಾಲಾಲಂಪುರದ 'ಬಿಲ್ಡಿಂಗ್ ಬೂಮ್'ಗೆ ನಾಂದಿ ಹಾಡಿತು. 1978ರಲ್ಲಿ ನಿರ್ಮಾಣಗೊಂಡ 150.5 ಮೀಟರ್ ಎತ್ತರದ ಮಿನಾರಾ ಭೂಮಿಪುತ್ರ ಬಹಳ ವರ್ಷಗಳ ಕಾಲ ಅತಿ ಎತ್ತರದ ಕಟ್ಟಡ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು. ಈಗ ಅದು ಮಲೇಷ್ಯಾದ ಪ್ರತಿಷ್ಠಿತ ಬ್ಯಾಂಕ್ 'ಬ್ಯಾಂಕ್ ಮ್ಯುಮಾಲತ್'ನ ಕೇಂದ್ರ ಕಚೇರಿಯಾಗಿದೆ. 1987ರಲ್ಲಿ ನಿರ್ಮಾಣಗೊಂಡ ಕ್ವಾಲಾಲಂಪುರದ ಮೊದಲ 50 ಅಂತಸ್ತಿನ ಕಟ್ಟಡ 'ಮೇ ಬ್ಯಾಂಕ್ ಟವರ್' 200 ಮೀಟರ್ ಎತ್ತರವಿದ್ದು, ಮಿನಾರಾ ಭೂಮಿಪುತ್ರದ ದಾಖಲೆ ಮುರಿಯಿತು.

ಕ್ವಾಲಾಲಂಪುರದಲ್ಲಿ 2000 ಇಸವಿಯಿಂದೀಚೆಗೆ ಸ್ಪರ್ಧೆಯೋಪಾದಿಯಲ್ಲಿ ಮುಗಿಲೆತ್ತರದ ಗಗನಚುಂಬಿ ಕಟ್ಟಡಗಳು ತಲೆ ಎತ್ತ ತೊಡಗಿದವು. ಈಗ ಕ್ವಾಲಾಲಂಪುರದಲ್ಲಿರುವ ಅತಿ ಎತ್ತರದ ಕಟ್ಟಡವೆಂದರೆ ಮೆರ್ಡೆಕಾ 118. ಇದರ ಎತ್ತರ 679.9 ಮೀಟರ್, ಅಂದರೆ 2227 ಅಡಿಗಳಷ್ಟು! ಹೆಸರೇ ಹೇಳುವಂತೆ ಇದರಲ್ಲಿರುವ ಅಂತಸ್ತುಗಳ ಸಂಖ್ಯೆ 118. 453.6 ಮೀಟರ್ ಎತ್ತರವಿರುವ 106 ಅಂತಸ್ತಿನ ಎಕ್ಸ್‌ಚೇಂಜ್ 106 ಕ್ವಾಲಾಲಂಪುರದ ಎರಡನೇ ಅತಿ ಎತ್ತರದ ಕಟ್ಟಡ.

ಈಗ ಕ್ವಾಲಾಲಂಪುರದಲ್ಲಿ 2000ಕ್ಕೂ ಹೆಚ್ಚು ಗಗನಚುಂಬಿ ಕಟ್ಟಡಗಳಿವೆ. ಇವುಗಳಲ್ಲಿ 700ಕ್ಕೂ ಹೆಚ್ಚು ಗೋಪುರಗಳು 100 ಮೀಟರ್‌ಗಳಿಗಿಂತಲೂ ಎತ್ತರವಿದ್ದರೆ, 170ಕ್ಕೂ ಹೆಚ್ಚು ಕಟ್ಟಡಗಳು 150 ಮೀಟರ್ ಎತ್ತರ ಇವೆ. 42 ಕಟ್ಟಡಗಳ ಎತ್ತರ 200 ಮೀಟರ್‌ಗಳಿಗೂ ಅಧಿಕವಿದ್ದರೆ, 5 ಕಟ್ಟಡಗಳು 300 ಮೀಟರ್‌ಗೂ ಹೆಚ್ಚು ಎತ್ತರವನ್ನು ಹೊಂದಿವೆ. ಕ್ವಾಲಾಲಂಪುರ ನಗರ ಪ್ರದಕ್ಷಿಣೆಗೆ ಹೊರಟಾಗ ನಾವು ಸದಾ ತಲೆ ಎತ್ತಿ ನೋಡುತ್ತಿರಬೇಕು. ಏಕೆಂದರೆ, ಈ ನಗರದ ತುಂಬೆಲ್ಲಾ ಗಗನಚುಂಬಿ ಕಟ್ಟಡಗಳೇ ತುಂಬಿಕೊಂಡಿವೆ!

ಪ್ರವಾಸಿಗರು ಗೋಪುರದ ಮೇಲೇರಿ ವೀಕ್ಷಣೆ ಮಾಡಲು ಅವಕಾಶವಿರುವ ಗೋಪುರ ಹಾಗೂ ಕ್ವಾಲಾಲಂಪುರದ ಬಹಳ ಜನಪ್ರಿಯ ಪ್ರವಾಸಿ ಆಕರ್ಷಣೆಯೆಂದರೆ ಕೆ.ಎಲ್. ಟವರ್. 421 ಮೀಟರ್ ಎತ್ತರದ ಈ ಟೆಲಿ ಕಮ್ಯುನಿಕೇಶನ್ ಗೋಪುರ, ಪ್ರಪಂಚದ 7ನೇ ಅತಿ ಎತ್ತರದ ಗೋಪುರ. ಇದು ಮುಖ್ಯವಾಗಿ ದೂರವಾಣಿ ಗೋಪುರವಾದ್ದರಿಂದ ಇದರಲ್ಲಿರುವುದು ಕೇವಲ ಆರು ಅಂತಸ್ತು ಮಾತ್ರ. ಈ ಗೋಪುರದ 276 ಮೀಟರ್ ಎತ್ತರದಲ್ಲಿ ಒಂದು ವೀಕ್ಷಣಾ ಸ್ಥಳವಿದೆ. ಇಲ್ಲಿಂದ ನೋಡಿದರೆ ಕ್ವಾಲಾಲಂಪುರ ನಗರದ ಅತ್ಯಂತ ಸುಂದರ ದೃಶ್ಯಗಳು ಕಾಣಸಿಗುತ್ತವೆ. ಇಲ್ಲಿ ಪ್ರತಿ ವರ್ಷ ವೇಗವಾಗಿ ಕಟ್ಟಡವನ್ನೇರುವ ಸ್ಪರ್ಧೆ ನಡೆಯುತ್ತದೆ. ಇಸ್ಲಾಮಿಕ್ ದೇಶವಾದ ಮಲೇಷ್ಯಾದಲ್ಲಿ ಮುಸ್ಲಿಮರ ಪವಿತ್ರ ರಂಜಾನ್ ತಿಂಗಳಲ್ಲಿ ಚಂದ್ರ ದರ್ಶನಕ್ಕೆ ಈ ಗೋಪುರದಲ್ಲಿ 'ಇಸ್ಲಾಮಿಕ್ ಫಲಕ್ ಅಬ್ಸರ್ವೇಟರಿ' ಸಹ ಇದೆ.

ಪ್ರಪಂಚದ ಪ್ರತಿಯೊಂದು ಪ್ರಮುಖ ನಗರಕ್ಕೂ ತನ್ನದೇ ಆದ ವೈಶಿಷ್ಟ್ಯತೆ ಇರುತ್ತದೆ. ಏಷ್ಯಾದ ಅತ್ಯಂತ ಜನನಿಬಿಡ ನಗರಗಳಲ್ಲಿ ಒಂದಾದ ಕ್ವಾಲಾಲಂಪುರದ ವೈಶಿಷ್ಟ್ಯತೆ ಎಂದರೆ ಒಂದಕ್ಕೊಂದು ಸ್ಪರ್ಧಿಸುವಂತೆ ಮುಗಿಲೆತ್ತರಕ್ಕೆ ಮುಖ ಮಾಡಿ ನಿಂತ ಗಗನಚುಂಬಿ ಕಟ್ಟಡ, ಗೋಪುರಗಳು. ಇವು ಇಲ್ಲಿಗೆ ಭೇಟಿ ನೀಡುವ ಪ್ರವಾಸಿಗರ ನೆಚ್ಚಿನ ತಾಣಗಳಾಗಿ ಹಾಗೂ ದೇಶಕ್ಕೆ ವರಮಾನ ತಂದುಕೊಡುವ ಆದಾಯ ಕೇಂದ್ರಗಳೂ ಆಗಿವೆ.

ಎಮ್ಮೆಗಳಿಗೂ ಬ್ಯೂಟಿ ಪಾರ್ಲರ್!

10ನೇ ಪುಟದಿಂದ...

ಪ್ರತಿದಿನ ಬೆಳಿಗ್ಗೆ 6.30ರಿಂದ 8.30ರವರೆಗೆ ಮತ್ತು ಸಂಜೆ 4.30ರಿಂದ 6.30ರವರೆಗೆ 50ಕ್ಕೂ ಅಧಿಕ ಎಮ್ಮೆಗಳಿಗೆ ಇಲ್ಲಿ ಮಜ್ಜನ, ಮಸಾಜ್ ಮಾಡಲಾಗುತ್ತದೆ. ಮೂರು ತಿಂಗಳಿಗೊಮ್ಮೆ ಕ್ಷೌರಿಕರೇ ಇಲ್ಲಿಗೆ ಬಂದು, ಕೂದಲು ಕತ್ತರಿಸಿ ಎಮ್ಮೆಗಳ ಅಂದ ಹೆಚ್ಚಿಸುತ್ತಾರೆ. ನಿಯಮಿತವಾಗಿ ಪಶುವೈದ್ಯರು ಬಂದು ಜಾನುವಾರುಗಳ ಆರೋಗ್ಯ ತಪಾಸಣೆ ಮಾಡಿ ಲಸಿಕೆ ಹಾಕುತ್ತಾರೆ. ಮೈ ತೊಳೆಯಲು ಬಳಕೆಯಾದ ನೀರು ಹಾಗೂ ಎಮ್ಮೆಗಳು ಹಾಕಿದ ಸಗಣಿ, ಗಂಜಲದಿಂದ ಗೊಬ್ಬರ ತಯಾರು ಮಾಡಲಾಗುತ್ತದೆ. ಅದನ್ನು ಪಾಲಿಕೆಯ ಉದ್ಯಾನಗಳಿಗೆ ಬಳಸಲಾಗುತ್ತದೆ.

ಇಂಥದ್ದೇ ಪಾರ್ಲರ್ ಅನ್ನು ತಮ್ಮ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ತೆರೆಯಬೇಕೆಂಬ ಉದ್ದೇಶದಿಂದ ಪುಣೆ, ಬೆಳಗಾವಿ, ಮತ್ತಿತರ ಕಡೆಗಳ ಜನಪ್ರತಿನಿಧಿಗಳ ದಂಡು ಇಲ್ಲಿಗೆ ಬಂದು ವಿವರ ಪಡೆದುಕೊಂಡು ಹೋಗಿವೆ. ಕೊಲ್ಹಾಪುರ ಪಾಲಿಕೆ ವ್ಯಾಪ್ತಿಯಲ್ಲೂ ಐದಾರು ಕಡೆ ಎಮ್ಮೆಗಳ ಪಾರ್ಲರ್ ತೆರೆಯಲು ಯೋಜನೆ ಸಿದ್ಧವಾಗಿದೆ.

ಯಾರಿಗಾದರೂ 'ಎಮ್ಮೆ ತರ ಗಲೀಜು' ಅನ್ನಬೇಡಿ. ಎಮ್ಮೆಗಳೇನಾದರೂ ಈ ಮಾತನ್ನು ಕೇಳಿಸಿಕೊಂಡರೆ, ತಮಗೂ ಒಂದು ಬ್ಯೂಟಿ ಪಾರ್ಲರ್ ಬೇಕು ಎಂದು ಮುಷ್ಕರ ಹೂಡಿಯಾವು!



ಕೊಲ್ಹಾಪುರದಲ್ಲಿ ದೀಪಾವಳಿ ಪ್ರಯುಕ್ತ ಎಮ್ಮೆಗೆ ವಿಶೇಷ ಪೂಜೆ

ಎಮ್ಮೆಗಳಿಗೂ ಸೌಂದರ್ಯ ಸ್ಪರ್ಧೆ

ದೀಪಾವಳಿ ಹಬ್ಬ ಬಂತೆಂದರೆ ಗೌಳಿಗರಿಗೆ ಎಲ್ಲಿಲ್ಲದ ಸಡಗರ. ಬಲಿಪಾಡ್ಯಮಿಯಂದು ಎಮ್ಮೆಗಳಿಗೆ ಕಿವಿಯೊಲೆ, ಹಾರ, ತುರಾಯಿ ಮೊದಲಾದ ಆಲಂಕಾರಿಕ ವಸ್ತುಗಳಿಂದ ಸಿಂಗರಿಸಿ, ಇಡೀ ನಗರದಲ್ಲಿ ಓಡಿಸುತ್ತಾರೆ. ಗೌಳಿಗರು ವೇಗವಾಗಿ ಬೈಕ್ ಓಡಿಸಿಕೊಂಡು ಮುಂದೆ ಹೋಗುತ್ತಿದ್ದರೆ, ಎಮ್ಮೆಗಳೂ ಅಷ್ಟೇ ವೇಗವಾಗಿ ಓಡುತ್ತ ಹಿಂಬಾಲಿಸುತ್ತವೆ. ಅಲಂಕಾರ, ಓಟದಲ್ಲಿ ಗೆದ್ದ ಎಮ್ಮೆ ಮತ್ತು ಕೋಣಗಳ ಮಾಲೀಕರಿಗೆ ಬಹುಮಾನ ನೀಡಿ ಬೆನ್ನು ತಟ್ಟಲಾಗುತ್ತದೆ. ಇದರಲ್ಲಿ ಗೆಲ್ಲಲು ವರ್ಷವಿಡೀ ತಯಾರಿ ನಡೆಯುತ್ತದೆ. ಈ ಸ್ಪರ್ಧೆ ಅಷ್ಟೊಂದು ಪ್ರತಿಷ್ಠಿತ ಮತ್ತು ತುರುಸು!




ಸೌಂದರ್ಯ ಸ್ಪರ್ಧೆಗೆ ಸಜ್ಜುಗೊಂಡ ಎಮ್ಮೆ

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಡ್ರೋನ್ ಪರದಾಟ!

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಪ್ರಾಸ ಪದ ಬಂಧ

ಇಲ್ಲಿ ಕೊಟ್ಟಿರುವ ಅಕ್ಷರ ಪಟ್ಟಿಯಿಂದ ಒಂದು ಸೂಕ್ತವಾದ ಅಕ್ಷರಗಳನ್ನು ಆಯ್ಕೆ ಮಾಡಿಕೊಂಡು ಕೆಳಗೆ ಕೊಟ್ಟಿರುವ ಜೋಡಿ ಅಕ್ಷರಗಳಿಗೆ ತುಂಬಿ ಪ್ರಾಸಪದ ರಚಿಸಿ.

ಅಕ್ಷರ ಪಟ್ಟಿ

ಬೆ	ಆ	ವಿ	ಸ
ಉ	ತ	ಮ	ಮ
ಮು	ಹು	ಹೊ	ಪು

1

	ಲ	ಯ
	ಲ	ಯ

2

	ಸ್ತ	ಕ
	ಸ್ತ	ಕ

3

	ಳ	ಕು
	ಳ	ಕು

4

	ಗು	ಳು
	ಗು	ಳು

5

	ರು	ಪು
	ರು	ಪು

6

	ಕ	ಲ
	ಕ	ಲ

ಗಣಿತದಲ್ಲಿ ಗರ್ದಿ ಗಮ್ಮತ್ತು

ಲೆಕ್ಕ ಮಾಡು-ಮೋಜು ನೋಡು

1. 37037x3=
2. 37037x6=
3. 37037x9=
4. 37037x12
5. 37037x15=
6. 37037x18=
7. 37037x21=
8. 37037x24=
9. 37037x27=

ಜಾಣಪದ ಆಟ

ಇಲ್ಲಿ ಕೊಟ್ಟಿರುವ ಆದಿ-ಅಂತ್ಯ ಒಂದೇ ಅಕ್ಷರವಿರುವ ಮೂರು ಮೂರು ಪದಗಳನ್ನು ಕೊಡಲಾಗಿದೆ. ನೀವು ಅಕ್ಷರಪಟ್ಟಿಯಿಂದ ಸೂಕ್ತವಾದ ಅಕ್ಷರ ತುಂಬಿ ಅರ್ಥಬದ್ಧ ಪದ ಮಾಡಿ.

A.				C.				E.				G.			
1	ಕು		ರಿ	1	ಹ		ನ	1	ಕ		ಕ	1	ಜ		ನ
2	ಕು		ರಿ	2	ಹ		ನ	2	ಕ		ಕ	2	ಜ		ನ
3	ಕು		ರಿ	3	ಹ		ನ	3	ಕ		ಕ	3	ಜ		ನ
B.				**D.**				**F.**				**H.**			
1	ಗ		ನ	1	ಕ		ರಿ	1	ನ		ನ	1	ಹ		ಸು
2	ಗ		ನ	2	ಕ		ರಿ	2	ನ		ನ	2	ಹ		ಸು
3	ಗ		ನ	3	ಕ		ರಿ	3	ನ		ನ	3	ಹ		ಸು

ಕಳೆದ ಸಂಚಿಕೆಯ ಸರಿ ಉತ್ತರಗಳು

ಪ್ರಾಸಪದ ಬಂಧ: 1.ಪೂರೈಕೆ-ಆರೈಕೆ 2.ಪೂರಕ-ಮಾರಕ 3.ನೀರಸ-ಸರಸ 4.ಪರಾಗ-ಸರಾಗ 5.ಸುರಿಸು-ಹರಿಸು 6.ಸರೂಪ-ವಿರೂಪ
ಜಾಣಪದ ಆಟ: ಸಂಧಾನ, ವಿಧಾನ, ಪ್ರಧಾನ, ನಿಧಾನ, ತಳಕು, ಬೆಳಕು, ಕೊಳಕು, ಥಳಕು, ಚಳಕು, ಹುಳುಕು
ಪದಶೋಧ: ಕಿರಣಬೇಡಿ

ಮಜ ಮಜ ಮಜಕೂರದ ಕಳೆದ ಸಂಚಿಕೆಯ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ಮುಂದಿನ ವಾರ..


ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಆರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು. ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಪದಪಟ್ಟಿ

ಯ	ವ	ಮ	ಮಾ	ರಿ	ಸು	ಗ
ತ	ಮ	ವೀ	ನ	ಹ	ಮ	ಟ
ನ	ವಾ	ಟ	ಣ	ನ	ತ್ತ	_
ಳ	ಸ	ವ	ನಿ	ಯ	ಸ್ತೂ	_

ಸರಿ ಉತ್ತರ ನೀಡಿದ ಆಯ್ದ ಆರು ಪುಟಾಣಿಗಳು



ಅಭಿಷೇಕ್ ಚವ್ಹಾಣ
ರಾಣೆಬೆನ್ನೂರು



ಸಾಕ್ಷಿ ಹರ್ಲಾಪುರ
ಅಣ್ಣಿಗೇರಿ




ಋತ್ವಿಕ್ ಎಸ್.ಎನ್.
ಉಡುಪಿ



ಸ್ವೇಚಿತ್ ಜಿ.ಎಲ್.
ಚಿಕ್ಕಮಗಳೂರು



ಅಭಿಜ್ಞಾ ಬಿ.ವೈ.
ಮೈಸೂರು



ಶ್ರೇಯಾ ಎಸ್. ಗೌಡರ
ಕೊಪ್ಪಳ

ಚೆನ್ನೈ ಟೆಸ್ಟ್: ಬಾಂಗ್ಲಾ ತಂಡಕ್ಕೆ ಕಠಿಣ ಗುರಿಯೊಡ್ಡಿದ ಭಾರತ • ಅಶ್ವಿನ್‌ಗೆ ಮೂರು ವಿಕೆಟ್

ಗಿಲ್–ಪಂತ್ 'ಶತಕ'ದ ಆಟ

ಪ್ರಜಾವಾಣಿ ವಾರ್ತೆ



ಚೆನ್ನೈನಲ್ಲಿ ನಡೆಯುತ್ತಿರುವ ಟೆಸ್ಟ್ ಪಂದ್ಯದಲ್ಲಿ ಶತಕ ಗಳಿಸಿದ ಭಾರತದ ರಿಷಭ್ ಪಂತ್ ಅವರು ಭಾವುಕರಾದರು (ಎಡಚಿತ್ರ). ಭಾರತದ ಶುಭಮನ್ ಗಿಲ್ ಶತಕ ಸಂಭ್ರಮ –ಪಿಟಿಐ ಚಿತ್ರಗಳು

ಚೆನ್ನೈ: ಶುಭಮನ್ ಗಿಲ್ ಅವರು ತಾವು ಮೂರನೇ ಕ್ರಮಾಂಕಕ್ಕೆ ಅತ್ಯಂತ ಸೂಕ್ತ ಬ್ಯಾಟರ್ ಎಂಬುದನ್ನು ಮತ್ತೊಮ್ಮೆ ಸಾಬೀತು ಮಾಡಿದರು. ಇನ್ನೊಂದೆಡೆ ರಿಷಭ್ ಪಂತ್ ದೀರ್ಘ ಸಮಯದ ನಂತರ ಟೆಸ್ಟ್ ಕ್ರಿಕೆಟ್‌ಗೆ ಮರಳಿರುವುದನ್ನು ಚೆಂದದ ಬ್ಯಾಟಿಂಗ್ ಮೂಲಕ ಘೋಷಿಸಿದರು.

ಇವರಿಬ್ಬರೂ ಗಳಿಸಿದ ಶತಕಗಳ ಬಲದಿಂದ ಭಾರತ ತಂಡವು ಬಾಂಗ್ಲಾ ತಂಡಕ್ಕೆ 515 ರನ್‌ಗಳ ಗೆಲುವಿನ ಗುರಿಯೊಡ್ಡಿತು. ಬೆನ್ನಟ್ಟಿರುವ ಪ್ರವಾಸಿ ಬಳಗವು ಮೊದಲ ಟೆಸ್ಟ್ ಪಂದ್ಯದ ಮೂರನೇ ದಿನವಾದ ಶನಿವಾರ 4 ವಿಕೆಟ್‌ಗಳಿಗೆ 158 ರನ್ ಗಳಿಸಿದೆ. ನಾಯಕ ನಜ್ಮುಲ್ ಹುಸೇನ್ ಶಾಂತೊ (ಔಟಾಗದೇ 51) ಕ್ರೀಸ್‌ನಲ್ಲಿದ್ದಾರೆ. ಈ ಹಂತದಲ್ಲಿ ಬಾಂಗ್ಲಾದ ಬ್ಯಾಟರ್‌ಗಳು ಹೋರಾಟ ಮಾಡಿದರು. ಚುರುಕಾಗಿ ರನ್ ಗಳಿಸಲು ಗಮನ ನೀಡಿದರು. ಆದರೆ ಆತಿಥೇಯ ತಂಡದ ಬೌಲರ್‌ಗಳು ತಮ್ಮ ಅನುಭವ ಮತ್ತು ಶ್ರೇಷ್ಠ ಕೌಶಲವನ್ನು ಮೆರೆದರು.

ಮೊದಲ ಇನಿಂಗ್ಸ್‌ನಲ್ಲಿ ಶತಕ ಗಳಿಸಿ ಮಿಂಚಿದ್ದ ಆರ್. ಅಶ್ವಿನ್ ಎರಡನೇ ಇನಿಂಗ್ಸ್‌ನಲ್ಲಿ ಬೌಲಿಂಗ್‌ನಲ್ಲಿ ತಮ್ಮ ಕೈಚಳಕ ತೋರಿಸಿದರು. ಅವರು 3 ವಿಕೆಟ್ ಗಳಿಸಿದರು. ಇದರಿಂದಾಗಿ ನಾಲ್ಕನೇ ದಿನವಾದ ಭಾನುವಾರ ಭಾರತ ತಂಡವು ಗೆಲುವಿನ ಕೇಕೆ ಹಾಕುವ ಕನಸು ಕಾಣುತ್ತಿದೆ.

ಆತಿಥೇಯ ತಂಡವು ಮೊದಲ ಇನಿಂಗ್ಸ್‌ನಲ್ಲಿ 227 ರನ್‌ಗಳ ದೊಡ್ಡ ಮುನ್ನಡೆ ಸಾಧಿಸಿತ್ತು. ಎರಡನೇ ಇನಿಂಗ್ಸ್‌ನಲ್ಲಿ 64 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 287 ರನ್ ಗಳಿಸಿ ಡಿಕ್ಲೇರ್ ಮಾಡಿಕೊಂಡಿತು. ಗಿಲ್ (ಅಜೇಯ 119, 176ಎ) ಮತ್ತು ಪಂತ್ (109; 128ಎ) ಅವರು ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 167 ರನ್ ಸೇರಿಸಿದರು.

ಶುಕ್ರವಾರ ಎರಡನೇ ಇನಿಂಗ್ಸ್‌ನಲ್ಲಿ 81 ರನ್‌ಗಳಿಗೆ 3 ವಿಕೆಟ್ ಕಳೆದುಕೊಂಡಿದ್ದ ಭಾರತ ತಂಡವು ಕುಸಿಯದಂತೆ ಗಿಲ್ ಮತ್ತು ಪಂತ್ ನೋಡಿಕೊಂಡರು. ಐದನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಪಂತ್ ತಮ್ಮ ಎಂದಿನ ಶೈಲಿಯಲ್ಲಿಯೇ ಬ್ಯಾಟಿಂಗ್ ಮಾಡಿದರು. ಗಿಲ್ ಮಾತ್ರ ಸ್ವಲ್ಪ ತಾಳ್ಮೆಯಿಂದ ಇನಿಂಗ್ಸ್ ಕಟ್ಟಿದರು. ಟೆಸ್ಟ್‌ನಲ್ಲಿ ಗಿಲ್ ಐದನೇ ಶತಕ ಪೂರೈಸಿದರು. ರಿಷಭ್ ಪಂತ್ ಆರನೇಯ ಶತಕ ತಮ್ಮದಾಗಿಸಿಕೊಂಡರು. ಅದರೊಂದಿಗೆ ಮಹೇಂದ್ರಸಿಂಗ್ ಧೋನಿಯವರ ದಾಖಲೆಯನ್ನು ಸರಿಗಟ್ಟಿದರು.

3ನೇ ದಿನದಾಟದಲ್ಲಿ ಊಟದ ವಿರಾಮದವರೆಗೂ ಈ ಜೊತೆಯಾಟವನ್ನು ಮುರಿಯಲು ಬೌಲರ್‌ಗಳಿಗೆ ಸಾಧ್ಯವಾಗಲಿಲ್ಲ. 2022ರಲ್ಲಿ ಸಂಭವಿಸಿದ್ದ ಕಾರು ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಪಂತ್ ಕಳೆದ ಐಪಿಎಲ್ ಸಂದರ್ಭದಲ್ಲಿ ಕ್ರಿಕೆಟ್‌ಗೆ ಮರಳಿದ್ದರು. ಸುಮಾರು ಎರಡು ವರ್ಷಗಳ ನಂತರ ಈಗ ಟೆಸ್ಟ್ ಕ್ರಿಕೆಟ್ ಪಂದ್ಯವಾಡುತ್ತಿದ್ದಾರೆ.

ಮೊದಲ ಇನಿಂಗ್ಸ್‌ನಲ್ಲಿ ಪಂತ್ ಉತ್ತಮವಾಗಿ ವಿಕೆಟ್ ಕೀಪಿಂಗ್ ಮಾಡಿದ್ದರು. ಫುಲ್ ಲೆಂತ್ ಡೈವಿಂಗ್ ಮಾಡಿ ಚೆಂಡು ತಡೆದಿದ್ದರು. ಬ್ಯಾಟಿಂಗ್‌ನಲ್ಲಿಯೂ ತಮ್ಮ ಎಂದಿನ ಆಕ್ರಮಣಕಾರಿ ಶೈಲಿಯನ್ನು ಮತ್ತೊಮ್ಮೆ ಇಲ್ಲಿ ತೋರಿದರು. ಇದರಿಂದಾಗಿ ರನ್ ಗಳಿಕೆಗೆ ವೇಗ ಲಭಿಸಿತು.

ಸ್ಪಿನ್ನರ್‌ಗಳಾದ ಶಕೀಬ್ ಅಲ್ ಹಸನ್ ಮತ್ತು ಮೆಹದಿ ಹಸನ್ ಮಿರಾಜ್ ಅವರ ಎಸೆತಗಳನ್ನೂ ಪಂತ್ ನಿರ್ದಯವಾಗಿ ದಂಡಿಸಿದರು. ಇನಿಂಗ್ಸ್‌ನ 49ನೇ ಓವರ್‌ನಲ್ಲಿ ಪಂತ್ ಅವರ ಕ್ಯಾಚ್ ಕೈಚೆಲ್ಲಿದ ಫೀಲ್ಡರ್ ಶಾಂತೊ ಪರಿತಪಿಸುವಂತಾಯಿತು. ಇದಾಗಿ ಏಳು ಓವರ್‌ಗಳ ನಂತರ ಪಂತ್ ವಿಕೆಟ್ ಗಳಿಸಿದ ಮೆಹದಿ ಹಸನ್ ಮಿರಾಜ್ ಜೊತೆಯಾಟವನ್ನೂ ಮುರಿದರು.

ಕ್ರೀಸ್‌ಗೆ ಬಂದ ಕೆ.ಎಲ್. ರಾಹುಲ್ 19 ಎಸೆತಗಳಲ್ಲಿ 22 ರನ್ ಗಳಿಸಿದರು. ಅದರಲ್ಲಿ ನಾಲ್ಕು ಬೌಂಡರಿಗಳಿದ್ದವು. ಈ ಸಂದರ್ಭದಲ್ಲಿ ತಂಡವು ಡಿಕ್ಲೇರ್ ಮಾಡಿಕೊಂಡಿತು.

ಭಾವುಕರಾದ ರಿಷಭ್ ಪಂತ್

ರಿಷಭ್ ಪಂತ್ ವಿಕೆಟ್ ಕೀಪಿಂಗ್ ಮಾಡುವಾಗ ಮತ್ತು ಸಹ ಆಟಗಾರರೊಂದಿಗೆ ಇದ್ದಾಗ ತಮ್ಮ ಕೀಟಲೆ ಸ್ವಭಾವದಿಂದ ಗುರುತಿಸಿಕೊಂಡವರು. ಚಟಾಕಿ ಹಾರಿಸುತ್ತ, ನಗುತ್ತ ಇರುವ ಲವಲವಿಕೆಯ ಹುಡುಗ.

ಆದರೆ ಶನಿವಾರ ಅವರು ಚೆಪಾಕ್ ಅಂಗಳದಲ್ಲಿ ತಮ್ಮ ಟೆಸ್ಟ್ ಕ್ರಿಕೆಟ್ ಜೀವನದ ಆರನೇ ಶತಕ ಪೂರೈಸಿದಾಗ ಭಾವುಕರಾದರು. 124 ಎಸೆತಗಳಲ್ಲಿ 100ರ ಗಡಿ ಮುಟ್ಟಿದ ತಕ್ಷಣ ಅವರು ಕುಣಿದು ಕುಪ್ಪಳಿಸಿ ಸಂಭ್ರಮಿಸಲಿಲ್ಲ. ನಿಧಾನವಾಗಿ ಬ್ಯಾಟ್ ಎತ್ತಿದರು. ನಂತರ ಹೆಲ್ಮೆಟ್ ತೆಗೆದರು. ಆಗ ಅವರ ಕಂಗಳಲ್ಲಿ ನೀರಾಡುತ್ತಿರುವುದು ಕಂಡಿತು. ಕಣ್ಣುಗಳನ್ನು ಗಟ್ಟಿಯಾಗಿ ಮುಚ್ಚಿಕೊಂಡೇ ಆಗಸದತ್ತ ಮುಖ ಮಾಡಿ, ತೋಳಗಲಿಸಿ ನಿಂತರು. ಇನ್ನೊಂದು ಬದಿಯಲ್ಲಿದ್ದ ಶುಭಮನ್ ಗಿಲ್ ಓಡಿ ಬಂದು ಪಂತ್ ಅವರನ್ನು ಆಲಂಗಿಸಿಕೊಂಡು ಅಭಿನಂದಿಸಿದರು. ಬೆನ್ನು ತಟ್ಟಿ ಸಂತೈಸಿದರು.

ಎರಡು ವರ್ಷಗಳ ಹಿಂದೆ ಸಂಭವಿಸಿದ್ದ ಭೀಕರ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದರು ರಿಷಭ್. ಚಿಕಿತ್ಸೆ ಮತ್ತು ಆರೈಕೆಗಳ ನಂತರ ಆಡುತ್ತಿರುವ ಮೊದಲ ಟೆಸ್ಟ್ ಪಂದ್ಯ ಇದಾಗಿದೆ. ತಮ್ಮ ನೆಚ್ಚಿನ ರಿವರ್ಸ್ ಸ್ಕೂಪ್, ಪೆಡಲ್ ಸ್ವೀಪ್ ಸೇರಿದಂತೆ ವೈವಿಧ್ಯಮಯ ಹೊಡೆತಗಳನ್ನು ಪ್ರಯೋಗಿಸಿದರು. ಒಂದು, ಎರಡು ರನ್‌ಗಳನ್ನೂ ಚುರುಕಾಗಿ ಪಡೆದರು. ಮೊದಲ ಇನಿಂಗ್ಸ್‌ನಲ್ಲಿ ಉತ್ತಮವಾಗಿ ವಿಕೆಟ್‌ಕೀಪಿಂಗ್ ಕೂಡ ಮಾಡಿದ್ದರು.

ಸ್ಕೋರ್ ಕಾರ್ಡ್

ಮೊದಲ ಇನಿಂಗ್ಸ್: ಭಾರತ 376 (91.2 ಓವರ್‌ಗಳಲ್ಲಿ)
ಬಾಂಗ್ಲಾದೇಶ 149 (47.1 ಓವರ್‌ಗಳಲ್ಲಿ)
ಎರಡನೇ ಇನಿಂಗ್ಸ್: ಭಾರತ 4ಕ್ಕೆ 287 (64 ಓವರ್‌ಗಳಲ್ಲಿ)
(ಶುಕ್ರವಾರ 23 ಓವರ್‌ಗಳಲ್ಲಿ 3ಕ್ಕೆ 81)
ಶುಭಮನ್ ಗಿಲ್ ಔಟಾಗದೇ 119 (176ಎ, 4x10, 6x4)
ರಿಷಭ್ ಸಿ ಅಂಡ್ ಬಿ ಮಿರಾಜ್ 109 (128ಎ, 4x13, 6x4)
ಕೆ.ಎಲ್. ರಾಹುಲ್ ಔಟಾಗದೇ 22 (19ಎ, 4x4)
ಇತರೆ: 5 (ಲೆಗ್‌ಬೈ 4, ವೈಡ್ 1)
ವಿಕೆಟ್ ಪತನ: 4–234 (ರಿಷಭ್ ಪಂತ್; 55.3)
ಬೌಲಿಂಗ್: ತಸ್ಕಿನ್ ಅಹಮದ್ 7–1–22–1, ಹಸನ್ ಮೆಹಮೂದ್ 11–1–43–0, ನಹೀದ್ ರಾಣಾ 6–0–21–1, ಶಕೀಬ್ ಅಲ್ ಹಸನ್ 13–0–79–0, ಮೆಹದಿ ಹಸನ್ ಮಿರಾಜ್ 25–3–103–2, ಮೊಮಿನುಲ್ ಹಕ್ 2–0–15–0
ಬಾಂಗ್ಲಾದೇಶ 4ಕ್ಕೆ 158 (37.2 ಓವರ್‌ಗಳಲ್ಲಿ)
ಝಾಕೀರ್ ಸಿ ಜೈಸ್ವಾಲ್ ಬಿ ಬೂಮ್ರಾ 33 (47ಎ, 4x5, 6x1)
ಶಾದ್ಮನ್ ಸಿ ಶುಭಮನ್ ಬಿ ಅಶ್ವಿನ್ 35 (68ಎ, 4x3)
ನಜ್ಮುಲ್ ಹುಸೇನ್ ಶಾಂತೊ ಔಟಾಗದೇ 51 (60ಎ, 4x4, 6x3)
ಮೊಮಿನುಲ್ ಬಿ ಅಶ್ವಿನ್ 13 (24ಎ, 4x3)
ಮುಷ್ಫಿಕುರ್ ಸಿ ರಾಹುಲ್ ಬಿ ಅಶ್ವಿನ್ 13 (11ಎ, 4x1, 6x1)
ಶಕೀಬ್ ಅಲ್ ಹಸನ್ ಔಟಾಗದೇ 5 (14ಎ)
ಇತರೆ: 8 (ಬೈ 4, ಲೆಗ್‌ಬೈ 4)
ವಿಕೆಟ್ ಪತನ: 1-62 (ಝಾಕೀರ್ ಹಸನ್, 16.2), 2-86 (ಶಾದ್ಮನ್ ಇಸ್ಲಾಂ, 21.3), 3-124 (ಮೊಮಿನುಲ್ ಹಕ್, 29.6), 4-146 (ಮುಷ್ಫಿಕುರ್ ರಹೀಂ, 33.4)
ಬೌಲಿಂಗ್: ಜಸ್‌ಪ್ರೀತ್ ಬೂಮ್ರಾ 7–2–18–1, ಮೊಹಮ್ಮದ್ ಸಿರಾಜ್ 3.2–1–20–0, ಆಕಾಶ್ ದೀಪ್ 6–0–20–0. ರವಿಚಂದ್ರನ್ ಅಶ್ವಿನ್ 15–0–63–3, ರವೀಂದ್ರ ಜಡೇಜ 6–0–29–0

ಹಿಡಿತ ಸಾಧಿಸಿದ ಭಾರತ 'ಡಿ'

ದುಲೀಪ್ ಟ್ರೋಫಿ ಕ್ರಿಕೆಟ್: ರಿಕಿ ಭುಯಿ ಅಜೇಯ 90

ಅನಂತಪುರ (ಪಿಟಿಐ): ಬ್ಯಾಟರ್ ರಿಕಿ ಭುಯಿ ಅವರು ಸತತ ಎರಡನೇ ಶತಕದಿಂದ ಕೇವಲ 10 ರನ್ ದೂರವಿದ್ದಾರೆ. ಭಾರತ 'ಡಿ' ತಂಡ ದುಲೀಪ್ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಭಾರತ 'ಬಿ' ವಿರುದ್ಧ ಮೂರನೇ ದಿನವಾದ ಶನಿವಾರ ಒಟ್ಟಾರೆ ಮುನ್ನಡೆಯನ್ನು 311 ರನ್‌ಗಳಿಗೆ ಹೆಚ್ಚಿಸಿದೆ.

ರನ್ ಬರ ಎದುರಿಸುತ್ತಿರುವ ಶ್ರೇಯಸ್ ಅಯ್ಯರ್ ಸಮಾಧಾನ ಎಂಬಂತೆ ಅರ್ಧ ಶತಕ (40 ಎಸೆತಗಳಲ್ಲಿ 50) ಗಳಿಸಿದರು. ದಿನದಾಟದ ಕೊನೆಗೆ ಭುಯಿ, 87 ಎಸೆತಗಳಲ್ಲಿ ಅಜೇಯ 90 ರನ್ ಗಳಿಸಿದ್ದು ಇದರಲ್ಲಿ 10 ಬೌಂಡರಿಗಳ ಜೊತೆ ಮೂರು ಸಿಕ್ಸರ್‌ಗಳಿವೆ. ಭಾರತ ಡಿ ಎರಡನೇ ಇನಿಂಗ್ಸ್‌ನಲ್ಲಿ 5 ವಿಕೆಟ್‌ಗೆ 244 ರನ್ ಗಳಿಸಿದೆ. ಇದಕ್ಕೆ ಮೊದಲು, ಭಾರತ 'ಡಿ' ತಂಡದ 349 ರನ್‌ಗಳ ಮೊದಲ ಇನಿಂಗ್ಸ್ ಮೊತ್ತಕ್ಕೆ ಉತ್ತರವಾಗಿ ಶುಕ್ರವಾರ 6 ವಿಕೆಟ್‌ಗೆ 210 ರನ್ ಗಳಿಸಿದ್ದ 'ಬಿ' ತಂಡದ ಮೊತ್ತ 282 ರನ್‌ಗಳವರೆಗೆ ಬೆಳೆಯಿತು. ವಾಷಿಂಗ್ಟನ್ ಸುಂದರ್ 87 ರನ್ ಗಳಿಸಿ ಜೊತೆಗಾರರಿಲ್ಲದೇ ಮರಳಿದರು. ಎಡಗೈ ಸ್ಪಿನ್ನರ್ ಸೌರಭ್ ಕುಮಾರ್ 73 ರನ್ನಿಗೆ 5 ವಿಕೆಟ್ ಪಡೆದರು. ಎರಡನೇ ಇನಿಂಗ್ಸ್‌ನಲ್ಲಿ ಭಾರತ ಡಿ 18 ರನ್ನಿಗೆ 3 ವಿಕೆಟ್ ಕಳೆದುಕೊಂಡು ಆಘಾತ ಎದುರಿಸಿತ್ತು. ಆದರೆ ಅಯ್ಯರ್ ಮತ್ತು ತಂಡವನ್ನು ಕುಸಿತದಿಂದ ಪಾರುಮಾಡಿದರು.

ಸಂಕ್ಷಿಪ್ತ ಸ್ಕೋರು: ಮೊದಲ ಇನಿಂಗ್ಸ್: ಭಾರತ 'ಡಿ': 349; ಭಾರತ 'ಬಿ': 76.2 ಓವರುಗಳಲ್ಲಿ 282 (ಅಭಿಮನ್ಯು ಈಶ್ವರನ್ 116, ವಾಷಿಂಗ್ಟನ್ ಸುಂದರ್ 87; ಸೌರಭ್ ಕುಮಾರ್ 73ಕ್ಕೆ5, ಅರ್ಷದೀಪ್ ಸಿಂಗ್ 30ಕ್ಕೆ3); ಎರಡನೇ ಇನಿಂಗ್ಸ್: ಭಾರತ 'ಡಿ': 44 ಓವರುಗಳಲ್ಲಿ 5 ವಿಕೆಟ್‌ಗೆ 244 (ರಿಕಿ ಭುಯಿ ಬ್ಯಾಟಿಂಗ್ 90, ಶ್ರೇಯಸ್ ಅಯ್ಯರ್ 50, ಸಂಜು ಸ್ಯಾಮ್ಸನ್ 45; ಮುಕೇಶ್ ಕುಮಾರ್ 80ಕ್ಕೆ3, ನವದೀಪ್ ಸೈನಿ 40ಕ್ಕೆ2);

ಮಿಂಚಿದ ಪರಾಗ್, ಶಾಶ್ವತ್: ಭಾರತ 'ಎ' ತಂಡಕ್ಕೆ ಮೇಲುಗೈ

ಅನಂತರಪುರ (ಪಿಟಿಐ): ರಿಯಾನ್ ಪರಾಗ್ ಮತ್ತು ಶಾಶ್ವತ್ ರಾವತ್ ಅವರ ಅರ್ಧ ಶತಕಗಳ ನೆರವಿನಿಂದ ಭಾರತ 'ಎ' ತಂಡ, ದುಲೀಪ್ ಟ್ರೋಫಿ ಕ್ರಿಕೆಟ್ ಪಂದ್ಯದಲ್ಲಿ ಭಾರತ 'ಸಿ' ವಿರುದ್ಧ ನಾಲ್ಕು ದಿನಗಳ ಪಂದ್ಯದ ಮೂರನೇ ದಿನವಾದ ಶನಿವಾರ ಮೇಲುಗೈ ಸಾಧಿಸಿತು.

ಭಾರತ 'ಎ' ಎರಡನೇ ಇನಿಂಗ್ಸ್‌ನಲ್ಲಿ 6 ವಿಕೆಟ್‌ಗೆ 270 ರನ್ ಗಳಿಸಿದೆ. ಒಟ್ಟಾರೆ ಮುನ್ನಡೆ 333 ರನ್‌ಗಳಿಗೆ ಉಬ್ಬಿದೆ.

ಪರಾಗ್ 101 ಎಸೆತಗಳಲ್ಲಿ 73 ರನ್ ಗಳಿಸಿದರೆ, ಮೊದಲ ಇನಿಂಗ್ಸ್‌ನ ಶತಕ ವೀರ ಶಾಶ್ವತ್ ರಾವತ್ 67 ಎಸೆತಗಳಲ್ಲಿ ಆಕರ್ಷಕ ಹೊಡೆತಗಳಿಂದ ಕೂಡಿದ 53 ರನ್ ಬಾರಿಸಿದರು. ಐದನೇ ವಿಕೆಟ್‌ಗೆ ಇವರಿಬ್ಬರು 105 ರನ್ ಸೇರಿಸಿದರು. ನಾಯಕ ಮಯಂಕ್ ಅಗರವಾಲ್ ಸೊಗಸಾದ 34 ರನ್ ಗಳಿಸಿದರು.


ಸ್ಟಂಪ್ಸ್ ವೇಳೆ ವಿಕೆಟ್ ಕೀಪರ್ ಕುಮಾರ ಕುಶಾಗ್ರ ಅಜೇಯ 40 ರನ್ ಮತ್ತು ತನುಷ್ ಕೋಟ್ಯಾನ್ ಅಜೇಯ 13 ರನ್ ಗಳಿಸಿದ್ದಾರೆ. ಇದಕ್ಕೆ ಮೊದಲು 'ಎ' ತಂಡದ 297 ರನ್‌ಗಳ ಮೊದಲ ಇನಿಂಗ್ಸ್‌ಗೆ ಉತ್ತರವಾಗಿ 7 ವಿಕೆಟ್‌ಗೆ 216 ರನ್ ಗಳಿಸಿದ್ದ ಭಾರತ 'ಸಿ' 234 ರನ್‌ಗಳಿಗೆ (71 ಓವರ್) ಆಲೌಟಾಯಿತು. ಆವೇಶ್ ಖಾನ್ ಮತ್ತು ಅಕಿಬ್ ಖಾನ್ ತಲಾ ಮೂರು ವಿಕೆಟ್ ಪಡೆದರು.


ರಿಯಾನ್ ಪರಾಗ್ –ಎಕ್ಸ್ ಚಿತ್ರ

ಸಂಕ್ಷಿಪ್ತ ಸ್ಕೋರುಗಳು: ಮೊದಲ ಇನಿಂಗ್ಸ್: ಭಾರತ 'ಎ': 297; ಭಾರತ ಸಿ: 234; ಎರಡನೇ ಇನಿಂಗ್ಸ್: ಭಾರತ 'ಎ': 64 ಓವರುಗಳಲ್ಲಿ 6ಕ್ಕೆ 270 (ರಿಯಾನ್ ಪರಾಗ್ 73, ಶಾಶ್ವತ್ ರಾವತ್ 53).

ಕಾರ್ತಿಕೇಯ ಅರ್ಧಶತಕ: ಭಾರತ ತಂಡಕ್ಕೆ ಜಯ

ಪುದುಚೇರಿ (ಪಿಟಿಐ): ಕರ್ನಾಟಕದ ಬಲಗೈ ಬ್ಯಾಟರ್ ಕೆ.ಪಿ. ಕಾರ್ತಿಕೇಯ ಅವರ ಅರ್ಧಶತಕದ ಬಲದಿಂದ ಭಾರತ 19 ವರ್ಷದೊಳಗಿನವರ ತಂಡವು ಯೂತ್ ಏಕದಿನ ಕ್ರಿಕೆಟ್ ಪಂದ್ಯದಲ್ಲಿ ಜಯಿಸಿತು.


ಕೆ.ಪಿ. ಕಾರ್ತಿಕೇಯ

ಶನಿವಾರ ನಡೆದ ಪಂದ್ಯದಲ್ಲಿ ಭಾರತ ತಂಡವು 7 ವಿಕೆಟ್‌ಗಳಿಂದ ಆಸ್ಟ್ರೇಲಿಯಾ 19 ವರ್ಷದೊಳಗಿನವರ ಎದುರು ಜಯಿಸಿತು. ಕಾರ್ತಿಕೇಯ (85; 99ಎ, 4X9, 6X2) ಮತ್ತು ನಾಯಕ ಅಮನ್ (58; 89ಎ, 4X5) ಅರ್ಧಶತಕ ಗಳಿಸಿದರು.

ಮೊದಲು ಬ್ಯಾಟಿಂಗ್ ಮಾಡಿದ ಆಸ್ಟ್ರೇಲಿಯಾದ ತಂಡವು 49.4 ಓವರ್‌ಗಳಲ್ಲಿ 184 ರನ್ ಗಳಿಸಿ ಆಲೌಟ್ ಆಯಿತು. ಅದಕ್ಕುತ್ತರವಾಗಿ ಭಾರತ ತಂಡವು 36 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 185 ಗಳಿಸಿತು. ಭಾರತ ತಂಡದಲ್ಲಿ ರಾಹುಲ್ ದ್ರಾವಿಡ್ ಪುತ್ರ ಸಮಿತ್ ತಂಡದಲ್ಲಿದ್ದಾರೆ. ಆದರೆ ಈ ಪಂದ್ಯದಲ್ಲಿ ಅವರನ್ನು 11ರ ಬಳಗದಲ್ಲಿ ಆಡಲಿಲ್ಲ.

ಸಂಕ್ಷಿಪ್ತ ಸ್ಕೋರು: ಆಸ್ಟ್ರೇಲಿಯಾ: 49.4 ಓವರ್‌ಗಳಲ್ಲಿ 184 (ರಿಲಿ ಕಿಂಗ್‌ಸೆಲ್ 36, ಸ್ಟೀವನ್ ಹೋಗನ್ 42, ಥಾಮಸ್ ಬ್ರೌನ್ 29, ಮೊಹಮ್ಮದ್ ಎನಾನ್ 32ಕ್ಕೆ4, ಕೆ.ಪಿ. ಕಾರ್ತಿಕೇಯ 30ಕ್ಕೆ2) ಭಾರತ: 36 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 185 (ಮೊಹಮದ್ ಅಮನ್ 58, ಕೆ.ಪಿ. ಕಾರ್ತಿಕೇಯ ಔಟಾಗದೆ 85, ಒಲಿ ಪೀಟರ್ಸನ್ 24ಕ್ಕೆ2) **ಫಲಿತಾಂಶ:** ಭಾರತ 19 ವರ್ಷದೊಳಗಿನವರ ತಂಡಕ್ಕೆ 7 ವಿಕೆಟ್‌ಗಳ ಜಯ.

ಚೆಸ್ ಒಲಿಂಪಿಯಾಡ್: ಅಮೆರಿಕ ವಿರುದ್ಧ ಗೆದ್ದ ಭಾರತ

ಖಚಿತವಾದ ಐತಿಹಾಸಿಕ ಚಿನ್ನ

ಬುಡಾಪೆಸ್ಟ್ (ಪಿಟಿಐ): ವಿಶ್ವ ಚಾಂಪಿಯನ್‌ಷಿಪ್‌ಗೆ ಚಾಲೆಂಜರ್ ಆಗಿರುವ ಡಿ. ಗುಕೇಶ್ ಮತ್ತು ಅರ್ಜುನ್ ಇರಿಗೇಶಿ ಅವರು ಯಶಸ್ಸಿನ ಓಟ ಮುಂದುವರಿಸಿದರು. ಇದರಿಂದ ಭಾರತ, 45ನೇ ಚೆಸ್ ಒಲಿಂಪಿಯಾಡ್‌ನ 10ನೇ ಸುತ್ತಿನಲ್ಲಿ ಶನಿವಾರ ಅಮೆರಿಕ ತಂಡವನ್ನು 2.5–1.5ರಿಂದ ಸೋಲಿಸಿತು. ತನ್ಮೂಲಕ ಒಂದು ಸುತ್ತು ಉಳಿದಿರುವಂತೆ ಮೊದಲ ಬಾರಿ ಚಿನ್ನದ ಪದಕವನ್ನು ಖಚಿತ ಪಡಿಸಿಕೊಂಡಿತು.

ಗುಕೇಶ್ ಮೊದಲ ಬೋರ್ಡ್‌ನಲ್ಲಿ ತಮಗಿಂತ ಮೇಲಿನ ಕ್ರಮಾಂಕದ ಫ್ಯಾಬಿಯಾನೊ ಕರುವಾನ ಅವರನ್ನು ಸೋಲಿಸಿದರು. ಆದರೆ, ಎರಡನೇ ಬೋರ್ಡ್‌ನಲ್ಲಿ ಅಮೆರಿಕದ ವೆಸ್ಲಿ ಸೋ ಅವರು ಭಾರತದ ಪ್ರಜ್ಞಾನಂದ ಅವರನ್ನು ಮಣಿಸಿದ್ದರಿಂದ ಸ್ಕೋರ್ 1–1 ಆಯಿತು.

ಮೂರನೇ ಬೋರ್ಡ್‌ನಲ್ಲಿ ಅರ್ಜುನ್, ಎದುರಾಳಿ ಲೆನಿಯರ್ ಡೊಮಿಂಗುಜ್ ಪೆರೆಜ್ ಅವರನ್ನು ಮಣಿಸಿದ್ದರಿಂದ ಭಾರತಕ್ಕೆ ಮತ್ತೆ ಮುನ್ನಡೆ ಲಭಿಸಿತು. ಕೊನೆಯ ಬೋರ್ಡ್‌ನಲ್ಲಿ ವಿದಿತ್ ಗುಜರಾತಿ ಪ್ರಬಲ ಆಟವಾಡಿ ಲೆವೊನ್ ಅರೋನಿಯನ್ ಅವರ ಜೊತೆ ಡ್ರಾ ಮಾಡಿಕೊಂಡರು. ಭಾರತ 19 ಪಾಯಿಂಟ್ಸ್ ಗಳಿಸಿ ಐತಿಹಾಸಿಕ ಪ್ರಶಸ್ತಿಯತ್ತ ದಾಪುಗಾಲು ಹಾಕಿತು.

ಮಹಿಳಾ ವಿಭಾಗದಲ್ಲಿ ಭಾರತ ತಂಡವು 2.5-1.5 ಚೀನಾವನ್ನು ಸೋಲಿಸಿತು.

ಅಮೆರಿಕ ಜೊತೆ ಡ್ರಾ: ಶುಕ್ರವಾರ ನಡೆದ ಪಂದ್ಯದಲ್ಲಿ ಐಎಂ ವಂತಿಕಾ ಅಗರವಾಲ್, ಅಗತ್ಯ ಸಂದರ್ಭದಲ್ಲಿ ಗ್ರ್ಯಾಂಡ್‌ಮಾಸ್ಟರ್ ಐರಿನಾ ಕ್ರುಶ್ ಅವರನ್ನು ಸೋಲಿಸಿದರು. ಆ ಮೂಲಕ ಒಂಬತ್ತನೇ ಸುತ್ತಿನಲ್ಲಿ ಭಾರತ ವನಿತಾ ತಂಡ 2–2 ರಿಂದ ಅಮೆರಿಕ ಜೊತೆ ಶುಕ್ರವಾರ ಡ್ರಾ ಮಾಡಿಕೊಳ್ಳುವಲ್ಲಿ ಯಶಸ್ವಿಯಾಯಿತು.

ಓಪನ್ ವಿಭಾಗದಲ್ಲಿ ಭಾರತ ತಂಡ 2–2 ರಿಂದ ಉಜ್ಬೇಕಿಸ್ತಾನ ಜೊತೆ ಡ್ರಾ ಮಾಡಿಕೊಂಡಿತು. ನಾಲ್ಕೂ ಪಂದ್ಯಗಳು ಡ್ರಾ ಆದವು. ಭಾರತ ಅಗ್ರಸ್ಥಾನದಲ್ಲಿ ಮುಂದುವರಿದಿದೆ. ಮಹಿಳಾ ವಿಭಾಗದಲ್ಲಿ ಕಜಕಸ್ತಾನವು (16 ಪಾಯಿಂಟ್ಸ್), ಭಾರತವನ್ನು (15 ಪಾಯಿಂಟ್ಸ್) ಎರಡನೇ ಸ್ಥಾನಕ್ಕೆ ಸರಿಸಿದೆ. 9 ತಂಡಗಳು ತಲಾ 14 ಪಾಯಿಂಟ್ಸ್ ಕಲೆಹಾಕಿ ಮೂರರಿಂದ 11ರವರೆಗಿನ ಸ್ಥಾನದಲ್ಲಿವೆ.


ಡಿ. ಗುಕೇಶ್ –ಎಪಿ/ಪಿಟಿಐ ಚಿತ್ರ

ಓಪನ್ ವಿಭಾಗದಲ್ಲಿ ಸತತ ಎಂಟು ಪಂದ್ಯಗಳಲ್ಲಿ ಜಯಗಳಿಸಿದ್ದ ಭಾರತ ಮೊದಲ ಬಾರಿ ಎದುರಾಳಿಗೆ ಪಾಯಿಂಟ್ ಬಿಟ್ಟುಕೊಟ್ಟಿತು. ಈ ಸುತ್ತು ಗೆದ್ದಿದ್ದರೆ ಭಾರತಕ್ಕೆ ಚಿನ್ನ ಖಚಿತವಾಗುತಿತ್ತು. ಆದರೆ ಒಂಬತ್ತನೇ ಸುತ್ತಿನಲ್ಲಿ ಹಾಲಿ ಚಾಂಪಿಯನ್ ಉಜ್ಬೇಕಿಸ್ತಾನ ಎದುರಿನ ಪಂದ್ಯ 2–2 ಸಮಬಲ ಆಯಿತು. ಈ ಫಲಿತಾಂಶದಿಂದ ಅಗ್ರಸ್ಥಾನಕ್ಕೆ ಚ್ಯುತಿಯಾಗಿಲ್ಲ. ಭಾರತ 17 ಪಾಯಿಂಟ್ಸ್ ಗಳಿಸಿದ್ದರೆ, ಮೂರು ತಂಡಗಳು (ಅಮೆರಿಕ, ಉಜ್ಬೇಕಿಸ್ತಾನ, ಚೀನಾ) ತಲಾ 15 ಪಾಯಿಂಟ್ಸ್ ಕಲೆಹಾಕಿವೆ.

ಮಹಾರಾಷ್ಟ್ರಕ್ಕೆ ಬೃಹತ್ ಮುನ್ನಡೆ

ಬೆಂಗಳೂರು: ಮುರ್ತಾಜಾ ಟ್ರಂಕ್ವಾಲ (114; 171ಎ) ಮತ್ತು ಸಿದ್ಧೇಶ್ ವೀರ್ (146; 221ಎ) ಅವರ ಅಮೋಘ ಶತಕಗಳ ಬಲದಿಂದ ಮಹಾರಾಷ್ಟ್ರ ತಂಡವು ಇಲ್ಲಿ ನಡೆಯುತ್ತಿರುವ ಕ್ಯಾಪ್ಟನ್ ಕೆ. ತಿಮ್ಮಪ್ಪಯ್ಯ ಸ್ಮಾರಕ ಕ್ರಿಕೆಟ್ ಟೂರ್ನಿಯ ಸೆಮಿಫೈನಲ್‌ನಲ್ಲಿ ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್ ಎದುರು ಎರಡನೇ ಇನಿಂಗ್ಸ್‌ನಲ್ಲೂ ಬೃಹತ್ ಮೊತ್ತದತ್ತ ಸಾಗಿದ್ದು, ಪಂದ್ಯದ ಮೇಲೆ ಹಿಡಿತ ಸಾಧಿಸಿದೆ.

ಪಂದ್ಯದ ಮೂರನೇ ದಿನವಾದ ಶನಿವಾರ ಮಹಾರಾಷ್ಟ್ರ ತಂಡವು 91 ಓವರ್‌ಗಳಲ್ಲಿ 2 ವಿಕೆಟ್‌ಗೆ 385 ರನ್ ಕಲೆಹಾಕಿದೆ. ಮೊದಲ ಇನಿಂಗ್ಸ್‌ನಲ್ಲಿ 260 ರನ್‌ಗಳ ಮುನ್ನಡೆ ಪಡೆದಿದ್ದ ಪ್ರವಾಸಿ ತಂಡವು, ಒಟ್ಟಾಗಿ 645 ರನ್‌ಗಳ ಲೀಡ್ ಗಳಿಸಿದೆ.

ಸಂಕ್ಷಿಪ್ತ ಸ್ಕೋರ್: ಆಲೂರು (1): ಮಹಾರಾಷ್ಟ್ರ: 114.5 ಓವರ್‌ಗಳಲ್ಲಿ 421. ಕೆಎಸ್‌ಸಿಎ ಕಾರ್ಯದರ್ಶಿ ಇಲೆವನ್: 54.2 ಓವರ್‌ಗಳಲ್ಲಿ 161. ಎರಡನೇ ಇನಿಂಗ್ಸ್: ಮಹಾರಾಷ್ಟ್ರ: 91 ಓವರ್‌ಗಳಲ್ಲಿ 2ಕ್ಕೆ 385 (ಮುರ್ತಾಜಾ ಟ್ರಂಕ್ವಾಲ 114 (ಗಾಯಾಳಾಗಿ ನಿವೃತ್ತಿ), ಸಿದ್ಧೇಶ್ ವೀರ್ 146, ಅರ್ಷಿನ್ ಕುಲಕರ್ಣಿ ಔಟಾಗದೇ 80, ಸಚಿನ್ ದಾಸ್ ಔಟಾಗದೇ 34; ಶಿಖರ್ ಶೆಟ್ಟಿ 70ಕ್ಕೆ 1).

ಬಸ್ ಪಲ್ಟಿ: ಮೂರು ಫುಟ್‌ಬಾಲ್ ಆಟಗಾರರು ಸಾವು

ಮೆಕ್ಸಿಕೊ ಸಿಟಿ, (ಎಪಿ): ಫುಟ್‌ಬಾಲ್ ತಂಡ ಪ್ರಯಾಣಿಸುತ್ತಿದ್ದ ಬಸ್ಸೊಂದು ಶನಿವಾರ ಬ್ರೆಜಿಲ್‌ನ ರಿಯೊ ಡಿ ಜನೈರೊ ಸಮೀಪ ಪಲ್ಟಿಯಾಗಿದ್ದು, ಮೂವರು ಆಟಗಾರರು ಮೃತಪಟ್ಟಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ದಕ್ಷಿಣ ಬ್ರೆಜಿಲ್‌ನ ಕ್ಯೂರಿಟಿಬಾ ಕ್ರೊಕೊಡೈಲ್ಸ್ ತಂಡದ ಆಟಗಾರರು ಬಸ್‌ನಲ್ಲಿ ಸಾಗುತ್ತಿದ್ದರು. ಘಟನೆಯಲ್ಲಿ ಕನಿಷ್ಠ ಆರು ಮಂದಿ ಗಾಯಗೊಂಡಿದ್ದಾರೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿದೆ. ತಂಡವು ಅಮೆರಿಕನ್ ಫುಟ್‌ಬಾಲ್ ಚಾಂಪಿಯನ್‌ಷಿಪ್‌ನಲ್ಲಿ ಆಡಬೇಕಿತ್ತು. ಆದರೆ, ಅಪಘಾತದ ನಂತರ ಪಂದ್ಯ ರದ್ದುಗೊಳಿಸಲಾಯಿತು.

ಟೈಗರ್ ಕಪ್ ಪ್ರಶಸ್ತಿ ಪ್ರದಾನ: ಆರಣ್ಯರಕ್ಷಕರಿಗೆ ಗೌರವ

ಜೆಆರ್‌ವಿ ಸಖ್ಯದಲ್ಲಿ ನಲಿದವರು...

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಏ..ನನ್ನ ಕಾಲಿಗೆ ಬೀಳಬೇಡಪ್ಪಾ. ನಿನ್ನ ತಂದೆ, ತಾಯಿಯ ಕಾಲಿಗೆ ನಮಸ್ಕಾರ ಮಾಡು, ಸಾಕು..'

ಕ್ರಿಕೆಟ್ ದಂತಕತೆ ಗುಂಡಪ್ಪ ಆರ್ ವಿಶ್ವನಾಥ್ ಅವರು ಶನಿವಾರ ಸಂಜೆ ಜೂನಿಯರ್ ಕ್ರಿಕೆಟಿಗರಿಗೆ ಹಸ್ತಾಕ್ಷರ ನೀಡುತ್ತ ಪ್ರೀತಿಯಿಂದ ಹೇಳುತ್ತಿದ್ದ ಮಾತುಗಳಿವು.

ಚಿನ್ನಸ್ವಾಮಿ ಕ್ರೀಡಾಂಗಣದ ಸಭಾಭವನದಲ್ಲಿ ಟೈಗರ್ ಕಪ್ ಕ್ರಿಕೆಟ್ ಟೂರ್ನಿಯ ವಿಜೇತರಿಗೆ ಪ್ರಶಸ್ತಿ ಪ್ರದಾನ ಮತ್ತು ಅರಣ್ಯ ಸಿಬ್ಬಂದಿಯನ್ನು ಅವರು ಸನ್ಮಾನಿಸಿದರು. ಕಾರ್ಯಕ್ರಮದ ನಂತರ ಟೈಗರ್ ಕಪ್ ಟೂರ್ನಿಯಲ್ಲಿ ಪ್ರಶಸ್ತಿ ಗೆದ್ದ ಆಟಗಾರರೆಲ್ಲರೂ ಸರದಿ ಸಾಲಿನಲ್ಲಿ ಬಂದು ವಿಶ್ವನಾಥ್ ಅವರೊಂದಿಗೆ ಸೆಲ್ಫಿ ಕ್ಲಿಕ್ಕಿಸಿಕೊಂಡರು. ವೇದಿಕೆಯ ಒಂದು ಬದಿಯಲ್ಲಿ ಇದ್ದ ಕುರ್ಚಿಯಲ್ಲಿ ಕುಳಿತ ಅವರು ಎಲ್ಲ ಮಕ್ಕಳಿಗೂ ಹಸ್ತಾಕ್ಷರ ನೀಡಿದರು. ಮಕ್ಕಳು ತಂದ ಬ್ಯಾಟ್, ಚೆಂಡು, ಟೀಶರ್ಟ್, ಹಾಳೆ, ಪ್ರಮಾಣಪತ್ರ ಮತ್ತು ಪದಕಗಳ ಮೇಲೆ ಮಾರ್ಕರ್ ಮೂಲಕ ಹಸ್ತಾಕ್ಷರ ಹಾಕಿಕೊಟ್ಟರು.


ಬೆಂಗಳೂರಿನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಟೈಗರ್ ಕಪ್ ಕ್ರಿಕೆಟ್ ಟೂರ್ನಿ ವಿಜೇತರು ಮತ್ತು ಅರಣ್ಯ ಸಿಬ್ಬಂದಿಯನ್ನು ಕ್ರಿಕೆಟಿಗ ಜಿ.ಆರ್. ವಿಶ್ವನಾಥ್ ಸತ್ಕರಿಸಿದರು

ಸಮಾರಂಭದಲ್ಲಿ ಭದ್ರಾ ಹುಲಿ ಸಂರಕ್ಷಿತ ಪ್ರದೇಶದ ವಾಚರ್ ವೆಂಕಟೇಶ್, ಕಾಳಿ ಹುಲಿ ಸಂರಕ್ಷಿತ ಪ್ರದೇಶದ ಗಾರ್ಡ್ ರಾಘವೇಂದ್ರ ಗೌಡ, ಕೊಯಮತ್ತೂರು ವನ್ಯಜೀವಿ ಸಂರಕ್ಷಣಾ ವಿಭಾಗದ ಗಾರ್ಡ್ ಎ. ಅರುಣ್ ಕುಮಾರ್ ಮತ್ತು ಪೆರಿಯಾರ್ ಹುಲಿ ಸಂರಕ್ಷಿತ ಅರಣ್ಯದ ವಾಚರ್ ಸಾಬು ಜಾರ್ಜ್ ಅವರಿಗೆ ವನ್ಯಜೀವಿ ಸಂರಕ್ಷಣಾ ವಿಷಯದಲ್ಲಿ ತೋರಿರುವ ಬದ್ಧತೆಗೆ ತಲಾ ₹ 1 ಲಕ್ಷ ಬಹುಮಾನ ನೀಡಿ ಗೌರವಿಸಲಾಯಿತು. ವಿಶೇಷವಾಗಿ ದಕ್ಷಿಣ ಭಾರತದ ಕಾಡುಗಳಲ್ಲಿ ಆನೆಗಳ ಸಂರಕ್ಷಣೆ ವಿಚಾರದಲ್ಲಿ ಮಹತ್ತರ ಕೆಲಸ ಮಾಡಿರುವ ಕರ್ನಾಟಕದ ಸುಧೀರ್ ಶೆಟ್ಟಿ ಮತ್ತ ಕೇರಳದ ಎಂ ಎನ್ ಜಯಚಂದ್ರನ್ ಅವರನ್ನು ಗೌರವಿಸಲಾಯಿತು.

ಈ ಸಂದರ್ಭದಲ್ಲಿ ಮಾತನಾಡಿದ ವಿಶ್ವನಾಥ್, 'ಕಾಡು ಮತ್ತು ವನ್ಯಜೀವಿ ಸಂರಕ್ಷಣೆಯಲ್ಲಿ ಅರಣ್ಯ ಇಲಾಖೆ ಸಿಬ್ಬಂದಿಯ ಶ್ರಮ ಮಹತ್ವದ್ದಾಗಿದೆ' ಎಂದರು.

ಟೈಗರ್ ಕಪ್ ಟೂರ್ನಿಯಲ್ಲಿ 12 ವರ್ಷ, 14 ಮತ್ತು 16 ವರ್ಷದೊಳಗಿವನರ ವಿಭಾಗಗಳ ವಿಜೇತರಿಗೆ ಈ ಸಂದರ್ಭದಲ್ಲಿ ಪ್ರಶಸ್ತಿ ವಿತರಿಸಲಾಯಿತು.

ಕಾರ್ಯಕ್ರಮದಲ್ಲಿ ಎನ್.ರಂಗರಾವ್ ಆಂಡ್ ಸನ್ಸ್ ನಿರ್ದೇಶಕ ಕಿರಣ್ ರಂಗಾ, ಕ್ರಿಕೆಟ್ ಕೋಚ್ ಜೋಸೆಫ್ ಹೂವರ್ ಅವರು ಹಾಜರಿದ್ದರು. ವೀಕ್ಷಕ ವಿವರಣೆಕಾರ ಚಂದ್ರಮೌಳಿ ಕಣವಿ ಕಾರ್ಯಕ್ರಮ ನಿರ್ವಹಿಸಿದರು.